ಮಂಗಳವಾರ, ಫೆಬ್ರುವರಿ 22, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 53 | ಪುಟ 14

www.prajavani.net

/prajavani.net @prajavani /prajavani http://bit.ly/Prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ




ಆಳ-ಅಗಲ: ಎಬಿಜಿ ಶಿಪ್‌ಯಾರ್ಡ್ ಬೃಹತ್ ವಂಚನೆಯ ಕತೆ

362 ಅಭ್ಯರ್ಥಿಗಳ ನೇಮಕಾತಿ ಸರಾಗ 3

'ಸಮವಸ್ತ್ರದಲ್ಲಿ ಧಾರ್ಮಿಕ ಅಂಶ ಸಲ್ಲ' 5

| ಸೆನ್ಸೆಕ್ಸ್ | ನಿಫ್ಟಿ | ಚಿನ್ನ (Std. 10g) | ಶುದ್ಧ ಬೆಳ್ಳಿ (kg) | ₹/$ |
|---|---|---|---|---|
| 57,684 ▼ | 17,206 ▼ | ₹51,750 (ಬೆಂಗಳೂರು) | ₹65,500 (ಬೆಂಗಳೂರು) | 74.55 ▲ |

### ಕೊಲೆಯಾದ ಬಜರಂಗ ದಳದ ಕಾರ್ಯಕರ್ತ ಹರ್ಷ ಅಂತ್ಯಸಂಸ್ಕಾರಕ್ಕೂ ಮುನ್ನ ಅರಾಜಕತೆ

# ಹತ್ಯೆಗೆ ಆಕ್ರೋಶ, ಶಿವಮೊಗ್ಗ ಉದ್ವಿಗ್ನ

ಪ್ರಜಾವಾಣಿ ವಾರ್ತೆ

**ಶಿವಮೊಗ್ಗ:** ಬಜರಂಗ ದಳದ ಕಾರ್ಯಕರ್ತ ಹರ್ಷ ಅವರ ಹತ್ಯೆಗೆ ಜಿಲ್ಲೆಯಲ್ಲಿ ಆಕ್ರೋಶ ವ್ಯಕ್ತವಾಗಿದೆ. ಸೋಮವಾರ ಪಾರ್ಥಿವ ಶರೀರದ ಮೆರವಣಿಗೆಯು ಹಿಂಸಾತ್ಮಕ ಘಟನೆಗಳಿಗೆ ಆಸ್ಪದವಾಯಿತು. ಉದ್ರಿಕ್ತ ಯುವಕರು ಕಲ್ಲುತೂರಾಟ, ದಾಂದಲೆಯಲ್ಲಿ ತೊಡಗಿದ್ದು, ಒಂದೆರಡು ಕಡೆ ವಾಹನಗಳಿಗೆ ಬೆಂಕಿ ಹಚ್ಚಿದ್ದರು. ಪೊಲೀಸರು ಗುಂಪು ಚದುರಿಸಲು ಲಾಠಿಪ್ರಹಾರ ನಡೆಸಿ, ಅಶ್ರುವಾಯು ಪ್ರಯೋಗಿಸಿದರು. ಗಾಳಿಯಲ್ಲಿ ಗುಂಡು ಹಾರಿಸಿದರು.

ಯುವಕರು ದಾರಿಯುದ್ದಕ್ಕೂ ನಡೆಸಿದ ದಾಂದಲೆಗೆ ಇಡೀ ನಗರದ ಜನರು ಪರಿತಪಿಸಿದರು. ಕೆಲವು ಕಡೆ ಪೊಲೀಸರ ಎದುರಲ್ಲೇ ಲೂಟಿ ನಡೆಯುತ್ತಿದ್ದರೂ ತಮಗೆ ಸಂಬಂಧವೇ ಇಲ್ಲದಂತೆ ನಿರ್ಲಿಪ್ತರಾದರು. ಗಲಾಟೆ ದೃಶ್ಯ ಚಿತ್ರೀಕರಿಸುತ್ತಿದ್ದ ಮಾಧ್ಯಮದವರ ಕ್ಯಾಮೆರಾ, ಮೊಬೈಲ್‌ಗಳನ್ನು ದುಷ್ಕರ್ಮಿಗಳು ಗುರಿಯಾಗಿಸಿದರು. ನೆಲಕ್ಕೆ ಹಾಕಿ ತುಳಿದರು. ಹಲವರ ಮೇಲೆ ಹಲ್ಲೆ ನಡೆಸಿದರು.

ಶಿವಮೊಗ್ಗದಲ್ಲಿ ಆತಂಕದ ಸ್ಥಿತಿಯು ಮನೆ ಮಾಡಿತು. ಪಾರ್ಥಿವ ಶರೀರದ ಮೆರವಣಿಗೆಯು ಗಾಂಧಿ ಬಜಾರ್ ಮಸೀದಿ ಬಳಿ ಬಂದಾಗ ಉದ್ರಿಕ್ತರ ಗುಂಪು ಮಸೀದಿಗಳ ಮೇಲೆ ಕಲ್ಲು ತೂರಾಟಕ್ಕೆ ಮುಂದಾಯಿತು. ಕ್ಷಣ ಮಾತ್ರದಲ್ಲಿ ಹಲವು ಬೀದಿಗಳು ಹಿಂಸಾ ಕೃತ್ಯಗಳಿಗೆ ಸಾಕ್ಷಿಯಾದವು.

5ನೇ ಪುಟ ನೋಡಿ




ಶಿವಮೊಗ್ಗ ನಗರದಲ್ಲಿ ಸೋಮವಾರ ಕಲ್ಲು ತೂರಾಟ ನಡೆಸುತ್ತಿದ್ದವರನ್ನು ಪೊಲೀಸ್ ಅಧಿಕಾರಿಯೊಬ್ಬರು ತಡೆಯಲು ಯತ್ನಿಸಿದರು –ಪಿಟಿಐ ಚಿತ್ರ

ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

### ನಿಷೇಧಾಜ್ಞೆ ಜಾರಿ, ಶಾಲಾ, ಕಾಲೇಜುಗಳಿಗೆ ಇಂದೂ ರಜೆ

ಹಿಂಸಾತ್ಮಕ ಘಟನೆಗಳ ಹಿನ್ನೆಲೆಯಲ್ಲಿ ಶಿವಮೊಗ್ಗ ಮತ್ತು ಭದ್ರಾವತಿ ವ್ಯಾಪ್ತಿಗೆ ಅನ್ವಯಿಸಿ ಫೆ.23ರ ಮಧ್ಯ ರಾತ್ರಿಯವರೆಗೂ ಸೆಕ್ಷನ್ 144ರ ಅನ್ವಯ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾಡಳಿತ ಆದೇಶ ಹೊರಡಿಸಿದೆ.

ಶಿವಮೊಗ್ಗ ನಗರ ಪಾಲಿಕೆ ವ್ಯಾಪ್ತಿಯ ಶಾಲಾ ಕಾಲೇಜುಗಳಿಗೆ ಫೆ.22ರಂದೂ ರಜೆ ಮುಂದುವರಿಸಲಾಗಿದೆ. ಹಾಗೆಯೇ ನಿಷೇಧಾಜ್ಞೆಯನ್ನೂ ಮುಂದುವರಿಸಲಾಗಿದೆ ಎಂದು ಜಿಲ್ಲಾಧಿಕಾರಿ ಸೆಲ್ವಮಣಿ ಮಾಹಿತಿ ನೀಡಿದರು.

### 'ಮೂವರ ಬಂಧನ'

**ಬೆಂಗಳೂರು:** ಹರ್ಷ ಕೊಲೆ ಪ್ರಕರಣದಲ್ಲಿ ಐವರು ಭಾಗಿಯಾಗಿರುವ ಮಾಹಿತಿ ಇದೆ. ಶಿವಮೊಗ್ಗ ಬುದ್ಧ ನಗರದ ಖಾಸಿಫ್ (30), ಜೆಪಿ ನಗರದ ಸೈಯ್ಯದ್ ನದೀಂ (20) ಸೇರಿದಂತೆ ಮೂವರು ಆರೋಪಿಗಳನ್ನು ಪೊಲೀಸರು ಈಗಾಗಲೇ ಬಂಧಿಸಿದ್ದಾರೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಸೋಮವಾರ ಇಲ್ಲಿ ತಿಳಿಸಿದರು.

### ನ್ಯಾಯಸಮ್ಮತ ತನಿಖೆ: ಸಿಎಂ ಬೊಮ್ಮಾಯಿ

**ಬೆಂಗಳೂರು:** 'ಶಿವಮೊಗ್ಗದಲ್ಲಿ ಅಹಿತಕರ ಘಟನೆ ನಡೆಯದಂತೆ ಬಿಗಿ ಬಂದೋಬಸ್ತ್‌ಗೆ ಪೊಲೀಸರಿಗೆ ಸೂಚನೆ ನೀಡಲಾಗಿದೆ. ಹತ್ಯೆ ಕುರಿತಂತೆ ನ್ಯಾಯಸಮ್ಮತ ತನಿಖೆ ನಡೆಸಿ, ತಪ್ಪಿಸತ್ಥರ ಮೇಲೆ ಕ್ರಮಜರುಗಿಸಲಾಗುವುದು. ಯಾರೂ ಉದ್ವೇಗಕ್ಕೆ ಒಳಗಾಗಬಾರದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ. ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು 'ಭಾನುವಾರ ರಾತ್ರಿ ಹರ್ಷ ಎಂಬ ಯುವಕನ ಹತ್ಯೆಯಾಗಿದೆ. ಅವನ ಹೆಸರೇ 'ಹಿಂದೂ ಹರ್ಷ' ಎಂದು. ಆತ ನಮ್ಮ ಸಂಘಟನೆಯ ಕಾರ್ಯಕರ್ತ' ಎಂದರು.

ಇನ್ನಷ್ಟು ಸುದ್ದಿಗಳು 5

### ಉಕ್ರೇನ್ ಶಾಂತಿ ಶೃಂಗಸಭೆ

# ನಿರೀಕ್ಷೆಗೆ ತಣ್ಣೀರು ಸುರಿದ ರಷ್ಯಾ

**ಕೀವ್, ಮಾಸ್ಕೊ (ಎಎಫ್‌ಪಿ/ರಾಯಿಟರ್ಸ್):** ಉಕ್ರೇನ್ ಮೇಲೆ ರಷ್ಯಾದ ಸಂಭವನೀಯ ಆಕ್ರಮಣ ತಡೆಯಲು ರಾಜತಾಂತ್ರಿಕ ಪ್ರಯತ್ನಗಳು ನಡೆಯುತ್ತಿರುವಾಗಲೇ ರಷ್ಯಾ ಮತ್ತು ಅಮೆರಿಕ ನಾಯಕರ ನಡುವಿನ ಶೃಂಗ ಸಭೆಗೆ ಯಾವುದೇ ಮಹತ್ವ ಇಲ್ಲ ಎಂದು ರಷ್ಯಾ ಸೋಮವಾರ ಹೇಳಿದೆ. ಇದರಿಂದಾಗಿ ಉಕ್ರೇನ್ ಬಿಕ್ಕಟ್ಟು ಶಮನಗೊಳಿಸುವ ಉದ್ದೇಶಕ್ಕೆ ತಣ್ಣೀರು ಎರಚಿದಂತಾಗಿದೆ.

ಉಕ್ರೇನ್ ಗಡಿಯಲ್ಲಿ ಉಂಟಾಗಿರುವ ಉದ್ವಿಗ್ನ ಪರಿಸ್ಥಿತಿ ಶಮನಗೊಳಿಸಲು ರಷ್ಯಾ ಮತ್ತು ಅಮೆರಿಕದ ಅಧ್ಯಕ್ಷರ ನಡುವೆ ಶೃಂಗಸಭೆ ನಡೆಯುವ ಸಾಧ್ಯತೆಯನ್ನು ಫ್ರಾನ್ಸ್ ಘೋಷಿಸಿದ ನಂತರ, ಇದು 'ತುಂಬಾ ಮುಂಚಿತ'ವಾಯಿತು ಎಂದು ರಷ್ಯಾ ಪ್ರತಿಕ್ರಿಯಿಸಿದೆ.

ಇದರ ಬೆನ್ನಲ್ಲೇ ಉಕ್ರೇನ್‌ನಿಂದ ಗಡಿ ದಾಟಿ ಬಂದ ಐವರು ಬಂಡುಕೋರರನ್ನು ರಷ್ಯಾ ಮಿಲಿಟರಿ ಹತ್ಯೆ ಮಾಡಿದೆ. ಅಲ್ಲದೇ ಉಕ್ರೇನ್ ಕಡೆಯಿಂದ ಎಫ್‌ಎಸ್‌ಬಿ ಗಡಿ ಕಾವಲು ಠಾಣೆ ಮೇಲೆ ಶೆಲ್ ದಾಳಿ ನಡೆದಿದೆ ಎಂದು ರಷ್ಯಾ ಆರೋಪಿಸಿದೆ.

'ರಷ್ಯಾದ ಗಡಿಯನ್ನು ಉಲ್ಲಂಘಿಸಿ ಬಂದು ಘರ್ಷಣೆ ನಡೆಸಿದ ಐವರು ವಿಧ್ವಂಸಕರನ್ನು ರೋಸ್ಟೊವ್ ಪ್ರದೇಶದ ಮಿತ್ಯಕಿನ್ಸ್ಕಾಯಾ ಗ್ರಾಮದ ಬಳಿ ಕೊಲ್ಲಲಾಗಿದೆ' ಎಂದು ರಷ್ಯಾ ಸೇನೆ ಹೇಳಿಕೆಯಲ್ಲಿ ತಿಳಿಸಿದೆ.



ಉಕ್ರೇನ್‌ನ ಟ್ಯಾಂಕ್‌ಗಳು ಸನ್ನದ್ಧವಾಗಿರುವ ಚಿತ್ರವನ್ನು ಅಲ್ಲಿನ ನೌಕಾಪಡೆ ಸೋಮವಾರ ಬಿಡುಗಡೆ ಮಾಡಿದೆ –ಎಎಫ್‌ಪಿ ಚಿತ್ರ

'ರಷ್ಯಾ ಸೇನೆ ಅಥವಾ ಗಡಿ ಭದ್ರತಾಪಡೆಗಳಲ್ಲಿ ಯಾವುದೇ ಸಾವುನೋವು ಸಂಭವಿಸಿಲ್ಲ. ವಿಧ್ವಂಸಕರನ್ನು ಒಳನುಗ್ಗಿಸಲು ಉಕ್ರೇನ್‌ನ ಎರಡು ಮಿಲಿಟರಿ ವಾಹನಗಳು ರಷ್ಯಾ ಗಡಿ ದಾಟಿ ಬಂದಿವೆ. ಈ ಬಗ್ಗೆ ತನಿಖೆ ನಡೆಸಲು ಆದೇಶಿಸಲಾಗಿದೆ' ಎಂದು ರಷ್ಯಾದ ತನಿಖಾ ಸಮಿತಿಯ ಮುಖ್ಯಸ್ಥ ಅಲೆಕ್ಸಾಂಡರ್ ಬಾಸ್ಟ್ರಿಕಿನ್ ತಿಳಿಸಿದ್ದಾರೆ.

ಸರ್ಕಾರಿ ಸಂಸ್ಥೆಗಳು, ಬ್ಯಾಂಕ್‌ಗಳು ಮತ್ತು ರಕ್ಷಣಾ ವಲಯದ ಮೇಲೆ ರಷ್ಯಾ ಹ್ಯಾಕರ್‌ಗಳು ಮಂಗಳವಾರ ದೊಡ್ಡ ದಾಳಿ ನಡೆಸಲು ತಯಾರಿ ನಡೆಸುತ್ತಿದ್ದಾರೆ ಎನ್ನುವ ಎಚ್ಚರಿಕೆ ಸಂದೇಶಗಳು ಆನ್‌ಲೈನ್‌ನಲ್ಲಿ ಗೋಚರಿಸುತ್ತಿವೆ ಎಂದು ಉಕ್ರೇನ್ ಅಧಿಕಾರಿಗಳು ಎಚ್ಚರಿಸಿದ್ದಾರೆ.

'ರಷ್ಯಾ ಇತ್ತೀಚಿನ ದಿನಗಳಲ್ಲಿ ಉಕ್ರೇನ್‌ನ ಸುತ್ತಲೂ ಒಂದು ಲಕ್ಷಕ್ಕೂ ಹೆಚ್ಚಿನ ಸೈನಿಕರನ್ನು ಜಮಾವಣೆ ಮಾಡಿದೆ. ಗಡಿಯಲ್ಲಿ ಸಂಘರ್ಷ ಉಲ್ಬಣಗೊಳ್ಳುವ ಸಾಧ್ಯತೆ ಇದೆ. ರಷ್ಯಾ ಪರವಿರುವ ಪ್ರತ್ಯೇಕತಾವಾದಿಗಳನ್ನು ಉಕ್ರೇನ್ ಮೇಲೆ ದಾಳಿ ನಡೆಸಲು ಹಂತಹಂತವಾಗಿ ಬಳಸಿಕೊಳ್ಳುವ ಸಾಧ್ಯತೆಯೂ ಇದೆ' ಎಂದು ನ್ಯಾಟೊ ಉಕ್ರೇನ್‌ಗೆ ಎಚ್ಚರಿಕೆ ಕೊಟ್ಟಿದೆ.

**ಆರೋಪ ಅಲ್ಲಗಳೆದ ಉಕ್ರೇನ್:** ರಷ್ಯಾದ ಫೆಡರಲ್ ಸೆಕ್ಯುರಿಟಿ ಸರ್ವಿಸ್ (ಎಫ್‌ಎಸ್‌ಬಿ) ಬಳಸುವ ಗಡಿ ಕಾವಲು ಠಾಣೆ ಮೇಲೆ ಶೆಲ್ ದಾಳಿ ನಡೆಸಿರುವುದನ್ನು ಉಕ್ರೇನ್ ಮಿಲಿಟರಿ ಸೋಮವಾರ ನಿರಾಕರಿಸಿದೆ.

ಉದ್ವಿಗ್ನತೆ ಹೆಚ್ಚಿಸಲು ರಷ್ಯಾ ಸುಳ್ಳು ಸುದ್ದಿ ಹೆಣೆಯುತ್ತಿದೆ ಎಂದು ಉಕ್ರೇನ್ ಕಿಡಿಕಾರಿದೆ.

ಇನ್ನಷ್ಟು ಸುದ್ದಿಗಳು 11







# ಹಿಜಾಬ್: ಪ್ರಾಯೋಗಿಕ ಪರೀಕ್ಷೆಗೆ ವಿದ್ಯಾರ್ಥಿನಿಯರು ಗೈರು, ಧರಣಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಹಿಜಾಬ್ ವಿವಾದ ಸೋಮವಾರವೂ ವಿವಿಧ ಜಿಲ್ಲೆಗಳಲ್ಲಿ ವಾಗ್ವಾದಕ್ಕೆ ಕಾರಣವಾಗಿದೆ. ಹಿಜಾಬ್ ಧರಿಸಲು ಅವಕಾಶ ಕೋರಿ ಬೆಳಗಾವಿಯಲ್ಲಿ ವಿದ್ಯಾರ್ಥಿನಿಯರು ಧರಣಿ ನಡೆಸಿದ್ದಾರೆ, ವಿಜಯಪುರದಲ್ಲಿ ಪಿಯು ಪ್ರಾಯೋಗಿಕ ಪರೀಕ್ಷೆಯನ್ನು ಬಹಿಷ್ಕರಿಸಿದ್ದಾರೆ. ಮೈಸೂರು ಜಿಲ್ಲೆಯ ಗುಂಡ್ಲುಪೇಟೆ, ನಂಜನಗೂಡು ಸೇರಿ ಕೆಲವೆಡೆ ಹಿಜಾಬ್ ಧರಿಸಲು ಅವಕಾಶ ನೀಡದ ಕಾರಣ ತರಗತಿಗೆ ಹೋಗದೇ ಮನೆಗೆ ವಾಪಸಾಗಿದ್ದಾರೆ.

'ಹಿಜಾಬ್ ಧರಿಸಿ ಕಾಲೇಜು ಹಾಗೂ ಆಂತರಿಕ ಪರೀಕ್ಷೆಗೆ ಹಾಜರಾಗಲು ಅವಕಾಶ ಕೊಡಬೇಕು. ಈ ಸಮಸ್ಯೆ ಬಗೆಹರಿಸಲು ಜಿಲ್ಲಾಧಿಕಾರಿ ಮಧ್ಯಪ್ರವೇಶ ಮಾಡಬೇಕು' ಎಂದು ಆಗ್ರಹಿಸಿ ಬೆಳಗಾವಿಯಲ್ಲಿ ಕೆಎಲ್‌ಇ ಸಂಸ್ಥೆಯ ಲಿಂಗರಾಜ ಕಾಲೇಜಿನ ಬಿ.ಕಾಂ. 1ನೇ ಹಾಗೂ 3ನೇ ಸೆಮಿಸ್ಟರ್‌ನ 39 ವಿದ್ಯಾರ್ಥಿನಿಯರು ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಪ್ರತಿಭಟನೆ ನಡೆಸಿದರು.

ವಿದ್ಯಾರ್ಥಿನಿಯರನ್ನು ಬೆಂಬಲಿಸಿ ಎಸ್‌ಡಿಪಿಐ ಮುಖಂಡರು, ವಿವಿಧ ಜಮಾತ್‌ಗಳ ಹಿರಿಯರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ಕಾಲೇಜಿನ ಗೇಟ್ ಬಳಿ ಮುಂಜಾಗ್ರತೆಯಾಗಿ ಹೆಚ್ಚಿನ ಪೊಲೀಸರನ್ನು ನಿಯೋಜಿಸಲಾಗಿತ್ತು. ಆ ವಿದ್ಯಾರ್ಥಿನಿಯರು ಪರೀಕ್ಷೆಗೆ ಹಾಜರಾಗಲಿಲ್ಲ.

ಮೈಸೂರು ಜಿಲ್ಲೆಯ ಗುಂಡ್ಲುಪೇಟೆಯ ಗೌತಮ್ ಪ್ರೌಢಶಾಲೆಯಲ್ಲಿ ವಿದ್ಯಾರ್ಥಿನಿಯೊಬ್ಬರು, ಹಿಜಾಬ್ ಧರಿಸಲು ಅವಕಾಶ ನೀಡದ್ದಕ್ಕೆ ಪೂರ್ವಸಿದ್ಧತಾ ಪರೀಕ್ಷೆಗೆ ಹಾಜರಾಗಲಿಲ್ಲ. 9ನೇ ತರಗತಿಯ ವಿದ್ಯಾರ್ಥಿನಿಯೂ ಶಾಲೆಯ ಹೊರಗೆ ಕುಳಿತು ಪ್ರತಿಭಟಿಸಿದರು.

ವಿಜಯಪುರದಲ್ಲಿ ನಗರದ ಸರ್ಕಾರಿ ಪಿಯು ಹಾಗೂ ಪದವಿ ಕಾಲೇಜಿನ ವಿದ್ಯಾರ್ಥಿನಿಯರು ಪ್ರಾಯೋಗಿಕ ಪರೀಕ್ಷೆ ಬಹಿಷ್ಕರಿಸಿದರು. ಬಳಿಕ ಜಿಲ್ಲಾಧಿಕಾರಿಗಳ ಕಚೇರಿಗೆ ತೆರಳಿ ಹಿಜಾಬ್ ಧರಿಸಿ ತರಗತಿ ಪ್ರವೇಶಕ್ಕೆ ಅವಕಾಶ ನೀಡಬೇಕು ಎಂದು ಮನವಿ ಸಲ್ಲಿಸಿದರು.

ಉತ್ತರ ಕನ್ನಡ ಜಿಲ್ಲೆ ಮುಂಡಗೋಡದಲ್ಲಿಯೂ ಧರಣಿ ನಡೆಸಿ ತಹಶೀಲ್ದಾರ್‌ಗೆ ಮನವಿ ಸಲ್ಲಿಸಿದ್ದಾರೆ.

5ನೇ ಪುಟ ನೋಡಿ

### ಪೆಗಾಸಸ್ ಕುತಂತ್ರಾಂಶ ಪ್ರಕರಣ: ನಾಳೆ ವಿಚಾರಣೆ

**ನವದೆಹಲಿ:** ಇಸ್ರೇಲ್‌ನ ಬೇಹುಗಾರಿಕೆ ಕುತಂತ್ರಾಂಶ ಪೆಗಾಸಸ್ ಬಳಸಿ ಬೇಹುಗಾರಿಕೆ ನಡೆಸಿರುವ ಆರೋಪದ ಬಗ್ಗೆ ತನಿಖೆಗೆ ಕೋರಿ ಸಲ್ಲಿಸಲಾಗಿದ್ದ ಅರ್ಜಿಗಳ ವಿಚಾರಣೆಯನ್ನು ಬುಧವಾರ (ಫೆ. 23) ನಡೆಸುವುದಾಗಿ ಸುಪ್ರೀಂ ಕೋರ್ಟ್ ಹೇಳಿದೆ. 3

### 'ಕೋರ್ಬೆವ್ಯಾಕ್ಸ್' ಲಸಿಕೆಗೆ ಡಿಸಿಜಿಐ ಅನುಮತಿ

**ನವದೆಹಲಿ :** ಕೋವಿಡ್–19ರ ವಿರುದ್ಧ ಮಕ್ಕಳು ಮತ್ತು ಹದಿಹರೆಯದವರಿಗಾಗಿ ಅಭಿವೃದ್ಧಿಪಡಿಸಿರುವ 'ಕೋರ್ಬೆವ್ಯಾಕ್ಸ್' ಲಸಿಕೆಯನ್ನು ತುರ್ತು ಸಂದರ್ಭದಲ್ಲಿ ಬಳಸಲು ಭಾರತೀಯ ಔಷಧ ಮಹಾ ನಿಯಂತ್ರಕರ ಕಚೇರಿ (ಡಿಸಿಜಿಐ) ಅನುಮತಿ ನೀಡಿದೆ. 3B

### ಪರಿಷತ್‌ನಲ್ಲಿ ಗದ್ದಲ, ಮುಂದುವರಿದ ಧರಣಿ

**ಬೆಂಗಳೂರು:** ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಅವರನ್ನು ಸಚಿವ ಸಂಪುಟದಿಂದ ವಜಾಗೊಳಿಸುವಂತೆ ಒತ್ತಾಯಿಸಿ ಕಾಂಗ್ರೆಸ್ ಸದಸ್ಯರು ಸೋಮವಾರವೂ ವಿಧಾನಪರಿಷತ್‌ನಲ್ಲಿ ಸಭಾಪತಿ ಪೀಠದ ಮುಂದೆ ಧರಣಿ ನಡೆಸಿದರು. 5

### ಬ್ಯಾಂಕಿಂಗ್ ವಂಚನೆ: ವಿಚಾರಣೆಗೆ ಹಾಜರಾದ ರಿಷಿ

**ನವದೆಹಲಿ:** ಬ್ಯಾಂಕ್‌ಗಳಿಗೆ ₹ 22,848 ಕೋಟಿ ವಂಚಿಸಿರುವ ಆರೋಪಕ್ಕೆ ಸಂಬಂಧಿಸಿದಂತೆ ಎಬಿಜಿ ಶಿಪ್‌ಯಾರ್ಡ್ ಲಿಮಿಟೆಡ್‌ನ ಮಾಜಿ ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕ ರಿಷಿ ಅಗರ್ವಾಲ್ ಅವರು ಸಿಬಿಐ ಎದುರು ಸೋಮವಾರ ವಿಚಾರಣೆಗೆ ಹಾಜರಾದರು. 10

### ಟ್ವೆಂಟಿ20 ರ‍್ಯಾಂಕಿಂಗ್: ಭಾರತಕ್ಕೆ ಮತ್ತೆ ಅಗ್ರಸ್ಥಾನ

**ದುಬೈ:** ಆರು ವರ್ಷಗಳ ನಂತರ ಭಾರತ ತಂಡ ಟ್ವೆಂಟಿ 20 ಕ್ರಿಕೆಟ್ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನಕ್ಕೇರಿದೆ. ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ (ಐಸಿಸಿ) ಸೋಮವಾರ ರ‍್ಯಾಂಕಿಂಗ್ ಪಟ್ಟಿ ಬಿಡುಗಡೆ ಮಾಡಿದ್ದು ಇಂಗ್ಲೆಂಡ್ ತಂಡವನ್ನು ಹಿಂದಿಕ್ಕಿ ಭಾರತ ಮೊದಲ ಸ್ಥಾನಕ್ಕೆ ಲಗ್ಗೆಹಾಕಿದೆ. 2016ರಲ್ಲಿ ಭಾರತ ಕೊನೆಯದಾಗಿ ಅಗ್ರ ಸ್ಥಾನ ಗಳಿಸಿತ್ತು. ಅದರೆ ಕೇವಲ ಎರಡೇ ತಿಂಗಳು ಆ ಸ್ಥಾನದಲ್ಲಿತ್ತು.

ಪಾಕಿಸ್ತಾನ, ನ್ಯೂಜಿಲೆಂಡ್ ಮತ್ತು ದಕ್ಷಿಣ ಆಫ್ರಿಕಾ ಅಗ್ರ ಐದರಲ್ಲಿ ಸ್ಥಾನ ಗಳಿಸಿದ್ದು ವಿಶ್ವ ಚಾಂಪಿಯನ್ ಆಸ್ಟ್ರೇಲಿಯಾ ಆರನೇ ಸ್ಥಾನದಲ್ಲಿದೆ. 11

'ಬಿಜೆಪಿ ವಿರುದ್ಧ 440 ವೋಲ್ಟ್ಸ್ ವಿದ್ಯುತ್ ಹರಿಯುತ್ತಿದೆ' 6

### ಚಿನಕುರಳಿ

ಪ್ರಕಾಶ್ ಶೆಟ್ಟಿ









## ‘ಗ್ರಾಮ ಭಾರತ ಪ್ರತಿಷ್ಠಾನ’ ಉದ್ಘಾಟನೆ 24ಕ್ಕೆ

ಬೆಂಗಳೂರು: ಗ್ರಾಮ ಭಾರತ ಪ್ರತಿಷ್ಠಾನದ ಉದ್ಘಾಟನಾ ಕಾರ್ಯಕ್ರಮ ಫೆ.24ರಂದು ಸಂಜೆ 5 ಗಂಟೆಗೆ ಗಾಂಧಿ ಭವನದಲ್ಲಿ ನಡೆಯಲಿದೆ.

ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪ್ರತಿಷ್ಠಾನದ ಸಂಸ್ಥಾಪಕ ಅಧ್ಯಕ್ಷ ಗೊ.ರು.ಚನ್ನಬಸಪ್ಪ, ‘ಪ್ರತಿಷ್ಠಾನವನ್ನು ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಉದ್ಘಾಟಿಸಲಿದ್ದಾರೆ. ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ ವಿ.ಪಾಟೀಲ ಪ್ರತಿಷ್ಠಾನದ ಪರಿಚಯ ಪತ್ರ ಬಿಡುಗಡೆ ಮಾಡಲಿದ್ದಾರೆ. ಅತಿಥಿಗಳಾಗಿ ಸಿ.ನಾರಾಯಣಸ್ವಾಮಿ, ಪ್ರಮೋದ ಹೆಗಡೆ ಭಾಗವಹಿಸಲಿದ್ದಾರೆ’ ಎಂದು ಹೇಳಿದರು.

ಅಧ್ಯಕ್ಷ ಟಿ.ತಿಮ್ಮೇಗೌಡ, ‘ಪ್ರತಿಷ್ಠಾನದ ಧ್ಯೇಯೋದ್ದೇಶಗಳ ಅನುಷ್ಠಾನಕ್ಕಾಗಿ ಕೇಂದ್ರ ಕಾರ್ಯನಿರ್ವಹಣಾ ಸಮಿತಿ ರಚಿಸಲಾಗಿದೆ. ಪ್ರತಿಷ್ಠಾನದ ಸೇವೆಗಳಲ್ಲಿ ಪಾಲ್ಗೊಳ್ಳಲು 9886210396 ಅಥವಾ gramabharatha2021@gmail.com ಅನ್ನು ಸಂಪರ್ಕಿಸಬಹುದು’ ಎಂದರು.

**ಕಚೇರಿ ವಿಳಾಸ:** ಗ್ರಾಮಭಾರತ ಪ್ರತಿಷ್ಠಾನ, ಐಡಿಯಲ್ ಹೋಮ್ಸ್ ಟೌನ್‌ಶಿಪ್, ರಾಜರಾಜೇಶ್ವರಿ ನಗರ.

# ನೀರ ಮೇಲೆ ನಡೆವ ಕಪ್ಪೆ ಪ್ರಭೇದ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೀರಿನ ಮೇಲ್ಮೈನಲ್ಲಿ ಸರಸರನೆ ನಡೆದು ಸಾಗುವ (ಸ್ಕಿಟರಿಂಗ್) ಇನ್ನೊಂದು ಕಪ್ಪೆಯ ಪ್ರಭೇದವನ್ನು ಜೂವಾಲಾಜಿಕಲ್ ಸರ್ವೆ ಆಫ್ ಇಂಡಿಯಾ (ಜೆಡ್‌ಎಸ್‌ಐ), ನಗರದ ಮೌಂಟ್ ಕಾರ್ಮೆಲ್ ಕಾಲೇಜು ಹಾಗೂ ರಾಷ್ಟ್ರೀಯ ವಿಜ್ಞಾನ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯ (ಎನ್‌ಐಎಸ್‌ಇಆರ್) ವಿಜ್ಞಾನಿಗಳ ತಂಡವು ಪಶ್ಚಿಮ ಕರಾವಳಿ ತೀರ ಪ್ರದೇಶದಲ್ಲಿ ಪತ್ತೆಹಚ್ಚಿದೆ.

ಹೊಸ ಪ್ರಭೇದದ ಕಪ್ಪೆಗಳು ದೇಶದ ಪಶ್ಚಿಮ ಕರಾವಳಿ ತೀರದಲ್ಲಿ ಹಾಗೂ ಪಶ್ಚಿಮ ಘಟ್ಟ ಶ್ರೇಣಿ ಚಾಚಿಕೊಂಡಿರುವ ಪ್ರದೇಶಗಳ ಸಿಹಿನೀರಿನ ಮೂಲಗಳಲ್ಲಿ ಮಾತ್ರ ಕಂಡುಬರುತ್ತವೆ. ಈ ಹೊಸ ಕಪ್ಪೆ ಪ್ರಭೇದದ ವೈಜ್ಞಾನಿಕ ಹೆಸರು ಯೂಫ್ಲಿಕ್ಟಿಸ್ ಜಲಧಾರಾ (Euphlyctis jaladhara). ಈ ಕುರಿತ ವೈಜ್ಞಾನಿಕ ಪ್ರಬಂಧವು ನ್ಯೂಜಿಲೆಂಡ್‌ನ ‘ಝೂಟ್ಯಾಕ್ಸಾ’ ಅಂತರರಾಷ್ಟ್ರೀಯ ವಿಜ್ಞಾನ ನಿಯತಕಾಲಿಕೆಯಲ್ಲಿ ಇತ್ತೀಚೆಗೆ ಪ್ರಕಟವಾಗಿದೆ.

ಈ ಪ್ರಭೇದವು ಮೊದಲ ಬಾರಿ ಕೇರಳದ ಥಟ್ಟೆಕಾಡ್ ಪಕ್ಷಿಧಾಮದಲ್ಲಿ ಕಂಡುಬಂದಿತ್ತು. ಕರ್ನಾಟಕ, ಗೋವಾ ಮಹಾರಾಷ್ಟ್ರ, ಕೇಂದ್ರಾಡಳಿತ ಪ್ರದೇಶಗಳಾದ ದಿಯು, ದಾಮನ್, ನಗರ್‌ಹವೇಲಿ ಸೇರಿದಂತೆ ಕೇರಳದಿಂದ ಗುಜರಾತ್ ನಡುವಿನ ಕರಾವಳಿ ತೀರದುದ್ದಕ್ಕೂ ಇವುಗಳ ನೆಲೆ ಇರುವುದನ್ನು ವಿಜ್ಞಾನಿಗಳ ತಂಡವು ಕಂಡುಹಿಡಿದಿದೆ. ಈ ಸಂಶೋಧನೆಯು ಜೂವಾಲಾಜಿಕಲ್ ಸರ್ವೆ ಆಫ್ ಇಂಡಿಯಾ ಹಮ್ಮಿಕೊಂಡ ಪ್ರಾಣಿಗಳ ಸಂಶೋಧನೆ ಮತ್ತು ದಾಖಲೀಕರಣ ಕಾರ್ಯಕ್ರಮದ ಭಾಗ. ನೀರಿನ ಮೇಲೆ ಸರಸರನೇ ನಡೆಯುವ ಕಪ್ಪೆಯ ಇನ್ನೊಂದು ಪ್ರಭೇದವನ್ನು (ಫ್ರೈನೋಡರ್ಮ ಕೇರಳ) 2021ರಲ್ಲಿ ಇದೇ ವಿಜ್ಞಾನಿಗಳ ತಂಡವು ಪತ್ತೆಹಚ್ಚಿತ್ತು.



ಯೂಫ್ಲಿಕ್ಟಿಸ್ ಜಲಧಾರಾ ಕಪ್ಪೆ

ಈ ಹೊಸ ಪ್ರಭೇದದ ಕಪ್ಪೆಗಳು ದೇಶದ ಪೂರ್ವ ಕರಾವಳಿ ತೀರ, ದಖ್ಖನ್ ಪ್ರಸ್ಥಭೂಮಿ ಹಾಗೂ ಪಶ್ಚಿಮ ಘಟ್ಟ ಪ್ರದೇಶದಲ್ಲಿ ಸಾಮಾನ್ಯವಾಗಿ ಕಂಡುಬರುವ ನಡೆಯುವ ಕಪ್ಪೆಗಳನ್ನು (ಯೂಫ್ಲಿಕ್ಟಿಸ್ ಸಯನೋಫ್ಲಿಕ್ಟಿಸ್ ಪ್ರಭೇದ) ಹೋಲುತ್ತವೆ. ಯೂಫ್ಲಿಕ್ಟಿಸ್ ಸಯನೋಫ್ಲಿಕ್ಟಿಸ್ ಪ್ರಭೇದದ ಕಪ್ಪೆಗಳನ್ನು 220 ವರ್ಷಗಳ ಹಿಂದೆ ಪತ್ತೆಹಚ್ಚಲಾಗಿತ್ತು.

### ‘ಹೊಸ ಪ್ರಭೇದದ ಕಪ್ಪೆ ಸಂತತಿ ಅಪಾಯದಲ್ಲಿದೆ’

‘ಕಪ್ಪೆಗಳು ನೀರಿನಲ್ಲಿ ಹಾಗೂ ಭೂಮಿಯ ಮೇಲೆ ವಾಸಿಸುವ ಕಶೇರುಕ ಜೀವಿಗಳ ಕೊಂಡಿಗಳು. ಸಿಹಿನೀರಿನಲ್ಲಿ ಮಾತ್ರ ಕಂಡುಬರುವ ಈ ಹೊಸ ಪ್ರಭೇದದ ಕಪ್ಪೆಗಳ ಸಂತತಿ ಅಪಾಯದಲ್ಲಿದೆ. ಕರಾವಳಿಯಲ್ಲಿ ಸಿಹಿನೀರಿನ ಮೂಲಗಳು ಕ್ಷೀಣಿಸುತ್ತಿವೆ. ಇವು ಸಮುದ್ರದ ಉಪ್ಪುನೀರಿನಲ್ಲಿ ಬದುಕುವುದಿಲ್ಲ. ಪಶ್ಚಿಮಘಟ್ಟವನ್ನು ಹತ್ತಿ ಹೋಗುವ ಸಾಮರ್ಥ್ಯ ಇವುಗಳಿಗಿಲ್ಲ. ನೀರಿನ ಮಾಲಿನ್ಯವೂ ಇವುಗಳ ಸಂತತಿಗೆ ಅಪಾಯ ತಂದೊಡ್ಡುತ್ತದೆ. ಸಿಹಿನೀರಿನ ಮೂಲಗಳು ಶುದ್ಧವಾಗಿರುವಂತೆ ಎಚ್ಚರ ವಹಿಸುವ ಮೂಲಕ ಇವುಗಳ ರಕ್ಷಣೆಗೆ ವಿಶೇಷ ಕಾಳಜಿ ವಹಿಸಬೇಕು’ ಎಂದು ವಿಜ್ಞಾನಿ ಡಾ.ಕೆ.ಪಿ. ದಿನೇಶ್ ‘ಪ್ರಜಾವಾಣಿ’ಗೆ ತಿಳಿಸಿದರು.

## ಸುದ್ದಿ 2 ನಿಮಿಷ

### ಮಗಳಿಗೆ ಮೂತ್ರಪಿಂಡ ದಾನ

ಬೆಂಗಳೂರು: ಮೂತ್ರಪಿಂಡ ವೈಫಲ್ಯ ಸಮಸ್ಯೆ ಎದುರಿಸುತ್ತಿದ್ದ 12 ವರ್ಷದ ಬಾಲಕಿಗೆ ತಾಯಿಯೇ ಮೂತ್ರಪಿಂಡ ದಾನ ಮಾಡಿದ್ದಾರೆ.

ಇಲ್ಲಿನ ಫೋರ್ಟಿಸ್ ಆಸ್ಪತ್ರೆ ವೈದ್ಯರು ರೋಬೋಟಿಕ್ ತಂತ್ರಜ್ಞಾನದ ನೆರವಿನಿಂದ ಯಶಸ್ವಿಯಾಗಿ ಕಸಿ ಮಾಡಿದ್ದಾರೆ.

‘ಒಂದು ವರ್ಷದಿಂದ ಬಾಲಕಿಯು ಮೂತ್ರಪಿಂಡ ವೈಫಲ್ಯ ಸಮಸ್ಯೆ ಎದುರಿಸುತ್ತಿದ್ದಳು. ಅವಳಿಗೆ ಡಯಾಲಿಸಿಸ್ ಮಾಡಲಾಗುತ್ತಿತ್ತು. ತ್ವರಿತವಾಗಿ ಮೂತ್ರಪಿಂಡ ಕಸಿ ಮಾಡದಿದ್ದರೆ ಬಾಲಕಿ ಮೃತಪಡುವ ಸಾಧ್ಯತೆ ಹೆಚ್ಚಿತ್ತು. ಮೂತ್ರಪಿಂಡ ದಾನಿಗಳ ಕೊರತೆಯಿಂದ ಕಸಿ ತಡವಾಗುವ ಸಾಧ್ಯತೆಯಿತ್ತು. ತಾಯಿಯೇ ಮೂತ್ರಪಿಂಡ ದಾನ ಮಾಡಿದ್ದರಿಂದ ಸಮಯಕ್ಕೆ ಸರಿಯಾಗಿ ಕಸಿ ಮಾಡಲು ಸಾಧ್ಯವಾಯಿತು’ ಎಂದು ಆಸ್ಪತ್ರೆಯ ರೋಬೋಟಿಕ್ ಶಸ್ತ್ರಚಿಕಿತ್ಸೆ ಮತ್ತು ಕಸಿ ವಿಭಾಗದ ನಿರ್ದೇಶಕ ಡಾ. ಮೋಹನ್ ಕೇಶವ ಮೂರ್ತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಮಲಬಾರ್ ಗೋಲ್ಡ್: ಕಮ್ಮನಹಳ್ಳಿ ಮಳಿಗೆಯಲ್ಲಿ ಮಾರಾಟ ಮೇಳ




ಬೆಂಗಳೂರು: ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್ ಕಂಪನಿಯು ನಗರದ ಕಮ್ಮನಹಳ್ಳಿಯ ತನ್ನ ಮಳಿಗೆಯಲ್ಲಿ ಚಿನ್ನ, ವಜ್ರ ಹಾಗೂ ಅಮೂಲ್ಯ ಮುತ್ತುಗಳಿಂದ ಸಿದ್ಧಪಡಿಸಿದ ಕಲಾತ್ಮಕ ಆಭರಣಗಳ ಪ್ರದರ್ಶನ ಮತ್ತು ಮಾರಾಟ ಮೇಳವನ್ನು ಆಯೋಜಿಸಿದೆ. ಇದು ಫೆಬ್ರುವರಿ 27ರವರೆಗೆ ನಡೆಯಲಿದೆ.

ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್‌ನ ಉಪ ಬ್ರ್ಯಾಂಡ್‌ಗಳಾಗಿರುವ ಮೈನ್, ಇರಾ, ಡಿವೈನ್, ಎತ್ನಿಕ್ಸ್, ಪ್ರೆಸಿಯಾ, ಸ್ಟಾರ್ಲೆಟ್ ಆಭರಣಗಳು ಈ ಮಾರಾಟ ಮೇಳದಲ್ಲಿ ಲಭ್ಯವಿರಲಿವೆ ಎಂದು ಪ್ರಕಟಣೆ ತಿಳಿಸಿದೆ. ‘ಕಲಾತ್ಮಕ ಆಭರಣಗಳ ಪ್ರದರ್ಶನವು ಕಲಾವಿದರ ಕೌಶಲ ಮತ್ತು ಅನುಭವವನ್ನು ತೋರಿಸುತ್ತದೆ. ಗ್ರಾಹಕರು ತಮ್ಮ ಪಾಲಿನ ಅಮೂಲ್ಯ ಸಂದರ್ಭಗಳನ್ನು ಆಚರಿಸಲು ಈ ಆಭರಣಗಳನ್ನು ಆಯ್ಕೆ ಮಾಡಿಕೊಳ್ಳಬಹುದು’ ಎಂದು ಕಂಪನಿಯ ಅಧ್ಯಕ್ಷ ಎಂ.ಪಿ. ಅಹಮದ್ ಹೇಳಿದ್ದಾರೆ.

### ಮುಕ್ತ ವಿ.ವಿ ಶಿಕ್ಷಣ: ಕುಲಪತಿಗಳ ಸಮಾವೇಶದಲ್ಲಿ ಸಚಿವ ಸಿ.ಎನ್. ಅಶ್ವತ್ಥನಾರಾಯಣ

# ನೇಮಕಾತಿಯಲ್ಲಿನ ತೊಂದರೆ ಪರಿಹರಿಸಲು ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಕ್ತ ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನ ಮಾಡಿದವರಿಗೆ ನೇಮಕಾತಿಯಲ್ಲಿ ತೊಂದರೆ ಆಗುತ್ತಿರುವ ಬಗ್ಗೆ ಮುಖ್ಯಮಂತ್ರಿ ಜತೆ ಚರ್ಚಿಸಿ ಗೊಂದಲ ನಿವಾರಿಸಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಹೇಳಿದರು.



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಸೋಮವಾರ ಏರ್ಪಡಿಸಿದ್ದ ಅಖಿಲ ಭಾರತ ಮುಕ್ತ ವಿಶ್ವವಿದ್ಯಾಲಯಗಳ ಕುಲಪತಿಗಳ ಸಮಾವೇಶದಲ್ಲಿ ‘ಆನ್‌ಲೈನ್ ಡಿಜಿಟಲ್ ಕಲಿಕೆ ಮತ್ತು ಆನ್‌ಲೈನ್ ಕಲಿಕೆ ಉತ್ತೇಜಿಸಲು ನಿಯಮಾವಳಿಗಳಲ್ಲಿ ಗುಣಾತ್ಮಕ ಸುಧಾರಣೆ’ ಕುರಿತ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

ಕೆಎಂಎಫ್ ನೇಮಕಾತಿ ವೇಳೆ ಮುಕ್ತ ವಿಶ್ವ ವಿದ್ಯಾಲಯಗಳ ಅಭ್ಯರ್ಥಿಗಳಿಗೆ ಅವಕಾಶವಿಲ್ಲ ಎಂಬ ನಿಬಂಧನೆ ವಿಧಿಸಿದ್ದನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ವಿದ್ಯಾಶಂಕರ್ ಅವರು ಸಚಿವರ ಗಮನಕ್ಕೆ ತಂದರು.

ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು, ‘ವಿಶ್ವವಿದ್ಯಾಲಯ ಧನಸಹಾಯ ಆಯೋಗದ(ಯುಜಿಸಿ) ಮಾನ್ಯತೆ ಇರುವ ಮುಕ್ತ ವಿಶ್ವವಿದ್ಯಾಲಯಗಳ ಪದವಿಗಳು ಕೂಡ ಇತರ ವಿಶ್ವವಿದ್ಯಾಲಯಗಳ ಪದವಿಗಳಿಗೆ ಸಮ. ಎಲ್ಲ ರೀತಿಯ ಉದ್ಯೋಗಕ್ಕೂ ಅವರಿಗೆ ಅವಕಾಶ ಲಭ್ಯವಾಗಬೇಕು. ಯಾವುದೇ ತಾರತಮ್ಯ ಆಗದಂತೆ ನಿಗಾ ವಹಿಸಲಾಗುವುದು’ ಎಂದು ತಿಳಿಸಿದರು.

‘ಮುಕ್ತ ವಿಶ್ವವಿದ್ಯಾಲಯಗಳಿಗೆ ಆನ್‌ಲೈನ್ ಶಿಕ್ಷಣ ನೀಡಲು ಅನುಮತಿ ನೀಡುವ ವಿಷಯದಲ್ಲಿ ಯುಜಿಸಿ ನಿಯಾಮವಳಿಗಳ ಬದಲಾವಣೆ ಅಗತ್ಯವಿದೆ. ಮುಕ್ತ ವಿಶ್ವವಿದ್ಯಾಲಯಗಳಲ್ಲಿ ಹೆಚ್ಚು ಶಿಕ್ಷಣ ನೀಡುಲು ಸಾಧ್ಯವಾಗುವಂತೆ ಪದವಿ ಮತ್ತು ಸ್ನಾತಕೋತ್ತರ ಪದವಿ ಮಟ್ಟದಲ್ಲಿ ಹೊಸ ಕೋರ್ಸ್‌ಗಳನ್ನು ಪರಿಚಯಿಸಬೇಕು’ ಎಂದು ಅವರು ಸಲಹೆ ನೀಡಿದರು.

ಕಾಲಕಾಲಕ್ಕೆ ಪಠ್ಯಕ್ರಮವನ್ನು ಪರಿಷ್ಕೃತಗೊಳಿಸುವುದು ಮುಕ್ತ ವಿಶ್ವವಿದ್ಯಾಲಯಗಳಿಗೆ ಸವಾಲಿನ ಕೆಲಸ. ಮೂಲಸೌಲಭ್ಯಗಳಿಗಾಗಿ ದೊಡ್ಡ ಮೊತ್ತದ ಹಣ ಬೇಕಾಗುತ್ತದೆ. ಆದ್ದರಿಂದ ಅಭಿವೃದ್ಧಿ ಅನುದಾನವನ್ನು ಯುಜಿಸಿ ವರ್ಷಕ್ಕೊಮ್ಮೆ ಬಿಡುಗಡೆ ಮಾಡಬೇಕು ಎಂದು ಸಚಿವರು ಹೇಳಿದರು.

ಯುಜಿಸಿ ಜಂಟಿ ಕಾರ್ಯದರ್ಶಿ ಡಾ.ಅವಿಚಲ್ ಕಪೂರ್ ಮಾತನಾಡಿ, ‘ಪಠ್ಯಕ್ರಮದ ಶೇ 20ರಷ್ಟನ್ನು ಆನ್‌ಲೈನ್ ಮೂಲಕ ಕಲಿಸಲು ಅನುಮತಿ ಇತ್ತು. ಈಗ ಇದನ್ನು ಶೇ 40ಕ್ಕೆ ಹೆಚ್ಚಿಸಲಾಗಿದೆ’ ಎಂದು ತಿಳಿಸಿದರು.



### ಶಿಕ್ಷಕರ ಸಭೆಯಲ್ಲಿ ಸಾಹಿತಿ ಬರಗೂರು ರಾಮಚಂದ್ರಪ್ಪ ಆತಂಕ

# ‘ಆನ್‌ಲೈನ್ ಬೋಧನೆಯಿಂದ ಶಿಕ್ಷಣ ಯಾಂತ್ರಿಕ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆನ್‌ಲೈನ್ ಬೋಧನೆ ಹೆಚ್ಚಾಗುವುದರಿಂದ ಶಿಕ್ಷಕರು ಮತ್ತು ವಿದ್ಯಾರ್ಥಿಗಳ ನಡುವಿನ ಒಡನಾಟಕ್ಕೆ ಧಕ್ಕೆಯಾಗಲಿದೆ’ ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಆತಂಕ ವ್ಯಕ್ತಪಡಿಸಿದರು.

ಕರ್ನಾಟಕ ರಾಜ್ಯ ಪ್ರೌಢಶಾಲಾ ಸಹಶಿಕ್ಷಕರ ಸಂಘ ನಗರದಲ್ಲಿ ಸೋಮವಾರ ಆಯೋಜಿಸಿದ್ದ 2022ನೇ ಸಾಲಿನ ಸರ್ವ ಸದಸ್ಯರ ಮಹಾಸಭೆ ಹಾಗೂ ನಿಕಟಪೂರ್ವ ಪದಾಧಿಕಾರಿಗಳ ಸನ್ಮಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

‘ರಾಜ್ಯದಲ್ಲಿ 48 ಸಾವಿರ ಮತ್ತು ದೇಶದಲ್ಲಿ ಲಕ್ಷಕ್ಕೂ ಹೆಚ್ಚು ಸರ್ಕಾರಿ ಶಾಲೆಗಳಿವೆ. ತಂತ್ರಜ್ಞಾನವನ್ನು ಮೂಲಸೌಕರ್ಯ ಅಭಿವೃದ್ಧಿ ಮತ್ತು ಆಡಳಿತದಲ್ಲಿನ ಸುಧಾರಣೆಗೆ ಹೆಚ್ಚಾಗಿ ಬಳಕೆ ಮಾಡಿಕೊಳ್ಳಬೇಕೇ ಹೊರತು ಬೋಧನೆಗೆ ಅಲ್ಲ’ ಎಂದು ಪ್ರತಿಪಾದಿಸಿದರು.




ಸಂಘದ ನಿಕಟಪೂರ್ವ ಪದಾಧಿಕಾರಿಗಳಾದ (ಕುಳಿತವರು ಎಡದಿಂದ) ರಮೇಶ್ (ಬೆಂಗಳೂರು ಗ್ರಾಮಾಂತರ), ವೆಂಕಟರಾಮು(ಮಧುಗಿರಿ), ಗಂಗಾಧರಯ್ಯ(ತುಮಕೂರು), ಕೆ.ಸಂಪತ್‌ಕುಮಾರ್ (ಬೆಂಗಳೂರು ನಗರ) ಮತ್ತು ಪಿ.ಸಿ. ಕಲಹಾಳ(ಗದಗ) ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಸಂಘದ ಪ್ರಧಾನ ಕಾರ್ಯದರ್ಶಿ ರಾಮು ಅ. ಗುಗವಾಡ, ಕಾನೂನು ಸಲಹೆಗಾರ ಶರಣಪ್ಪ ಮಟ್ಟೂರ, ಸಾಹಿತಿ ಬರಗೂರು ರಾಮಚಂದ್ರಪ್ಪ, ವಿಧಾನ ಪರಿಷತ್ತಿನ ಸದಸ್ಯ ಪುಟ್ಟಣ್ಣ, ಸಂಘದ ಅಧ್ಯಕ್ಷ ಎಚ್.ಕೆ. ಮಂಜುನಾಥ್ ಮತ್ತು ಕೋಶಾಧ್ಯಕ್ಷೆ ಪಿ.ಎ. ಸರಸ್ವತಿ ಇದ್ದರು –ಪ್ರಜಾವಾಣಿ ಚಿತ್ರ

‘ವಿದ್ಯಾರ್ಥಿಗಳು ಮತ್ತು ಶಿಕ್ಷಕರ ನಡುವೆ ಅವಿನಾಭಾವ ಸಂಬಂಧ ಇರುತ್ತವೆ. ಪಠ್ಯದ ಹೊರತಾಗಿಯೂ ವಿದ್ಯಾರ್ಥಿಗಳು ಮೌಲ್ಯಯುತ ಬದುಕು ಕಟ್ಟಿಕೊಳ್ಳಲು ಅದು ಪೂರಕವಾಗುತ್ತಿದೆ. ಬೋಧನೆ ಸಂಪೂರ್ಣವಾಗಿ ಆನ್‌ಲೈನ್ ಪದ್ಧತಿಯಾದರೆ ಶಿಕ್ಷಣ ಕೇವಲ ಯಾಂತ್ರಿಕವಾಗುತ್ತದೆ. ಮಾನವಿಕ ಸಂಬಂಧ ಹಾಳಾಗುತ್ತದೆ’ ಎಂದು ಬೇಸರ ವ್ಯಕ್ತಪಡಿಸಿದರು.

‘900ಕ್ಕೂ ಹೆಚ್ಚು ಕಾಲೇಜುಗಳಲ್ಲಿ ಆನ್‌ಲೈನ್ ತರಗತಿ ನಡೆಸುವ ಬಗ್ಗೆ ಯುಜಿಸಿ ತಿಳಿಸಿದೆ. ಇದು ಅತ್ಯಂತ ಆತಂಕಕಾರಿ ವಿಚಾರ. ಬೋಧನೆಗೆ ತಂತ್ರಜ್ಞಾನ ಪೂರಕ ಆಗಬೇಕೆ ಹೊರತು, ಅದೇ ಪ್ರಧಾನ ಆಗಬಾರದು’ ಎಂದು ಹೇಳಿದರು.

‘ಶಿಕ್ಷಕರ ಸಂಘಗಳು ಕೇವಲ ತಮ್ಮ ಸಮಸ್ಯೆ ಮತ್ತು ವರ್ಗಾವಣೆ ವಿಷಯಗಳಿಗೆ ಸೀಮಿತವಾಗಬಾರದು. ಶೈಕ್ಷಣಿಕ ಗುಣಮಟ್ಟ ಸುಧಾರಣೆಗೆ ಸಂಘಗಳು ಚಿಂತನೆ ನಡೆಸಿ ತಮ್ಮನ್ನು ತೊಡಿಗಿಸಿಕೊಳ್ಳಬೇಕು’ ಎಂದರು.

## ಇದೇ 26ರಿಂದ ಮಾ.6ರ ವರೆಗೆ ವಿಜ್ಞಾನ ಸಪ್ತಾಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ವಿಜ್ಞಾನ ದಿನದ ಅಂಗವಾಗಿ ಭಾರತೀಯ ವಿಜ್ಞಾನಗಳ ಅಕಾಡೆಮಿಯ (ಐಎಎಸ್) ದಿ ಅಕಾಡೆಮಿ ಟ್ರಸ್ಟ್ ಹಾಗೂ ಸೀಡ್ ಟು ಸಾಪ್ಲಿಂಗ್ ಎಜುಕೇಷನ್ ಸಂಸ್ಥೆಗಳ ಸಹಯೋಗದಲ್ಲಿ ‘ವಿಜ್ಞಾನ ಸಪ್ತಾಹ’ ಕಾರ್ಯಕ್ರಮವನ್ನು ಫೆಬ್ರುವರಿ 26ರಿಂದ ಮಾರ್ಚ್ 6ರವರೆಗೆ ಆನ್‌ಲೈನ್ ಮೂಲಕ ಹಮ್ಮಿಕೊಳ್ಳಲಾಗಿದೆ.

ಸೋಮವಾರ ಆನ್‌ಲೈನ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಭಾರತೀಯ ವಿಜ್ಞಾನಗಳ ಅಕಾಡೆಮಿಯ ಪ್ರೊ.ತೀರ್ಥಂಕರ ಭಟ್ಟಾಚಾರ್ಯ, ‘ಶಾಲೆಗಳು ಪರೀಕ್ಷೆಗಳಿಗೆ ಸಜ್ಜಾಗಿವೆ. ವಿಜ್ಞಾನ ಮತ್ತು ಗಣಿತದ ಕೌಶಲಗಳನ್ನು ಪರಿಚಯಿಸುವುದು ಸಪ್ತಾಹದ ಪ್ರಮುಖ ವಿಷಯ’ ಎಂದರು.

ಸೀಡ್‌ಟುಸಾಪ್ಲಿಂಗ್ ಎಜುಕೇಷನ್ ಸಂಸ್ಥೆಯ ನಿರ್ದೇಶಕ ಪಂಕಜ್ ಜೈನ್, ‘ಮಕ್ಕಳಿಗೆ ವಿಜ್ಞಾನದ ಪ್ರಕ್ರಿಯೆಯನ್ನು ಆನಂದಿಸಲು ಅವಕಾಶ ಮಾಡಿಕೊಡುವುದು ಹಾಗೂ ಅನ್ವೇಷಿಸಲು ಮುಕ್ತ ವಾತಾವರಣ ನಿರ್ಮಿಸುವ ಉದ್ದೇಶದಿಂದ ವಿಶೇಷ ಕಾರ್ಯಾಗಾರಗಳನ್ನು ಆಯೋಜಿಸಲಾಗಿದೆ’ ಎಂದು ಹೇಳಿದರು.

ಐಎಎಸ್ ಕೌನ್ಸಿಲ್‌ನ ಅಧ್ಯಕ್ಷ ಪ್ರೊ.ಉಮೇಶ್ ವಿ.ವಾಗ್ಮರೆ ಅವರು ಫೆ.26ರಂದು ಸಪ್ತಾಹಕ್ಕೆ ಚಾಲನೆ ನೀಡಲಿದ್ದಾರೆ. ಪ್ರತಿದಿನ ಸಂಜೆ 4.30ರಿಂದ 6 ಗಂಟೆಯವರೆಗೆ ಚರ್ಚೆಗಳು ನಡೆಯಲಿವೆ. ದೇಶದ ಪ್ರಮುಖ ವಿಜ್ಞಾನಿಗಳು ಮಾತನಾಡಲಿದ್ದಾರೆ.

ಸರಳ ಮತ್ತು ಸುಲಭವಾಗಿ ಲಭ್ಯವಿರುವ ವಸ್ತುಗಳನ್ನು ಬಳಸಿಕೊಂಡು ವಿದ್ಯಾರ್ಥಿಗಳು ಗಣಿತ ಮತ್ತು ವಿಜ್ಞಾನದ ಪರಿಶೋಧನೆಗಳನ್ನು ನಡೆಸುವ ಬಗ್ಗೆ ಚರ್ಚೆಗಳು ನಡೆಯಲಿವೆ. ಶಿಕ್ಷಕರಿಗೆ ‘ವಿಜ್ಞಾನ ಮತ್ತು ಗಣಿತ ತರಗತಿಗಳನ್ನು ಸಂತೋಷದಾಯಕವಾಗಿ ಮಾಡುವುದು ಹೇಗೆ?’ ಕುರಿತು ಸಂವಾದ ಆಯೋಜಿಸಲಾಗಿದೆ.

ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗಾಗಿ ‘ಕ್ವೆಸ್ಟ್–ಫೆಸ್ಟ್’ ಸ್ಪರ್ಧೆಯೂ ನಡೆಯಲಿದೆ. ವಿಜ್ಞಾನ ಮತ್ತು ಗಣಿತ ಶಿಕ್ಷಕರ ಆಯ್ದ ಗುಂಪಿಗೆ 12 ವಾರಗಳ ಅವಧಿಯ ಸರ್ಟಿಫಿಕೇಟ್ ಕೋರ್ಸ್ ಇರಲಿದೆ.

‘ವಿಜ್ಞಾನ ವಾರ ಕಾರ್ಯಕ್ರಮಗಳಲ್ಲಿ ಭಾಗವಹಿಸುವವರು ias.ac.in ಅಥವಾ s2seducation.com ವೆಬ್‌ಸೈಟ್‌ಗಳಲ್ಲಿ ನೋಂದಣಿ ಮಾಡಿಕೊಳ್ಳಬಹುದು. ವಾರವಿಡೀ ನಡೆಯುವ ಕಾರ್ಯಕ್ರಮಗಳನ್ನು ಆನ್‌ಲೈನ್ ವೇದಿಕೆಗಳಲ್ಲಿ ವೀಕ್ಷಿಸಬಹುದು’ ಎಂದು ಪ್ರಕಟಣೆ ತಿಳಿಸಿದೆ.

### ಐಸಿಎಐ ಅಧ್ಯಕ್ಷರಾಗಿ ಶ್ರೀನಿವಾಸ್ ಆಯ್ಕೆ

ಬೆಂಗಳೂರು: ಭಾರತೀಯ ಲೆಕ್ಕ ಪರಿಶೋಧಕರ ಸಂಸ್ಥೆಯ (ಐಸಿಎಐ) ಬೆಂಗಳೂರು ಶಾಖೆಯ 53ನೇ ಅಧ್ಯಕ್ಷರಾಗಿ ಟಿ. ಶ್ರೀನಿವಾಸ್ ಸೋಮವಾರ ಆಯ್ಕೆಯಾಗಿದ್ದಾರೆ.



ಟಿ. ಶ್ರೀನಿವಾಸ್

2022-23 ನೇ ಸಾಲಿಗೆ ಅಧ್ಯಕ್ಷರಾಗಿರುವ ಟಿ. ಶ್ರೀನಿವಾಸ್ ಅವರು, 15 ವರ್ಷಗಳ ವೃತ್ತಿಪರ ಅನುಭವ ಹೊಂದಿದ್ದಾರೆ. ನೇರ ತೆರಿಗೆ, ಜಿಎಸ್‌ಟಿ, ಕಂಪನಿ ವಿಷಯಗಳಲ್ಲಿ ಇವರು ಪರಿಣತಿ ಹೊಂದಿದ್ದಾರೆ.

ಈ ಹಿಂದೆ ಬೆಂಗಳೂರು ಶಾಖೆಯಲ್ಲಿ ಉಪಾಧ್ಯಕ್ಷರಾಗಿ, ಕಾರ್ಯದರ್ಶಿಯಾಗಿ, ಖಜಾಂಚಿಯಾಗಿ ಮತ್ತು ಎಸ್‌ಐಸಿಎಎಸ್‌ಎ ಅಧ್ಯಕ್ಷರಾಗಿಯೂ ಅವರು ಸೇವೆ ಸಲ್ಲಿಸಿದ್ದಾರೆ.

### ಮೈಸೂರು ರಂಗಾಯಣ ನಿರ್ದೇಶಕ ಅಭಿಮತ

# ‘ದೇಶಭಕ್ತಿಯಂತೆ ಭಾಷಾಪ್ರೇಮ ಬೆಳೆಯಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೇಶಭಕ್ತಿಯಂತೆ ಭಾಷಾಪ್ರೇಮವೂ ರಕ್ತದಲ್ಲಿ ಇರಬೇಕು. ಮನೆಯಲ್ಲಿ ಕನ್ನಡ ಮಾತನಾಡದೆ ಹೊರಗಡೆ ಅಬ್ಬರಿಸುವುದರಿಂದ ಭಾಷೆ ಉಳಿಯುವುದಿಲ್ಲ’ ಎಂದು ಮೈಸೂರು ರಂಗಾಯಣದ ನಿರ್ದೇಶಕ ಅಡ್ಡಂಡ ಸಿ. ಕಾರ್ಯಪ್ಪ ತಿಳಿಸಿದರು.

ಅಂತರರಾಷ್ಟ್ರೀಯ ಮಾತೃಭಾಷಾ ದಿನದ ಪ್ರಯುಕ್ತ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ನಗರದಲ್ಲಿ ಸೋಮವಾರ ಹಮ್ಮಿಕೊಂಡ ‘ಕನ್ನಡ ನಾಡಿನ ಮಾತೃಭಾಷೆಗಳು’ ವಿಚಾರಗೋಷ್ಠಿಯಲ್ಲಿ ಭಾಗವಹಿಸಿ, ಮಾತನಾಡಿದರು.



ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಆಯೋಜಿಸಿದ ‘ಕನ್ನಡ ನಾಡಿನ ಮಾತೃ ಭಾಷೆಗಳು’ ವಿಚಾರಗೋಷ್ಠಿಯಲ್ಲಿ ಶಾ.ಮಂ. ಕೃಷ್ಣರಾಯ ಹಾಗೂ ಅಜಕ್ಕಳ ಗಿರೀಶ್ ಭಟ್ ಚರ್ಚಿಸಿದರು. ಅಡ್ಡಂಡ ಸಿ. ಕಾರ್ಯಪ್ಪ, ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗದ ವಿಶ್ರಾಂತ ನಿರ್ದೇಶಕ ಹರಿಲಾಲ ಪವಾರ್ ಹಾಗೂ ಪ್ರಾಧಿಕಾರದ ಸದಸ್ಯ ಯತೀಂದ್ರನಾಥ್ ಇದ್ದರು –ಪ್ರಜಾವಾಣಿ ಚಿತ್ರ

ಭಾಷೆಗೆ ಸಂಬಂಧಿಸಿದ ಅಕಾಡೆಮಿಗಳಿಗೆ ಸರ್ಕಾರ ಅನುದಾನ ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿದರು.

ಕೊಂಕಣಿ ಭಾಷೆ ಬಗ್ಗೆ ಮಾತನಾಡಿದ ಸಾಹಿತಿ ಶಾ.ಮಂ. ಕೃಷ್ಣರಾಯ, ‘ಕೊಂಕಣಿ ಇಂಡೋ–ಆರ್ಯನ್ ಮೂಲದ ಭಾಷೆಯಾಗಿದೆ. ಹೋರಾಟ ಮತ್ತು ಸಾಹಿತ್ಯದ ಪರಂಪರೆಯಿಂದ ಈ ಭಾಷೆ ಬೆಳವಣಿಗೆ ಹೊಂದಿತು. ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ ಮಾನ್ಯತೆ ದೊರೆತ ಮೇಲೆ ಈ ಭಾಷೆ ಇನ್ನಷ್ಟು ಬೆಳವಣಿಗೆ ಹೊಂದಿತು’ ಎಂದರು.

ಪ್ರಾಧಿಕಾರದ ಅಧ್ಯಕ್ಷ ಅಜಕ್ಕಳ ಗಿರೀಶ ಭಟ್ ಮಾತನಾಡಿದರು.

ಪ್ರಾಧಿಕಾರದ ಸದಸ್ಯ ಯತೀಂದ್ರನಾಥ್, ‘ನಾವು ಬಳಸುವ ಕಂಪ್ಯೂಟರ್, ಮೊಬೈಲ್ ಸೇರಿದಂತೆ ವಿವಿಧ ಸಾಧನಗಳಲ್ಲಿ ಕನ್ನಡ ಅಳವಡಿಕೆಯಾಗಬೇಕು. ಈ ಭಾಷೆ ನಮ್ಮ ಮಕ್ಕಳ ಕಾಲಕ್ಕೆ ಮುಗಿದುಹೋಗುತ್ತದೆಯೋ ಎಂಬ ಭಯ ಪ್ರಾರಂಭವಾಗಿದೆ. ವ್ಯವಹಾರದಲ್ಲಿ ಕನ್ನಡ ಬಳಕೆ ಹೆಚ್ಚಾಗಬೇಕು’ ಎಂದರು.

17 ನಿಮಿಷಗಳಲ್ಲೇ ನಾಲ್ಕು ಮಸೂದೆಗಳಿಗೆ ವಿಧಾನಸಭೆಯಲ್ಲಿ ಒಪ್ಪಿಗೆ

# 362 ಅಭ್ಯರ್ಥಿಗಳ ನೇಮಕಾತಿ ಸರಾಗ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಭರ್ತಿಗಾಗಿ ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ನಡೆಸಿದ್ದ ಪರೀಕ್ಷೆಯಲ್ಲಿ ಆಯ್ಕೆಯಾಗಿದ್ದ 362 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡುವುದಕ್ಕೆ ಪೂರಕವಾಗಿ ರೂಪಿಸಿರುವ 'ಕರ್ನಾಟಕ ಸಿವಿಲ್ ಸೇವೆಗಳ 2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿಗಳ ಆಯ್ಕೆ ಮತ್ತು ನೇಮಕಾತಿ ಸಿಂಧುಗೊಳಿಸುವಿಕೆ ಮಸೂದೆ– 2022'ಕ್ಕೆ ವಿಧಾನಸಭೆಯಲ್ಲಿ ಸೋಮವಾರ ಅಂಗೀಕಾರ ನೀಡಲಾಯಿತು.

ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ ರಾಜೀನಾಮೆಗೆ ಒತ್ತಾಯಿಸಿ ಕಾಂಗ್ರೆಸ್ ಸದಸ್ಯರು ಧರಣಿ ನಡೆಸುತ್ತಿದ್ದಾಗ 17 ನಿಮಿಷಗಳಲ್ಲೇ ಹೆಚ್ಚಿನ ಚರ್ಚೆ ಇಲ್ಲದೆ ಒಟ್ಟು ನಾಲ್ಕು ಮಸೂದೆಗಳಿಗೆ ಒಪ್ಪಿಗೆ ನೀಡಲಾಯಿತು.

ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ. ಮಾಧುಸ್ವಾಮಿ ಮಾತನಾಡಿ, '362 ಅಭ್ಯರ್ಥಿಗಳ ನೇಮಕವನ್ನು ನ್ಯಾಯಾಲಯ ರದ್ದುಪಡಿಸಿತ್ತು. ನೇಮಕ ಸಂಬಂಧ ಕೆಪಿಎಸ್‌ಸಿ ಸದಸ್ಯರು ಲಂಚ ಕೇಳಿದ್ದಾರೆ ಎಂದು ಸಿಐಡಿ ವರದಿಯಲ್ಲಿತ್ತು. ಆದರೆ, ಸದಸ್ಯರ ವಿರುದ್ಧ ತನಿಖೆಗೆ ರಾಜ್ಯ ಸರ್ಕಾರ ಅನುಮತಿ ನೀಡಿಲ್ಲ. ಅಭ್ಯರ್ಥಿಗಳು ಅಕ್ರಮ ಎಸಗಿಲ್ಲ ಎಂದೂ ಸಿಐಡಿ ವರದಿಯಲ್ಲಿದೆ. ಹೀಗಾಗಿ, ಅವರನ್ನು ದಂಡಿಸುವುದು ಸರಿಯಲ್ಲ. ಅವರಿಗೆ ಉದ್ಯೋಗ ಸಿಗದ ಸ್ಥಿತಿ ನಿರ್ಮಾಣವಾಗಬಾರದು. ಈ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡುವ ಉದ್ದೇಶವನ್ನು ಈ ಮಸೂದೆ ಹೊಂದಿದೆ' ಎಂದು ಹೇಳಿದರು.

ಜೆಡಿಎಸ್‌ನ ಬಂಡೆಪ್ಪ ಕಾಶೆಂಪೂರ, 'ನೇಮಕಾತಿ ಪತ್ರ ಸಿಗದೆ ತೊಂದರೆ ಅನುಭವಿಸಿದ ಅಭ್ಯರ್ಥಿಗಳ ಸಮಸ್ಯೆಗೆ ಶಾಶ್ವತ ಪರಿಹಾರ ಸಿಗಲಿದೆ' ಎಂದರು.

**ಡಿಜಿಟಲ್ ಸ್ಟಾಂಪ್ ಪೇಪರ್‌ಗೆ ಮಾನ್ಯತೆ:** ಯಾವುದೇ ಗೃಹ ನಿರ್ಮಾಣ ಸಹಕಾರ ಸಂಘದ ನಿವೇಶನ ಹಂಚಿಕೆದಾರನಿಗೆ ಹಸ್ತಾಂತರ ಪತ್ರದ ಮೇಲಿನ ಕರಾರು ಮಾಡಿಕೊಂಡ ದಿನದಂದು ಇದ್ದ ನಿವೇಶನ ಮಾರುಕಟ್ಟೆ ಮೌಲ್ಯದ ಮೇಲೆ ಸ್ಟಾಂಪು ಶುಲ್ಕ ಪಾವತಿಸುವ ಉದ್ದೇಶಕ್ಕಾಗಿ 'ಕರ್ನಾಟಕ ಸ್ಟಾಂಪು (ತಿದ್ದುಪಡಿ) ಮಸೂದೆ'ಗೆ ವಿಧಾನಸಭೆಯಲ್ಲಿ ಒಪ್ಪಿಗೆ ನೀಡಲಾಯಿತು.

ಕಂದಾಯ ಸಚಿವ ಆರ್.ಅಶೋಕ, 'ಇಡೀ ಪ್ರಕ್ರಿಯೆಯನ್ನು ಸರಳೀಕರಣ ಮಾಡುವ ಉದ್ದೇಶವನ್ನು ಈ ಮಸೂದೆ ಹೊಂದಿದೆ. ಡಿಜಿಟಲ್ ಛಾಪಾ ಕಾಗದಗಳು ಈಗ ಸಿಗುತ್ತಿವೆ. ಅದಕ್ಕೆ ಕಾನೂನು ಮಾನ್ಯತೆ ಕೊಡಬೇಕಿದೆ. ಹೀಗಾಗಿ, ಮಸೂದೆ ತರಲಾಗಿದೆ' ಎಂದರು.

### ಆರ್‌ಎಸ್‌ಎಸ್ ಪ್ರಸ್ತಾಪ: ಕಾಗೇರಿ ಅಸಮಾಧಾನ

ಕಾಂಗ್ರೆಸ್ ಸದಸ್ಯರು ಧರಣಿ ವೇಳೆ ಆರ್‌ಎಸ್‌ಎಸ್ ಬಗ್ಗೆ ಪ್ರಸ್ತಾಪ ಮಾಡಿದ್ದಕ್ಕೆ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅಸಮಾಧಾನ ವ್ಯಕ್ತಪಡಿಸಿದರು.

ಕಾಂಗ್ರೆಸ್ ಸದಸ್ಯರ ಧರಣಿ ನಡುವೆಯೇ ಪ್ರಶ್ನೋತ್ತರ ಅವಧಿ, ಮಸೂದೆಗಳ ಮಂಡನೆ ಮಾಡಲಾಯಿತು. ಗದ್ದಲದ ನಡುವೆ ಚರ್ಚೆ ನಡೆಸುವುದು ಅಸಾಧ್ಯ ಎಂದು ಹೇಳಿ ಸಭಾಧ್ಯಕ್ಷರು ಕಲಾಪವನ್ನು ಮಂಗಳವಾರ ಬೆಳಿಗ್ಗೆ 11ಕ್ಕೆ ಮುಂದೂಡಿದರು.

# ಅನುದಾನಿತ ಪ್ರೌಢಶಾಲೆ: ಹುದ್ದೆ ಭರ್ತಿಗೆ ಕ್ರಮ– ಸಚಿವ ನಾಗೇಶ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಅನುದಾನಿತ ಪ್ರೌಢಶಾಲೆಗಳಲ್ಲಿ ಖಾಲಿ ಇರುವ 1,924 ಹುದ್ದೆಗಳನ್ನು ಭರ್ತಿ ಮಾಡಲು ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ' ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ. ನಾಗೇಶ್ ತಿಳಿಸಿದ್ದಾರೆ.

ವಿಧಾನ ಪರಿಷತ್‌ನಲ್ಲಿ ಬಿಜೆಪಿಯ ಶಶೀಲ್ ಜಿ. ನಮೋಶಿ, ಪುಟ್ಟಣ್ಣ ಮತ್ತು ಅರುಣ ಶಹಾಪುರ ಅವರ ಪ್ರಶ್ನೆಗೆ ಉತ್ತರಿಸಿದ ಅವರು, '2015ರ ಡಿಸೆಂಬರ್ 31ರವರೆಗೆ ಅನುದಾನಿತ ಪ್ರೌಢಶಾಲೆಗಳಲ್ಲಿ 3,689 ಹುದ್ದೆಗಳು ಖಾಲಿ ಉಳಿದಿದ್ದವು. ಇವುಗಳಲ್ಲಿ 3,633 ಹುದ್ದೆಗಳನ್ನು ಭರ್ತಿ ಮಾಡಲು ಸಮ್ಮತಿ ಸೂಚಿಸಲಾಗಿತ್ತು. ಆದರೆ, 1,452 ಹುದ್ದೆಗಳನ್ನು ಮಾತ್ರ ಭರ್ತಿ ಮಾಡಲಾಗಿದೆ. ಉಳಿದಂತೆ 2,181 ಖಾಲಿ ಹುದ್ದೆಗಳನ್ನು ಭರ್ತಿ ಮಾಡಬೇಕಾಗಿದೆ' ಎಂದು ವಿವರಿಸಿದರು.

'ಆರ್ಥಿಕ ಮಿತವ್ಯಯ ಆದೇಶ ಪ್ರಸ್ತುತ ಜಾರಿಯಲ್ಲಿರುವುದರಿಂದ 1,924 ಖಾಲಿ ಹುದ್ದೆಗಳನ್ನು ಮಾತ್ರ ಭರ್ತಿ ಮಾಡಲು ಆರ್ಥಿಕ ಇಲಾಖೆಯ ಒಪ್ಪಿಗೆ ಕೋರಿ ಮತ್ತೊಮ್ಮೆ ಪ್ರಸ್ತಾವ ಸಲ್ಲಿಸಲಾಗಿದೆ' ಎಂದು ತಿಳಿಸಿದರು.

'ಅನುದಾನಿತ ಪದವಿಪೂರ್ವ ಕಾಲೇಜುಗಳಲ್ಲಿ ಖಾಲಿ ಉಳಿದಿದ್ದ 998 ಹುದ್ದೆಗಳಲ್ಲಿ 323 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ಉಳಿದಂತೆ ಖಾಲಿ ಇರುವ 675 ಹುದ್ದೆಗಳ ಪೈಕಿ 436 ಹುದ್ದೆಗಳಿಗೆ ಆಡಳಿತ ಮಂಡಳಿಗಳು ಇದುವರೆಗೆ ಪ್ರಸ್ತಾವಗಳನ್ನು ಸಲ್ಲಿಸಿಲ್ಲ' ಎಂದು ಮಾಹಿತಿ ನೀಡಿದರು.

'ನಿರ್ದೇಶನಾಲಯದ ಹಂತದಲ್ಲಿ 239 ಹುದ್ದೆಗಳಿಗೆ ಭರ್ತಿ ಮಾಡುವ ಪ್ರಸ್ತಾವಗಳನ್ನು ಪರಿಶೀಲಿಸಲಾಗುತ್ತಿದೆ' ಎಂದು ತಿಳಿಸಿದರು.

### ಕೈಗಾರಿಕೆ ಉತ್ತೇಜನಕ್ಕೆ ಸ್ಟಾಂಪು ಮಸೂದೆ ಅಂಗೀಕಾರ

ಬೆಂಗಳೂರು: ಕೈಗಾರಿಕೆಗಳ ಸ್ಥಾಪನೆಗೆ ಉತ್ತೇಜನಕ್ಕಾಗಿ 2022ನೇ ಸಾಲಿನ ಕರ್ನಾಟಕ ಸ್ಟಾಂಪು (ಎರಡನೇ ತಿದ್ದುಪಡಿ) ಮಸೂದೆಗೆ ವಿಧಾನಸಭೆ ಅಂಗೀಕಾರ ನೀಡಿತು.

ಮಸೂದೆಯನ್ನು ಮಂಡಿಸಿದ ಕಂದಾಯ ಸಚಿವ ಆರ್.ಅಶೋಕ ಮಾತನಾಡಿ, 'ನಮ್ಮ ರಾಜ್ಯದಲ್ಲಿ ಕೈಗಾರಿಕೆಗಳಿಗೆ ವಿಧಿಸುತ್ತಿದ್ದ ಮುದ್ರಾಂಕ ಶುಲ್ಕ ಜಾಸ್ತಿ ಇದ್ದ ಕಾರಣ ಕೈಗಾರಿಕೋದ್ಯಮಿಗಳು ಕೈಗಾರಿಕೆಗಳ ಸ್ಥಾಪನೆಗೆ ಹಿಂದೇಟು ಹಾಕುತ್ತಿದ್ದರು. ಮಹಾರಾಷ್ಟ್ರ ಹಾಗೂ ಗುಜರಾತ್‌ನಲ್ಲಿ ಮುದ್ರಾಂಕ ಶುಲ್ಕ ಕಡಿಮೆ ಇದ್ದು, ಅಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ಮುಂದಾಗುತ್ತಿದ್ದಾರೆ. ಹೀಗಾಗಿ, ನಮ್ಮ ರಾಜ್ಯದಲ್ಲೂ ಪ್ರಕ್ರಿಯೆ ಸರಳಗೊಳಿಸಲು ತೀರ್ಮಾನಿಸಲಾಗಿದೆ. ಕೈಗಾರಿಕೆಗಳ ಮುದ್ರಾಂಕ ಶುಲ್ಕ ₹25 ಕೋಟಿ ದಾಟದಂತೆ ಈ ಮಸೂದೆಯಲ್ಲಿ ಅನುವು ಮಾಡಿಕೊಡಲಾಗಿದೆ' ಎಂದರು.

ಆರ್ಥಿಕ ಅಪರಾಧಗಳಿಗೆ ಒಳಗಾದ ಸಂತ್ರಸ್ತರ ಸ್ವತ್ತುಗಳನ್ನು ವಶಪಡಿಸಿಕೊಳ್ಳುವ ಉದ್ದೇಶಕ್ಕಾಗಿ ಕ್ರಿಮಿನಲ್ ಕಾನೂನು ತಿದ್ದುಪಡಿ ಮಸೂದೆಗೂ ಸಹ ಒಪ್ಪಿಗೆ ನೀಡಲಾಯಿತು.

ಮಸೂದೆ ಮಂಡಿಸಿದ ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ.ಮಾಧುಸ್ವಾಮಿ, 'ಆರ್ಥಿಕ ಅಪರಾಧಗಳ ವಿಚಾರಣೆ ನಡೆಸುವ ಅಧಿಕಾರ ಜಿಲ್ಲಾ ನ್ಯಾಯಾಧೀಶರಿಗೆ ಇತ್ತು. ಈಗ ಆ ಅಧಿಕಾರ ವಿಸ್ತರಣೆ ಮಾಡಲಾಗುತ್ತಿದ್ದು, ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಿಗೆ ಹಾಗೂ ವಿಚಾರಣಾ ನ್ಯಾಯಾಲಯಗಳಿಗೆ ಸಹ ಅಧಿಕಾರ ನೀಡಲಾಗುತ್ತಿದೆ. ಜತೆಗೆ, ಅಕ್ರಮ ಹಣ ವರ್ಗಾವಣೆಯ ತನಿಖೆಯಲ್ಲಿ ರಾಜ್ಯ ಸರ್ಕಾರ ಪಾತ್ರ ಹೊಂದಿಲ್ಲ. ಆರೋಪಿಗಳ ಆಸ್ತಿ ಜಪ್ತಿ ಮಾಡುವುದಕ್ಕೆ ಜಾರಿ ನಿರ್ದೇಶನಾಲಯ ಮಾತ್ರ ಅಧಿಕೃತ ಏಜೆನ್ಸಿ. ಇದೀಗ, ರಾಜ್ಯ ಸರ್ಕಾರಕ್ಕೂ ಅಧಿಕಾರ ಸಿಗಲಿದೆ' ಎಂದು ಹೇಳಿದರು.

## ಬೆಂಗಳೂರು ವಿ.ವಿ ಘಟಿಕೋತ್ಸವ: ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬೆಂಗಳೂರು ವಿಶ್ವವಿದ್ಯಾಲಯದ 57ನೇ ವಾರ್ಷಿಕ ಘಟಿಕೋತ್ಸವದಲ್ಲಿ ಪದವಿ ಪ್ರಮಾಣ ಪತ್ರ ಪಡೆಯಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

2021ರ ನವೆಂಬರ್ ಅಥವಾ ಡಿಸೆಂಬರ್‌ವರೆಗಿನ ಪದವಿ ಪರೀಕ್ಷೆಗಳಲ್ಲಿ ಮತ್ತು ಅದಕ್ಕೂ ಪೂರ್ವದ ಅವಧಿಯಲ್ಲಿ ಪದವಿ ಪರೀಕ್ಷೆಗಳಲ್ಲಿ ಉತ್ತೀರ್ಣಗೊಂಡು ಪದವಿ ಪಡೆಯಲು ಅರ್ಹರಾಗಿರುವವರು ಅರ್ಜಿ ಸಲ್ಲಿಸಬಹುದು.

ನಿಗದಿತ ಅರ್ಜಿ ನಮೂನೆಯು www.bangaloreuniversity.ac.in ವೆಬ್‌ಸೈಟ್‌ನಲ್ಲಿ ಹಾಗೂ ವಿಶ್ವವಿದ್ಯಾಲಯದ ವಿಭಾಗಗಳು ಮತ್ತು ಕಾಲೇಜುಗಳಲ್ಲಿ ಸಹ ಲಭ್ಯವಿದೆ ಎಂದು ಕುಲಸಚಿವರು ತಿಳಿಸಿದ್ದಾರೆ.

# ಕಲಾಪಕ್ಕೆ ಜೆಡಿಎಸ್ ಆಗ್ರಹ

**ಬೆಂಗಳೂರು:** ಆಡಳಿತ ಪಕ್ಷದ ಅಸಮರ್ಥತೆ ಮತ್ತು ಪ್ರಮುಖ ವಿರೋಧ ಪಕ್ಷದ ಪ್ರತಿಷ್ಠೆಯಿಂದ ವಿಧಾನಮಂಡಲ ಕಲಾಪ ಸರಿಯಾಗಿ ನಡೆಯುತ್ತಿಲ್ಲ ಎಂದು ಆರೋಪಿಸಿ ವಿಧಾನಸಭೆ ಹಾಗೂ ವಿಧಾನ ಪರಿಷತ್‌ನ ಜೆಡಿಎಸ್ ಸದಸ್ಯರು ವಿಧಾನಸೌಧದ ಆವರಣದಲ್ಲಿರುವ ಮಹಾತ್ಮ ಗಾಂಧಿ ಪ್ರತಿಮೆ ಎದುರು ಸೋಮವಾರ ಧರಣಿ ನಡೆಸಿದರು.

ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಎಚ್.ಕೆ. ಕುಮಾರಸ್ವಾಮಿ ಮತ್ತು ಪ್ರಮುಖರ ಸಮಿತಿ ಅಧ್ಯಕ್ಷ ಬಂಡೆಪ್ಪ ಕಾಶೆಂಪೂರ ನೇತೃತ್ವದಲ್ಲಿ ಧರಣಿ ನಡೆಸಿದ ಶಾಸಕರು, ವಿಧಾನಮಂಡಲ ಕಲಾಪವನ್ನು ಸರಿಯಾದ ರೀತಿಯಲ್ಲಿ ನಡೆಸುವಂತೆ ಆಗ್ರಹಿಸಿದರು. ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳ ವಿರುದ್ಧ ಭಿತ್ತಿಪತ್ರ ಪ್ರದರ್ಶಿಸಿದರು.

'ಚರ್ಚೆ ಮಾಡುವುದಕ್ಕಾಗಿಯೇ ಅಧಿವೇಶನ ಕರೆಯುವುದು. ಧರಣಿ ನಡೆಸುವುದೂ ಶಾಸಕರ ಹಕ್ಕು. ಆದರೆ, ಅಹೋರಾತ್ರಿ ಧರಣಿ ನಡೆಸಿ ಜನರ ತೆರಿಗೆ ಹಣವನ್ನು ಪೋಲು ಮಾಡುವುದು ಸರಿಯಲ್ಲ' ಎಂದು ಎಚ್.ಕೆ. ಕುಮಾರಸ್ವಾಮಿ ಅಸಮಾಧಾನ ವ್ಯಕ್ತಪಡಿಸಿದರು.

'ಜ್ವಲಂತ ಸಮಸ್ಯೆಗಳ ಕುರಿತು ವಿಧಾನಮಂಡಲದಲ್ಲಿ ಚರ್ಚೆಯೇ ಆಗುತ್ತಿಲ್ಲ. ಮೇಕೆದಾಟು ಯೋಜನೆ ಅನುಷ್ಠಾನಕ್ಕಾಗಿ ಪಾದಯಾತ್ರೆ ನಡೆಸಿದವರ ಜವಾಬ್ದಾರಿ ಈಗ ಎಲ್ಲಿ ಹೋಯಿತು' ಎಂದು ಬಂಡೆಪ್ಪ ಕಾಶೆಂಪೂರ ಪ್ರಶ್ನಿಸಿದರು.




ವಿಧಾನಮಂಡಲದ ಅಧಿವೇಶನದಲ್ಲಿ ರಾಜ್ಯದ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚಿಸಲು ಸುಗಮ ಕಲಾಪಕ್ಕೆ ಅವಕಾಶ ಕಲ್ಪಿಸಬೇಕು ಎಂದು ಒತ್ತಾಯಿಸಿ ಜೆಡಿಎಸ್ ಶಾಸಕರು ಸೋಮವಾರ ವಿಧಾನಸೌಧದ ಆವರಣದಲ್ಲಿರುವ ಮಹಾತ್ಮ ಗಾಂಧಿ ಪ್ರತಿಮೆ ಎದುರು ಧರಣಿ ನಡೆಸಿದರು. ಶಾಸಕರಾದ ಡಾ. ಕೆ.ಅನ್ನದಾನಿ, ಎಚ್.ಕೆ. ಕುಮಾರಸ್ವಾಮಿ, ಕೆ.ಟಿ ಶ್ರೀಕಂಠೇಗೌಡ, ಎಸ್.ಎಲ್.ಭೋಜೇಗೌಡ, ಸುರೇಶಗೌಡ, ನಾರಾಯಣಸ್ವಾಮಿ, ಬಂಡೆಪ್ಪ ಕಾಶೆಂಪೂರ ಇದ್ದರು. ಪ್ರಜಾವಾಣಿ ಚಿತ್ರ

ಕಾಂಗ್ರೆಸ್ ಶಾಸಕರ ಆಕ್ಷೇಪ

# ಬಿಜೆಪಿ ಶಾಸಕರ ಕ್ಷೇತ್ರಗಳಿಗಷ್ಟೇ ಅನುದಾನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಲೋಕೋಪಯೋಗಿ ಇಲಾಖೆಯ ₹1,200 ಕೋಟಿ (ಅಪೆಂಡಿಕ್ಸ್ ಸಿ) ಅನುದಾನವನ್ನು ಬಿಜೆಪಿ ಶಾಸಕರ ಕ್ಷೇತ್ರಗಳಿಗಷ್ಟೇ ಮಂಜೂರು ಮಾಡಲು ರಾಜ್ಯ ಸರ್ಕಾರ ಮುಂದಾಗಿದೆ ಎಂದು ಆರೋಪಿಸಿ ಕಾಂಗ್ರೆಸ್ ಶಾಸಕರು ಲೋಕೋಪಯೋಗಿ ಸಚಿವ ಸಿ.ಸಿ. ಪಾಟೀಲ ಅವರಲ್ಲಿ ಅಸಮಾಧಾನ ವ್ಯಕ್ತಪಡಿಸಿದರು.

ವಿಧಾನಸಭೆಯ ಸೋಮವಾರದ ಕಲಾಪ ಆರಂಭವಾಗುವ ಮೊದಲು ಕಾಂಗ್ರೆಸ್‌ನ ಎಚ್.ಕೆ.ಪಾಟೀಲ, ಶಿವಾನಂದ ಪಾಟೀಲ, ಯಶವಂತರಾಯಗೌಡ ಪಾಟೀಲ ಮಾತನಾಡುತ್ತಾ ಇದ್ದರು. ಆ ವೇಳೆ, ಸಿ.ಸಿ.ಪಾಟೀಲ ಅಲ್ಲಿಗೆ ಬಂದರು. ಈ ವೇಳೆ, ಶಿವಾನಂದ ಪಾಟೀಲ ಅವರು ಸಚಿವರಲ್ಲಿ, 'ಅಪೆಂಡಿಕ್ಸ್ ಸಿ (ರಸ್ತೆ, ಚರಂಡಿ, ಸೇತುವೆ ಕಾಮಗಾರಿ) ಅನುದಾನ ಹಂಚಿಕೆಯಲ್ಲಿ ತಾರತಮ್ಯ ಮಾಡಲಾಗುತ್ತಿದೆ. ಕಾಂಗ್ರೆಸ್ ಶಾಸಕರ ಕ್ಷೇತ್ರಗಳಿಗೆ ಅನುದಾನವನ್ನೇ ನೀಡಿಲ್ಲ' ಎಂದು ಆಕ್ಷೇಪ ವ್ಯಕ್ತಪಡಿಸಿದರು. ಉಳಿದ ಸದಸ್ಯರು ಸಹ ಧ್ವನಿಗೂಡಿಸಿದರು. 'ನಿಮ್ಮ ಕ್ಷೇತ್ರಗಳಿಗೂ ಅನುದಾನ ಸಿಗಲಿದೆ' ಎಂದು ಸಚಿವರು ಸಮಾಧಾನಪಡಿಸಿದರು.

'ಬಿಜೆಪಿ ಶಾಸಕರ ಕ್ಷೇತ್ರಗಳಿಗೆ ₹35 ಕೋಟಿ, ₹40 ಕೋಟಿ ಅನುದಾನ ನೀಡಲಾಗುತ್ತಿದೆ. ಬಿಜೆಪಿ ಸರ್ಕಾರದಲ್ಲಿ ಇಂತಹ ತಾರತಮ್ಯ ಹೆಚ್ಚಾಗಿದೆ' ಎಂದು ಶಿವಾನಂದ ಪಾಟೀಲ ಹೇಳಿದರು.

ಬಿಜೆಪಿ ಶಾಸಕರ ಬೇಡಿಕೆಗೆ ಅನುಗುಣವಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಅನುದಾನ ಮಂಜೂರು ಮಾಡುವಂತೆ ಹಣಕಾಸು ಇಲಾಖೆಗೆ ಟಿಪ್ಪಣಿ ಕಳುಹಿಸಿದ್ದಾರೆ. ಹೊಸಕೋಟೆಯನ್ನು ಕಾಂಗ್ರೆಸ್ ಶಾಸಕ ಶರತ್ ಬಚ್ಚೇಗೌಡ ಪ್ರತಿನಿಧಿಸುತ್ತಿದ್ದಾರೆ. ಈ ಕ್ಷೇತ್ರಕ್ಕೆ ಪೌರಾಡಳಿತ ಸಚಿವ ಎಂಟಿಬಿ ನಾಗರಾಜ್ ಅವರ ಮನವಿಯ ಮೇರೆಗೆ ₹52 ಕೋಟಿ ಅನುದಾನ ನೀಡುವಂತೆ ಮುಖ್ಯಮಂತ್ರಿಯವರು ಶಿಫಾರಸು ಮಾಡಿದ್ದಾರೆ. ಲೋಕೋಪಯೋಗಿ ಇಲಾಖೆಯಿಂದ ₹25 ಕೋಟಿ, ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ₹15 ಕೋಟಿ ಹಾಗೂ ಸಮಾಜ ಕಲ್ಯಾಣ ಇಲಾಖೆಯಿಂದ ₹12 ಕೋಟಿ ಮಂಜೂರು ಮಾಡುವಂತೆ ಸೂಚಿಸಿದ್ದಾರೆ. 'ಕ್ಷೇತ್ರದಲ್ಲಿ ಇರುವುದು ನಮ್ಮ ಶಾಸಕರು. ಮನ್ನಣೆ ಸಿಕ್ಕಿದ್ದು ಸಚಿವರ ಮಾತಿಗೆ' ಎಂದು ಕಾಂಗ್ರೆಸ್ ಶಾಸಕರೊಬ್ಬರು ಅಸಮಾಧಾನ ವ್ಯಕ್ತಪಡಿಸಿದರು.

'ಅಪೆಂಡಿಕ್ಸ್ ಸಿ ಅಡಿಯಲ್ಲಿ ಅನುದಾನಕ್ಕೆ ದಿನಕ್ಕೊಂದು ಶಾಸಕರ ಪ್ರಸ್ತಾವನೆ ಬರುತ್ತಿದೆ. ಈ ಪ್ರಕ್ರಿಯೆ ಪೂರ್ಣ ಆಗಿಲ್ಲ. ಅನುದಾನ ಹಂಚಿಕೆಯ ಪಟ್ಟಿಯೂ ಅಂತಿಮವಾಗಿಲ್ಲ' ಎಂದು ಲೋಕೋಪಯೋಗಿ ಇಲಾಖೆಯ ಹಿರಿಯಅಧಿಕಾರಿಯೊಬ್ಬರುಹೇಳಿದರು.

'ಅಧಿವೇಶನದಲ್ಲಿ ಅನುದಾನ ತಾರತಮ್ಯ ವಿಚಾರದ ಬಗ್ಗೆ ನಮ್ಮ ಪಕ್ಷ ಗಟ್ಟಿಯಾಗಿ ಧ್ವನಿ ಎತ್ತಬೇಕಿತ್ತು. ಆದರೆ, ಸಚಿವ ಕೆ.ಎಸ್.ಈಶ್ವರಪ್ಪ ರಾಜೀನಾಮೆ ವಿಚಾರ ಬಿಟ್ಟು ಮತ್ತಾವ ವಿಚಾರ ಕೈಗೆತ್ತಿಕೊಳ್ಳಲು ನಮ್ಮ ನಾಯಕರು ಮನಸ್ಸು ಮಾಡುತ್ತಿಲ್ಲ' ಎಂದು ಕಾಂಗ್ರೆಸ್ ಶಾಸಕರೊಬ್ಬರು ಬೇಸರ ವ್ಯಕ್ತಪಡಿಸಿದರು.

### ಪೆಗಾಸಸ್ ಕುತಂತ್ರಾಂಶ ಪ್ರಕರಣ: ನಾಳೆ ವಿಚಾರಣೆ

**ನವದೆಹಲಿ (ಪಿಟಿಐ):** ಇಸ್ರೇಲ್‌ನ ಬೇಹುಗಾರಿಕೆ ಕುತಂತ್ರಾಂಶ ಪೆಗಾಸಸ್ ಬಳಸಿ ಬೇಹುಗಾರಿಕೆ ನಡೆಸಿರುವ ಆರೋಪದ ಬಗ್ಗೆ ತನಿಖೆಗೆ ಕೋರಿ ಸಲ್ಲಿಸಲಾಗಿದ್ದ ಅರ್ಜಿಗಳ ವಿಚಾರಣೆಯನ್ನು ಬುಧವಾರ (ಫೆ. 23) ನಡೆಸುವುದಾಗಿ ಸುಪ್ರೀಂ ಕೋರ್ಟ್ ಹೇಳಿದೆ.

ವಿರೋಧ ಪಕ್ಷಗಳ ನಾಯಕರು, ಪತ್ರಕರ್ತರು, ಸಾಮಾಜಿಕ ಹೋರಾಟಗಾರರು ಮುಂತಾದವರ ಮೇಲೆ ಈ ಕುತಂತ್ರಾಂಶ ಬಳಸಿ ಗೂಢಚರ್ಯೆ ನಡೆಸಲಾಗಿದೆ ಎಂಬ ಆರೋಪದ ನಂತರ ತನಿಖೆಗೆ ಸೈಬರ್ ತಜ್ಞರ ಸಮಿತಿ ರಚಿಸಲಾಗಿತ್ತು. ಅಕ್ಟೋಬರ್ 27ರ ನಂತರ ಸುಪ್ರೀಂ ಕೋರ್ಟ್ ಇದೇ ಮೊದಲ ಬಾರಿಗೆ ಈ ಕುರಿತು ದಾಖಲಾಗಿರುವ ಅರ್ಜಿಗಳ ಬ್ಯಾಚ್ ಅನ್ನು ವಿಚಾರಣೆಗೆ ಕೈಗೆತ್ತಿಕೊಳ್ಳಲಿದೆ.

ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ಮತ್ತು ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಹಾಗೂ ಹಿಮಾ ಕೊಹ್ಲಿ ಅವರನ್ನೊಳಗೊಂಡ ನ್ಯಾಯಪೀಠವು ವಿಚಾರಣೆ ನಡೆಸಲಿದೆ. ಎಡಿಟರ್ಸ್ ಗಿಲ್ಡ್ ಆಫ್ ಇಂಡಿಯಾ ಮತ್ತು ಪತ್ರಕರ್ತರಾದ ಎನ್. ರಾಮ್, ಶಶಿಕುಮಾರ್ ಸಲ್ಲಿಸಿದ ಅರ್ಜಿಗಳು ಸೇರಿ 12 ಸಾರ್ವಜನಿಕ ಹಿತಾಸಕ್ತಿಗಳ ಅರ್ಜಿಗಳನ್ನು ವಿಚಾರಣೆಗೆ ಪಟ್ಟಿ ಮಾಡಲಾಗಿದೆ.

### ಅಂಚೆ ಅದಾಲತ್ ಮಾ.3ಕ್ಕೆ

**ಬೆಂಗಳೂರು:** ಅಂಚೆ ಇಲಾಖೆಯ ಕರ್ನಾಟಕ ವೃತ್ತವು ಮಾ.3ರಂದು ಬೆಳಿಗ್ಗೆ 11 ಗಂಟೆಗೆ ಅರಮನೆ ರಸ್ತೆಯಲ್ಲಿರುವ ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ಅವರ ಕಚೇರಿಯಲ್ಲಿ ಅಂಚೆ ಅದಾಲತ್ ಹಮ್ಮಿಕೊಂಡಿದೆ. ಕುಂದು ಕೊರತೆಗಳನ್ನು ಇದೇ 28ರೊಳಗೆ ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್, ಕರ್ನಾಟಕ ವೃತ್ತ, ಬೆಂಗಳೂರು–560001 ಬರೆದು ಕಳಿಸಬಹುದು.

ವಿಳಾಸ: ಇ ಮೇಲ್ ವಿಳಾಸ: dakadalatcokar@gmail.com

# ತ್ರಿಪುರಾದಿಂದ ರೈಲಿನಲ್ಲಿ ಗಾಂಜಾ ಸಾಗಣೆ: ಮೂವರ ಬಂಧನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ತ್ರಿಪುರಾದಿಂದ ರೈಲಿನ ಮೂಲಕ ಗಾಂಜಾ ತಂದು ನಗರದಲ್ಲಿ ಮಾರುತ್ತಿದ್ದ ಮೂವರು ಆರೋಪಿಗಳನ್ನು ಶ್ರೀರಾಮಪುರ ಪೊಲೀಸರು ಬಂಧಿಸಿದ್ದಾರೆ.

'ತ್ರಿಪುರಾದ ಜಾವೀದ್ ಹುಸೇನ್ (23), ಮುಸ್ತಾಮೀಯಾ (23) ಹಾಗೂ ಅಬ್ದುಲ್ ಮುಸ್ನಾದ್ (22) ಬಂಧಿತರು. ಇವರಿಂದ 15 ಕೆ.ಜಿ ಗಾಂಜಾ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದ ಆರೋಪಿಗಳು, ಭದ್ರತಾ ಏಜೆನ್ಸಿಗಳಿಗೆ ಸೇರಿದ್ದರು. ಖಾಸಗಿ ಕಂಪನಿ ಹಾಗೂ ವಿವಿಧ ಅಪಾರ್ಟ್‌ಮೆಂಟ್ ಸಮುಚ್ಚಯಗಳಲ್ಲಿ ಭದ್ರತೆಗೆ ಆರೋಪಿಗಳನ್ನು ನಿಯೋಜಿಸಲಾಗುತ್ತಿತ್ತು. ಭದ್ರತಾ ಕೆಲಸದ ಜೊತೆಯಲ್ಲೇ ಆರೋಪಿಗಳು, ಗಾಂಜಾ ಮಾರಿ ಹಣ ಸಂಪಾದಿಸುತ್ತಿದ್ದರು' ಎಂದೂ ತಿಳಿಸಿದರು.

'ಆರೋಪಿಗಳು ತ್ರಿಪುರಾಗೆ ಆಗಾಗ ರೈಲಿನಲ್ಲಿ ಹೋಗಿ ಬರುತ್ತಿದ್ದರು. ಗಾಂಜಾ ಪೊಟ್ಟಣಗಳನ್ನು ಬ್ಯಾಗ್‌ನಲ್ಲಿರಿಸಿಕೊಂಡು ನಗರಕ್ಕೆ ತರುತ್ತಿದ್ದರು. ಪರಿಚಯಸ್ಥರ ಮೂಲಕ ಗಾಂಜಾವನ್ನು ಗ್ರಾಹಕರಿಗೆ ಮಾರುತ್ತಿದ್ದರೆಂಬ ಸಂಗತಿ ತನಿಖೆಯಿಂದ ಗೊತ್ತಾಗಿದೆ' ಎಂದೂ ಹೇಳಿದರು.

'ಶ್ರೀರಾಮಪುರ ಠಾಣೆ ವ್ಯಾಪ್ತಿಯಲ್ಲಿ ಬೈಕ್‌ನಲ್ಲಿ ಆರೋಪಿಗಳು ಗಾಂಜಾ ಸಾಗಿಸುತ್ತಿದ್ದರು. ಕಾರ್ಯಾಚರಣೆ ನಡೆಸಿ ಗಾಂಜಾ ಸಮೇತ ಆರೋಪಿಗಳನ್ನು ಬಂಧಿಸಲಾಯಿತು' ಎಂದೂ ತಿಳಿಸಿದರು.



ಆರೋಪಿಗಳಿಂದ ಜಪ್ತಿ ಮಾಡಲಾದ ಗಾಂಜಾ ಹಾಗೂ ಬೈಕ್

# ಕೆಲಸದಿಂದ ವಜಾಗೊಂಡಿದ್ದ ನೌಕರ ಅನುಮಾನಾಸ್ಪದ ಸಾವು

**ಬೆಂಗಳೂರು:** ಬಿಎಂಟಿಸಿ ಕೆಲಸದಿಂದ ವಜಾಗೊಂಡಿದ್ದ ನೌಕರ ಇಮ್ರಾನ್ ಖಾನ್ (40) ಎಂಬುವರು ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದು, ಅವರ ಮೃತದೇಹ ಸೋಮವಾರ ಬೆಳಿಗ್ಗೆ ಪತ್ತೆಯಾಗಿದೆ.

‘ರಾಜಾಜಿನಗರದ ರಾಮಮಂದಿರ ಆಟದ ಮೈದಾನದಲ್ಲಿ ಇಮ್ರಾನ್ ಮೃತದೇಹ ಪತ್ತೆಯಾಗಿದೆ. ಅದನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಲಾಗಿದೆ. ಕುಟುಂಬಸ್ಥರು ನೀಡಿರುವ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಹಲವು ವರ್ಷಗಳಿಂದ ಬಿಎಂಟಿಸಿಯಲ್ಲಿ ಚಾಲಕರಾಗಿ ಕೆಲಸ ಮಾಡುತ್ತಿದ್ದ ಇಮ್ರಾನ್ ಅವರು ಚಲಾಯಿಸುತ್ತಿದ್ದ ಬಸ್ ಇತ್ತೀಚೆಗೆ ಅಪಘಾತಕ್ಕೀಡಾಗಿತ್ತು. ಈ ಪ್ರಕರಣದಲ್ಲಿ ಅವರನ್ನು ಕೆಲಸದಿಂದ ವಜಾ ಮಾಡಲಾಗಿತ್ತು. ಇದರಿಂದ ಅವರು ನೊಂದಿದ್ದರೆಂಬ ಮಾಹಿತಿ ಲಭ್ಯವಾಗಿದೆ’ ಎಂದರು.

‘ಮೈದಾನಕ್ಕೆ ಬಂದಿದ್ದ ಸ್ಥಳೀಯರೊಬ್ಬರು, ಮೃತ ದೇಹ ನೋಡಿ ಠಾಣೆಗೆ ಮಾಹಿತಿ ನೀಡಿದ್ದರು. ದೇಹದ ಮೇಲೆ ಸಣ್ಣಗಾಯದ ಗುರುತುಗಳಿದ್ದು, ಸಾವಿನಲ್ಲಿ ಅನುಮಾನವಿರುವುದಾಗಿ ಕುಟುಂಬಸ್ಥರು ಹೇಳುತ್ತಿದ್ದಾರೆ. ಮರಣೋತ್ತರ ಪರೀಕ್ಷೆ ವರದಿ ಬಂದ ನಂತರವೇ ನಿಖರ ಮಾಹಿತಿ ಸಿಗಲಿದೆ. ಕೆಲಸವಿರುವುದಾಗಿ ಹೇಳಿ ಇಮ್ರಾನ್ ಮನೆಯಿಂದ ಹೊರಗೆ ಬಂದಿದ್ದರೆಂಬುದು ಗೊತ್ತಾಗಿದೆ. ಅವರ ಪ್ಯಾಂಟಿನ ಜೇಬಿನಲ್ಲಿ ಮದ್ಯದ ಬಾಟಲಿ ಸಿಕ್ಕಿದೆ’ ಎಂದೂ ಅವರು ತಿಳಿಸಿದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಆರೋಪ

# ‘ಹಿಜಾಬ್ ವಿವಾದಕ್ಕೆ ಕಾಂಗ್ರೆಸ್ ಮತ್ತು ಎಸ್‌ಡಿಪಿಐ ಕಾರಣ’

ಪ್ರಜಾವಾಣಿ ವಾರ್ತೆ



ನಳಿನ್ ಕುಮಾರ್ ಕಟೀಲ್

**ಬೆಂಗಳೂರು:** ಕಾಂಗ್ರೆಸ್ ಮತ್ತು ಎಸ್‌ಡಿಪಿಐ ಜತೆಗೂಡಿ ಹಿಜಾಬ್ ವಿವಾದ ಸೃಷ್ಟಿಸಿವೆ. ಕಾಂಗ್ರೆಸ್‌ನ ಯೋಚನೆಯನ್ನು ಎಸ್‌ಡಿಪಿಐ ಕಾರ್ಯರೂಪಕ್ಕೆ ತಂದಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹೇಳಿದರು.

ಸೋಮವಾರ ನಡೆದ ಬಿಜೆಪಿ ರಾಜ್ಯ ಘಟಕದ ಪದಾಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ‘ಪೌರತ್ವ ತಿದ್ದುಪಡಿ ಕಾಯ್ದೆ ವಿರುದ್ಧದ ಪ್ರತಿಭಟನೆಯಲ್ಲೂ ಕಾಂಗ್ರೆಸ್ ಪಾತ್ರವಿತ್ತು. ಡಿ.ಜೆ. ಹಳ್ಳಿ ಮತ್ತು ಕೆ.ಜಿ. ಹಳ್ಳಿ ಗಲಭೆಯಲ್ಲೂ ಕಾಂಗ್ರೆಸ್ ಕೈವಾಡ ಇತ್ತು. ಹಿಜಾಬ್ ವಿಷಯದಲ್ಲೂ ಎರಡೂ ಪಕ್ಷಗಳು ಕೈಜೋಡಿಸಿವೆ’ ಎಂದು ಆರೋಪಿಸಿದರು.

**ಸಂವಿಧಾನದಲ್ಲಿ ನಂಬಿಕೆ ಇಲ್ಲ:** ಕಾಂಗ್ರೆಸ್ ನವರಿಗೆ ಸಂವಿಧಾನ ಮತ್ತು ಶಾಸನಭೆಯ ಮೇಲೆ ನಂಬಿಕೆ ಇಲ್ಲ. ರಾಜಕಾರಣಕ್ಕಾಗಿ ವಿಧಾನಮಂಡಲದಲ್ಲಿ ಧರಣಿ ನಡೆಸುತ್ತಿದ್ದಾರೆ. ಹಿಜಾಬ್ ಕುರಿತು ಅಧಿವೇಶನದಲ್ಲಿ ಚರ್ಚೆ ನಡೆಯದಂತೆ ತಡೆಯಲು ಧರಣಿ ಮಾಡಲಾಗುತ್ತಿದೆ. ಧರಣಿ ನಡೆಸಿ ಸಚಿವ ಕೆ.ಎಸ್. ಈಶ್ವರಪ್ಪ ರಾಜೀನಾಮೆ ಪಡೆಯಲು ಸಾಧ್ಯವಿಲ್ಲ ಎಂದರು.

‘ಸಿದ್ದರಾಮಯ್ಯ ಅವರಲ್ಲಿ ಸಮಾಜವಾದಿ ಚಿಂತನೆ ಹೋಗಿ ಅಧಿಕಾರವಾದಿ ಚಿಂತನೆ ಬಂದಿದೆ. ಅಧಿಕಾರವಾದಿ ಸಿದ್ದರಾಮಯ್ಯ ಮತ್ತು ಕಾಂಗ್ರೆಸ್‌ವಾದಿ ಡಿ.ಕೆ. ಶಿವಕುಮಾರ್ ನಡುವೆ ಅಧಿಕಾರಕ್ಕಾಗಿ ಪೈಪೋಟಿ ನಡೆಯುತ್ತಿದೆ’ ಎಂದರು.

ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ, ರಾಜ್ಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಅರುಣ್ ಕುಮಾರ್ ಮತ್ತು ಇತರ ಪದಾಧಿಕಾರಿಗಳು ಸಭೆಯಲ್ಲಿದ್ದರು.

## ಗುಪ್ತಚರ ವೈಫಲ್ಯ: ಎಚ್‌.ಡಿ.ಕುಮಾರಸ್ವಾಮಿ ಆರೋಪ

**ಬೆಂಗಳೂರು:** ಗುಪ್ತಚರ ಇಲಾಖೆಯ ವೈಫಲ್ಯವೇ ಶಿವಮೊಗ್ಗದಲ್ಲಿ ಬಜರಂಗದಳ ಕಾರ್ಯಕರ್ತನ ಕೊಲೆಗೆ ಕಾರಣ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಆರೋಪಿಸಿದರು.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, ‘ಮೃತ ಯುವಕನಿಗೆ ಜೀವ ಬೆದರಿಕೆ ಇತ್ತು, ಆತನ ಕೊಲೆಗೆ ₹ 10 ಲಕ್ಷ ಬಹುಮಾನ ಘೋಷಿಸಲಾಗಿತ್ತು ಎಂಬ ಮಾಹಿತಿ ಈಗ ಹೊರಬಂದಿದೆ. ಪೊಲೀಸರು ಯುವಕನಿಗೆ ಏಕೆ ರಕ್ಷಣೆ ಒದಗಿಸಲಿಲ್ಲ? ರಾಜ್ಯದಲ್ಲಿ ಗುಪ್ತಚರ ಇಲಾಖೆ ಇದೆಯೇ ಎಂಬ ಅನುಮಾನ ಮೂಡುತ್ತದೆ’ ಎಂದರು.

ಬಿಜೆಪಿಯವರಿಗೆ ತಮ್ಮದೇ ಸಂಘಟನೆಯ ಸದಸ್ಯನನ್ನು ರಕ್ಷಿಸಿಕೊಳ್ಳಲು ಆಗಲಿಲ್ಲ. ಇನ್ನು ಇವರು ಸಾಮಾನ್ಯ ಜನರಿಗೆ ರಕ್ಷಣೆ ನೀಡಲು ಸಾಧ್ಯವೆ? ಕೊಲೆಯಾದ ಯುವಕನ ಮೇಲೆ ದಾಳಿಯಾಗುವ ಸಾಧ್ಯತೆ ಕುರಿತು ಎರಡು ವರ್ಷದ ಹಿಂದೆಯೇ ಮಾಹಿತಿ ಇತ್ತು ಎಂದು ಈಗ ಹೇಳುತ್ತಿದ್ದಾರೆ. ಇಷ್ಟು ದಿನ ಇವರು ಏನು ಮಾಡುತ್ತಿದ್ದರು? ಗುಪ್ತದಳ ಏನು ಮಾಡುತ್ತಿತ್ತು ಎಂದು ಪ್ರಶ್ನಿಸಿದರು.

‘2023ರ ವಿಧಾನಸಭಾ ಚುನಾವಣೆಗೆ ಪೂರ್ವಭಾವಿಯಾಗಿ ಇವೆಲ್ಲವೂ ನಡೆಯುತ್ತಿರುವಂತೆ ಭಾಸವಾಗುತ್ತಿದೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಗಲಭೆಗೆ ಪ್ರಚೋದನೆ ನೀಡುತ್ತಿದ್ದಾರೆ ಎಂದು ಸರ್ಕಾರದಲ್ಲಿ ಇರುವವರೇ ಹೇಳುತ್ತಿದ್ದಾರೆ. ಅವರ ಪ್ರಚೋದನೆಯನ್ನು ತಡೆಯುವ ತಾಕತ್ತು ಸರ್ಕಾರಕ್ಕೆ ಇಲ್ಲವೆ’ ಎಂದು ಪ್ರಶ್ನಿಸಿದರು.

## ಮಾರ್ಚ್ 27, 28ಕ್ಕೆ ಕಾರ್ಯಕಾರಿಣಿ

**ಬೆಂಗಳೂರು:** ಮಾರ್ಚ್ 27 ಮತ್ತು 28ರಂದು ವಿಜಯನಗರ ಜಿಲ್ಲೆಯ ಹೊಸಪೇಟೆಯಲ್ಲಿ ಬಿಜೆಪಿ ರಾಜ್ಯ ಕಾರ್ಯಕಾರಿಣಿ ನಡೆಯಲಿದೆ ಎಂದು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಪ್ರಕಟಿಸಿದರು.

ಬಿಜೆಪಿ ರಾಷ್ಟ್ರೀಯ ಘಟಕದ ಸೂಚನೆಯಂತೆ ಮತಗಟ್ಟೆ ಹಂತದ ಸಮಿತಿಗಳ ಅಧ್ಯಕ್ಷರ ಆಯ್ಕೆ, ಪೇಜ್ ಪ್ರಮುಖರ ನೇಮಕ, ವಿಸ್ತಾರಕರ ನೇಮಕ ಎಲ್ಲವೂ ನಡೆಯುತ್ತಿದೆ. ಶೇಕಡ 50ರಷ್ಟು ಪೇಜ್ ಸಮಿತಿಗಳನ್ನು ನೇಮಿಸಲಾಗಿದೆ. ಪಕ್ಷ ಸಂಘಟನೆಯ ಮುಂದಿನ ಕ್ರಮಗಳ ಕುರಿತು ಕಾರ್ಯಕಾರಿಣಿಯಲ್ಲಿ ಚರ್ಚಿಸಲಾಗುವುದು ಎಂದು ಹೇಳಿದರು.

## ‘ಕೊಲೆಗೆ ಕಾಂಗ್ರೆಸ್ ಕಾರಣ’

‘ಗಲಭೆ ಸೃಷ್ಟಿಸುವ ಕಾಂಗ್ರೆಸ್ ಪಕ್ಷದ ಪ್ರಯತ್ನದಿಂದ ಶಿವಮೊಗ್ಗದಲ್ಲಿ ಬಜರಂಗದಳದ ಕಾರ್ಯಕರ್ತನ ಕೊಲೆ ನಡೆದಿದೆ. ಈ ಕೊಲೆಗೆ ಕಾರಣವಾದವರನ್ನು ಬಂಧಿಸಿ, ಕಠಿಣ ಶಿಕ್ಷೆ ವಿಧಿಸಬೇಕು ಎಂದು ನಾನು ಒತ್ತಾಯಿಸುತ್ತೇನೆ. ಕೊಲೆಯ ಹಿಂದಿರುವ ಶಕ್ತಿಗಳನ್ನು ಪೊಲೀಸ್ ಇಲಾಖೆ ಪತ್ತೆಹಚ್ಚುವ ವಿಶ್ವಾಸವಿದೆ’ ಎಂದು ನಳಿನ್ ಕುಮಾರ್ ಕಟೀಲ್ ಅವರು ಹೇಳಿದರು.

# ‘ಈಶ್ವರಪ್ಪ ವಿರುದ್ಧ ದೇಶದ್ರೋಹ ಪ್ರಕರಣ ದಾಖಲಿಸಿ’

ಪ್ರಜಾವಾಣಿ ವಾರ್ತೆ




ಕಾಂಗ್ರೆಸ್ ಮುಖಂಡ ಆರ್‌.ಕೆ.ರಮೇಶ್ ನೇತೃತ್ವದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಗೊಟ್ಟಿಗೆರೆಯಲ್ಲಿ ರಸ್ತೆ ತಡೆದು ಪ್ರತಿಭಟನೆ ನಡೆಸಿದರು

**ಬೆಂಗಳೂರು:** ‘ಕೆಂಪು ಕೋಟೆಯಲ್ಲಿ ರಾಷ್ಟ್ರಧ್ವಜದ ಬದಲಿಗೆ ಕೇಸರಿ ಧ್ವಜ ಹಾರಿಸುತ್ತೇನೆ ಎಂದು ರಾಷ್ಟ್ರಧ್ವಜಕ್ಕೆ ಅವಮಾನಿಸಿದ ಕೆ.ಎಸ್. ಈಶ್ವರಪ್ಪ ಅವರನ್ನು ಸಚಿವ ಸ್ಥಾನದಿಂದ ವಜಾಗೊಳಿಸಬೇಕು ಹಾಗೂ ರಾಷ್ಟ್ರದ್ರೋಹದ ಪ್ರಕರಣ ದಾಖಲಿಸಿ, ಜೈಲಿಗೆ ಕಳುಹಿಸಬೇಕು’ ಎಂದು ಕಾಂಗ್ರೆಸ್ ಮುಖಂಡ ಆರ್‌.ಕೆ.ರಮೇಶ್ ಒತ್ತಾಯಿಸಿದರು.

ಬೆಂಗಳೂರು ದಕ್ಷಿಣ ವ್ಯಾಪ್ತಿಯ ಗೊಟ್ಟಿಗೆರೆಯಲ್ಲಿ ಕಾಂಗ್ರೆಸ್ ಮುಖಂಡರು ಸೋಮವಾರ ಹಮ್ಮಿಕೊಂಡಿದ್ದ ರಸ್ತೆ ತಡೆ ಹಾಗೂ ಪ್ರತಿಭಟನೆಯಲ್ಲಿ ಅವರು ಮಾತನಾಡಿದರು.

‘ಈಶ್ವರಪ್ಪ ಅವರು ದೇಶದ ಸಾರ್ವಭೌಮತ್ವ ಹಾಗೂ ಅಖಂಡತೆಯನ್ನು ಎತ್ತಿ ಹಿಡಿಯುತ್ತೇನೆ ಎಂದು ಪ್ರಮಾಣ ವಚನ ಸ್ವೀಕರಿಸಿ, ಈಗ ಶಾಂತಿ–ಸುವ್ಯವಸ್ಥೆಗೆ ಭಂಗ ತರುವ ರೀತಿಯಲ್ಲಿ ದೇಶದ್ರೋಹದ ಹೇಳಿಕೆ ನೀಡಿದ್ದಾರೆ. ಅವರ ವಿರುದ್ಧ ಪ್ರಕರಣ ದಾಖಲಿಸಿ, ಸಂವಿಧಾನದ ಆಶಯ ಮತ್ತು ಪಾವಿತ್ರ್ಯತೆ ಕಾಪಾಡಬೇಕು’ ಎಂದರು.

‘ಬಿಜೆಪಿ ಪ್ರೇಮಿಯಾಗಿರುವ ಈಶ್ವರಪ್ಪ ದೇಶಪ್ರೇಮಿ ಅಲ್ಲ. ಬದಲಾಗಿ ಅವರೊಬ್ಬ ದೇಶದ್ರೋಹಿ. ತಮ್ಮ ರಾಜಕೀಯ ಲಾಭಕ್ಕಾಗಿ ಸಮಾಜದಲ್ಲಿ ಜಾತಿ, ಮತ, ಧರ್ಮಗಳ ನಡುವೆ ಒಡಕು ಮೂಡಿಸಿ, ಜನರಲ್ಲಿ ಕೋಮುವಾದ ಕಿಡಿ ಹಚ್ಚಲು ಯತ್ನಿಸಿದ್ದಾರೆ. ಇದು ಅಕ್ಷಮ್ಯ ಅಪರಾಧ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬೆಂಗಳೂರು ದಕ್ಷಿಣ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಜಿ.ಕೃಷ್ಣಪ್ಪ,‘ಈಶ್ವರಪ್ಪ ಅವರ ಹೇಳಿಕೆ ದೇಶದ್ರೋಹದ ಕೃತ್ಯಕ್ಕೆ ಸಮನಾದದ್ದು. ದೇಶ, ಭಾಷೆಯ ವಿಷಯ ಬಂದಾಗ ಎಲ್ಲರೂ ಒಂದಾಗಿ ತಕ್ಕ ಪಾಠ ಕಲಿಸಬೇಕು. ದೇಶ ರಕ್ಷಣೆಗೆ ಮುಂದಾಗಬೇಕು’ ಎಂದು ಹೇಳಿದರು.

ಕಾಂಗ್ರೆಸ್ ಮುಖಂಡರಾದ ಮಂಜುನಾಥ್, ಗಂಗಾಧರ್, ಶೋಭಾ ಗೌಡ, ಕೆ.ಕುಮಾರ್, ಶ್ರೀಧರ್ ಲಕ್ಷ್ಮಣ್, ಅಂಥೋಣಿ ಕಿರಣ್, ಶ್ರೀಧರ್, ಬಿ.ಟಿ. ನಾಗರಾಜು, ಸುದರ್ಶನ್, ಕಮ್ಮನಹಳ್ಳಿ ಮಂಜು, ರಂಜಿತರಾಜು, ಚುಂಚಘಟ್ಟ ಬಾಬು, ರೇಖಾ ನವೀನ್ ಗೌಡ, ಧನಲಕ್ಷ್ಮಿ, ಮಂಜುಳಾ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

## ಸಂಪುಟದಿಂದ ವಜಾ ಮಾಡಿ: ಮನವಿ

ಸಚಿವ ಕೆ.ಎಸ್.ಈಶ್ವರಪ್ಪ ಅವರನ್ನು ಕೂಡಲೇ ಸಚಿವ ಸಂಪುಟದಿಂದ ವಜಾಗೊಳಿಸಬೇಕು ಎಂದು ಆಗ್ರಹಿಸಿ ಬೆಂಗಳೂರು ದಕ್ಷಿಣ ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿಯ ಪದಾಧಿಕಾರಿಗಳು ರೇಸ್‌ಕೋರ್ಸ್ ರಸ್ತೆಯಲ್ಲಿರುವ ಕಾಂಗ್ರೆಸ್ ಭವನದ ಎದುರು ಸೋಮವಾರ ಪ್ರತಿಭಟನೆ ನಡೆಸಿದರು.

ಈಶ್ವರಪ್ಪ ಅವರ ಭಾವಚಿತ್ರಗಳನ್ನು ಪ್ರದರ್ಶಿಸಿ, ಘೋಷಣೆಗಳನ್ನು ಕೂಗಿದರು. ಬಳಿಕ ಈಶ್ವರಪ್ಪ ಅವರನ್ನು ಸಚಿವ ಸಂಪುಟದಿಂದ ವಜಾಗೊಳಿಸುವಂತೆ ಆಗ್ರಹಿಸಿ ಸಮಿತಿ ಅಧ್ಯಕ್ಷ ಎ.ಆನಂದ್ ಹಾಗೂ ಪದಾಧಿಕಾರಿಗಳು ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ.ಮಂಜುನಾಥ್ ಅವರ ಮುಖಾಂತರ ರಾಜ್ಯಪಾಲರಿಗೆ ಮನವಿ ಸಲ್ಲಿಸಿದರು.

## ‘ಮಂಗಳೂರು ಮುಸ್ಲಿಂ’ ಫೇಸ್‌ಬುಕ್ ಪೇಜ್ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

**ಮಂಗಳೂರು:** ‘ಶಿವಮೊಗ್ಗದಲ್ಲಿ ಹತ್ಯೆಗೀಡಾದ ಬಜರಂಗದಳದ ಕಾರ್ಯಕರ್ತ ಹರ್ಷ ಕುರಿತು ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿ ಪೋಸ್ಟ್ ಹಾಕಿದ್ದರ ವಿರುದ್ಧ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ನಗರ ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ತಿಳಿಸಿದ್ದಾರೆ.

ಮಂಗಳೂರಿನ ಸೈಬರ್ ಪೊಲೀಸ್ ಠಾಣೆಯಲ್ಲಿ, ‘ಮಂಗಳೂರು ಮುಸ್ಲಿಂ’ ಹೆಸರಿನ ಫೇಸ್‌ಬುಕ್ ಪೇಜ್ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಈ ಫೇಸ್‌ಬುಕ್‌ನಲ್ಲಿ ಇರುವವರ ಬಗ್ಗೆ ಮಾಹಿತಿ ಕಲೆ ಹಾಕಲಾಗುತ್ತಿದೆ ಎಂದು ಹೇಳಿದ್ದಾರೆ.

# ನೆಲಮಂಗಲ: ರಸ್ತೆ ತಡೆ ನಡೆಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

**ನೆಲಮಂಗಲ:** ಶಿವಮೊಗ್ಗದಲ್ಲಿ ನಡೆದಿರುವ ಬಜರಂಗದಳದ ಕಾರ್ಯಕರ್ತನ ಹತ್ಯೆ ಖಂಡಿಸಿ ವಿಶ್ವ ಹಿಂದೂ ಪರಿಷತ್ ಮತ್ತು ಬಜರಂಗದಳದ ಕಾರ್ಯಕರ್ತರು ರಾಷ್ಟ್ರೀಯ ಹೆದ್ದಾರಿಯಲ್ಲಿ ಸೋಮವಾರ ಸಂಚಾರ ತಡೆದು ಪ್ರತಿಭಟನೆ ನಡೆಸಿದರು.

ರಸ್ತೆಯಲ್ಲಿ ದಿಢೀರ್ ಸಂಚಾರ ತಡೆದಿದ್ದರಿಂದ ಕೆಲಕಾಲ ಸಂಚಾರ ವ್ಯತ್ಯಯವಾಗಿತ್ತು. ಕೂಡಲೇ ಸ್ಥಳಕ್ಕೆ ಬಂದ ಪೊಲೀಸರು, ಸಂಚಾರ ಸುಗಮಗೊಳಿಸಿದರು.

ಬಳಿಕ ಪ್ರತಿಭಟನಕಾರರು ತಾಲ್ಲೂಕು ಕಚೇರಿ ಬಳಿಗೆ ತೆರಳಿ ಪ್ರತಿಭಟನೆ ಮುಂದುವರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಬಿಜೆಪಿ ಎಸ್‌ಸಿ ಮೋರ್ಚಾ ಅಧ್ಯಕ್ಷ ಎಂ.ಎನ್.ರಾಮು, ‘ಹಿಂದು ಕಾರ್ಯಕರ್ತರ ಕೊಲೆ, ಹಲ್ಲೆ ಪ್ರಕರಣಗಳು ನಿರಂತರವಾಗಿ ನಡೆಯುತ್ತಿವೆ. ಇದಕ್ಕೆ ಕಾರಣರಾದ ಜಿಹಾದಿ ಸಂಘಟನೆಗಳ ವಿರುದ್ಧ ಕ್ರಮ ಕೈಗೊಳ್ಳುವ ಬದಲು ಪೋಷಿಸಿಕೊಂಡು ಬರಲಾಗುತ್ತಿದೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು. ‘ಹರ್ಷ ಕೊಲೆಗೆ ಕಾರಣ ಆದವರನ್ನು ಗಲ್ಲಿಗೇರಿಸಬೇಕು, ಇಲ್ಲವೇ ಗುಂಡಿಟ್ಟು ಕೊಲ್ಲಬೇಕು. ಮೃತರ ಕುಟುಂಬಕ್ಕೆ ₹50 ಲಕ್ಷ ಪರಿಹಾರ ನೀಡಬೇಕು’ ಎಂದು ಆಗ್ರಹಿಸಿದರು.

ಬಜರಂಗದಳದ ಅಧ್ಯಕ್ಷ ಹೇಮಂತ್ ಮಾತನಾಡಿ, ‘ಹರ್ಷನ ಕೊಲೆಗೆ ಎರಡು ಬಾರಿ ಪ್ರಯತ್ನ ನಡೆದಿತ್ತು. ಮೂರನೇ ಬಾರಿ ಕೊಲೆ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ಪೊಲೀಸರು ರಕ್ಷಣೆ ನೀಡಿದ್ದರೆ ಹರ್ಷ ಕೊಲೆ ಆಗುತ್ತಿರಲಿಲ್ಲ. ಎಸ್‌ಡಿಪಿಐ ಮತ್ತು ಪಿಎಫ್‌ಐ ಸಂಘಟನೆಗಳನ್ನು ಕೂಡಲೇ ನಿಷೇಧಿಸಬೇಕು’ ಎಂದೂ ಆಗ್ರಹಿಸಿದರು.



ಹೆದ್ದಾರಿ ತಡೆದು ಪ್ರತಿಭಟಿಸುತ್ತಿದ್ದ ಬಜರಂಗದಳ ಕಾರ್ಯಕರ್ತರನ್ನು ರಸ್ತೆ ಬದಿಗೆ ಕಳುಹಿಸಿದ ಪೊಲೀಸರು

## ಮಾಧ್ಯಮ ನಿರ್ಬಂಧ ಕೋರಿ ಪಿಐಎಲ್

**ಬೆಂಗಳೂರು:** ಹಿಜಾಬ್ ಧರಿಸಿ ಶಾಲೆ-ಕಾಲೇಜುಗಳಿಗೆ ಬರುವ ವಿದ್ಯಾರ್ಥಿನಿಯರು ಹಾಗೂ ಶಿಕ್ಷಕಿಯರ ವಿಡಿಯೊ ಹಾಗೂ ಫೋಟೊ ತೆಗೆದು ಪ್ರಸಾರ ಮಾಡದಂತೆ ಮಾಧ್ಯಮಗಳಿಗೆ ನಿರ್ಬಂಧ ವಿಧಿಸಬೇಕೆಂದು ಕೋರಿ ಹೈಕೋರ್ಟ್‌ಗೆ ಪಿಐಎಲ್ ಸಲ್ಲಿಕೆಯಾಗಿದೆ.

ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ಸಾಂವಿಧಾನಿಕ ಪೀಠದ ಮುಂದೆ ಸೋಮವಾರ ವಿಚಾರಣೆಗೆ ಬಂದ ಈ ಅರ್ಜಿಗೆ ಪ್ರತಿಕ್ರಿಯಿಸಿದ ಪೀಠ, ‘ಇದೇ ವಿಚಾರಕ್ಕೆ ಸಂಬಂಧಿಸಿದ ಅರ್ಜಿಗಳು ಪೂರ್ಣ ಪೀಠದ ಮುಂದಿದೆ. ಈ ಅರ್ಜಿಯೂ ಆಗಲೇ ವಿಚಾರಣೆಗೆ ಬರಲಿ’ ಎಂದು ತಿಳಿಸಿ ಅರ್ಜಿಯನ್ನು ವಿಚಾರಣೆಗೆ ನಿಗದಿಪಡಿಸುವಂತೆ ರಿಜಿಸ್ಟ್ರಾರ್ ಅವರಿಗೆ ಸೂಚಿಸಿದೆ.

## ನಗರದಲ್ಲಿ ಇಂದು

**ವಿಜ್ಞಾನ ಸಪ್ತಾಹ ಮತ್ತು ಪ್ರಶಸ್ತಿ ಪ್ರದಾನ:** ಉದ್ಘಾಟನೆ–ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಸಿ.ಎನ್.ಅಶ್ವತ್ಥ ನಾರಾಯಣ, ಅತಿಥಿಗಳು–ಸಂಸದ ಡಿ.ವಿ.ಸದಾನಂದಗೌಡ, ಅತಿಥಿಗಳು–ಕೆ.ವಿಜಯರಾಘವನ್, ಇ.ವಿ.ರಮಣರೆಡ್ಡಿ, ಅಧ್ಯಕ್ಷತೆ–ಶಾಸಕ ಎಸ್.ಆರ್.ವಿಶ್ವನಾಥ್, ಆಯೋಜನೆ ಮತ್ತು ಸ್ಥಳ–ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ಯು.ಆರ್.ರಾವ್ ವಿಜ್ಞಾನ ಭವನ, ಜಿಕೆವಿಕೆ ಆವರಣ, ಬೆಳಿಗ್ಗೆ 9.30

**ಕೆ.ವಿ.ಶಂಕರಗೌಡ ದತ್ತಿ ಉಪನ್ಯಾಸ:** ‘ಪ್ರಸ್ತುತ ರಾಜಕಾರಣ: ತಿಳಿವಳಿಕೆ ಮತ್ತು ನಡವಳಿಕೆ’ ಉಪನ್ಯಾಸ–ಎಂ.ಕೃಷ್ಣೇಗೌಡ, ಅಧ್ಯಕ್ಷತೆ–ಸಿ.ಎನ್.ಮಂಚೇಗೌಡ, ಅತಿಥಿಗಳು–ಎಸ್.ಟಿ.ನಾರಾಯಣ ಗೌಡ, ಎಚ್.ಜಿ.ಬಾಲಗೋಪಾಲ್, ಬಿ.ಎನ್. ಶಿವಕುಮಾರ್, ಆಯೋಜನೆ ಮತ್ತು ಸ್ಥಳ–ವಿವೇಕಾನಂದ ಕಾನೂನು ಕಾಲೇಜು, ಎಸ್.ಟಿ.ನಾರಾಯಣ ಗೌಡ ಸಭಾಂಗಣ, ಮಾರುತಿ ಬಡಾವಣೆ, ಗಾಯತ್ರಿನಗರ, ಬೆಳಿಗ್ಗೆ 11

**‘ಒಂದು ರಾಷ್ಟ್ರ–ಒಂದು ಚುನಾವಣೆ’ ದುಂಡು ಮೇಜಿನ ಸಭೆ:** ಭಾಷಣ–ವಿಧಾನ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಭಾಗವಹಿಸುವವರು–ವಕೀಲ ಅಶೋಕ್ ಹಾರನಹಳ್ಳಿ, ಶಿಕ್ಷಣ ತಜ್ಞ ಎಂ.ಆರ್.ದೊರೆಸ್ವಾಮಿ, ‘ಪ್ರಜಾವಾಣಿ’ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ಸಂವಿಧಾನ ತಜ್ಞ ಸುಧಾಕರ ಹೊಸಹಳ್ಳಿ, ಕಾಂಗ್ರೆಸ್ ಮುಖಂಡ ಬಿ.ಎಲ್.ಶಂಕರ್, ಎಫ್‌ಕೆಸಿಸಿಐ ಅಧ್ಯಕ್ಷ ಐ.ಎಸ್.ಪ್ರಸಾದ್, ಆಯೋಜನೆ–ಭಾರತೀಯ ವಿಕಾಸ ವೇದಿಕೆ, ಸ್ಥಳ–ಗಾಂಧಿ ಭವನ, ಸಂಜೆ 4

**ಸುಂದರಕಾಂಡ ಪಾರಾಯಣ:** ಸಾನ್ನಿಧ್ಯ–ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್, ಅಧ್ಯಕ್ಷತೆ–ಎ. ರಾಧಾಕೃಷ್ಣ ರಾಜು, ಉದ್ಘಾಟನೆ–ಪಿ.ರವೀಂದ್ರನಾಥ್, ಶ್ರೀದೇವಿ ರವೀಂದ್ರ ನಾಥ್, ಅತಿಥಿ–ಕಲಿಕಿ ಕೋದಂಡ ರಾಮಿರೆಡ್ಡಿ, ಆಯೋಜನೆ–ಸುಂದರಕಾಂಡ ಪ್ರಚಾರ ಸಮಿತಿ, ಸ್ಥಳ–ಟಿಟಿಡಿ ಮಿನಿ ಕಲ್ಯಾಣ ಮಂಟಪ, ವೈಯಾಲಿಕಾವಲ್, ಸಂಜೆ 5 (ಫೆ.27ರವರೆಗೆ ಕಾರ್ಯಕ್ರಮಗಳು ನಡೆಯಲಿವೆ)



ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್

ಮುಫತ್ ಕಾವಲ್ ಜಮೀನಿಗೆ ತರಾತುರಿಯಲ್ಲಿ ದಾಖಲೆ ಪತ್ರ • ಕಂದಾಯ ಅಧಿಕಾರಿಗಳ ಕೈಚಳಕ

# ಕಣ್ಮರೆಯಾಗುತ್ತಿವೆ ಕಾಯ್ದಿಟ್ಟ ಜಮೀನುಗಳು

• ಪ್ರವೀಣ್ ಕುಮಾರ್ ಪಿ.ವಿ.

**ಬೆಂಗಳೂರು:** ಬೆಂಗಳೂರು ನಗರ ಜಿಲ್ಲೆಯಲ್ಲಿ ಕಾಯ್ದಿಟ್ಟ ಜಮೀನುಗಳನ್ನು ಸರ್ಕಾರ ಒಂದೊಂದಾಗಿ ಕಳೆದುಕೊಳ್ಳುತ್ತಿದೆ. ಸಾರ್ವಜನಿಕ ಉದ್ದೇಶಗಳ ಬಳಕೆಗಾಗಿ ಸರ್ಕಾರಿ ಜಮೀನು ಲಭ್ಯವಿಲ್ಲದ ಸ್ಥಿತಿ ನಿರ್ಮಾಣವಾಗುತ್ತಿದೆ. ಭೂಮಂಜೂರಾತಿಯ ಕುರಿತ ಸಮಂಜಸ ದಾಖಲಾತಿಗಳು ಇಲ್ಲದಿದ್ದರೂ ಬೆಂಗಳೂರು ದಕ್ಷಿಣ ತಾಲ್ಲೂಕಿನ ಬೇಗೂರು ಹೋಬಳಿಯ ಹುಳಿಮಾವು ಗ್ರಾಮದ ಸರ್ವೆ ನಂಬರ್ 63ರಲ್ಲಿರುವ ಮುಫತ್ ಕಾವಲ್ ಜಮೀನಿಗೆ ಸೂಕ್ತ ದಾಖಲೆ ಪತ್ರ ಮಾಡಿಕೊಟ್ಟಿರುವ ಆರೋಪ ಈ ಪಟ್ಟಿಗೆ ಇತ್ತೀಚಿನ ಸೇರ್ಪಡೆ.

ಹುಳಿಮಾವು ಗ್ರಾಮದ ಸರ್ವೆ ನಂಬರ್ 63ರಲ್ಲಿ 12 ಎಕರೆ 10 ಗುಂಟೆಗಳಷ್ಟು ಮುಫತ್ ಕಾವಲ್ ಜಮೀನು ಇದೆ. ಸರ್ಕಾರದ ಆದೇಶವಿಲ್ಲದೇ ಖಾಸಗಿಯವರಿಗೆ ಮುಫತ್ ಕಾವಲ್ ಜಮೀನು ಮಂಜೂರು ಮಾಡುವಂತಿಲ್ಲ. ಆದರೆ, ಮಂಜೂರಾತಿಗೆ ಸಂಬಂಧಿಸಿದ ದಾಖಲೆಗಳೇ ಇಲ್ಲದಿದ್ದರೂ ಬೆಂಗಳೂರು ದಕ್ಷಿಣ ಉಪವಿಭಾಗಾಧಿಕಾರಿಯಾಗಿದ್ದ ಎಂ.ಜಿ. ಶಿವಣ್ಣ ಅವರು ಪಹಣಿ ಕಾಲಂ 9ರಲ್ಲಿ 1 ಎಕರೆ 20 ಗುಂಟೆ ಜಮೀನನ್ನು ತೋಟಿ ಯಲ್ಲಪ್ಪ ಬಿನ್ ವೆಂಕಟಪ್ಪ ಅವರ ಹೆಸರಿಗೆ ನಮೂದಿಸುವಂತೆ ದಕ್ಷಿಣ ತಾಲ್ಲೂಕು ತಹಶೀಲ್ದಾರ್ ಅವರಿಗೆ ಸೂಚಿಸಿ 2021ರ ಮಾ 18ರಂದು ಆದೇಶ ಮಾಡಿದ್ದಾರೆ. ನಿಯಮಬಾಹಿರವಾಗಿ ಜಾಗ ಮಂಜೂರು ಮಾಡಿದ ಶಿವಣ್ಣ ವಿರುದ್ಧ ಕಂದಾಯ ಇಲಾಖೆ ಇಲ್ಲಿಯವರೆಗೆ ಯಾವುದೇ ಶಿಸ್ತುಕ್ರಮ ಕೈಗೊಂಡಿಲ್ಲ. ಅವರನ್ನು ಬೆಂಗಳೂರು ಉತ್ತರ ಉಪವಿಭಾಗಾಧಿಕಾರಿಯಾಗಿ ಇತ್ತೀಚೆಗೆ ವರ್ಗಾವಣೆ ಮಾಡಿದೆ.

ಈ ಪ್ರದೇಶದಲ್ಲಿ ಪ್ರತಿ ಚದರ ಅಡಿಗೆ ₹ 24 ಸಾವಿರದಷ್ಟು ದರ ಇದೆ. 1 ಎಕರೆ 20 ಗುಂಟೆ ಜಾಗವು ₹ 150 ಕೋಟಿಗೂ ಅಧಿಕ ಬೆಲೆ ಬಾಳುತ್ತದೆ ಎಂದು ಅಂದಾಜಿಸಲಾಗಿದೆ. ಮುಫತ್ ಕಾವಲ್ ಜಮೀನು ಕೂಡಾ ಗೋಮಾಳದಂತೆಯೇ ಕಾಯ್ದಿಟ್ಟ ಜಮೀನು. ಇದನ್ನು ಬೇಕಾಬಿಟ್ಟಿ ಖಾಸಗಿ ವ್ಯಕ್ತಿಗಳಿಗೆ ಮಂಜೂರು ಮಾಡಲಾಗದು ಎಂದು ಕಂದಾಯ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಈ ಮುಫತ್ ಕಾವಲ್ ಜಮೀನು ತೋಟಿ ಯಲ್ಲಪ್ಪ ಅವರಿಗೆ 1957ರ ಜೂನ್ 27ರಂದು ಮಂಜೂರಾಗಿತ್ತು. ಅದನ್ನು ಪಹಣಿಯಲ್ಲಿ ದಾಖಲಿಸುವಂತೆ ಆದೇಶ ಕೋರಿ ಬೆಂಗಳೂರು ದಕ್ಷಿಣ ವಿಶೇಷ ತಹಶೀಲ್ದಾರ್ ಅವರು 2021ರ ಫೆ.10ರಂದು ಉಪವಿಭಾಗಾಧಿಕಾರಿ ನ್ಯಾಯಾಲಯಕ್ಕೆ ಪ್ರಸ್ತಾವನೆ ಸಲ್ಲಿಸಿದ್ದರು. ಇದಕ್ಕೆ ದಾಖಲೆ ರೂಪದಲ್ಲಿ ಕೈಬರಹದ ಪಹಣಿಯ ದೃಢೀಕೃತ ದಾಖಲೆ, ದರಖಾಸ್ತು ಕಡತದ ಪ್ರತಿ, ಎಂ.ಆರ್.ನ ಜೆರಾಕ್ಸ್ ದಾಖಲೆಗಳನ್ನು ಒದಗಿಸಿದ್ದರು. ಇದನ್ನು 1964ರ ಕರ್ನಾಟಕ ಭೂಕಂದಾಯ ಕಾಯ್ದೆಯ ಕಲಂ 136 (2) ಅಡಿ ಮೇಲ್ಮನವಿ ಪ್ರಕರಣ ಎಂದು ಪರಿಗಣಿಸಿ ಉಪವಿಭಾಗಾಧಿಕಾರಿಯವರು ವಿಚಾರಣೆ ನಡೆಸಿದ್ದರು.

ಹುಳಿಮಾವು ಗ್ರಾಮದ ಸರ್ವೆ ನಂಬರ್ 63ರ 1ಎಕರೆ 20 ಗುಂಟೆ ಜಮೀನಿಗೆ 1995ರ ಮಾ 07ರಂದು ಕಂದಾಯ ಕಟ್ಟಿದ ಪಟ್ಟಾ ಪುಸ್ತಕವನ್ನು ಹಾಜರುಪಡಿಸಲಾಗಿದೆ. ದರಖಾಸ್ತು ಕಡತದಲ್ಲಿ ಹಾಗೂ ಎಂ.ಆರ್.ನಲ್ಲಿ ತೋಟಿ ಯಲ್ಲಪ್ಪ ಅವರಿಗೆ 1 ಎಕರೆ 20 ಗುಂಟೆ ಜಮೀನು ಮಂಜೂರಾಗಿರುವುದು ಕಂಡುಬಂದಿದೆ. ಆದರೆ, ಕೈಬರಹದ ಪಹಣಿಯಲ್ಲಿ ಎಂ.ಆರ್.ಸಂಖ್ಯೆಯನ್ನು ದಾಖಲಿಸದೆ ಮಂಜೂರಾದವರ ಹೆಸರನ್ನು ಮಾತ್ರ ದಾಖಲಿಸಲಾಗಿತ್ತು.

2020-21ನೇ ಸಾಲಿನ ಪಹಣಿ ದಾಖಲೆ ಪ್ರಕಾರ ಹುಳಿಮಾವು ಗ್ರಾಮದ ಸರ್ವೆ ನಂಬರ್ 63ರಲ್ಲಿ 12 ಎಕರೆ ಜಮೀನಿನಲ್ಲಿ 8 ಎಕರೆ ಮಾತ್ರ ಮುಫತ್ ಕಾವಲ್ ಜಮೀನು ಉಳಿದಿದೆ. ಇಲ್ಲಿ ಸುಶೀಲ ಎನ್.ರೆಡ್ಡಿ ಅವರಿಗೆ 3 ಎಕರೆ 13 ಗುಂಟೆ ಮತ್ತು ಬಿಲ್ಲವ ಅಸೋಸಿಯೇಷನ್‌ಗೆ 1 ಎಕರೆ ಜಮೀನು ಮಂಜೂರಾಗಿದೆ. 20 ಗುಂಟೆ ಜಮೀನು ರಸ್ತೆಗಾಗಿ ಜಿಲ್ಲಾಧಿಕಾರಿಯವರು ಕಾಯ್ದಿರಿಸಿರುವುದು ಪಹಣಿಯ ಕಾಲಂ 11ರಲ್ಲಿ ನಮೂದಾಗಿದೆ. 8 ಎಕರೆ ಮುಫತ್ ಕಾವಲ್ ಜಮೀನಿನಲ್ಲಿ 1 ಎಕರೆ 20 ಗುಂಟೆ ಜಮೀನನ್ನು ತೋಟಿ ಯಲ್ಲಪ್ಪ ಅವರ ಹೆಸರಿಗೆ ಪಹಣಿಯ ಕಾಲಂ 9ರಲ್ಲಿ ಉಲ್ಲೇಖಿಸುವುದು ಸೂಕ್ತ ಎಂದು ಆದೇಶದಲ್ಲಿ ಉಪವಿಭಾಗಾಧಿಕಾರಿಯವರು ತಿಳಿಸಿದ್ದರು.

ಸರ್ಕಾರಿ ಭೂಮಿ ಒತ್ತುವರಿ ಪತ್ತೆಗಾಗಿ ರಚಿಸಲಾಗಿರುವ ಶಾಸಕ ಕೆ.ಜಿ.ಬೋಪಯ್ಯ ನೇತೃತ್ವದ ಸಮಿತಿಯ ಸಭೆಯಲ್ಲಿ ಈ ಅಕ್ರಮದ ಬಗ್ಗೆ ಪ್ರಸ್ತಾಪವಾಗಿದೆ. 'ಭೂ ಮಂಜೂರಾತಿ ಬಗ್ಗೆ ಸಮರ್ಪಕ ದಾಖಲೆಗಳು ಇಲ್ಲದಿದ್ದರೂ, ಖಾಸಗಿ ವ್ಯಕ್ತಿಯ ಹೆಸರಿಗೆ 2021ರಲ್ಲಿ ಖಾತೆ ಮಾಡಲಾಗಿದೆ. ಆ ವ್ಯಕ್ತಿ 1997ರಲ್ಲೇ ಮೃತಪಟ್ಟಿದ್ದಾರೆ. ಹಾಗಿದ್ದರೂ, ಅವರ ಹೆಸರಿಗೆ ಮಂಜೂರು ಮಾಡಿದ್ದು ಹೇಗೆ' ಎಂದು ಸಮಿತಿಯ ಸದಸ್ಯರು ಕಂದಾಯ ಇಲಾಖೆಯ ಪ್ರಶ್ನಿಸಿದ್ದಾರೆ.

ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮದ ವ್ಯವಸ್ಥಾಪಕ ನಿರ್ದೇಶಕರು ಈ ಪ್ರಕರಣದ ಬಗ್ಗೆ ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾಧಿಕಾರಿ ಅವರಿಂದ ವರದಿ ಕೇಳಿದ್ದರು. ಮೂಲಮಂಜೂರಾತಿ ದಾಖಲೆಗಳು ಹಾಗೂ ಖಾತೆ ಮಾಡಿರುವ ಆದೇಶ ಪ್ರತಿಗಳನ್ನು ಒಳಗೊಂಡ ಕಡತದ ಜೊತೆ ಪೂರ್ಣ ಮಾಹಿತಿ ನೀಡುವಂತೆ ಸೂಚಿಸಿದ್ದರು.

'ಹುಳಿಮಾವು ಗ್ರಾಮದ ಸರ್ವೆ ನಂಬರ್ 63ರಲ್ಲಿ ತೋಟಿ ಯಲ್ಲಪ್ಪ ಅವರಿಗೆ ಜಾಗ ಮಂಜೂರಾದ ದಾಖಲೆಗಳನ್ನು ಪರಿಶೀಲಿಸಲಾಗಿದೆ. 1983-84ರಿಂದ 1987-88 ಮತ್ತು 1994-95ನೇ ಸಾಲಿನವರೆಗೆ ಕೈಬರಹದ ಪಹಣಿಗಳು ಲಭ್ಯ ಇವೆ. ಬೇರೆ ಯಾವುದೇ ಮಂಜೂರಿ ದಾಖಲೆಗಳು ಲಭ್ಯ ಇಲ್ಲ' ಎಂದು ಜಿಲ್ಲಾಧಿಕಾರಿಯವರು ವರದಿಯಲ್ಲಿ ತಿಳಿಸಿದ್ದಾರೆ.



## 36 ದಿನಗಳಲ್ಲೇ ವಿಚಾರಣೆ ಪೂರ್ಣ!

ತೋಟಿ ಯಲ್ಲಪ್ಪ ಅವರ ಹೆಸರನ್ನು ಪಹಣಿಯಲ್ಲಿ ದಾಖಲಿಸುವಂತೆ ಆದೇಶ ಕೋರಿ ಬೆಂಗಳೂರು ದಕ್ಷಿಣ ವಿಶೇಷ ತಹಶೀಲ್ದಾರ್ ಅವರು 2021ರ ಫೆ.10ರಂದು ಉಪವಿಭಾಗಾಧಿಕಾರಿ ನ್ಯಾಯಾಲಯಕ್ಕೆ ಪ್ರಸ್ತಾವನೆ ಸಲ್ಲಿಸಿದ್ದರು. ಇದನ್ನು 1964ರ ಕರ್ನಾಟಕ ಭೂಕಂದಾಯ ಕಾಯ್ದೆಯ ಕಲಂ 136 (2) ಅಡಿ ವಿಚಾರಣೆ ನಡೆಸಿದ್ದ ಉಪವಿಭಾಗಾಧಿಕಾರಿಯವರು 2021ರ ಮಾರ್ಚ್ 18ರಂದು ಈ ಕುರಿತ ಆದೇಶ ನೀಡಿದ್ದಾರೆ. ಈ ಸೆಕ್ಷನ್ ಅಡಿಯ ಪ್ರಕರಣಗಳ ವಿಚಾರಣೆ ವರ್ಷಾನುಗಟ್ಟಲೆ ಮುಂದುವರಿಯುವುದೂ ಇದೆ. ಆದರೆ, ಈ ಪ್ರಕರಣದಲ್ಲಿ ಕೇವಲ 36 ದಿನಗಳಲ್ಲೇ ವಿಚಾರಣೆ ಪೂರ್ಣಗೊಳಿಸಿ ಆದೇಶವನ್ನೂ ನೀಡಲಾಗಿದೆ! ಕಲಂ 136 ಅಡಿ ವಿಚಾರಣೆ ನಡೆಸುವುದು ಅಧಿಕಾರ ಇರುವುದು ವಿಶೇಷ ಜಿಲ್ಲಾಧಿಕಾರಿ ಅವರಿಗೆ. ಈ ಪ್ರಕರಣದಲ್ಲಿ ಉಪವಿಭಾಗಾಧಿಕಾರಿಯವರೇ ವಿಚಾರಣೆ ನಡೆಸಿರುವುದು ಚರ್ಚೆಗೆ ಗ್ರಾಸವಾಗಿದೆ.


## ಜಮೀನಿನ ಪ್ರಸ್ತುತ ಸ್ಥಿತಿ

ಹುಳಿಮಾವು ಗ್ರಾಮದ ಸರ್ವೆ ನಂಬರ್ 63ರಲ್ಲಿ 5 ಎಕರೆ ಸರ್ಕಾರಿ ಜಾಗ ಒತ್ತುವರಿಯಾಗಿದೆ ಎಂದು ಎ.ಟಿ.ರಾಮಸ್ವಾಮಿ ನೇತೃತ್ವದ ಸಮಿತಿ ವರದಿಯಲ್ಲಿ ತಿಳಿಸಲಾಗಿತ್ತು. ಇದರಲ್ಲಿ ಬ್ಲಾಕ್-1ರಲ್ಲಿ 3 ಎಕರೆ 22 ಗುಂಟೆ, ಬ್ಲಾಕ್-2ರಲ್ಲಿ 22 ಗುಂಟೆ, ಜುಮ್ಲಾ 4 ಎಕರೆ 04 ಗುಂಟೆ, ಸರ್ವೆ ನಂಬರ್ 49ರ ಮುಫತ್ ಕಾವಲ್‌ನಲ್ಲಿ ಈ ಹಿಂದೆ ಇಸ್ಲಾಮಿಯಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಅವರು ಒತ್ತುವರಿ ಮಾಡಿಕೊಂಡಿದ್ದರು. ಅದನ್ನು ತೆರವುಗೊಳಿಸಲಾಗಿತ್ತು. ಈ ಪ್ರದೇಶ ಈಗ ಖಾಲಿ ಇದ್ದು, ಸರ್ಕಾರದ ಸುಪರ್ದಿಯಲ್ಲಿದೆ ಎಂದು ಜಿಲ್ಲಾಧಿಕಾರಿಯವರು ಪತ್ರದಲ್ಲಿ ತಿಳಿಸಿದ್ದಾರೆ.

ಮೋಜಣಿದಾರರು ಸಲ್ಲಿಸಿರುವ ನಕ್ಷೆ ಪ್ರಕಾರ ಬ್ಲಾಕ್ 3ರಲ್ಲಿ 15 ಗುಂಟೆ, ಸರ್ವೆ ನಂಬರ್ 63ರಲ್ಲಿ 4 ಎಕರೆ 4 ಗುಂಟೆ, ಸರ್ವೆ ನಂಬರ್ 49ರಲ್ಲಿ 15 ಗುಂಟೆ ಸೇರಿ ಒಟ್ಟು 4 ಎಕರೆ 19 ಗುಂಟೆ ಜಮೀನನ್ನು ರಾಜ್ಯ ಗುಪ್ತವಾರ್ತೆ ಘಟಕದ ತರಬೇತಿ ಅಕಾಡೆಮಿ ಸ್ಥಾಪನೆಗೆ ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆ.

## 'ನಕಲಿ ದಾಖಲೆ ಸೃಷ್ಟಿಸಿ ಭೂ ಅಕ್ರಮ'

'ನಕಲಿ ದಾಖಲೆ ಸೃಷ್ಟಿಸಿ ಈ ಭೂ ಅಕ್ರಮ ನಡೆಸಲಾಗಿದೆ. ಉಪವಿಭಾಗಾಧಿಕಾರಿಯವರು ನಿಯಮಬಾಹಿರವಾಗಿ ಜಾಗ ಪರಭಾರೆ ಮಾಡಿದ್ದಾರೆ. ಅವರ ವಿರುದ್ಧ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ. ಇದರಿಂದಾಗಿ, ಇಂತಹ ಅಕ್ರಮಗಳನ್ನು ನಡೆಸಲು ಇನ್ನಷ್ಟು ಉತ್ತೇಜನ ನೀಡಿದಂತೆ ಆಗುತ್ತಿದೆ' ಎಂದು ಶಾಸಕ ಎ.ಟಿ. ರಾಮಸ್ವಾಮಿ ಹೇಳಿದರು.



'24 ವರ್ಷಗಳ ಹಿಂದೆ ಮೃತಪಟ್ಟ ಹೆಸರಿಗೆ ಜಾಗ ಮಂಜೂರು ಮಾಡಲಾಗಿದೆ. ಕೈಬರಹದ ಪಹಣಿಯ ನೈಜತೆ ಬಗ್ಗೆ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿ ಪರಿಶೀಲನೆ ಮಾಡಿಸಬೇಕಿತ್ತು. ಅದು ಬಿಟ್ಟು ತರಾತುರಿಯಲ್ಲಿ ಆದೇಶ ಹೊರಡಿಸುವ ಅಗತ್ಯ ಏನಿತ್ತು' ಎಂದು ಅವರು ಪ್ರಶ್ನಿಸಿದರು.

## 64 ವರ್ಷಗಳ ಬಳಿಕ ನೋಂದಣಿ!

ಉಪವಿಭಾಗಾಧಿಕಾರಿ ಅವರು ಭೂದಾಖಲೆ ಮಾಡಿಸಿಕೊಡಲು ಪರಿಗಣಿಸಿದ ದಾಖಲೆಗಳ ಪ್ರಕಾರ ಈ ಮುಫತ್ ಕಾವಲ್ ಜಮೀನು ತೋಟಿ ಯಲ್ಲಪ್ಪ ಅವರಿಗೆ ಮಂಜೂರಾಗಿದ್ದು 1957ರ ಜೂನ್ 27ರಂದು. ಆದರೆ, ಈ ಬಗ್ಗೆ ಪಹಣಿ ದಾಖಲೆಗಳಲ್ಲಿ ಅವರ ಹೆಸರು ನಮೂದಿಸುವ ಪ್ರಕ್ರಿಯೆ 64 ವರ್ಷಗಳ ಬಳಿಕ ನಡೆದಿದೆ.

## ನಡೆಯದ ಗಡಿ ಗುರುತು ಸರ್ವೆ


ಹುಳಿಮಾವು ಗ್ರಾಮದ ಸರ್ವೆ ನಂಬರ್ 63ರ ಗಡಿ ಕುರುಹುಗಳು ಇಲ್ಲದ ಕಾರಣ ಇಲ್ಲಿ ಜಮೀನು ಒತ್ತುವರಿಯಾಗಿದೆ. ಈ ಬಗ್ಗೆ ಅಳತೆ ಮಾಡಿ ವರದಿ ನೀಡುವಂತೆ ತಹಶೀಲ್ದಾರ್ ಅವರು ಬೆಂಗಳೂರು ದಕ್ಷಿಣ ತಾಲ್ಲೂಕಿನ ಭೂದಾಖಲೆಗಳ ಸಹಾಯಕ ನಿರ್ದೇಶಕರಿಗೆ 2021ರ ಡಿ. 16ರಂದು, 2022ರ ಜ.4ರಂದು ಹಾಗೂ ಜ.13ರಂದು ಪತ್ರ ಬರೆದಿದ್ದರು. ಆದರೆ, ಇನ್ನೂ ಮೋಜಣಿ ನಡೆದಿಲ್ಲ. ತಕ್ಷಣವೇ ಅಳತೆ ಕಾರ್ಯ ಪೂರ್ಣಗೊಳಿಸುವಂತೆ ಜಿಲ್ಲಾಧಿಕಾರಿ ಸೂಚಿಸಿದ್ದಾರೆ.

# 'ಕೋರ್ಬೆವ್ಯಾಕ್ಸ್' ಲಸಿಕೆಗೆ ಡಿಸಿಜಿಐ ಅನುಮತಿ

**ನವದೆಹಲಿ(ಪಿಟಿಐ):** ಕೋವಿಡ್-19ರ ವಿರುದ್ಧ ಮಕ್ಕಳು ಮತ್ತು ಹದಿಹರೆಯದವರಿಗಾಗಿ ಅಭಿವೃದ್ಧಿಪಡಿಸಿರುವ 'ಕೋರ್ಬೆವ್ಯಾಕ್ಸ್' ಲಸಿಕೆಯನ್ನು ತುರ್ತು ಸಂದರ್ಭದಲ್ಲಿ ಬಳಸಲು ಭಾರತೀಯ ಔಷಧ ಮಹಾನಿಯಂತ್ರಕರ ಕಚೇರಿ (ಡಿಸಿಜಿಐ) ಅನುಮತಿ ನೀಡಿದೆ. ಇದು ಹೈದರಾಬಾದ್ ಮೂಲದ 'ಬಯೊಲಾಜಿಕಲ್ ಇ' ಕಂಪನಿ ಸಿದ್ಧಪಡಿಸಿರುವ ಲಸಿಕೆ.

ದೇಶದಲ್ಲಿ 12ರಿಂದ 18 ವಯಸ್ಸಿನವರಿಗೆ ತುರ್ತು ಸಂದರ್ಭದಲ್ಲಿ ಈ ಲಸಿಕೆ ನೀಡಲು ಡಿಸಿಜಿಐ ಅನುಮತಿ ನೀಡಿದೆ. ಮಕ್ಕಳಿಗೆ ಸಂಬಂಧಿಸಿದಂತೆ ದೇಶದಲ್ಲಿ ಡಿಸಿಜಿಐ ಅನುಮೋದಿಸಿರುವ ಎರಡನೇ ಲಸಿಕೆ ಇದಾಗಿದೆ. ಇದಕ್ಕೂ ಮೊದಲು (ಜ.3ರಂದು) ಭಾರತ್ ಬಯೋಟೆಕ್‌ನ 'ಕೋವ್ಯಾಕ್ಸಿನ್' ಲಸಿಕೆಯ (15 ರಿಂದ 18 ವಯಸ್ಸಿನವರಿಗೆ) ಬಳಕೆಗೆ ಒಪ್ಪಿಗೆ ದೊರೆತಿತ್ತು.

'2 ಮತ್ತು 3ನೇ ಕ್ಲಿನಿಕಲ್ ಪ್ರಯೋಗಗಳ ಮಧ್ಯಂತರ ಫಲಿತಾಂಶಗಳ ಆಧಾರದಲ್ಲಿ ಈ ಲಸಿಕೆಯನ್ನು ಬಳಸಲು ಒಪ್ಪಿಗೆ ದೊರೆತಿದೆ' ಎಂದು 'ಬಯೊಲಾಜಿಕಲ್ ಇ' ಕಂಪನಿಯ ಪ್ರಕಟಣೆ ತಿಳಿಸಿದೆ. ಕೋವಿಡ್ ವಿರುದ್ಧ ಭಾರತ ಸ್ಥಳೀಯವಾಗಿ ಅಭಿವೃದ್ಧಿಪಡಿಸಿದ 'ಆರ್‌ಬಿಡಿ ಪ್ರೊಟೀನ್' ಉಪ- ಘಟಕದ ಮೊದಲ ಲಸಿಕೆ ಇದಾಗಿದೆ. ಇದು ಭುಜಕ್ಕೆ ನೀಡುವ ಎರಡು ಡೋಸ್ ಲಸಿಕೆ. ಒಮ್ಮೆ ಲಸಿಕೆ ಪಡೆದ 28 ದಿನಗಳ ಅಂತರದಲ್ಲಿ ಮತ್ತೊಂದು ಲಸಿಕೆ ಪಡೆಯಬೇಕು. ಇದನ್ನು 2ರಿಂದ 8 ಡಿಗ್ರಿ ಸೆಲ್ಸಿಯಸ್ ತಾಪಮಾನದಲ್ಲಿ ಸಂಗ್ರಹಿಸಬೇಕು ಎಂದು ಕಂಪನಿ ತಿಳಿಸಿದೆ.





**'ಸೀರಂ' ಮನವಿ:** 'ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ' 12ರಿಂದ 17 ವರ್ಷದವರಿಗಾಗಿ ಅಭಿವೃದ್ಧಿಪಡಿಸಿರುವ ಕೋವಿಡ್-19ರ ಲಸಿಕೆ 'ಕೋವೊವಾಕ್ಸ್'ನ ತುರ್ತು ಬಳಕೆಗೆ ಅನುಮತಿ ನೀಡುವಂತೆ ಕೋರಿ ಡಿಸಿಜಿಐಗೆ ಸೋಮವಾರ ಅರ್ಜಿ ಸಲ್ಲಿಸಿದೆ.

# ಕೋವಿಡ್ ಸಾವು ವಿಶ್ಲೇಷಣೆಗೆ ಸಮಿತಿ

**ಬೆಂಗಳೂರು:** ಕೋವಿಡ್ ಮರಣಗಳ ಕಾರಣ ವಿಶ್ಲೇಷಣೆಗೆ ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯ (ಬಿಎಂಸಿಆರ್‌ಐ) ಔಷಧಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಕೆ.ರವಿ ಅಧ್ಯಕ್ಷತೆಯಲ್ಲಿ ರಾಜ್ಯಮಟ್ಟದ ಮರಣ ಪರಿಶೋಧನಾ ಸಮಿತಿಯನ್ನು ಸರ್ಕಾರ ರಚಿಸಿದೆ.

ಕೋವಿಡ್ ರೋಗ ಲಕ್ಷಣಗಳು, ಸಹರೋಗಗಳು, ಲಸಿಕಾಕರಣ ಹಾಗೂ ಆಸ್ಪತ್ರೆ ದಾಖಲಾತಿಗೆ ಸಂಬಂಧಿಸಿದಂತೆ ವಿಶ್ಲೇಷಣೆ ನಡೆಸಿ, ಅಗತ್ಯ ಸಲಹೆಗಳನ್ನು ನೀಡಲು 13 ಮಂದಿ ಒಳಗೊಂಡ ಸಮಿತಿ ರಚಿಸಲಾಗಿದೆ. ಡಾ. ವಸಂತ್ ಕುಮಾರ್ ಅವರು ಸದಸ್ಯ ಕಾರ್ಯದರ್ಶಿಯಾಗಿ ನೇಮಕರಾಗಿದ್ದಾರೆ.

ಬಿಎಂಸಿಆರ್‌ಐ ಪ್ರಾಧ್ಯಾಪಕ ಶಶಿಭೂಷಣ್ ಬಿ.ಎಲ್, ಮಣಿಪಾಲ ವಿಶ್ವವಿದ್ಯಾಲಯದ ಅಧ್ಯಕ್ಷ ಡಾ. ಸುನೀಲ್ ಕಾರ್‌ನಾಥ್, ಮಣಿಪಾಲ್ ಆಸ್ಪತ್ರೆಯ ಡಾ. ಸತ್ಯನಾರಾಯಣ ಮೈಸೂರು, ಇಂದಿರಾಗಾಂಧಿ ಮಕ್ಕಳ ಆಸ್ಪತ್ರೆಯ ಡಾ. ಬಸವರಾಜ್, ಬಿಎಂಸಿಆರ್‌ಐ ಪ್ರಾಧ್ಯಾಪಕರಾದ ಡಾ. ಸವಿತಾ, ಡಾ.ಎಸ್. ವೆಂಕಟರಾಘವ, ಡಾ. ಸುಧೀಶ್ ಕೆ, ಡಾ. ರಿಯಾಜ್, ಬಿಬಿಎಂಪಿ ಮುಖ್ಯ ಆರೋಗ್ಯಾಧಿಕಾರಿ ಡಾ. ಬಾಲಸುಂದರ್ ಹಾಗೂ ಕೊಲಂಬಿಯಾ ಏಷ್ಯಾ ಆಸ್ಪತ್ರೆಯ ಡಾ. ವಿಶ್ವನಾಥ್ ಕಾಮೋಜಿ ಅವರು ಸದಸ್ಯರಾಗಿದ್ದಾರೆ.




'ಸಮಿತಿಯು ದೈನಂದಿನ ಮರಣ ಪ್ರಕರಣಗಳ ವಿಶ್ಲೇಷಣೆಯನ್ನು ಕ್ರೋಢೀಕರಿಸಬೇಕು. ಸಂಭಾವ್ಯ ಕಾರ್ಯತಂತ್ರಗಳನ್ನು ವರದಿ ಮಾಡಬೇಕು. ಮರಣ ಪ್ರಕರಣಗಳ ವಿಶ್ಲೇಷಣಾ ವರದಿಯ ಕಾರಣಗಳನ್ನು ಕ್ರೂಢೀಕರಿಸಿ ಸಾರಾಂಶ ಮಾಡಬೇಕು. ಕೋವಿಡ್ ಮರಣ ಪ್ರಕರಣಗಳ ವಿವರವಾದ ವಿಶ್ಲೇಷಣೆ ವರದಿಗಳನ್ನು ಸಾರ್ವಜನಿಕರಿಗೆ ಬಿಡುಗಡೆ ಮಾಡಲು ಸಾಧ್ಯವಾಗುವಂತೆ ಪ್ರತಿ ತಿಂಗಳು ಆರೋಗ್ಯ ಇಲಾಖೆ ಆಯುಕ್ತರಿಗೆ ವರದಿ ಸಲ್ಲಿಸಬೇಕು' ಎಂದು ಆದೇಶದಲ್ಲಿ ತಿಳಿಸಲಾಗಿದೆ.

# ಸ್ಮಾರಕವಾಗಿ ಪುಟ್ಟಣ್ಣ ಕಣಗಾಲ್ ಮನೆ: ಪ್ರಸ್ತಾವ

**ಬೆಂಗಳೂರು:** ಹೆಸರಾಂತ ನಿರ್ದೇಶಕ ದಿವಂಗತ ಪುಟ್ಟಣ್ಣ ಕಣಗಾಲ್ ಅವರ ಮನೆಯನ್ನು ಸ್ಮಾರಕ ಮತ್ತು ವಸ್ತುಸಂಗ್ರಹಾಲಯವಾಗಿ ಅಭಿವೃದ್ಧಿಗೊಳಿಸಬೇಕು ಎಂದು ಕೋರಿ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲು ಕರ್ನಾಟಕ ಚಲನಚಿತ್ರ ಅಕಾಡೆಮಿ ನಿರ್ಧರಿಸಿದೆ.

ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕಿನ ಕಣಗಾಲು ಗ್ರಾಮದಲ್ಲಿ ಇರುವ ಮನೆ ಶಿಥಿಲಗೊಂಡಿದೆ. ಈ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆ ನಡೆಯುತ್ತಿರುವ ಬೆನ್ನಲ್ಲೇ ಅಕಾಡೆಮಿ ಈ ಕುರಿತು ನಿರ್ಧಾರ ಕೈಗೊಂಡಿದೆ.

'ಇತ್ತೀಚೆಗೆ ಸರ್ವಸದಸ್ಯರ ಸಭೆಯಲ್ಲಿ ಸದಸ್ಯರೊಬ್ಬರು ಮನೆಯ ದುಃಸ್ಥಿತಿ ಕುರಿತು ಛಾಯಾಚಿತ್ರಗಳನ್ನು ಪ್ರದರ್ಶಿಸಿ ಪ್ರಸ್ತಾಪಿಸಿದ್ದರು. ಈ ಹಿನ್ನೆಲೆಯಲ್ಲಿ ಪುಟ್ಟಣ್ಣ ಕಣಗಾಲ್ ಅವರ ಮನೆಯನ್ನು ಅಭಿವೃದ್ಧಿಗೊಳಿಸಲು ಕೋರಿ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲು ನಿರ್ಧರಿಸಲಾಯಿತು' ಎಂದು ಅಕಾಡೆಮಿ ಅಧ್ಯಕ್ಷ ಸುನೀಲ್ ಪುರಾಣಿಕ್ ಅವರು ತಿಳಿಸಿದರು.

'ಪುಟ್ಟಣ್ಣ ಅವರ ಚಿತ್ರಗಳ ಪೋಸ್ಟರ್, ಚಿತ್ರೀಕರಣದ ದೃಶ್ಯಾವಳಿಗಳು, ಸಾಧನೆಗಳನ್ನು ಬಿಂಬಿಸುವ ಸ್ಮಾರಕ, ಗ್ರಂಥಾಲಯವನ್ನು ಒಳಗೊಂಡ ವಸ್ತು ಸಂಗ್ರಹಾಲಯವಾಗಿ ಮನೆಯನ್ನು ಅಭಿವೃದ್ಧಿಗೊಳಿಸುವುದು ಅಗತ್ಯವಾಗಿದೆ. ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ವೇಳೆ ಮುಖ್ಯಮಂತ್ರಿ ಅವರನ್ನು ಭೇಟಿಯಾಗಿ ಪ್ರಸ್ತಾವನೆ ಸಲ್ಲಿಸಲು ನಿರ್ಧರಿಸಿದ್ದೇವೆ' ಎಂದರು.

# 'ಕೋವಿಡೇತರ ಚಿಕಿತ್ಸೆಗೆ ಆದ್ಯತೆ ನೀಡಿ'

**ಬೆಂಗಳೂರು:** ಕೋವಿಡ್ ಪ್ರಕರಣಗಳ ಸಂಖ್ಯೆ ನಿಯಂತ್ರಣದಿಂದಾಗಿ ಸೋಂಕಿತರ ಚಿಕಿತ್ಸೆಗೆ ಮೀಸಲಿರಿಸಲಾದ ಆಸ್ಪತ್ರೆಗಳಲ್ಲಿ ಕೋವಿಡೇತರ ಚಿಕಿತ್ಸೆಗಳಿಗೂ ಆದ್ಯತೆ ಒದಗಿಸುವಂತೆ ಆರೋಗ್ಯ ಇಲಾಖೆ ಸೂಚಿಸಿದೆ.

ಈ ಬಗ್ಗೆ ಇಲಾಖೆಯ ಆಯುಕ್ತ ಡಿ. ರಂದೀಪ್ ಸುತ್ತೋಲೆ ಹೊರಡಿಸಿದ್ದಾರೆ. ಕೋವಿಡ್ ಪ್ರಕರಣಗಳ ಸಂಖ್ಯೆ ಏರಿಕೆ ಕಂಡಾಗ ಸಿ.ವಿ. ರಾಮನ್ ಆಸ್ಪತ್ರೆ, ರಾಜೀವ್ ಗಾಂಧಿ ಎದೆರೋಗಗಳ ಆಸ್ಪತ್ರೆ, ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಇಂದಿರಾ ಗಾಂಧಿ ಮಕ್ಕಳ ಆಸ್ಪತ್ರೆಯಲ್ಲಿ ಸೋಂಕಿತರು ಹಾಗೂ ಸೋಂಕು ಶಂಕಿತರ ಚಿಕಿತ್ಸೆಗೆ ಹೆಚ್ಚಿನ ಸಂಖ್ಯೆಯಲ್ಲಿ ಹಾಸಿಗೆಗಳನ್ನು ಮೀಸಲಿರಿಸಲಾಗಿತ್ತು. ಪ್ರಕರಣಗಳ ಸಂಖ್ಯೆ ಇಳಿಕೆ ಕಂಡ ಬಳಿಕ ಹಾಸಿಗೆಗಳ ಸಂಖ್ಯೆಯನ್ನು ಕಡಿತ ಮಾಡಲಾಗಿತ್ತು ಎಂದು ತಿಳಿಸಲಾಗಿದೆ.

ಕೋವಿಡ್ ಪ್ರಕರಣಗಳ ಸಂಖ್ಯೆ ಈಗ ನಿಯಂತ್ರಣಕ್ಕೆ ಬಂದಿರುವುದರಿಂದ ಕೋವಿಡ್ ಜತೆಗೆ ಕೋವಿಡೇತರ ಚಿಕಿತ್ಸೆಗಳನ್ನೂ ಒದಗಿಸಬೇಕು. ಕೋವಿಡೇತರ ಚಿಕಿತ್ಸೆಗಳು ಹಾಗೂ ರೋಗಿಗಳ ದಾಖಲಾತಿ ವಿಳಂಬವಾಗಬಾರದು ಎಂದು ಆಸ್ಪತ್ರೆಗಳಿಗೆ ಸೂಚಿಸಲಾಗಿದೆ.

# ಬಜೆಟ್ ಅಧಿವೇಶನದೊಳಗೆ ಮೀಸಲಾತಿ ಘೋಷಿಸಿ

## ಕೂಡಲಸಂಗಮ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ

ಪ್ರಜಾವಾಣಿ ವಾರ್ತೆ

ದಾವಣಗೆರೆ: 'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬಜೆಟ್ ಅಧಿವೇಶನದಲ್ಲಿ ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ಘೋಷಿಸಬೇಕು' ಎಂದು ಕೂಡಲಸಂಗಮ ಪಂಚಮಸಾಲಿ ಪೀಠದ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಆಗ್ರಹಪಡಿಸಿದರು.


ಬಸವ ಜಯ ಮೃತ್ಯುಂಜಯ ಸ್ವಾಮೀಜಿ

ಪಂಚಮಸಾಲಿ ಸಮಾಜದ ಬೆಂಗಳೂರು ಪಾದಯಾತ್ರೆಗೆ ಒಂದು ವರ್ಷದ ತುಂಬಿದ ಪ್ರಯುಕ್ತ ಇಲ್ಲಿನ ಗುರುಭವನದಲ್ಲಿ ನಡೆದ ಸಭೆಯ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

'ಫೆ.16ರಂದು ಬೆಳಗಾವಿಯಲ್ಲಿ ನಡೆದ ಪಂಚಮಸಾಲಿ ಸಮಾಜದ ಹಾಲಿ ಮಾಜಿ ಶಾಸಕರ ಸಭೆಯಲ್ಲಿ ಬಜೆಟ್ ಅಧಿವೇಶನದಲ್ಲಿ ಮೀಸಲಾತಿ ನೀಡುವುದಾಗಿ ಮುಖ್ಯಮಂತ್ರಿ ಕೊಟ್ಟ ಮಾತನ್ನು ನಡೆಸಬೇಕು. ಇಲ್ಲದಿದ್ದರೆ ಶಾಸಕ ಬಸನಗೌಡ ಯತ್ನಾಳ್ ನೇತೃತ್ವದಲ್ಲಿ ಸಮಾಜದ ಶಾಸಕರು ಸೇರಿ ಹೋರಾಟದ ಬಗ್ಗೆ ನಿರ್ಧಾರ ಕೊಳ್ಳಲಾಗುವುದು' ಎಂದರು.

**ಶಾಶ್ವತ ನಿರ್ಧಾರವಿಲ್ಲ:** 'ಸಮಾಜಕ್ಕೆ 2ಎ ಮೀಸಲಾತಿ ನೀಡುವವರಿಗೆ ಯಾವುದೇ ಮತ ಕಟ್ಟುವ ನಿರ್ಧಾರ ಮಾಡಿಲ್ಲ' ಹೇಳಿದರು.

'ಬಸವಣ್ಣನವರು ಐಕ್ಯವಾದ ಕೂಡಲ ಸಂಗಮದಲ್ಲಿರುವ ಪೀಠವೊಂದೇ ಪಂಚಮಸಾಲಿಗಳಿಗೆ ಪೀಠ. ಉಳಿದ ಯಾವ ಮಠವೂ ಗೊತ್ತಿಲ್ಲ' ಎಂದು ಪಂಚಮಸಾಲಿ ಮೂರನೇ ಪೀಠದ ಬಗ್ಗೆ ಪ್ರತಿಕ್ರಿಯಿಸಿದರು.

### ಅಂಗನವಾಡಿ ಕಾರ್ಯಕರ್ತೆಯರ ಅನಿರ್ದಿಷ್ಟಾವಧಿ ಧರಣಿ

# ಸರ್ಕಾರದ ವಿರುದ್ಧ ಗುಡುಗು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿದ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು, ತಮ್ಮ ಕೂಗಿಗೆ ಸ್ಪಂದಿಸದ ಸರ್ಕಾರದ ವಿರುದ್ಧ ಗುಡುಗಿದರು.

ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಸಂಘದ ನೇತೃತ್ವದಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಿಂದ ಸ್ವಾತಂತ್ರ್ಯ ಉದ್ಯಾನವರೆಗೆ ಸೋಮವಾರ ಹಮ್ಮಿಕೊಂಡಿದ್ದ 'ಬೆಂಗಳೂರು ಚಲೊ' ಮೆರವಣಿಗೆಯಲ್ಲಿ ಪ್ರತಿಭಟನೆನಿರತರು ಘೋಷಣಾ ಫಲಕ ಪ್ರದರ್ಶಿಸಿದರು.

ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು, ಮೆರವಣಿಗೆಯಲ್ಲಿ ಸಾಗಿದರು. ಸ್ವಾತಂತ್ರ್ಯ ಉದ್ಯಾನದಲ್ಲಿ ಮೆರವಣಿಗೆ ಅಂತ್ಯಗೊಳಿಸಿ ಏಕಕಾಲಕ್ಕೆ ಸಭೆ ನಡೆಸಿದ ಪ್ರತಿಭಟನಾಕಾರರು, ಅನಿರ್ದಿಷ್ಟಾವಧಿ ಧರಣಿ ಮುಂದುವರಿಸಿದ್ದಾರೆ.

ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿದ್ದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿಗಳು, 'ಮುಖ್ಯಮಂತ್ರಿ ಅವರಿಗೆ ಮನವಿ ಪತ್ರ ತಲುಪಿಸಲಾಗುವುದು. ಧರಣಿಯನ್ನು ಕೈಬಿಡಿ' ಎಂದರು. ಅದಕ್ಕೆ ಒಪ್ಪದ ಪ್ರತಿಭಟನಾಕಾರರು, 'ಮುಖ್ಯಮಂತ್ರಿ ಅವರೇ ಸ್ಥಳಕ್ಕೆ ಬರಬೇಕು. ಅಲ್ಲಿವರೆಗೂ ಉದ್ಯಾನದಲ್ಲೇ ಧರಣಿ ಮುಂದುವರಿಸುತ್ತೇವೆ' ಎಂದು ಹೇಳಿದರು.

ಬಟ್ಟೆ ಹಾಗೂ ಅಗತ್ಯ ವಸ್ತುಗಳ ಬ್ಯಾಗ್ ಸಮೇತ ನಗರಕ್ಕೆ ಬಂದಿರುವ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು, ಉದ್ಯಾನದಲ್ಲೇ ರಾತ್ರಿ ತಂಗಿದ್ದಾರೆ. ಕೆಲವರು ಮಕ್ಕಳನ್ನೂ ತಮ್ಮ ಜೊತೆ ಕರೆತಂದಿದ್ದಾರೆ.

'ರಾಜ್ಯದ ಅಂಗನವಾಡಿಗಳಲ್ಲಿ 1 ಲಕ್ಷಕ್ಕೂ ಹೆಚ್ಚು ಕಾರ್ಯಕರ್ತೆಯರು ಹಾಗೂ ಸಹಾಯಕಿಯರು ಕೆಲಸ ಮಾಡುತ್ತಿದ್ದಾರೆ. ಸರ್ಕಾರದ ಹಲವು ಯೋಜನೆಗಳ ಜಾರಿ ಕೆಲಸವನ್ನು ಅವರಿಂದ ಮಾಡಿಸಿಕೊಳ್ಳಲಾಗುತ್ತಿದೆ. ಆದರೆ, ಕೆಲಸಕ್ಕೆ ತಕ್ಕ ವೇತನವನ್ನು ಮಾತ್ರ ನೀಡುತ್ತಿಲ್ಲ. ಈ ಬಗ್ಗೆ ಹಲವು ಬಾರಿ ಮನವಿ ಸಲ್ಲಿಸಿದರೂ ಸರ್ಕಾರಗಳು ಸ್ಪಂದಿಸುತ್ತಿಲ್ಲ. ಹೀಗಾಗಿ, ಈ ಬಾರಿ ಅನಿರ್ದಿಷ್ಟಾವಧಿ ಧರಣಿ ಆರಂಭಿಸಿದ್ದೇವೆ' ಎಂದು ಪ್ರತಿಭಟನಕಾರರು ಹೇಳಿದರು.

'ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರಿಗೆ ಕನಿಷ್ಠ ವೇತನ ಜಾರಿ ಮಾಡಬೇಕು. ಸೇವಾ ಹಿರಿತನ ಪರಿಗಣಿಸಿ ಸಂಬಳ ಹೆಚ್ಚಿಸಬೇಕು. ನಿವೃತ್ತರಾದವರಿಗೆ ಪಿಂಚಣಿ ನೀಡಬೇಕು. ರಾಜ್ಯ ಶಿಕ್ಷಣ ಯೋಜನೆಯಡಿ ಅಂಗನವಾಡಿಗಳಲ್ಲಿ ಎಲ್‌.ಕೆ.ಜಿ ಹಾಗೂ ಯು.ಕೆ.ಜಿ ಕೇಂದ್ರಗಳನ್ನು ತೆರೆದು, ಸಹಾಯಕಿಯರನ್ನೇ ಕೆಲಸಕ್ಕೆ ತೆಗೆದುಕೊಳ್ಳಬೇಕು. ಮಿನಿ ಅಂಗನವಾಡಿ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಬೇಕು' ಎಂದೂ ಅವರು ಆಗ್ರಹಿಸಿದರು.


ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಅನಿರ್ದಿಷ್ಟಾವಧಿ ಧರಣಿ ಆರಂಭಿಸಿದ್ದಾರೆ ಪ್ರಜಾವಾಣಿ ಚಿತ್ರ


ಕೆಲಸ ಕಾಯಂಗೊಳಿಸುವಿಕೆ ಮತ್ತು ಸಂಬಳ ಹೆಚ್ಚಳಕ್ಕೆ ಒತ್ತಾಯಿಸಿ ಅಂಗನವಾಡಿ ಕಾರ್ಯಕರ್ತೆಯರು ಬೆಂಗಳೂರಿನ ಫ್ರೀಡಂ ಪಾರ್ಕ್ ರಸ್ತೆಯಲ್ಲಿ ಅಹೋರಾತ್ರಿ ಪ್ರತಿಭಟನೆ ನಡೆಸಿದರು ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್.ಜಿ.

# '10 ತಿಂಗಳ ಸಂಬಳ ಕೊಡಿ'

ಮೈಸೂರು: 'ಹತ್ತು ತಿಂಗಳ ವೇತನ ನೀಡಬೇಕು' ಎಂದು ಆಗ್ರಹಿಸಿ ಇಲ್ಲಿನ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ 21 ಬೋಧಕೇತರ ಸಿಬ್ಬಂದಿ ವಿಶ್ವವಿದ್ಯಾಲಯದ ಮುಂದೆ ಸೋಮವಾರ ಪ್ರತಿಭಟಿಸಿದರು.

ವಿಶ್ವವಿದ್ಯಾಲಯದ ಬೋಧಕೇತರ ಸಿಬ್ಬಂದಿಗಳ ಸಂಘದ ನೇತೃತ್ವದಲ್ಲಿ ಸೇರಿದ ಪ್ರತಿಭಟನಕಾರರು ಕುಲಪತಿ ನಾಗೇಶ್ ವಿ ಬೆಟ್ಟಕೋಟೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

'ಸರ್ಕಾರದ ಆದೇಶದ ವಿರುದ್ಧವಾಗಿ ನೇಮಕವಾಗಿರುವ ಸಿಬ್ಬಂದಿಯನ್ನು ಕೂಡಲೇ ಬಿಡುಗಡೆ ಮಾಡುವಂತೆ ಉನ್ನತ ಶಿಕ್ಷಣ ಇಲಾಖೆ ಸೂಚಿಸಿದೆ' ಎಂದು ಕುಲಪತಿ ನಾಗೇಶ್ ವಿ ಬೆಟ್ಟಕೋಟೆ ಪ್ರತಿಕ್ರಿಯಿಸಿದರು.

# ಕೆ.ಷರೀಫಾ, ಮಧುರಾಣಿ 'ಈ ಹೊತ್ತಿಗೆ' ಪ್ರಶಸ್ತಿಗೆ ಆಯ್ಕೆ

ಬೆಂಗಳೂರು:'ಈ ಹೊತ್ತಿಗೆ' ಟ್ರಸ್ಟ್‌ನ 2022ರ ಕಥಾ ಮತ್ತು ಕಾವ್ಯ ಪ್ರಶಸ್ತಿಗಳನ್ನು ಪ್ರಕಟಿಸಲಾಗಿದೆ.

ಡಾ. ಕೆ. ಷರೀಫಾ ಅವರ ಅಪ್ರಕಟಿತ ಕಥಾಸಂಕಲನ 'ನೀರೊಳಗಣ ಕಿಚ್ಚು' 'ಈ ಹೊತ್ತಿಗೆ ಕಥಾ ಪ್ರಶಸ್ತಿ'ಗೆ ಹಾಗೂ ಎಚ್. ಎಸ್. ಮಧುರಾಣಿ ಅವರ 'ನೀಲಿ ಚುಕ್ಕಿಯ ನೆರಳು' ಅಪ್ರಕಟಿತ ಕವನ ಸಂಕಲನ 'ಈ ಹೊತ್ತಿಗೆ ಕಾವ್ಯ ಪ್ರಶಸ್ತಿ'ಗೆ ಆಯ್ಕೆಯಾಗಿವೆ.


ಕೆ. ಷರೀಫಾ


ಮಧುರಾಣಿ

ಕಲಬುರಗಿ ಮೂಲದ ಕವಯತ್ರಿ ಕೆ. ಷರೀಫಾ ಅವರು ಕೃಷಿ ಮಾರುಕಟ್ಟೆ ಇಲಾಖೆಯಲ್ಲಿ ಮಾರುಕಟ್ಟೆ ಅಧಿಕಾರಿಯಾಗಿ ಕಾರ್ಯನಿರ್ವಹಿಸಿ ನಿವೃತ್ತರಾಗಿದ್ದಾರೆ. ಕತೆಗಾರ್ತಿ ವೀಣಾ ಶಾಂತೇಶ್ವರ ಅವರು ಈ ಬಾರಿಯ 'ಈ ಹೊತ್ತಿಗೆ ಕಥಾ ಪ್ರಶಸ್ತಿ' ವಿಭಾಗದ ತೀರ್ಪುಗಾರರಾಗಿದ್ದರು.

'ಈ ಹೊತ್ತಿಗೆ ಕಾವ್ಯ ಪ್ರಶಸ್ತಿ'ಗೆ ಭಾಜನರಾಗಿರುವ ಎಚ್.ಎಸ್. ಮಧುರಾಣಿ ಅವರು ಮೂಲತಃ ದಾವಣಗೆರೆಯವರು. ಪ್ರಸ್ತುತ ಮೈಸೂರಿನಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿ ಕೆಲಸ ಮಾಡುತ್ತಿದ್ದಾರೆ.

ಕವಿ ಡಾ.ಎಚ್. ಎಸ್. ಶಿವಪ್ರಕಾಶ್ ಅವರು ಈ ಹೊತ್ತಿಗೆಯ ಕಾವ್ಯ ಪ್ರಶಸ್ತಿಯ ತೀರ್ಪುಗಾರರಾಗಿದ್ದರು. ಇದು ಈ ಹೊತ್ತಿಗೆಯ ಮೊದಲ ಕಾವ್ಯ ಪ್ರಶಸ್ತಿಯಾಗಿದೆ.

ಎರಡೂ ಪ್ರಶಸ್ತಿಗಳು ತಲಾ ₹10 ಸಾವಿರ ನಗದು ಹಾಗೂ ಪ್ರಶಸ್ತಿ ಫಲಕ ಒಳಗೊಂಡಿದೆ. ಮಾರ್ಚ್ 27ರಂದು ಬೆಂಗಳೂರಿನ ಜೆ.ಪಿ. ನಗರದ ಕಪ್ಪಣ್ಣ ಅಂಗಳ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು 'ಈ ಹೊತ್ತಿಗೆ'ಯ ಸಂಚಾಲಕರಾದ ಜಯಲಕ್ಷ್ಮಿ ಪಾಟೀಲ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅನಿಲ ಸೋರಿಕೆಯಿಂದ ಬೆಂಕಿ: ಆತಂಕ ಸೃಷ್ಟಿ


ಹುಬ್ಬಳ್ಳಿ ವಿದ್ಯಾನಗರದ ಟೆಂಗಿನಕಾಯಿ ಲೇಔಟ್‌ನಲ್ಲಿ ಹಾದು ಹೋಗಿರುವ ಮನೆಮನೆಗೆ ಅಡುಗೆ ಅನಿಲ ಪೂರೈಕೆ ಪೈಪ್‌ಲೈನ್‌ನಲ್ಲಿ ಸೋಮವಾರ ಅನಿಲ ಸೋರಿಕೆಯಾಗಿ, ಬೆಂಕಿ ಕಾಣಿಸಿಕೊಂಡಿತು

ಹುಬ್ಬಳ್ಳಿ: ಇಲ್ಲಿನ ವಿದ್ಯಾನಗರದ ಟೆಂಗಿನಕಾಯಿ ಲೇಔಟ್‌ನಲ್ಲಿ, ಮನೆಮನೆಗೆ ಅಡುಗೆ ಅನಿಲ ಪೂರೈಕೆ ಮಾಡುವ ಪೈಪ್‌ಲೈನ್‌ನಲ್ಲಿ ಸೋಮವಾರ ಅನಿಲ ಸೋರಿಕೆಯಾಗಿದ್ದು, ಬೆಂಕಿ ಕಾಣಿಸಿಕೊಂಡು ಕೆಲವು ಸಮಯ ಆತಂಕ ಸೃಷ್ಟಿಸಿತು.

ಬೆಳಿಗ್ಗೆ 10.15ರ ಸುಮಾರಿಗೆ ಬೆಂಕಿ ಆಳೆತ್ತರಕ್ಕೆ ಉರಿಯುತ್ತಿರುವುದನ್ನು ಗಮನಿಸಿದ ಸ್ಥಳೀಯರು ಪೊಲೀಸ್ ಠಾಣೆ ಹಾಗೂ ಅಗ್ನಿಶಾಮಕ ಠಾಣೆಗೆ ಮಾಹಿತಿ ನೀಡಿದ್ದಾರೆ. ಅಗ್ನಿಶಾಮಕ ಸಿಬ್ಬಂದಿ, ಅನಿಲ ಪೂರೈಕೆಯನ್ನು ಸ್ಥಗಿತಗೊಳಿಸಿ ಬೆಂಕಿ ನಂದಿಸಿದರು.

ಕೇಬಲ್ ಅಳವಡಿಕೆ ಅಥವಾ ಇನ್ನಿತರ ಉದ್ದೇಶಕ್ಕಾಗಿ ಗುಂಡಿ ತೋಡಿದ್ದಾಗ ಪೈಪ್‌ಲೈನ್‌ಗೆ ಹಾನಿಯಾಗಿದೆ. ಪೈಪ್‌ಲೈನ್ ತೀರಾ ಮೇಲೆಯೇ ಇದ್ದು, ಅನಿಲ ಸೋರಿದೆ. ಇದು, ಜನನಿಬಿಡ ಪ್ರದೇಶವಾಗಿಲ್ಲ. ಹೀಗಾಗಿ ಹಾನಿಗೆ ಆಸ್ಪದವಾಗಿಲ್ಲ ಎಂದು ಪೊಲೀಸರು ತಿಳಿಸಿದರು.

ಸಚಿವ, ಸಂಸದ, ಪೊಲೀಸ್ ಅಧಿಕಾರಿಗಳ ಎದುರಲ್ಲೇ ಗುಂಪಿನಿಂದ ಕಲ್ಲು ತೂರಾಟ

# ಶಿವಮೊಗ್ಗ: ಮನೆಗಳಿಗೆ ನುಗ್ಗಿ ದಾಂದಲೆ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಬಜರಂಗದಳದ ಕಾರ್ಯಕರ್ತನ ಹತ್ಯೆಯನ್ನು ಖಂಡಿಸಿ ಪ್ರತಿಭಟನೆಗೆ ಇಳಿದವರು ಸೋಮವಾರ ಅಕ್ಷರಶಃ ಇಲ್ಲಿ ದಾಂದಲೆ ನಡೆಸಿದರು. ಮನೆಗಳಿಗೆ ನುಗ್ಗಿ ಭೀತಿಯ ವಾತಾವರಣ ಸೃಷ್ಟಿಸಿದರು. ಪರಿಸ್ಥಿತಿಯು ಒಂದು ಹಂತದಲ್ಲಿ ಪೊಲೀಸರ ನಿಯಂತ್ರಣವನ್ನು ತಪ್ಪಿತು.

ಮೃತ ಹರ್ಷನ ಪಾರ್ಥಿವ ಶರೀರದ ಮೆರವಣಿಗೆಯು ನಾಯಕ ವೃತ್ತದಿಂದ ಪಿ.ಬಿ.ರಸ್ತೆಗೆ ಮೆರವಣಿಗೆ ತಲುಪಿದಾಗ ಮತ್ತೆ ಪರಿಸ್ಥಿತಿಯು ಕೈಮೀರಿದ್ದು, ಕಲ್ಲು ತೂರಾಟ ನಡೆಯಿತು. ಮೆರವಣಿಗೆಯಲ್ಲಿ ಇದ್ದವು ದಾರಿಯ ಉದ್ದಕ್ಕೂ 'ಜೈಶ್ರೀರಾಮ್' ಘೋಷಣೆ ಮೊಳಗಿತು.

ರೋಟರಿ ಚಿತಾಗಾರದ ಸಮೀಪವೇ ಇರುವ ರಾಜೀವ್‌ಗಾಂಧಿ ಬಡಾವಣೆಯ ಬಡವರ್ಗದ ಜನರ ಮನೆಗಳಿಗೆ ನುಗ್ಗಿದ 500ಕ್ಕೂ ಹೆಚ್ಚು ಯುವಕರಿದ್ದ ಗುಂಪು ಎರಡು ಮನೆಗಳನ್ನು ಅಕ್ಷರಶಃ ಲೂಟಿ ಮಾಡಿತು. ಸಾಮಗ್ರಿಗಳನ್ನು ಬೀದಿಗೆ ಎಸೆದು ಕೇಕೆ ಹಾಕಿತು. ಸಿಕ್ಕಸಿಕ್ಕವರ ಮೇಲೆ ಹಲ್ಲೆ ನಡೆಸಿತು. ಗುಂಪಿನ ಆರ್ಭಟಕ್ಕೆ ಮೆರವಣಿಗೆಯಲ್ಲಿ ಭಾಗವಹಿಸಿದ್ದ ಸಚಿವರಾದ ಕೆ.ಎಸ್. ಈಶ್ವರಪ್ಪ, ಸಂಸದ ಬಿ.ವೈ.ರಾಘವೇಂದ್ರ, ಜಿಲ್ಲಾಧಿಕಾರಿ ಸೆಲ್ವಮಣಿ, ಎಡಿಜಿಪಿ ಎಸ್.ಮುರುಗನ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಿಪ್ರಸಾದ್ ಅವರೇ ದಂಗಾಗಿ ಹೋದರು.

ಕೊರೊನಾದಿಂದ ನಲುಗಿದ್ದ ಬೀದಿ ವ್ಯಾಪಾರಿಗಳು, ಹಣ್ಣು, ತರಕಾರಿ ಅಂಗಡಿಗಳ ಮಾಲೀಕರು ಜೀವನಕ್ಕೆ ಆಸರೆಯಾಗಿದ್ದ ಸಾಮಗ್ರಿ ಕಳೆದುಕೊಂಡು ರೋದಿಸಿದರು. ಕೆಲಹೊತ್ತಿನ ನಂತರ ಅಳಿದುಳಿದ ಸಾಮಗ್ರಿ ಜೋಪಾನ ಮಾಡುತ್ತಿದ್ದ ದೃಶ್ಯ ಮನಕಲಕುವಂತಿತ್ತು.

**20ಕ್ಕೂ ಹೆಚ್ಚು ಜನರಿಗೆ ಗಾಯ:** ಮೆರವಣಿಗೆಗೂ ಮೊದಲು ಆಜಾದ್ ನಗರ, ಬಿ.ಬಿ.ರಸ್ತೆ, ಸೀಗೆಹಟ್ಟಿ, ಆರ್‌ಎಂಎಲ್ ನಗರ, ಸೀಗೆಹಟ್ಟಿ ಸುತ್ತಮುತ್ತ ಕಲ್ಲುತೂರಾಟ ನಡೆದಿತ್ತು. ಇಬ್ಬರು ಛಾಯಾಗ್ರಾಹಕರೂ ಸೇರಿ 20ಕ್ಕೂ ಹೆಚ್ಚು ಜನರಿಗೆ ಗಾಯಗಳಾಗಿವೆ. ಅವರಿಗೆ ಮೆಗ್ಗಾನ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿದೆ.

ಸಂಜೆ ರೋಟರಿ ಚಿತಾಗಾರದಲ್ಲಿ ಮೃತ ಯುವಕನ ತಂದೆ ನಾಗರಾಜ್ ಅಂತ್ಯಸಂಸ್ಕಾರ ನೆರವೇರಿಸಿದರು.

### 'ಮುಸ್ಲಿಂ ಗೂಂಡಾಗಳ ಕೃತ್ಯ'

ಶಿವಮೊಗ್ಗ: ಹರ್ಷ ಕೊಲೆ ಹಾಗೂ ಮೆರವಣಿಗೆ ಸಮಯದಲ್ಲಿ ನಡೆದ ದೊಂಬಿ ನಗರದ ಹೊರಗಿನ ಮುಸ್ಲಿಂ ಗೂಂಡಾಗಳ ಕೃತ್ಯ. ಘಟನೆಯನ್ನು ರಾಷ್ಟ್ರೀಯ ತನಿಖಾ ದಳದಿಂದ ತನಿಖೆ ಮಾಡಿಸಬೇಕು ಎಂದು ಗ್ರಾಮೀಣಾಭಿವೃದ್ಧಿ ಸಚಿವ, ನಗರದ ಶಾಸಕ ಕೆ.ಎಸ್.ಈಶ್ವರಪ್ಪ ಆಗ್ರಹಿಸಿದರು.

ಹಿಂದೂ ಸಂಘಟನೆಯ ಕಾರ್ಯಕರ್ತನ ಹತ್ಯೆ, ಗಲಭೆಯ ಹಿಂದೆ ದೊಡ್ಡ ಷಡ್ಯಂತ್ರವೇ ಇದೆ. ಹರ್ಷ ಅವರ ಪಾರ್ಥಿವ ಶರೀರದ ದರ್ಶನಕ್ಕೆ ಹೋದಾಗಲೇ ಹೊರಗಿನ ಹೆಚ್ಚಿನ ಶಕ್ತಿಗಳು ಅಲ್ಲಿರುವುದು ಗಮನಕ್ಕೆ ಬಂತು. ತಕ್ಷಣವೇ ಅವರ ಕುಟುಂಬದವರಿಗೆ ತಿಳಿಸಿದೆ. ಮೆರವಣಿಗೆಯಲ್ಲಿ ಭಾಗವಹಿಸಿದವರು ಹಿಂದೂಗಳ ಅಂಗಡಿ, ಮನೆಗಳ ಮೇಲೂ ದಾಳಿ ನಡೆಸಿರುವುದು ಸಂಶಯಕ್ಕೆ ಇನ್ನಷ್ಟು ಪುಷ್ಟಿ ನೀಡಿದೆ ಎಂದರು.



ಶಿವಮೊಗ್ಗ ಗಾಂಧಿ ಬಜಾರ್‌ನಲ್ಲಿ ಪರಸ್ಪರ ಕಲ್ಲುತೂರಾಟದಲ್ಲಿ ತೊಡಗಿದ್ದ ಎರಡು ಕೋಮಿನ ಯುವಕರು.–ಪ್ರಜಾವಾಣಿ ಚಿತ್ರ: ಶಿವಮೊಗ್ಗ ನಾಗರಾಜ್.

### ಹರ್ಷನ ವಿರುದ್ಧ ನಾಲ್ಕು ಪ್ರಕರಣ

ಶಿವಮೊಗ್ಗ: ಬಜರಂಗ ದಳ, ವಿಶ್ವ ಹಿಂದೂ ಪರಿಷತ್ ಸಂಘಟನೆಗಳಲ್ಲಿ ಸಕ್ರಿಯವಾಗಿದ್ದ ಮೃತ ಹರ್ಷ ವಿರುದ್ಧ ಇಲ್ಲಿನ ದೊಡ್ಡಪೇಟೆ ಠಾಣೆಯಲ್ಲಿ ನಾಲ್ಕು ಪ್ರಕರಣಗಳು ದಾಖಲಾಗಿದ್ದವು. ಇತರೆ ಕೋಮಿನ ಯುವಕರ ಜತೆ ಸಂಘರ್ಷ, ಇತರೆ ಕೋಮುಗಳ ಭಾವನೆ ಕೆರಳಿಸುವ ಪೋಸ್ಟರ್‌ಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಅಪ್‌ಲೋಡ್ ಮಾಡಿದ ಆರೋಪ ಅವರ ಮೇಲಿತ್ತು. ಜೀವ ಬೆದರಿಕೆ ಇದ್ದ ಬಗ್ಗೆ ಸಂಘಟನೆಯ ಗಮನಕ್ಕೆ ತಂದರೂ ಯಾರೂ ಜೀವ ಉಳಿಸಲಿಲ್ಲ ಎಂದು ಮೃತನ ಸಂಬಂಧಿಕರು ದೂರಿದರು.

ಹರ್ಷ ಶಿವಮೊಗ್ಗ ನಗರದ ಎಂಜಿನಿಯರ್ ಬಳಿ ಸಹಾಯಕನಾಗಿ ಕೆಲಸ ಮಾಡಿಕೊಂಡಿದ್ದರು. ಹಿಂದುತ್ವ, ಗೋ ರಕ್ಷಣೆಯಂತಹ ವಿಚಾರಗಳಲ್ಲಿ ಸದಾ ಧ್ವನಿ ಎತ್ತುತ್ತಿದ್ದರು.

'ಹರ್ಷ ಎಂದು ಹಿಂದೂ ಹೆಸರು ಇಟ್ಟಿದ್ದೇ ತಪ್ಪಾಯ್ತಾ? ಜೈಶ್ರೀರಾಮ್ ಎಂದುಕೊಂಡೇ ಸತ್ತುಹೋದ. ಆರೋಪಿಗಳು ಯಾರೇ ಆಗಲಿ ಅವರಿಗೆ ಶಿಕ್ಷೆ ಆಗಬೇಕು. ಕುಟುಂಬಕ್ಕೆ ಸಹಾಯ ಮಾಡಬೇಕು' ಎಂದು ಮೃತನ ಅಕ್ಕ ಅಶ್ವಿನಿ ಗೃಹ ಸಚಿವ ಆರಗ ಜ್ಞಾನೇಂದ್ರ ಅವರ ಮುಂದೆ ಕಣ್ಣೀರು ಹಾಕಿದರು.

**ಹರ್ಷ ಹತ್ಯೆ ಸಂಬಂಧ ಮಾಹಿತಿ ಪಡೆದಿದ್ದೇನೆ. ಮುಖ್ಯಮಂತ್ರಿಗಳು, ಗೃಹ ಸಚಿವರು ಜೊತೆ ಕೂಡ ಮಾತನಾಡಿದ್ದೇನೆ. ಪರಿಸ್ಥಿತಿ ನಿಯಂತ್ರಣದಲ್ಲಿದೆ.**
**ಕೆ.ಸಿ.ನಾರಾಯಣಗೌಡ,** ಜಿಲ್ಲಾ ಉಸ್ತುವಾರಿ ಸಚಿವ

**ಹರ್ಷ ಹತ್ಯೆಯ ಹಿಂದೆ ಸಂಘಟನೆಗಳು ಇರುವ ಯಾವುದೇ ಮಾಹಿತಿಲ್ಲ. ಮೂವರು ಆರೋಪಿಗಳನ್ನು ವಶಕ್ಕೆ ಪಡೆಯಲಾಗಿದೆ. ಶೀಘ್ರ ಸ್ಪಷ್ಟಚಿತ್ರಣ ದೊರಕಲಿದೆ.**
**ಆರಗ ಜ್ಞಾನೇಂದ್ರ,** ಗೃಹ ಸಚಿವ

## ಹತ್ಯೆ: ದುಷ್ಕರ್ಮಿಗಳ ಪತ್ತೆಗೆ ಕ್ರಮ

ಶಿವಮೊಗ್ಗ: ಬಜರಂಗದಳದ ಕಾರ್ಯಕರ್ತನಾದ ಹರ್ಷ ಹತ್ಯೆಯ ಇಬ್ಬರು ಆರೋಪಿಗಳನ್ನು 24 ತಾಸುಗಳ ಒಳಗೆ ಶಿವಮೊಗ್ಗ ಪೊಲೀಸರನ್ನು ಒಳಗೊಂಡ ವಿಶೇಷ ತನಿಖಾ ತಂಡ ಬಂಧಿಸಿದೆ.

ಶಿವಮೊಗ್ಗ ಬುದ್ಧ ನಗರದ ಖಾಸಿಫ್ (30), ಜೆಪಿ ನಗರದ ಸೈಯ್ಯದ್ ನದೀಂ (20) ಬಂಧಿತ ಆರೋಪಿಗಳು.

'ಆರೋಪಿಗಳ ಪತ್ತೆಗೆ ಡಿಎಸ್‌ಪಿಗಳ ನೇತೃತ್ವದಲ್ಲಿ ನಾಲ್ಕು ತಂಡ ರಚಿಸಲಾಗಿತ್ತು. ಕೊಲೆಯ ನಂತರ ರಾತ್ರಿ ತಾಳಗುಪ್ಪ–ಬೆಂಗಳೂರು ಎಕ್ಸ್‌ಪ್ರೆಸ್ ರೈಲಿನ ಮೂಲಕ ಬೆಂಗಳೂರಿಗೆ ಹೋಗಿದ್ದರು. ಅಲ್ಲಿಗೆ ತೆರಳಿದ ವಿಶೇಷ ತನಿಖಾ ತಂಡ ಇಬ್ಬರನ್ನು ಬಂಧಿಸಿದೆ. ಉಳಿದ ಇಬ್ಬರ ಪತ್ತೆ ಕಾರ್ಯ ಮುಂದುವರಿದಿದೆ' ಎಂದು ಎಡಿಜಿಪಿ ಎಸ್.ಮುರುಗನ್ ಪ್ರತಿಕ್ರಿಯಿಸಿದರು.

**ಬೆಂಗಳೂರು ವರದಿ:** 'ಹತ್ಯೆ ಬಳಿಕ ಶಿವಮೊಗ್ಗದಿಂದ ಪರಾರಿಯಾಗಿದ್ದ ಇಬ್ಬರು, ರೈಲಿನ ಮೂಲಕ ಬೆಂಗಳೂರಿಗೆ ಸೋಮವಾರ ನಸುಕಿನಲ್ಲಿ ಬಂದಿದ್ದರು. ಜಗಜೀವನ್‌ರಾಮ್‌ನಗರ ಠಾಣೆ ವ್ಯಾಪ್ತಿಯ ಪಾದರಾಯನಪುರದಲ್ಲಿ ಆಶ್ರಯ ಪಡೆದಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಶಿವಮೊಗ್ಗ ಪೊಲೀಸರ ವಿಶೇಷ ತಂಡ, ಸ್ಥಳೀಯ ಪೊಲೀಸರ ನೆರವಿನಿಂದ ಇಬ್ಬರನ್ನು ವಶಕ್ಕೆ ಪಡೆದು ಕರೆದೊಯ್ದಿದೆ. ಅವರಿಬ್ಬರೂ ಶಿವಮೊಗ್ಗ ನಿವಾಸಿಗಳೆಂಬುದು ಗೊತ್ತಾಗಿದೆ. ಈ ಬಗ್ಗೆ ಪೊಲೀಸ್ ಇಲಾಖೆಯ ಉನ್ನತ ಅಧಿಕಾರಿಗಳಿಗೆ ಮಾತ್ರ ಮಾಹಿತಿ ನೀಡಲಾಗಿದೆ' ಎಂದೂ ತಿಳಿಸಿವೆ.

**ಮೊಬೈಲ್ ಸ್ವಿಚ್ ಆಫ್:** 'ಪ್ರಮುಖ ಆರೋಪಿ ಎನ್ನಲಾದ ವ್ಯಕ್ತಿ ಶಿವಮೊಗ್ಗದಲ್ಲಿ ತಲೆಮರೆಸಿಕೊಂಡಿದ್ದ. ಆತನನ್ನು ವಶಕ್ಕೆ ಪಡೆದಿದ್ದ ಪೊಲೀಸರು, ವಿಚಾರಣೆ ನಡೆಸಿದ್ದರು. ಹತ್ಯೆಯಲ್ಲಿ ಭಾಗಿಯಾಗಿದ್ದ ಇಬ್ಬರು, ಬೆಂಗಳೂರಿಗೆ ಹೋಗಿದ್ದ ಬಗ್ಗೆ ಆತ ಬಾಯ್ಬಿಟ್ಟಿದ್ದ' ಎಂದು ಮೂಲಗಳು ಹೇಳಿವೆ.

'ಹರ್ಷ ಅವರ ಹತ್ಯೆಯಾಗುತ್ತಿದ್ದಂತೆ ಮೊಬೈಲ್ ಸ್ವಿಚ್ ಆಫ್ ಮಾಡಿದ್ದ ಇಬ್ಬರು, ಶಿವಮೊಗ್ಗ ರೈಲು ನಿಲ್ದಾಣಕ್ಕೆ ಬಂದಿದ್ದರು. ರಾತ್ರಿ ಬೆಂಗಳೂರಿಗೆ ಹೊರಡುವ ರೈಲು ಹತ್ತಿದ್ದರು. ನಸುಕಿನ 5 ಗಂಟೆಗೆ ಬೆಂಗಳೂರಿಗೆ ಬಂದಿಳಿದಿದ್ದರು' ಎಂದೂ ತಿಳಿಸಿವೆ.

### ಈಶ್ವರಪ್ಪ ಹೇಳಿಕೆ ಸರಿಯಲ್ಲ'

ಮೈಸೂರು: 'ಡಿ.ಕೆ.ಶಿವಕುಮಾರ್ ಅವರ ಹೇಳಿಕೆಯಿಂದ ಪ್ರಚೋದನೆಗೊಂಡು ಶಿವಮೊಗ್ಗದಲ್ಲಿ ಕೊಲೆ ನಡೆದಿದೆ ಎಂಬ ಸಚಿವ ಕೆ.ಎಸ್.ಈಶ್ವರಪ್ಪ ಅವರ ಹೇಳಿಕೆ ಸರಿಯಲ್ಲ. ಅವರದ್ದೇ ಸರ್ಕಾರವಿದೆ. ತಪ್ಪಿತಸ್ಥರನ್ನು ಬಂಧಿಸಲಿ' ಎಂದು ಕಾಂಗ್ರೆಸ್ ಮುಖಂಡ ಡಾ.ಎಚ್.ಸಿ.ಮಹದೇವಪ್ಪ ಒತ್ತಾಯಿಸಿದರು.

ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕೊಲೆಯಾದವರು ಯಾವುದೇ ಧರ್ಮದವರಾಗಿದ್ದರೂ ಘಟನೆ ಖಂಡನೀಯ. ಆರೋಪಿಗಳನ್ನು ಕೂಡಲೇ ಬಂಧಿಸಬೇಕು' ಎಂದರು.

'ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಕುಸಿದಿದೆ. ಹೇಳುವವರು, ಅರಾಜಕತೆಯಡೆಗೆ ಹೋಗುತ್ತಿದೆ.' ಎಂದು ಆರೋಪಿಸಿದರು.

## ಎನ್‌ಐಎ ತನಿಖೆಗೆ ಆಗ್ರಹ

ಬೆಂಗಳೂರು: ಶಿವಮೊಗ್ಗದಲ್ಲಿ ಬಜರಂಗದಳದ ಕಾರ್ಯಕರ್ತ ಹರ್ಷ ಕೊಲೆ ಪ್ರಕರಣದ ತನಿಖೆಯನ್ನು ರಾಷ್ಟ್ರೀಯ ತನಿಖಾ ದಳಕ್ಕೆ (ಎನ್‌ಐಎ) ವಹಿಸುವಂತೆ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಹಾಗೂ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಆಗ್ರಹಿಸಿದ್ದಾರೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದಿರುವ ಶೋಭಾ, 'ಹರ್ಷ ಕೊಲೆಯ ಹಿಂದೆ ಭಾರಿ ಷಡ್ಯಂತ್ರಗಳಿರುವುದು ಕಂಡುಬರುತ್ತಿದೆ. ಹಿಂದುತ್ವ ಪರ ಸಂಘಟನೆಗಳಲ್ಲಿ ಗುರುತಿಸಿಕೊಂಡವರ ಹತ್ಯೆ ಹಿಂದೆಯೂ ನಡೆದಿದೆ. ಬೆಂಗಳೂರಿನ ರುದ್ರೇಶ್ ಕೊಲೆಯನ್ನು ಪಿಎಫ್‌ಐ ಸದಸ್ಯರು ಮಾಡಿದ್ದು ಸಾಬೀತಾಗಿದೆ'. ಹರ್ಷ ಕೊಲೆಯ ಹಿಂದಿರುವ ಪಿತೂರಿ ಪತ್ತೆಗೆ ಎನ್‌ಐಎಗೆ ವರ್ಗಾಯಿಸಬೇಕು' ಎಂದು ಒತ್ತಾಯಿಸಿದ್ದಾರೆ.

ಇದೇ ಪ್ರಕರಣ ಕುರಿತು ಟ್ವೀಟ್ ಮಾಡಿರುವ ರವಿ, 'ಹರ್ಷ ಕೊಲೆಯ ಹಿಂದೆ ಬಲವಾದ ಸಂಚು ನಡೆದಿರುವ ಶಂಕೆಯಿದೆ. ಸರ್ಕಾರವು ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಬೇಕು, ಅಗತ್ಯವಿದ್ದಲ್ಲಿ ಪ್ರಕರಣದ ತನಿಖೆಯನ್ನು ಎನ್‌ಐಎಗೆ ವಹಿಸಬೇಕು' ಎಂದು ಆಗ್ರಹಿಸಿದ್ದಾರೆ.

### 'ಎಸ್‌ಡಿಪಿಐ, ಪಿಎಫ್‌ಐ ನಿಷೇಧಿಸಿ'

'ಶಿವಮೊಗ್ಗದ ಬಜರಂಗದಳ ಕಾರ್ಯಕರ್ತ ಹರ್ಷ ಕೊಲೆಯ ಹಿಂದೆ ಎಸ್‌ಡಿಪಿಐ ಮತ್ತು ಪಿಎಫ್‌ಐ ಸದಸ್ಯರಿದ್ದಾರೆ. ಈ ಎರಡೂ ಸಂಘಟನೆಗಳನ್ನು ನಿಷೇಧಿಸಬೇಕು' ಎಂದು ವಿಶ್ವ ಹಿಂದೂ ಪರಿಷತ್ ಆಗ್ರಹಿಸಿದೆ.

'ಎಸ್‌ಡಿಪಿಐ ಮತ್ತು ಪಿಎಫ್‌ಐ ಸದಸ್ಯರು ಹಲವು ವರ್ಷಗಳಿಂದ ನಿರಂತರವಾಗಿ ಹಿಂದೂಗಳ ಹತ್ಯೆ ಮಾಡುತ್ತಿದ್ದಾರೆ. ಕೇರಳದಿಂದ ಬಂದು ಕರ್ನಾಟಕದಲ್ಲಿ ಹತ್ಯೆಗಳನ್ನು ಮಾಡುತ್ತಿದ್ದಾರೆ' ಎಂದು ವಿಎಚ್‌ಪಿ ರಾಜ್ಯ ಸಂಘಟನಾ ಕಾರ್ಯದರ್ಶಿ ಬಸವರಾಜ ಆರೋಪಿಸಿದ್ದಾರೆ.

## ಹತ್ಯೆಗೆ ಆಕ್ರೋಶ, ಶಿವಮೊಗ್ಗ ಉದ್ವಿಗ್ನ

ಒಂದನೇ ಪುಟದಿಂದ

ಹೆಚ್ಚಿನ ಸಂಖ್ಯೆಯಲ್ಲಿದ್ದ ಪೊಲೀಸರು ಕ್ಷಿಪ್ರ ಕಾರ್ಯಾಚರಣೆ ನಡೆಸಿ ಪರಿಸ್ಥಿತಿ ಹತೋಟಿಗೆ ತಂದರು.

ಸೀಗೆಹಟ್ಟಿಯ ಪೆಟ್ರೋಲ್ ಬಂಕ್ ಬಳಿ ಭಾನುವಾರ ರಾತ್ರಿ ಬಜರಂಗ ದಳದ ಕಾರ್ಯಕರ್ತ ಹರ್ಷ (28) ಅವರನ್ನು ಬರ್ಬರವಾಗಿ ಹತ್ಯೆ ಮಾಡಲಾಗಿತ್ತು. ಸೋಮವಾರ ಬೆಳಿಗ್ಗೆ ಶವಾಗಾರದ ಬಳಿ ಗುಂಪುಗೂಡಿದ ಹಲವರು ದುಷ್ಕರ್ಮಿಗಳ ಪತ್ತೆ, ಕಠಿಣ ಕ್ರಮಕ್ಕೆ ಆಗ್ರಹಪಡಿಸಿದರು.

ಆಕ್ರೋಶವು ವಿವಿಧೆಡೆ ಪ್ರತಿಧ್ವನಿಸಿತು. ಕೆಲವು ಬಡಾವಣೆಗಳಲ್ಲಿ ದ್ವಿಚಕ್ರ ವಾಹನಗಳಿಗೆ ಬೆಂಕಿ ಹಚ್ಚಲಾಗಿತ್ತು. ಈ ಮಧ್ಯೆ ವಿಶ್ವಹಿಂದೂ ಪರಿಷತ್, ಬಜರಂಗ ದಳ ಒಳಗೊಂಡಂತೆ ವಿವಿಧ ಸಂಘಟನೆಗಳ ಮುಖಂಡರು ಪಾರ್ಥಿವ ಶರೀರದ ಮೆರವಣಿಗೆ ನಡೆಸಲು ಪಟ್ಟುಹಿಡಿದರು. ಅವರ ಒತ್ತಡಕ್ಕೆ ಮಣಿದ ಜಿಲ್ಲಾಡಳಿತ ಸೀಗೆಹಟ್ಟಿಯಿಂದ ವಿದ್ಯಾನಗರದ ರೋಟರಿ ಚಿತಾಗಾರದವರೆಗೂ ಮೆರವಣಿಗೆ ನಡೆಸಲು ಸಮ್ಮತಿಸಿತು.

ಸಿದ್ದಯ್ಯ ರಸ್ತೆಗೆ ಮೆರವಣಿಗೆ ಬರುತ್ತಿದ್ದಂತೆ ಉದ್ರಿಕ್ತರು ಅಂಗಡಿಗಳು, ಮನೆಗಳ ಮೇಲೆ ಕಲ್ಲುತೂರಾಟ ನಡೆಸಿದರು. ತಳ್ಳುಗಾಡಿಗಳು, ಹಣ್ಣಿನ ಅಂಗಡಿಗಳು ಆಕ್ರೋಶಕ್ಕೆ ಗುರಿಯಾದವು. ವಾಣಿಜ್ಯ ಮಳಿಗೆಗಳು, ಮನೆಗಳ ಕಿಟಕಿ–ಗಾಜುಗಳನ್ನು ಪುಡಿಗಟ್ಟಿದರು. ನೂರಕ್ಕೂ ಹೆಚ್ಚು ಬೈಕ್‌ಗಳು, ಕೆಲವು ಆಟೊರಿಕ್ಷಾ, ಕಾರುಗಳು ಬೆಂಕಿಗೆ ಆಹುತಿಯಾದವು.

ಕೈಗೆ ಸಿಕ್ಕ ವಸ್ತುಗಳನ್ನು ಮನಸೋಇಚ್ಛೆ ಎಳೆದಾಡಿ ಬೀದಿಗೆ ಬಿಸಾಡಿದರು. ಮೆರವಣಿಗೆಯತ್ತ ಬೇರೆ ಬೀದಿಗಳಿಂದ ಕಲ್ಲುಗಳು ತೂರಿಬಂದವು. ಪ್ರತಿಯಾಗಿ ಮೆರವಣಿಗೆಯಲ್ಲಿ ಭಾಗವಹಿಸಿದ್ದ ಜನರೂ ಕಲ್ಲು ತೂರಿದರು. ಟೈರ್‌ಗಳಿಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದರು. ಈ ಹಂತದಲ್ಲಿ ಪರಿಸ್ಥಿತಿ ಕೈಮೀರುತ್ತಿದೆ ಎಂಬ ಸ್ಥಿತಿ ಕಂಡುಬಂದಿದ್ದು, ಗುಂಪು ಚದುರಿಸಲು ಗಾಳಿಯಲ್ಲಿ ಗುಂಡುಹಾರಿಸಿದರು. ಅಶ್ರುವಾಯು ಪ್ರಯೋಗಿಸಿದರು.

## ಗಲ್ಲು ಶಿಕ್ಷೆ ಆಗಬೇಕು: ಕಾಂಗ್ರೆಸ್

ಬೆಂಗಳೂರು: 'ಶಿವಮೊಗ್ಗದಲ್ಲಿ ಬಜರಂಗದಳ ಕಾರ್ಯಕರ್ತ ಹರ್ಷ ಕೊಲೆ ಪ್ರಕರಣದ ಆಪರಾಧಿಗಳು ಯಾವುದೇ ಸಂಘಟನೆಗೆ ಸೇರಿದ್ದರೂ, ಅವರನ್ನು ಬಂಧಿಸಿ ಗಲ್ಲು ಶಿಕ್ಷೆ ಆಗುವಂತೆ ಸರ್ಕಾರ ಕ್ರಮ ಕೈಗೊಳ್ಳಬೇಕು' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಈ ಘಟನೆ ಗಮನಿಸಿದರೆ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿರುವುದು ಸ್ಪಷ್ಟವಾಗುತ್ತದೆ' ಎಂದರು.

'ಈಶ್ವರಪ್ಪ, ಯಡಿಯೂರಪ್ಪ, ಗೃಹ ಸಚಿವ ಆರಗ ಜ್ಞಾನೇಂದ್ರ ಅವರ ಜಿಲ್ಲೆ ಶಿವಮೊಗ್ಗ. ಈ ಘಟನೆಗೆ ಈಶ್ವರಪ್ಪ ಮತ್ತು ಆರಗ ಜ್ಞಾನೇಂದ್ರ ಜವಾಬ್ದಾರರು. ಬೆಂಗಳೂರಿನಲ್ಲಿ ಕುಳಿತು ಕಾಂಗ್ರೆಸ್ ಅಥವಾ ಯಾರ ಮೇಲೋ ಆರೋಪ ಮಾಡುವುದಲ್ಲ' ಎಂದರು.

**ಕಠಿಣ ಕ್ರಮ:** 'ಶಿವಮೊಗ್ಗದಲ್ಲಿ ನಡೆದ ಕೃತ್ಯದಲ್ಲಿ ಭಾಗಿಯಾದವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಒತ್ತಾಯಿಸಿದರು.

'ಇಂಥ ಕೃತ್ಯ ನಡೆಯಬಾರದು. ಯಾರೂ ಕೂಡ ಕಾನೂನು ಕೈಗೆತ್ತಿಕೊಳ್ಳಬಾರದು. ಇಂಥ ತಪ್ಪು ಯಾರೇ ಮಾಡಿದ್ದರೂ ಅವರನ್ನು ಶಿಕ್ಷೆಗೆ ಒಳಪಡಿಸಬೇಕು. ಮೃತರ ಕುಟುಂಬಕ್ಕೆ ನ್ಯಾಯ ಸಿಗಬೇಕು' ಎಂದರು.

'ಡಿ.ಕೆ. ಶಿವಕುಮಾರ್ ಅವರ ಹೇಳಿಕೆಯಿಂದಲೇ ಇಂಥ ಘಟನೆ ನಡೆಯುತ್ತಿದೆ' ಎಂಬ ಈಶ್ವರಪ್ಪ ಅವರ ಆರೋಪದ ಬಗ್ಗೆ ಕೇಳಿದ ಪ್ರಶ್ನೆಗೆ, 'ಇಂಥ ಪ್ರಚೋದನಕಾರಿ ಹೇಳಿಕೆಗೆ ನಾನು ಉದ್ವೇಗಗೊಳ್ಳುವುದಿಲ್ಲ. ನಾನು ತಪ್ಪು ಮಾಡಿದ್ದರೆ ನನ್ನ ವಿರುದ್ಧ ಪ್ರಕರಣ ದಾಖಲಿಸಿ ಕ್ರಮ ಕೈಗೊಳ್ಳಬಹುದು' ಎಂದರು.

ಹಿಜಾಬ್ ಅಗತ್ಯ ಧಾರ್ಮಿಕ ಆಚರಣೆ ಅಲ್ಲ: ಸರ್ಕಾರದ ಪುನರುಚ್ಚಾರ

# 'ಸಮವಸ್ತ್ರದಲ್ಲಿ ಧಾರ್ಮಿಕ ಅಂಶ ಸಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಮವಸ್ತ್ರಕ್ಕೆ ಸಂಬಂಧಿಸಿದ ವಿಷಯದಲ್ಲಿ ನಿರ್ಧಾರ ಕೈಗೊಳ್ಳಲು ಆಯಾ ಶಿಕ್ಷಣ ಸಂಸ್ಥೆಗಳಿಗೆ ಸಂಪೂರ್ಣ ಸ್ವಾಯತ್ತತೆ ಇದೆ. ಆದರೆ, ಧಾರ್ಮಿಕ ಉಡುಗೆಯನ್ನು ಬಿಂಬಿಸುವ ಅಂಶವು ಸಮವಸ್ತ್ರದಲ್ಲಿ ಇರಬಾರದೆಂಬುದೇ ಸರ್ಕಾರದ ನಿಲುವು' ಎಂದು ಹೇಳುವ ಮೂಲಕ ಅಡ್ವೊಕೇಟ್ ಜನರಲ್ ಪ್ರಭುಲಿಂಗ ನಾವದಗಿ, 'ಇಸ್ಲಾಂನಲ್ಲಿ ಹಿಜಾಬ್ ಅಗತ್ಯ ಧಾರ್ಮಿಕ ಆಚರಣೆ ಅಲ್ಲ' ಎಂಬುದನ್ನು ಪುನರುಚ್ಚರಿಸಿದ್ದಾರೆ.

ಹಿಜಾಬ್ ಧರಿಸಿ ತರಗತಿ ಪ್ರವೇಶಿಸುವುದನ್ನು ನಿರ್ಬಂಧಿಸಿದ್ದ ಕೆಲ ಶಾಲೆ-ಕಾಲೇಜುಗಳ ನಿರ್ಧಾರ ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ದಾಖಲಾಗಿರುವ ಎಲ್ಲ ರಿಟ್ ಅರ್ಜಿಗಳ ವಿಚಾರಣೆಯನ್ನು, ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ, ನ್ಯಾಯಮೂರ್ತಿಗಳಾದ ಕೃಷ್ಣ ಎಸ್.ದೀಕ್ಷಿತ್ ಮತ್ತು ಖಾಜಿ ಜೈಬುನ್ನೀಸಾ ಮೊಹಿಯುದ್ದೀನ್ ಅವರಿದ್ದ ಮೂವರು ಸದಸ್ಯರ ಸಾಂವಿಧಾನಿಕ ನ್ಯಾಯಪೀಠ ಸೋಮವಾರ ಮುಂದುವರಿಸಿತು.

'ಹಿಜಾಬ್ ಧರಿಸುವುದು ಇಸ್ಲಾಮಿನ ಅಗತ್ಯ ಧಾರ್ಮಿಕ ಆಚರಣೆ ವ್ಯಾಪ್ತಿಗೆ ಒಳಪಡುವುದಿಲ್ಲ, ಹಿಜಾಬ್ ಧರಿಸುವ ಹಕ್ಕು ಸಂವಿಧಾನದ 19 (1) (ಎ) ಅಡಿಯಲ್ಲಿನ ಅಭಿವ್ಯಕ್ತಿ ಸ್ವಾತಂತ್ರ್ಯವಲ್ಲ, ಎಲ್ಲಾ ಧಾರ್ಮಿಕ ಚಟುವಟಿಕೆಗಳಿಗೂ ಸಂವಿಧಾನದ ರಕ್ಷಣೆಯಿಲ್ಲ, ಸಮವಸ್ತ್ರವನ್ನು ಸೂಚಿಸಲು ಕಾಲೇಜು ಅಭಿವೃದ್ಧಿ ಸಮಿತಿಗಳಿಗೆ (ಸಿಡಿಸಿ) ಅಧಿಕಾರ ನೀಡಿರುವ ಇದೇ 5ರ ಸರ್ಕಾರಿ ಆದೇಶವು ಶಿಕ್ಷಣ ಕಾಯ್ದೆಗೆ ಹೇಗೆ ಅನುಗುಣವಾಗಿದೆ' ಎಂಬಿತ್ಯಾದಿ ಅಂಶಗಳಿಗೆ ಸಂಬಂಧಿಸಿದಂತೆ ಪ್ರಭುಲಿಂಗ ಕೆ.ನಾವದಗಿ ತಮ್ಮ ವಾದ ಸರಣಿಯನ್ನು ಮುಂದುವರಿಸಿದರು.

'ಅರ್ಜಿದಾರರು ಕುರಾನ್ ಅನ್ನು ಉಲ್ಲೇಖಿಸುತ್ತಾ ಹಿಜಾಬ್ ಅಗತ್ಯ ಧಾರ್ಮಿಕ ಆಚರಣೆ ಎಂದು ಹೇಳಿದ್ದಾರೆ. ಆದರೆ, ಅದನ್ನು ಸಾಬೀತುಪಡಿಸುವ ದಿಸೆಯಲ್ಲಿ ಅವರು ನ್ಯಾಯಾಲಯದ ಮುಂದೆ ಒಂದೇ ಒಂದು ಸೂಕ್ತ ದಾಖಲೆಯನ್ನೂ ಪ್ರಸ್ತುಪಡಿಸಿಲ್ಲ. ಹೀಗಾಗಿ, ಈ ಸಾಂವಿಧಾನಿಕ ನ್ಯಾಯಪೀಠವು ಅಗತ್ಯ ಧಾರ್ಮಿಕ ಆಚರಣೆಯ ಕಾನೂನಿಗೆ ಸಂಬಂಧಿಸಿದಂತೆ ಅರ್ಜಿದಾರರು ಒದಗಿಸಿರುವ ದಾಖಲೆಗಳನ್ನು ಪರಿಶೀಲಿಸಬೇಕು' ಎಂದು ಮನವಿ ಮಾಡಿದರು.

'ಆಹಾರ ಮತ್ತು ಉಡುಪನ್ನು ಅಗತ್ಯ ಮೂಲಭೂತ ಆಚರಣೆ ಎಂದು ಪರಿಗಣಿಸಲು ಆಗದು' ಎಂದು ಶಿರೂರ ಮಠದ ಪ್ರಕರಣವನ್ನು ಉಲ್ಲೇಖಿಸಿದ ನಾವದಗಿ, 'ಸಂವಿಧಾನದ 25ನೇ ವಿಧಿಯು ಧಾರ್ಮಿಕ ಆಚರಣೆಯ ರಕ್ಷಣೆಗಳ ಬಗ್ಗೆ ವಿವರಿಸುತ್ತದೆ. ಆದರೆ, ಅಗತ್ಯ ಧಾರ್ಮಿಕ ಆಚರಣೆಯ ಬಗ್ಗೆ ಹೇಳಿಲ್ಲ. ಎಲ್ಲ ಧಾರ್ಮಿಕ ಚಟುವಟಿಕೆಗಳಿಗೂ ಸಂವಿಧಾನದ ರಕ್ಷಣೆಯಿಲ್ಲ ಎಂಬುದನ್ನು ಸುಪ್ರೀಂ ಕೋರ್ಟ್ ಈಗಾಗಲೇ ಶಬರಿಮಲೆ ಪ್ರಕರಣದಲ್ಲಿ ಸ್ಪಷ್ಟಪಡಿಸಿದೆ' ಎಂದು ವಿವರಿಸಿದರು.

'ಅನಗತ್ಯ ಮೌಢ್ಯಗಳನ್ನು ಧಾರ್ಮಿಕ ಆಚರಣೆಯ ಅಗತ್ಯ ಭಾಗವೆಂದು ಪರಿಗಣಿಸಲಾಗದು. ಮೊದಲಿಗೆ ಅಗತ್ಯ ಧಾರ್ಮಿಕ ಆಚರಣೆ ಹೇಗೆಂಬುದು ಸಾಬೀತಾಗಬೇಕು. ಇಂತಹ ಆಚರಣೆಗಳು ಸಾರ್ವಜನಿಕ ಸುವ್ಯವಸ್ಥೆಗೆ ವಿರುದ್ಧವಾಗಿರಬಾರದು. ಇಂತಹ ವಿಷಯಗಳನ್ನು ನ್ಯಾಯಪೀಠ ಪ್ರಾಯೋಗಿಕ ವಿಧಾನದಲ್ಲಿ ಮನಗಾಣಬೇಕು. ಯಾವುದು ಅತ್ಯಗತ್ಯ ಧಾರ್ಮಿಕ ಆಚರಣೆ ಮತ್ತು ಯಾವುದು ಅಲ್ಲ ಎಂಬುದರ ಬಗ್ಗೆ ಶಬರಿಮಲೆ ಪ್ರಕರಣದ ತೀರ್ಪನ್ನು ಪರಾಂಬರಿಸಬೇಕು' ಎಂದು ಮನವಿ ಮಾಡಿದರು.

ವಿಚಾರಣೆ ಮಧ್ಯದಲ್ಲಿ ನಾವದಗಿ ಅವರನ್ನು ನ್ಯಾಯಪೀಠ, 'ಶಿಕ್ಷಣ ಸಂಸ್ಥೆಗಳು ಹಿಜಾಬ್‌ಗೆ ಅನುಮತಿಸಿದರೆ, ನಿಮ್ಮದೇನಾದರೂ ಆಕ್ಷೇಪಣೆಗಳಿವೆಯೇ' ಎಂಬ ಪ್ರಶ್ನೆಗೆ, 'ಕರ್ನಾಟಕ ಶಿಕ್ಷಣ ಕಾಯ್ದೆ–1983 ರ ಅನುಸಾರ ಶಿಕ್ಷಣ ಸಂಸ್ಥೆಗಳಲ್ಲಿ ಜಾತ್ಯತೀತ ವಾತಾವರಣ ಇರಬೇಕು ಎಂದು ಅತ್ಯಂತ ಸ್ಪಷ್ಟವಾಗಿ ನಮೂದಿಸಲಾಗಿದೆ. ಒಂದು ವೇಳೆ ಸಂಸ್ಥೆಗಳು ಹಿಜಾಬ್‌ಗೆ ಅನುಮತಿ ನೀಡಿ, ಅದರಿಂದ ಸಮಸ್ಯೆಗಳು ಉದ್ಭವಿಸಿದಲ್ಲಿ ನಾವು ಸೂಕ್ತ ನಿರ್ಧಾರ ತೆಗೆದುಕೊಳ್ಳುತ್ತೇವೆ' ಎಂದು ತಿಳಿಸಿದರು. ವಿಚಾರಣೆಯನ್ನು ಮಂಗಳವಾರಕ್ಕೆ (ಫೆ.22) ಮುಂದೂಡಲಾಗಿದೆ.

### 'ಧಾರ್ಮಿಕ ಅಗತ್ಯ ಆಚರಣೆ ಸಾಬೀತುಪಡಿಸಬೇಕು'

'ಧಾರ್ಮಿಕವಾಗಿ ಅಗತ್ಯ ಆಚರಣೆ ಎಂದು ಹೇಳಬೇಕಾದರೆ ಅದನ್ನು ಸಾಬೀತುಪಡಿಸುವ ಅಂಶಗಳೂ ಮುಖ್ಯವಾಗುತ್ತವೆ. ಕುರಾನ್ ಪ್ರಕಾರ ಅಗತ್ಯ ಆಚರಣೆಗಳು ಎಂದು ಕೋರ್ಟ್ ಮೆಟ್ಟಿಲೇರಿದ್ದ ಈ ಹಿಂದಿನ ಪ್ರಕರಣಗಳಲ್ಲಿ ಅರ್ಜಿದಾರರು ಹೇಗೆ ವಿಫಲವಾಗಿದ್ದಾರೆ ಎಂಬುದಕ್ಕೆ ಹಲವು ನಿದರ್ಶನಗಳಿವೆ' ಎಂದ ಅಡ್ವೊಕೇಟ್ ಜನರಲ್, ಕೆಲವು ಪೂರ್ವ ನಿದರ್ಶನಗಳನ್ನು ವಿವರಿಸಿದರು.

- ಖುರೇಷಿ ಪ್ರಕರಣದಲ್ಲಿ ಕುರಾನ್ ಅನ್ನು ಉಲ್ಲೇಖಿಸುತ್ತಾ, 'ಪ್ರಾಣಿವಧೆ ಅಗತ್ಯ ಧಾರ್ಮಿಕ ಆಚರಣೆ' ಎಂದು 1959 ರಲ್ಲಿ ಅರ್ಜಿದಾರರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದ ಪ್ರಕರಣದಲ್ಲಿ ನಕಾರಾತ್ಮಕ ತೀರ್ಪು ಬಂದಿತ್ತು.
- 'ಇಸ್ಲಾಂನಲ್ಲಿ ಬಹುಪತ್ನಿತ್ವಕ್ಕೆ ರಕ್ಷಣೆ ಇದೆ' ಎಂದು ಹರಿಯಾಣದ ಜಾವೇದ್ ಪ್ರಕರಣದಲ್ಲಿ ವಾದಿಸಲಾಗಿತ್ತು. ಆದರೆ ಇದನ್ನು ಸುಪ್ರೀಂ ಕೋರ್ಟ್ ವಜಾ ಮಾಡಿತ್ತು.
- ಇಸ್ಮಾಯಿಲ್ ಫಾರೂಖಿ (ಬಾಬರಿ ಮಸೀದಿ) ಪ್ರಕರಣದಲ್ಲಿ ಸರ್ಕಾರವು ಮಸೀದಿಯನ್ನು ವಶಪಡಿಸಿಕೊಂಡಿತ್ತು. 'ಇಸ್ಲಾಂ ಪ್ರಕಾರ ಮಸೀದಿಯಲ್ಲಿ ಪ್ರಾರ್ಥನೆ ಮಾಡುವುದು ಮೂಲಭೂತ ತತ್ವವಾಗಿದೆ' ಎಂದು ಅರ್ಜಿದಾರರು ಪ್ರಶ್ನಿಸಿದ್ದರು. ಇದನ್ನು ನ್ಯಾಯಾಲಯ ಒಪ್ಪಿರಲಿಲ್ಲ.
- ಶಾಹೀರಾ ಬಾನು ಪ್ರಕರಣ. ಇದರಲ್ಲಿ ತ್ರಿವಳಿ ತಲಾಖ್ ಹೇಳುವುದರ ಕುರಿತಾದ ಅಗತ್ಯತೆಯನ್ನು ನ್ಯಾಯಾಲಯ ಮಾನ್ಯ ಮಾಡಲಿಲ್ಲ.
- 'ಬೆಂಗಳೂರಿನ ವಿಂಡ್ಸರ್ ಮ್ಯಾನರ್ ಹೋಟೆಲ್ ವಕ್ಫ್ ಮಂಡಳಿಯ ಆಸ್ತಿ. ಈ ವಕ್ಫ್ ಭೂಮಿಯನ್ನು ವಿಂಡ್ಸರ್ ಮ್ಯಾನರ್‌ಗೆ ಭೋಗ್ಯಕ್ಕೆ ನೀಡಲಾಗಿದೆ. ಇಲ್ಲಿ ವೈನ್ ಮತ್ತು ಹಂದಿ ಮಾಂಸ ಮಾರಾಟ ಪೂರೈಸಲಾಗುತ್ತದೆ. ಇದು ಇಸ್ಲಾಂಗೆ ವಿರುದ್ಧ' ಎಂದು ಆಕ್ಷೇಪಿಸಲಾಗಿತ್ತು. ಆದರೆ, ಈ ಅರ್ಜಿಯನ್ನು ಕರ್ನಾಟಕ ಹೈಕೋರ್ಟ್ ವಜಾ ಮಾಡಿತ್ತು.



**ಹಿಜಾಬ್ ಧರಿಸುವುದು ಇಸ್ಲಾಮ್‌ನಲ್ಲಿ ಅಗತ್ಯ ಎಂಬುದನ್ನು ಅರ್ಜಿದಾರರು ನ್ಯಾಯಪೀಠಕ್ಕೆ ಮನವರಿಕೆ ಮಾಡಿಕೊಡಬೇಕು.**
**ಪ್ರಭುಲಿಂಗ ನಾವದಗಿ,** ಅಡ್ವೊಕೇಟ್ ಜನರಲ್


ಬೆಳಗಾವಿಯ ಕೆಎಲ್‌ಇ ಸಂಸ್ಥೆಯ ಲಿಂಗರಾಜ ಕಾಲೇಜಿನ ಬಿ.ಕಾಂ. ವಿದ್ಯಾರ್ಥಿನಿಯರು ಹಿಜಾಬ್ ಧರಿಸಿ ಕಾಲೇಜಿಗೆ ಮತ್ತು ಆಂತರಿಕ ಪರೀಕ್ಷೆಗೆ ಹಾಜರಾಗಲು ಅವಕಾಶ ಕೋರಿ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು

## ಹಿಜಾಬ್: ಪ್ರಾಯೋಗಿಕ ಪರೀಕ್ಷೆಗೆ ವಿದ್ಯಾರ್ಥಿನಿಯರು ಗೈರು, ಧರಣಿ

ಒಂದನೇ ಪುಟದಿಂದ

ಅಂಕೋಲಾ ಪಟ್ಟಣದ ಕೆ.ಎಲ್.ಇ ಪದವಿ ಪೂರ್ವ ಕಾಲೇಜು, ಬಾಗಲಕೋಟೆ ನಗರದ ಬಸವೇಶ್ವರ ವಿಜ್ಞಾನ ಪದವಿಪೂರ್ವ ಕಾಲೇಜು, ವಿಜಯನಗರ ಜಿಲ್ಲೆ ಹರಪನಹಳ್ಳಿಯಲ್ಲಿ ಹಿಜಾಬ್ ತೆಗೆದು ತರಗತಿಗೆ ಬರಲು ನಿರಾಕರಿಸಿದ ವಿದ್ಯಾರ್ಥಿನಿಯರು ಮನೆಗೆ ಮರಳಿದ್ದಾರೆ.

**ಮೈಸೂರು ವರದಿ:** ಹಾಸನ ನಗರದ ವಿವಿಧ ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳ ಮುಸ್ಲಿಂ ವಿದ್ಯಾರ್ಥಿನಿಯರು ಪ್ರತಿಭಟನೆ ನಡೆಸಿದ್ದು, 'ಹಿಜಾಬ್ ಧರಿಸಲು ತರಗತಿಗೆ ಹಾಜರಾಗಲು ಅನುಮತಿ ಕೋರಿ' ಜಿಲ್ಲಾಧಿಕಾರಿ ಆರ್.ಗಿರೀಶ್ ಅವರಿಗೆ ಮನವಿ ಸಲ್ಲಿಸಿದರು.

ಮೈಸೂರಿನಲ್ಲಿ ನಡೆದ ದ್ವಿತೀಯ ಪಿಯು ಪ್ರಯೋಗಾಲಯ ಪರೀಕ್ಷೆಗೆ ಸೋಮವಾರ ಎಲ್ಲರೂ ಹಾಜರಾಗಿದ್ದರು. ನಂಜನಗೂಡು ತಾಲ್ಲೂಕಿನ ಕವಲಂದೆಯಲ್ಲಿ 13, ಮೈಸೂರು ತಾಲ್ಲೂಕಿನ ಕೆ.ಆರ್.ಮಿಲ್ ಸಮೀಪದ ಸರ್ಕಾರಿ ಪ್ರೌಢಶಾಲೆಯ ಇಬ್ಬರು ವಿದ್ಯಾರ್ಥಿನಿಯರು ಗೈರಾಗಿದ್ದರು.

ಚಿಕ್ಕಮಗಳೂರು ಜಿಲ್ಲೆಯ ಬಾಳೆಹೊನ್ನೂರು ಸರ್ಕಾರಿ ಪ್ರೌಢಶಾಲೆಯ 10 ಹಾಗೂ ಎನ್.ಆರ್.ಪುರದ ಸರ್ಕಾರಿ ಪಿಯು ಕಾಲೇಜಿನ ನಾಲ್ವರು ಮುಸ್ಲಿಂ ವಿದ್ಯಾರ್ಥಿನಿಯರು ಹಿಜಾಬ್ ತೆಗೆದು ಸೋಮವಾರ ತರಗತಿಗೆ ಹಾಜರಾದರು.

**ಸೋಮವಾರ ಪರೀಕ್ಷೆಗೆ ಗೈರು ಹಾಜರಾದ ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ದಿನ ಪರೀಕ್ಷೆ ನಡೆಸುವಂತೆ ಕಾಲೇಜಿನ ಪ್ರಾಚಾರ್ಯರಿಗೆ ಸೂಚಿಸಿದ್ದೇನೆ.**
**ಎಂ.ಜಿ. ಹಿರೇಮಠ,** ಜಿಲ್ಲಾಧಿಕಾರಿ, ಬೆಳಗಾವಿ

### ರಾಮನಗರ: ಪದವಿ ಕಾಲೇಜಿಗೆ ರಜೆ

ರಾಮನಗರ: ಹಿಜಾಬ್ ವಿವಾದದಿಂದಾಗಿ ಇಲ್ಲಿನ ಸರ್ಕಾರಿ ಪ್ರಥಮದರ್ಜೆ ಕಾಲೇಜಿಗೆ ನೀಡಿದ್ದ ರಜೆಯನ್ನು ಅನಿರ್ದಿಷ್ಟ ಅವಧಿಗೆ ವಿಸ್ತರಿಸಲಾಗಿದೆ. ಹಿಜಾಬ್ ಧರಿಸಲು ಅನುಮತಿಗೆ ಒತ್ತಾಯಿಸಿ ವಿದ್ಯಾರ್ಥಿನಿಯರ ಪ್ರತಿಭಟನೆಯಿಂದಾಗಿ ಇದೇ 17ರಿಂದ ಕಾಲೇಜಿಗೆ ರಜೆ ನೀಡಲಾಗಿದೆ. ವಿದ್ಯಾರ್ಥಿಗಳಿಗೆ ಆನ್‌ಲೈನ್ ತರಗತಿ ನಡೆಯುತ್ತಿವೆ.

### 'ಗೇಟ್ ಬಳಿಯೇ ಅಸೈನ್‌ಮೆಂಟ್'

ಮಂಗಳೂರು: ಹಿಜಾಬ್‌ಗೆ ಅನುಮತಿ ಕೋರಿ ತರಗತಿಗೆ ಗೈರುಹಾಜರಾಗಿರುವ, ಉಡುಪಿ ಜಿಲ್ಲೆ ಕುಂದಾಪುರದ ಸರ್ಕಾರಿ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿನಿಯರು, ಸೋಮವಾರ ಕಾಲೇಜಿನ ಗೇಟ್ ಬಳಿಯೇ ಉಪನ್ಯಾಸಕರಿಗೆ ಅಸೈನ್‌ಮೆಂಟ್ ಒಪ್ಪಿಸಿದರು.

ಪಿಯು ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳು ಆಂತರಿಕ ಅಂಕಕ್ಕಾಗಿ ಅಸೈನ್‌ಮೆಂಟ್ ಒಪ್ಪಿಸಬೇಕು. ನಾಲ್ವರು ವಿದ್ಯಾರ್ಥಿನಿಯರು ಮನೆಯಲ್ಲಿಯೇ ಅಸೈನ್‌ಮೆಂಟ್ ಸಿದ್ಧಪಡಿಸಿಕೊಂಡು ಬಂದಿದ್ದು, ಕಾಲೇಜು ಗೇಟ್‌ನಲ್ಲಿ ವಿಷಯದ ಉಪನ್ಯಾಸಕರಿಗೆ ಸಲ್ಲಿಸಿದರು. ಉಳಿದಂತೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತರಗತಿಗಳು ಸುಲಲಿತವಾಗಿ ನಡೆದವು.

ಜ್ವಲಂತ ಸಮಸ್ಯೆಗಳ ಚರ್ಚೆಗೆ ಜೆಡಿಎಸ್ ಪಟ್ಟು • ಆರನೇ ದಿನಕ್ಕೆ ಕಾಲಿಟ್ಟ ಕಾಂಗ್ರೆಸ್ ಧರಣಿ

# ಪರಿಷತ್‌ನಲ್ಲಿ ಗದ್ದಲ, ಮುಂದುವರಿದ ಧರಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಅವರನ್ನು ಸಚಿವ ಸಂಪುಟದಿಂದ ವಜಾಗೊಳಿಸುವಂತೆ ಒತ್ತಾಯಿಸಿ ಕಾಂಗ್ರೆಸ್ ಸದಸ್ಯರು ಸೋಮವಾರವೂ ವಿಧಾನಪರಿಷತ್‌ನಲ್ಲಿ ಸಭಾಪತಿ ಪೀಠದ ಮುಂದೆ ಧರಣಿ ನಡೆಸಿದರು.

ಕಲಾಪ ಆರಂಭವಾಗುತ್ತಿದ್ದಂತೆ, ಇತ್ತೀಚೆಗೆ ನಿಧನರಾದ ನಟ ರಾಜೇಶ್ ಅವರಿಗೆ ಸಂತಾಪ ಸೂಚಿಸಲಾಯಿತು. ಬಳಿಕ, ಕಾಂಗ್ರೆಸ್ ಸದಸ್ಯರು ಧರಣಿ ಮುಂದುವರಿಸಿದರು.

ಧರಣಿಗೆ ಆಕ್ಷೇಪ ವ್ಯಕ್ತಪಡಿಸಿದ ಜೆಡಿಎಸ್‌ನ ಕೆ.ಟಿ. ಶ್ರೀಕಂಠೇಗೌಡ, 'ಐದು ದಿನಗಳಿಂದ ಕಲಾಪ ನಡೆದಿಲ್ಲ. ರಾಜ್ಯದ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆಯಾಗಬೇಕು ಎನ್ನುವುದನ್ನು ಎರಡೂ ರಾಷ್ಟ್ರೀಯ ಪಕ್ಷಗಳು ಅರಿತುಕೊಳ್ಳಬೇಕು' ಎಂದರು.

ಕಾಂಗ್ರೆಸ್‌ನ ಆರ್.ಬಿ. ತಿಮ್ಮಾಪುರ, 'ವಿದ್ಯಾರ್ಥಿಗಳಲ್ಲಿ ವಿಷಬೀಜ ಬಿತ್ತುವ ಕಾರ್ಯ ನಡೆಯುತ್ತಿದೆ. ಜನರನ್ನು ತಪ್ಪುದಾರಿಗೆ ಎಳೆಯಲಾಗುತ್ತಿದೆ. ಸರ್ಕಾರಕ್ಕೆ ರಾಷ್ಟ್ರಧ್ವಜ ಮುಖ್ಯವೋ, ಮಂತ್ರಿ ಮುಖ್ಯವೋ ಎನ್ನುವುದನ್ನು ಸ್ಪಷ್ಟಪಡಿಸಬೇಕು' ಎಂದು ಆಗ್ರಹಿಸಿದರು.

'ಈಶ್ವರಪ್ಪ ಅವರು ಭಾವನಾತ್ಮಕ ವ್ಯಕ್ತಿ. ಅವರ ಪ್ರತಿಯೊಂದು ಹೇಳಿಕೆಗೆ ಹೆಚ್ಚಿನ ಮಹತ್ವ ನೀಡಬೇಕಾಗಿಲ್ಲ. ಸಮಸ್ಯೆಗಳ ಬಗ್ಗೆ ಚರ್ಚಿಸಬೇಕಾಗಿದೆ' ಎಂದು ಬಿಜೆಪಿಯ ಲೆಹರ್ ಸಿಂಗ್ ಹೇಳಿದರು.

ಧರಣಿ ನಡುವೆಯೇ ಪ್ರಶ್ನೋತ್ತರ ಮುಗಿಸಿದ ಸಭಾಪತಿ ಬಸವರಾಜ ಹೊರಟ್ಟಿ, ಕಲಾಪವನ್ನು ಮಧ್ಯಾಹ್ನ 3ಕ್ಕೆ ಮುಂದೂಡಿದರು. ಮಧ್ಯಾಹ್ನ ಕಲಾಪ ಮತ್ತೆ ಆರಂಭ ಆಗುತ್ತಿದ್ದಂತೆ ಕಾಂಗ್ರೆಸ್ ಸದಸ್ಯರು ಧರಣಿ ಮುಂದುವರಿಸಿದರು.

ಆಗ ಸಭಾನಾಯಕ ಕೋಟ ಶ್ರೀನಿವಾಸ ಪೂಜಾರಿ, 'ವಿರೋಧ ಪಕ್ಷದ ಸದಸ್ಯರು ಅಹೋರಾತ್ರಿ ಧರಣಿ ನಡೆಸುವ ಬದಲು, ಹಗಲು ರಾತ್ರಿ ಕಲಾಪ ನಡೆಸಿ ಎಂದು ಸವಾಲು ಹಾಕಿದರೆ ಅದಕ್ಕೆ ನಾವು ಸಿದ್ಧರಿದ್ದೇವೆ' ಎಂದರು.

ಬಿಜೆಪಿಯ ಎಂ.ಕೆ.ಪ್ರಾಣೇಶ್, 'ನಿಲುವಳಿಯನ್ನು ಸಭಾಪತಿ ತಿರಸ್ಕರಿಸಿದ ಬಳಿಕವೂ ಅದೇ ವಿಷಯ ಚರ್ಚೆ ಮಾಡಲು ಅವಕಾಶ ಇದೆಯೇ? ನಿಯಮ ಪಾಲಿಸದ ಸದಸ್ಯರನ್ನು ಸದನದಿಂದ ಹೊರಹಾಕಲು ಪೀಠಕ್ಕೆ ಅಧಿಕಾರ ಇದ್ದರೂ ಏಕೆ ಕ್ರಮ ಕೈಗೊಳ್ಳುತ್ತಿಲ್ಲ' ಎಂದು ಪ್ರಶ್ನಿಸಿದರು.

ಅದಕ್ಕೆ ಉತ್ತರಿಸಿದ ಸಭಾಪತಿ, 'ನಿಲುವಳಿ ಸೂಚನೆ ತಿರಸ್ಕರಿಸಿದ ಬಳಿಕ ಅದೇ ವಿಷಯ ಪ್ರಸ್ತಾಪಿಸಲು ಅವಕಾಶ ಇಲ್ಲ. ಅಲ್ಲದೆ, ನಿಲುವಳಿ ಸೂಚನೆಯಲ್ಲಿ ಈಶ್ವರಪ್ಪ ಹೆಸರು ಇರಲಿಲ್ಲ. ಆದರೂ ಪ್ರಸ್ತಾಪವಾಗಿದೆ. ಸದಸ್ಯರನ್ನು ಹೊರಹಾಕಿ ಕಲಾಪ ನಡೆಸುವುದು ಸರಿಯಲ್ಲ ಎನ್ನುವುದು ನನ್ನ ನಿಲುವು' ಎಂದರು.

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ. ಮಾಧುಸ್ವಾಮಿ, 'ಈಶ್ವರಪ್ಪ ಅವರ ಹೇಳಿಕೆ ರಾಷ್ಟ್ರದ್ರೋಹ ಎಂಬುವುದು ಮನವರಿಕೆಯಾಗಿಲ್ಲ. ಹೀಗಾಗಿ, ಅವರ ರಾಜೀನಾಮೆ ಪಡೆಯುವುದಿಲ್ಲ ಎಂಬ ನಿಲುವು ತೆಗೆದುಕೊಂಡಿದ್ದೇವೆ' ಎಂದರು.

ಅದಕ್ಕೆ ವಿರೋಧ ಪಕ್ಷದ ನಾಯಕ ಬಿ.ಕೆ.ಹರಿಪ್ರಸಾದ್, ಸಲಿಂ ಅಹ್ಮದ್, ಪ್ರಕಾಶ್ ರಾಥೋಡ್ ತಿರುಗೇಟು ನೀಡಲು ಮುಂದಾದಾಗ ಗದ್ದಲ ಉಂಟಾಯಿತು. ಬಿಜೆಪಿಯ ಆಯನೂರು ಮಂಜುನಾಥ್, ಭಾರತಿ ಶೆಟ್ಟಿ ಮಾತನಾಡಲು ಎದ್ದಾಗ ಕಾಂಗ್ರೆಸ್ ಸದಸ್ಯರು ಧಿಕ್ಕಾರ ಕೂಗಿದರು. ಬಳಿಕ, ಜೆಡಿಎಸ್‌ನ ಮರಿತಿಬ್ಬೇಗೌಡ ಮಾತನಾಡಲು ಮುಂದಾದಾಗ ಬಿಜೆಪಿ ಸದಸ್ಯರು ಧಿಕ್ಕಾರ ಕೂಗಿದರು.

ಈ ವೇಳೆ ಪೀಠದಿಂದ ಎದ್ದುನಿಂತ ಸಭಾಪತಿ, ಗದ್ದಲ ಮುಂದುವರಿದ ಕಾರಣ ಅವರು ಕಲಾಪವನ್ನು ಮಂಗಳವಾರಕ್ಕೆ ಮುಂದೂಡಿದರು.


ವಿಧಾನ ಪರಿಷತ್ ಕಲಾಪದಲ್ಲಿ ಸಚಿವ ಕೆ.ಎಸ್.ಈಶ್ವರಪ್ಪ ರಾಜೀನಾಮೆ ನೀಡಬೇಕೆಂದು ಆಗ್ರಹಿಸಿ ಕಾಂಗ್ರೆಸ್ ಸದಸ್ಯರು ಕೈಯಲ್ಲಿ ತ್ರಿವರ್ಣ ಧ್ವಜದ ಬ್ಯಾಂಡ್‌ಗಳನ್ನು ಧರಿಸಿ ಧರಣಿ ಮುಂದುವರಿಸಿದರು –ಪ್ರಜಾವಾಣಿ ಚಿತ್ರ

### 'ಕಲಾಪಕ್ಕೆ ಪ್ರತಿದಿನ ₹ 1 ಕೋಟಿ'

'ವಿಧಾನಮಂಡಲ ಅಧಿವೇಶನಕ್ಕೆ ಪ್ರತಿ ದಿನ ₹ 1 ಕೋಟಿ ವೆಚ್ಚವಾಗುತ್ತಿದೆ. ಜನರ ತೆರಿಗೆಯನ್ನು ಧರಣಿ, ಪ್ರತಿಭಟನೆ ಹೆಸರಿನಲ್ಲಿ ಪೋಲು ಮಾಡುವುದು ಸರಿಯಲ್ಲ. ಪ್ರತಿಭಟನೆಗೆ ಸಾಕಷ್ಟು ವೇದಿಕೆಗಳಿವೆ' ಎಂದು ಜೆಡಿಎಸ್‌ನ ವಿಧಾನ ಪರಿಷತ್ ಸದಸ್ಯ ಎಸ್.ಎಲ್. ಭೋಜೇಗೌಡ ಹೇಳಿದರು.

## ಶಾಲಾ ಸಮವಸ್ತ್ರ ನಿಯಮ ಪಾಲನೆ ಅಗತ್ಯ: ಅಮಿತ್ ಶಾ

ನವದೆಹಲಿ (ಪಿಟಿಐ): ಹಿಜಾಬ್ ವಿವಾದದ ಕುರಿತು ಪ್ರತಿಕ್ರಿಯಿಸಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ, ಎಲ್ಲ ಧರ್ಮದ ವಿದ್ಯಾರ್ಥಿಗಳು ಶಾಲೆ ಮತ್ತು ಕಾಲೇಜುಗಳಲ್ಲಿ ಸೂಚಿಸಿದ ಸಮವಸ್ತ್ರದ ನಿಯಮಗಳನ್ನು ಪಾಲಿಸಬೇಕು ಎಂದು ಹೇಳಿದ್ದಾರೆ.

'ಸಂದರ್ಶನದಲ್ಲಿ ಮಾತನಾಡಿರುವ ಅವರು, 'ಧರ್ಮವನ್ನು ಲೆಕ್ಕಿಸದೇ ಕಡ್ಡಾಯವಾಗಿ ಸಮವಸ್ತ್ರ ಧರಿಸುವ ನಿಮಯವನ್ನು ಪಾಲನೆ ಮಾಡಬೇಕು ಎಂಬುದು ತಮ್ಮ ವೈಯಕ್ತಿಕ ನಿಲುವು' ಎಂದು ತಿಳಿಸಿದ್ದಾರೆ.

'ಈ ವಿಷಯವು ನ್ಯಾಯಾಲಯದ ಪರಿಧಿಯಲ್ಲಿದ್ದು, ತೀರ್ಪನ್ನು ಎಲ್ಲರೂ ಒಪ್ಪಿಕೊಳ್ಳಬೇಕು. ನ್ಯಾಯಾಲಯದ ತೀರ್ಪು ನೀಡುವವರೆಗೂ ನನ್ನ ವೈಯಕ್ತಿಕ ನಿಲುವಿನಲ್ಲಿ ನಂಬಿಕೆ ಇರಿಸುತ್ತೇನೆ. ಆದರೆ ನ್ಯಾಯಾಲಯದ ತೀರ್ಪು ಏನೇ ಆದರೂ ಅದನ್ನು ಒಪ್ಪಿಕೊಳ್ಳುತ್ತೇನೆ' ಎಂದು ಹೇಳಿದ್ದಾರೆ.

'ಈ ವಿವಾದವನ್ನು ವಿರೋಧ ಪಕ್ಷಗಳು ರಾಜಕೀಯಗೊಳಿಸಲು ಬಯಸುತ್ತಿವೆ. ಆದರೆ ಅವು ಯಶಸ್ವಿಯಾಗುವುದಿಲ್ಲ' ಎಂದೂ ಅವರು ತಿಳಿಸಿದ್ದಾರೆ.






ವಿಧಾನಸಭಾ ಚುನಾವಣೆ: ಕಣದಲ್ಲಿ ಇರುವ ಮಹಿಳಾ ಅಭ್ಯರ್ಥಿಗಳ ಸಂಖ್ಯೆ 17 ಮಾತ್ರ

# ಮಣಿಪುರ: ಮಹಿಳೆಯರಿಗೆ ಇಲ್ಲ ಮನ್ನಣೆ

ಇಂಫಾಲ್ (ಪಿಟಿಐ): ಮಣಿಪುರ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಿರುವ ಮಹಿಳೆಯರ ಸಂಖ್ಯೆ 17 ಮಾತ್ರ. ಕಣದಲ್ಲಿರುವ ಅಭ್ಯರ್ಥಿಗಳ ಒಟ್ಟು ಸಂಖ್ಯೆ 265. ಮಹಿಳೆಯರಿಗೆ ಮೀಸಲಾತಿ ಸಿಗದೇ ಇದ್ದರೆ ಶಾಸನ ಸಭೆಯಲ್ಲಿ ಮಹಿಳಾ ಪ್ರಾತಿನಿಧ್ಯ ಹೆಚ್ಚಲು ಸಾಧ್ಯವೇ ಇಲ್ಲ ಎಂದು ಮಣಿಪುರದ ಮಹಿಳಾ ರಾಜಕೀಯ ನಾಯಕಿಯರು ಹೇಳುತ್ತಾರೆ.

ಮಣಿಪುರದಲ್ಲಿ ಪುರುಷ ಮತದಾರರಿಗಿಂತ ಮಹಿಳಾ ಮತದಾರರ ಸಂಖ್ಯೆ ಹೆಚ್ಚು. ಮಹಿಳಾ ಮತದಾರರು 10.57 ಲಕ್ಷ ಇದ್ದರೆ, ಪುರುಷ ಮತದಾರರ ಸಂಖ್ಯೆ 9.90 ಲಕ್ಷ. ಸಾಮಾಜಿಕ ಚಳವಳಿಗಳು ನಡೆದಾಗಲೆಲ್ಲ ಅದರ ಮುನ್ನೆಲೆಯಲ್ಲಿ ಮಹಿಳೆಯರೇ ನಿಂತಿದ್ದಾರೆ. ಆದರೆ, ರಾಜಕಾರಣದಲ್ಲಿ ಮಾತ್ರ ಪುರುಷ ಪ್ರಾಬಲ್ಯದ ಪರಂಪರೆಯಿಂದಾಗಿ ಮಹಿಳೆಯರು ಮುಂದಕ್ಕೆ ಬರುವುದು ಸಾಧ್ಯವಾಗುತ್ತಿಲ್ಲ.

ಪ್ರಮುಖ ಪಕ್ಷಗಳ ಪೈಕಿ, ಬಿಜೆಪಿ ಮತ್ತು ಕಾಂಗ್ರೆಸ್ ತಲಾ ಮೂವರು ಮಹಿಳಾ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಿವೆ. ನ್ಯಾಷನಲಿಸ್ಟ್ ಕಾಂಗ್ರೆಸ್ ಪಾರ್ಟಿ (ಎನ್‌ಸಿಪಿ) ಮತ್ತು ನ್ಯಾಷನಲ್ ಪೀಪಲ್ಸ್ ಪಾರ್ಟಿ (ಎನ್‌ಪಿಪಿ) ತಲಾ ಇಬ್ಬರು ಮಹಿಳೆಯರಿಗೆ ಟಿಕೆಟ್ ನೀಡಿವೆ. ರಾಜಕೀಯವಾಗಿ ಸಶಕ್ತಗೊಳಿಸದೆ ಮಹಿಳೆಯರು ಪ್ರಬಲರಾಗುವುದು ಸಾಧ್ಯವಿಲ್ಲ ಎಂದು ಮಹಿಳಾ ನಾಯಕಿಯರು ವಾದಿಸುತ್ತಾರೆ.



ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಅವರು ಇಂಫಾಲ್‌ನಲ್ಲಿ ಸೋಮವಾರ ಚುನಾವಣಾ ಪ್ರಚಾರ ನಡೆಸಿದರು ಪಿಟಿಐ ಚಿತ್ರ

‘ಎಲ್ಲ ರಂಗಗಳಲ್ಲಿಯೂ ಈಶಾನ್ಯದ ಮಹಿಳೆಯರು ಮಹತ್ವದ ಪಾತ್ರ ವಹಿಸುತ್ತಾರೆ. ಆದರೆ, ಮಹಿಳೆಯರು ರಾಜಕಾರಣಕ್ಕೆ ಬರುವುದಕ್ಕೆ ಸಮಾಜವು ಪ್ರೋತ್ಸಾಹ ನೀಡುವುದಿಲ್ಲ. ಮಹಿಳೆಯರು ರಾಜಕೀಯಕ್ಕೆ ಬರುವುದು ಕೀಳು ಎಂದು ನೋಡಲಾಗುತ್ತಿದೆ’ ಎಂದು ಮಣಿಪುರ ಪ್ರದೇಶ ಬಿಜೆಪಿ ಅಧ್ಯಕ್ಷೆ ಎ. ಶಾರದಾ ದೇವಿ ಹೇಳುತ್ತಾರೆ.

‘ಮಣಿಪುರವು ರಾಜ ಪ್ರಭುತ್ವದ ಅಡಿಯಲ್ಲಿ ಇದ್ದಾಗಲೂ ಮಹಿಳೆಯರು ರಾಜಕೀಯದಲ್ಲಿ ಭಾಗಿಯಾಗಿದ್ದರು. ಆದರೆ, ಸಮಾಜದ ಯೋಚನಾ ಕ್ರಮದ ಕಾರಣದಿಂದಾಗಿ ರಾಜಕೀಯದಲ್ಲಿ ಸಕ್ರಿಯವಾಗಿ ಭಾಗಿಯಾಗುವ ಮಹಿಳೆಯರ ಸಂಖ್ಯೆ ಕಡಿಮೆ ಆಗಿದೆ. ಇತ್ತೀಚಿನ ದಿನಗಳಲ್ಲಿ ಪರಿಸ್ಥಿತಿ ನಿಧಾನಕ್ಕೆ ಬದಲಾಗುತ್ತಿದೆ’ ಎಂದು ಶಾರದಾ ದೇವಿ ಅಭಿಪ್ರಾಯಪಟ್ಟಿದ್ದಾರೆ. ಇದಕ್ಕೆ ಅವರು ತಮ್ಮ ಪಕ್ಷದ ಉದಾಹರಣೆಯನ್ನೇ ನೀಡಿದ್ದಾರೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಇಬ್ಬರು ಮಹಿಳೆಯರಿಗೆ ಟಿಕೆಟ್ ನೀಡಿತ್ತು. ಈ ಬಾರಿ ಅದು ಮೂರಕ್ಕೆ ಏರಿಕೆಯಾಗಿದೆ ಎಂದು ಅವರು ಹೇಳಿದ್ದಾರೆ.

## ‘ಹಣಕಾಸಿನ ಸ್ವಾತಂತ್ರ್ಯ ಬೇಕು’

ಹಣಕಾಸಿನ ಸ್ವಾತಂತ್ರ್ಯ, ಗೆಲ್ಲುವ ಅಭ್ಯರ್ಥಿ ಎಂದು ಸ್ಥಾಪಿಸುವುದು ಮಹಿಳೆಯರಿಗೆ ರಾಜಕೀಯದಲ್ಲಿ ಇರುವ ಪ್ರಮುಖ ಸವಾಲುಗಳು ಎಂದು ಶಾರದಾ ದೇವಿ ಹೇಳುತ್ತಾರೆ. ರಾಜಕೀಯಕ್ಕೆ ಬರುವ ಉತ್ಸಾಹ ಇರುವ ಮಹಿಳೆಯರು ಮೊದಲಿಗೆ ಸಮಾಜವು ಗುರುತಿಸುವಂತಹ ಕೆಲಸ ಮಾಡಬೇಕು ಎಂದು ಮೀರಾಬಾಯಿ ಅವರು ಸಲಹೆ ನೀಡುತ್ತಾರೆ.

ಮಹಿಳೆಯರು ಹಣಕ್ಕಾಗಿ ಗಂಡ ಅಥವಾ ಕುಟುಂಬದ ಮೇಲೆ ಅವಲಂಬಿತರಾಗಿದ್ದಾರೆ. ಹಣಕಾಸಿನ ವಿಚಾರದಲ್ಲಿ ಸ್ವತಂತ್ರರಾಗುವುದು ಹೇಳಿದಷ್ಟು ಸುಲಭವಲ್ಲ. ಆರ್ಥಿಕವಾಗಿ ಸಬಲರಾಗಲು ಕೂಡ ಮಹಿಳೆಯರು ಕೆಲಸ ಮಾಡಬೇಕು ಎಂದು ಮೀರಾಬಾಯಿ ಹೇಳುತ್ತಾರೆ. ರಾಜಕೀಯದಲ್ಲಿ ಹೆಚ್ಚಿನ ಪ್ರಾತಿನಿಧ್ಯ ಪಡೆಯುವುದು ಸುದೀರ್ಘವಾದ ಹಾದಿ. ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ಒದಗಿಸಲು ಎಲ್ಲ ಪಕ್ಷಗಳು ಬೆಂಬಲ ನೀಡಬೇಕು ಎಂದು ಅವರು ಒತ್ತಾಯಿಸುತ್ತಾರೆ.

‘ಇದು ಪುರುಷ ಪ್ರಾಬಲ್ಯದ ಸಮಾಜ. ಮಹತ್ವಾಕಾಂಕ್ಷಿ ಮಹಿಳಾ ಅಭ್ಯರ್ಥಿಗಳು ಪುರುಷರಿಂದ ಸ್ಥಾನ ಕಸಿದುಕೊಳ್ಳುವುದು ಸುಲಭವಲ್ಲ’ ಎಂದು ಕಾಂಗ್ರೆಸ್‌ನ ಮೀರಾಬಾಯಿ ದೇವಿ ಹೇಳುತ್ತಾರೆ. ಅವರು ಎರಡು ಬಾರಿ ಶಾಸಕಿ ಆಗಿದ್ದಾರೆ ಮತ್ತು ಒಮ್ಮೆ ಸಚಿವೆಯೂ ಆಗಿದ್ದರು. ಪಸ್ಸೋಯಿ ಕ್ಷೇತ್ರದಿಂದ ಸತತ ಮೂರನೇ ಅವಧಿಗೆ ಟಿಕೆಟ್ ಪಡೆಯುವಲ್ಲಿ ಅವರು ಯಶಸ್ವಿಯಾಗಿದ್ದಾರೆ. ‘ಶೇ 33ರಷ್ಟು ಸ್ಥಾನಗಳು ಮಹಿಳೆಯರಿಗೆ ಮೀಸಲು ಆಗದೇ ಇದ್ದರೆ ಶಾಸನ ಸಭೆಗಳಲ್ಲಿ ಮಹಿಳೆಯರ ಪ್ರಾತಿನಿಧ್ಯ ಹೆಚ್ಚುವುದೇ ಇಲ್ಲ’ ಎಂಬುದು ಮೀರಾಬಾಯಿ ಅವರ ಅಭಿಪ್ರಾಯ.

ಸುಮತಿ ದೇವಿ (ನ್ಯಾಷನಲ್ ಪೀಪಲ್ಸ್ ಪಾರ್ಟಿ) ಅವರು ಲಮ್‌ಸಂಗ್ ಕ್ಷೇತ್ರದಿಂದ ಇದೇ ಮೊದಲ ಬಾರಿಗೆ ಸ್ಪರ್ಧಿಸಿದ್ದಾರೆ. ಈ ಕ್ಷೇತ್ರವನ್ನು ಹಿಂದೆ ಅವರ ಗಂಡ ಬ್ರಜಬಿದು ಸಿಂಗ್ ಮೂರು ಬಾರಿ ಪ್ರತಿನಿಧಿಸಿದ್ದರು. ಅವರು ಸಚಿವರೂ ಆಗಿದ್ದರು. ಅವರ ಮರಣಾನಂತರ ಸುಮತಿ ಅವರು ಕಣಕ್ಕೆ ಇಳಿದಿದ್ದಾರೆ. ಸಮಾಜದಲ್ಲಿ ಮಹಿಳೆಯರಿಗೆ ಮಹತ್ವದ ಸ್ಥಾನ ಇದ್ದರೂ ರಾಜಕೀಯ ಸಶಕ್ತೀಕರಣ ಆಗಲೇ ಇಲ್ಲ ಎಂದು ಅವರು ಬೇಸರ ವ್ಯಕ್ತಪಡಿಸುತ್ತಾರೆ.

## ಚುನಾವಣಾ ಕಣದಲ್ಲಿ...

- **ಬಾಂಬ್ ಸ್ಫೋಟ:** ವಿಧಾನಸಭಾ ಚುನಾವಣೆ ನಡೆಯಲಿರುವ ಮಣಿಪುರದಲ್ಲಿ ಕಚ್ಚಾ ಬಾಂಬ್ ಸ್ಫೋಟಗೊಂಡು ಇಬ್ಬರು ಭದ್ರತಾ ಸಿಬ್ಬಂದಿ ಗಾಯಗೊಂಡಿದ್ದಾರೆ. ಕಾಕ್‌ಚಿಂಗ್ ಜಿಲ್ಲೆಯ ವಾಂಗೂ ಟೆರಾ ಎಂಬಲ್ಲಿ ಭಾನುವಾರ ರಾತ್ರಿ 8 ಗಂಟೆ ಸಮಯದಲ್ಲಿ ಈ ಘಟನೆ ನಡೆದಿದೆ. ಸ್ಫೋಟ ನಡೆದಾಗ ಐಟಿಬಿಪಿ ಸಿಬ್ಬಂದಿ ಹಾಗೂ ಪೊಲೀಸರು ಗಸ್ತು ತಿರುಗುತ್ತಿದ್ದರು. ರಾಜ್ಯದಲ್ಲಿ ಫೆಬ್ರುವರಿ 28 ಹಾಗೂ ಮಾರ್ಚ್ 5ರಂದು ಎರಡು ಹಂತಗಳಲ್ಲಿ ಮತದಾನ ನಿಗದಿಯಾಗಿದೆ
- **ಪ್ರಚಾರ ಅಂತ್ಯ:** ಉತ್ತರ ಪ್ರದೇಶದ 59 ಕ್ಷೇತ್ರಗಳಿಗೆ ಬುಧವಾರ ಮತದಾನ ನಡೆಯಲಿದ್ದು, ಸೋಮವಾರ ಬಹಿರಂಗ ಪ್ರಚಾರ ಅಂತ್ಯಗೊಂಡಿದೆ. ನಾಲ್ಕನೇ ಹಂತದ ಚುನಾವಣೆಯಲ್ಲಿ 626 ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಲಖಿಂಪುರ ಖೇರಿ, ಪಿಲಿಭಿತ್, ಹರ್ದೋಯಿ, ರಾಯಬರೇಲಿ, ಲಖನೌ, ಉನ್ನಾವ್ ಜಿಲ್ಲೆಗಳಲ್ಲಿ ಮತದಾನ ನಡೆಯಲಿದೆ
- **ಪ್ರಕರಣ ದಾಖಲು:** ಮತಗಟ್ಟೆಯಲ್ಲಿ ಮಾಧ್ಯಮಗಳ ಜತೆ ಮಾತನಾಡಿದ ಆರೋಪದ ಮೇಲೆ ಎಸ್‌ಪಿ ಮುಖ್ಯಸ್ಥ ಅಖಿಲೇಶ್ ಯಾದವ್ ವಿರುದ್ಧ ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ ಪ್ರಕರಣ ದಾಖಲಾಗಿದೆ. ಸೈಫೈನ ಅಭಿನವ್ ಶಾಲೆಯಲ್ಲಿ ಮತದಾನ ನಡೆಯುತ್ತಿದ್ದ ಸಮಯದಲ್ಲಿ ಅಖಿಲೇಶ್ ಮಾಧ್ಯಮಗಳೊಂದಿಗೆ ಮಾತನಾಡಿರುವುದು ವಿಡಿಯೊದಲ್ಲಿ ದಾಖಲಾಗಿದೆ
- ‘ನೀವು ಭಾರತದಲ್ಲಿ ಇರಬೇಕಾದರೆ ರಾಧೇ ರಾಧೇ ಎಂದು ಪಠಿಸಬೇಕು. ಇಲ್ಲವಾದರೆ ನೀವು ಪಾಕಿಸ್ತಾನಕ್ಕೆ ಹೋಗಬೇಕಾಗುತ್ತದೆ’ ಎಂದು ಉತ್ತರ ಪ್ರದೇಶದ ತಿಲೋಯಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮಯಂಕೇಶ್ವರ್ ಶರಣ್ ಸಿಂಗ್ ಹೇಳಿರುವ ವಿಡಿಯೊ ವೈರಲ್ ಆಗಿದೆ. ಇದನ್ನು ಗಂಭೀರವಾಗಿ ಪರಿಗಣಿಸಿರುವ ಚುನಾವಣಾ ಆಯೋಗವು ಮಯಂಕೇಶ್ವರ್ ಅವರ ವಿರುದ್ಧ ಎಫ್‌ಐಆರ್ ದಾಖಲಿಸಿದೆ. ವಿವರಣೆ ಕೊಡಲು 24 ಗಂಟೆ ಸಮಯ ನೀಡಿದೆ
- **ಮಾಯಾವತಿ ಆರೋಪ:** ಉತ್ತರ ಪ್ರದೇಶದ ದಲಿತರು ಹಾಗೂ ಹಿಂದುಳಿದವರಿಗೆ ಬಿಜೆಪಿ ಆಡಳಿತದಲ್ಲಿ ಮೀಸಲಾತಿಯ ಪೂರ್ಣ ಸೌಲಭ್ಯ ಸಿಕ್ಕಿಲ್ಲ ಎಂದು ಬಿಎಸ್‌ಪಿ ಮುಖ್ಯಸ್ಥೆ ಮಾಯಾವತಿ ಅವರು ಸೋಮವಾರ ಆರೋಪಿಸಿದ್ದಾರೆ. ಪ್ರಯಾಗರಾಜ್‌ನಲ್ಲಿ ಬಿಎಸ್‌ಪಿ ಸಮಾವೇಶದಲ್ಲಿ ಮಾತನಾಡಿದ ಅವರು, ಎಸ್‌ಪಿ ಸರ್ಕಾರವು ಗೂಂಡಾಗಳು, ಮಾಫಿಯಾ ಹಿಡಿತದಲ್ಲಿತ್ತು ಎಂದೂ ಆರೋಪಿಸಿದ್ದಾರೆ
- **ಟೀಕೆ:** ಸಮಾಜವಾದಿ ಪಕ್ಷದ ಟಿಕೆಟ್‌ನಿಂದ ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಗೆ ಸ್ಪರ್ಧಿಸಿರುವ ತಮ್ಮ ಅಕ್ಕ ಪಲ್ಲವಿ ಪಟೇಲ್ ಅವರನ್ನು ಕೇಂದ್ರ ಸಚಿವೆ ಅನುಪ್ರಿಯಾ ಪಟೇಲ್ ಟೀಕಿಸಿದ್ದಾರೆ. ತಂದೆಯವರ ಸಿದ್ಧಾಂತಗಳಲ್ಲಿ ನಂಬಿಕೆಯಿದ್ದಿದ್ದರೆ, ಅಪ್ನಾದಳ ಪಕ್ಷ ತೊರೆದು ಎಸ್‌ಪಿ ಸೇರುತ್ತಿರಲಿಲ್ಲ ಎಂದು ಅವರು ಹೇಳಿದ್ದಾರೆ

ಉತ್ತರ ಪ್ರದೇಶ ವಿಧಾನಸಭಾ ಚುನಾವಣೆ: ಸಮಾಜವಾದಿ ಪಕ್ಷದ ಅಖಿಲೇಶ್ ಯಾದವ್ ಹೇಳಿಕೆ

# ‘ಬಿಜೆಪಿ ವಿರುದ್ಧ 440 ವೋಲ್ಟ್ಸ್ ವಿದ್ಯುತ್ ಹರಿಯುತ್ತಿದೆ’

ಹರ್ದೋಯಿ (ಉತ್ತರ ಪ್ರದೇಶ) (ಪಿಟಿಐ): ‘ಉತ್ತರ ಪ್ರದೇಶ ಚುನಾವಣೆಯಲ್ಲಿ ಪ್ರಚಾರ ನಡೆಸಲು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ‘ಪಿಎಂ’ ಅವರನ್ನು ಕರೆಸುತ್ತಾರೆ. ಆದರೆ ಪಿಎಂ ಎಂಬುದು ಪ್ಯಾಕರ್ಸ್ ಅಂಡ್ ಮೂವರ್ಸ್ ಎಂದು ಜನರು ಅರ್ಥ ಮಾಡಿಕೊಂಡಿದ್ದಾರೆ’ ಎಂದು ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಅವರು ಹೇಳಿದ್ದಾರೆ.



ಅಖಿಲೇಶ್ ಯಾದವ್

ಇಲ್ಲಿ ತಮ್ಮ ಮಿತ್ರಪಕ್ಷವಾದ ಎಸ್‌ಬಿಎಸ್‌ಪಿಯ ಅಭ್ಯರ್ಥಿ ಸುನೀಲ್ ಅರ್ಕಾವಂಶಿ ಪರವಾಗಿ ಅಖಿಲೇಶ್ ಅವರು ರ‍್ಯಾಲಿ ನಡೆಸಿದರು. ಈ ವೇಳೆ ಆಡಳಿತಾರೂಢ ಬಿಜೆಪಿ ವಿರುದ್ಧ ಹರಿಹಾಯ್ದರು.

‘ಈ ಹೋರಾಟ ನಡೆಯುತ್ತಿರುವುದು ಬಿಜೆಪಿ ಮತ್ತು ರಾಜ್ಯದ ಜನತೆ ಮಧ್ಯೆ. ಈ ಹೋರಾಟದಲ್ಲಿ ನಾವು ಜನರ ಜತೆಗಿದ್ದೇವೆ. ಹೀಗಾಗಿ ಈ ಬಾರಿ ಬಿಜೆಪಿಯಾಗಲೀ, ಕಾಂಗ್ರೆಸ್ಸಾಗಲೀ ಸರ್ಕಾರ ರಚಿಸುವುದಿಲ್ಲ. ಆ ಎರಡೂ ಪಕ್ಷಗಳಿಗೆ ಮತ ನೀಡಿ, ಅದನ್ನು ವ್ಯರ್ಥ ಮಾಡಿಕೊಳ್ಳಬೇಡಿ. ಬದಲಿಗೆ ಎಸ್‌ಪಿ ಸರ್ಕಾರ ರಚಿಸುವುದನ್ನು ಖಚಿತಪಡಿಸಿ’ ಎಂದು ಅವರು ಮತದಾರರಲ್ಲಿ ಕೋರಿದ್ದಾರೆ.

‘ಆದಿತ್ಯನಾಥ ಅವರು ರಾಜ್ಯದ ನಗರಗಳು, ಯೋಜನೆಗಳ ಹೆಸರು ಮತ್ತು ಬಣ್ಣಗಳನ್ನು ಬದಲಿಸುತ್ತಿದ್ದರು. ಈಗ ಅವರ ಹೆಸರೇ ಬದಲಾಗಿ ಹೋಗಿದೆ. ನಾನು ಯೋಗಿ ಅವರನ್ನು ‘ಬಾಬಾ ಸಿ.ಎಂ’ ಎಂದು ಕರೆಯುತ್ತಿದ್ದೆ. ಆದರೆ ಈಗ ಪತ್ರಿಕೆಗಳು ಯೋಗಿ ಅವರನ್ನು ‘ಬುಲ್ಡೋಜರ್ ಸಿ.ಎಂ’ ಎಂದು ಕರೆಯುತ್ತಿವೆ’ ಎಂದು ಅಖಿಲೇಶ್ ಹೇಳಿದ್ದಾರೆ.

‘ಬಿಜೆಪಿ ವಿರುದ್ಧ ಉತ್ತರ ಪ್ರದೇಶದ ಜನರಲ್ಲಿ 440 ವೋಲ್ಟ್ಸ್‌ನ ವಿದ್ಯುತ್ ಹರಿಯುತ್ತಿದೆ ಎಂಬುದು ಬಿಜೆಪಿಗೆ ಅರ್ಥವಾಗಿಲ್ಲ. ಜನರು ಬಿಜೆಪಿಯನ್ನು ತಿರಸ್ಕರಿಸಿದ್ದಾರೆ. ಯೋಗಿ ಅವರನ್ನು ಜನರು ಈಗಾಗಲೇ ಅವರ ತವರು ಗೋರಖಪುರಕ್ಕೆ ಕಳುಹಿಸಿದ್ದಾರೆ. ಹೀಗಾಗಿ ಬಿಜೆಪಿ ನಾಯಕರ ಮಾತುಗಳೇ ಬದಲಾಗಿ ಹೋಗಿವೆ. ನಾವು ‘ಭರ್ತಿ’ (ನೇಮಕಾತಿ) ಬಗ್ಗೆ ಮಾತನಾಡುತ್ತಿದ್ದರೆ, ಬಿಜೆಪಿಯವರು ‘ಗರ್ಮಿ’ (ಬಿಸಿ ಇಳಿಸುತ್ತೇವೆ) ಎಂದು ಮಾನಾಡುತ್ತಿದ್ದಾರೆ’ ಎಂದು ಅಖಿಲೇಶ್ ಹೇಳಿದ್ದಾರೆ.



ಕೇಂದ್ರ ಸಚಿವೆ ಸ್ಮೃತಿ ಇರಾನಿ ಅವರು ಬಿಜೆಪಿ ಪರವಾಗಿ ಪ್ರಯಾಗರಾಜ್‌ನಲ್ಲಿ ಸೋಮವಾರ ಪ್ರಚಾರ ನಡೆಸಿದರು ಪಿಟಿಐ ಚಿತ್ರ

## ಅಖಿಲೇಶ್ ಚಿಕ್ಕಹುಡುಗ: ಯೋಗಿ

‘ಅಖಿಲೇಶ್ ಯಾದವ್ ಜೀವನಪೂರ್ತಿ ಚಿಕ್ಕಹುಡುಗನಾಗಿಯೇ (ಬಬುವಾ) ಇರುತ್ತಾರೆ’ ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಲೇವಡಿ ಮಾಡಿದ್ದಾರೆ.



ಯೋಗಿ ಆದಿತ್ಯನಾಥ

ತಮ್ಮನ್ನು ಬಾಬಾ ಸಿಎಂ ಎಂದು ಕರೆದ ಅಖಿಲೇಶ್ ಅವರನ್ನು, ಯೋಗಿ ಈ ಮೂಲಕ ಬಬುವಾ ಎಂದು ಕರೆದಿದ್ದಾರೆ. ‘ಅಖಿಲೇಶ್ ಅವರ ಆರೋಪಗಳೆಲ್ಲವೂ ಬಾಲಿಶವಾಗಿರುತ್ತವೆ. ಅವರು ವಿದ್ಯಾರ್ಥಿಗಳಿಗೆ ಟ್ಯಾಬ್ಲೆಟ್ ಮತ್ತು ಸ್ಮಾರ್ಟ್‌ಫೋನ್‌ಗಳನ್ನು ವಿತರಿಸುವುದನ್ನು ವಿಳಂಬ ಮಾಡಿದರು. ಏಕೆಂದರೆ ಅವುಗಳನ್ನು ಬಳಸಲು ಅವರಿಗೇ ಬರುತ್ತಿರಲಿಲ್ಲ. ಅವರು ಜೀವನ ಪೂರ್ತಿ ಚಿಕ್ಕ ಹುಡುಗನಾಗಿಯೇ ಇರುತ್ತಾರೆ’ ಎಂದು ಯೋಗಿ ತಿರುಗೇಟು ನೀಡಿದ್ದಾರೆ.

‘ನನ್ನನ್ನು ಅವರು ಬಾಬಾ ಸಿಎಂ ಎಂದು ಕರೆದಿದ್ದಾರೆ. ಅದು ಅವರ ಸಂಸ್ಕೃತಿ ಮತ್ತು ಸಂಸ್ಕಾರವನ್ನು ತೋರಿಸುತ್ತದೆ’ ಎಂದು ಅವರು ಟೀಕಿಸಿದ್ದಾರೆ.

## ‘ಹಿಂದಿನ ದಾಖಲೆ ಮುರಿಯಲಿದ್ದೇವೆ’

ಲಖನೌ (ಪಿಟಿಐ): ಉತ್ತರ ಪ್ರದೇಶದಲ್ಲಿ ಆಡಳಿತ ಪರವಾದ ಅಲೆ ಇದೆ. ಹೀಗಾಗಿ ಈ ಚುನಾವಣೆಯಲ್ಲಿ ಬಿಜೆಪಿ ಈ ಹಿಂದಿನ ಎಲ್ಲಾ ದಾಖಲೆಗಳನ್ನು ಮುರಿಯಲಿದೆ’ ಎಂದು ಉತ್ತರ ಪ್ರದೇಶ ಉಪ ಮುಖ್ಯಮಂತ್ರಿ ದಿನೇಶ್ ಶರ್ಮಾ ಅವರು ಹೇಳಿದ್ದಾರೆ.



ದಿನೇಶ್ ಶರ್ಮಾ

ಪಿಟಿಐಗೆ ನೀಡಿದ ವಿಶೇಷ ಸಂದರ್ಶನದಲ್ಲಿ ಅವರು ಈ ಮಾತು ಹೇಳಿದ್ದಾರೆ. ‘ಈ ಬಾರಿ ಬಿಜೆಪಿ ಪರವಾಗಿ ಜನರ ಉತ್ಸಾಹ ಹೆಚ್ಚಾಗಿದೆ. ನಾವು ಪ್ರಚಾರಕ್ಕೆ ಹೋದೆಡೆಯೆಲ್ಲಾ ಜನರು ಹೆಚ್ಚಿನ ಸಂಖ್ಯೆಯಲ್ಲಿ ಸೇರುತ್ತಿದ್ದಾರೆ. ನಮ್ಮಲ್ಲಿ ಅಭ್ಯರ್ಥಿಗಳು ಮುಖ್ಯವೇ ಅಲ್ಲ. ಬದಲಿಗೆ ಪಕ್ಷದ ಚಿಹ್ನೆಯ ಅಡಿ ಸ್ಪರ್ಧಿಸುವವರೆಲ್ಲಾ ಗೆಲ್ಲಲಿದ್ದಾರೆ’ ಎಂದು ಶರ್ಮಾ ಹೇಳಿದ್ದಾರೆ.

ಬ್ರಾಹ್ಮಣ ಸಮುದಾಯದ ನಾಯಕರಾದ ದಿನೇಶ್ ಅವರು ಈ ಚುನಾವಣೆಯಲ್ಲಿ ಸ್ಪರ್ಧಿಸುತ್ತಿಲ್ಲ. ಯೋಗಿ ಆದಿತ್ಯನಾಥ ಅವರ ಸರ್ಕಾರದ ನೀತಿಗಳಿಂದ ಬ್ರಾಹ್ಮಣ ಸಮುದಾಯವು ಸಿಟ್ಟಾಗಿದೆ. ಹೀಗಾಗಿಯೇ ದಿನೇಶ್ ಅವರಿಗೆ ಟಿಕೆಟ್ ನೀಡಲಾಗಿಲ್ಲ ಎಂದು ವಿರೋಧ ಪಕ್ಷಗಳು ಮತ್ತು ಬಿಜೆಪಿಯದ್ದೇ ಕೆಲವು ನಾಯಕರು ಹೇಳಿದ್ದರು. ಈ ಆರೋಪವನ್ನು ದಿನೇಶ್ ನಿರಾಕರಿಸಿದ್ದಾರೆ. ‘ಬ್ರಾಹ್ಮಣರು ಬಿಜೆಪಿ ವಿರುದ್ಧ ಇಲ್ಲ. ನನ್ನ ವಿಧಾನ ಪರಿಷತ್ ಸದಸ್ಯತ್ವ 2027ರವರೆಗೆ ಇದೆ. ಹೀಗಾಗಿ ನನಗೆ ಟಿಕೆಟ್ ನೀಡಿಲ್ಲ’ ಎಂದು ಅವರು ಸ್ಪಷ್ಟನೆ ನೀಡಿದ್ದಾರೆ.

‘ರಾಮ ಮಂದಿರ ನಿರ್ಮಿಸಲಾಗುತ್ತಿದೆ. ಕಾಶಿಯನ್ನು ಅಭಿವೃದ್ಧಿಪಡಿಸಲಾಗಿದೆ. ಮಥುರಾವನ್ನು ಬಿಡುಗಡೆ ಮಾಡಲಾಗುತ್ತದೆ. ಬ್ರಾಹ್ಮಣರು ಬಯಸುವುದೆಲ್ಲವನ್ನೂ ನಮ್ಮ ಸರ್ಕಾರ ಮಾಡಿದೆ. ಹೀಗಾಗಿ ಬ್ರಾಹ್ಮಣರು ನಮ್ಮ ವಿರುದ್ಧ ಸಿಟ್ಟಾಗಿಲ್ಲ’ ಎಂದು ಅವರು ಹೇಳಿದ್ದಾರೆ.

‘ಈ ಬಾರಿ ಬಿಜೆಪಿಯೇ ಸರ್ಕಾರ ರಚಿಸಲಿದೆ. ಎಸ್‌ಪಿ, ಬಿಎಸ್‌ಪಿ, ಕಾಂಗ್ರೆಸ್ ಮತ್ತು ಉಳಿದೆಲ್ಲಾ ಪಕ್ಷಗಳು ಎರಡನೇ ಸ್ಥಾನಕ್ಕಾಗಿ ಹೋರಾಡುತ್ತಿವೆ. ಈ ಎಲ್ಲಾ ಪಕ್ಷಗಳು ಗೆಲ್ಲುವ ಒಟ್ಟು ಸ್ಥಾನಗಳ ಸಂಖ್ಯೆ 100 ಮುಟ್ಟುವುದಿಲ್ಲ’ ಎಂದು ಅವರು ಹೇಳಿದ್ದಾರೆ.

# ಸೈಕಲ್‌ಗೆ ಉಗ್ರರ ನಂಟು: ಮೋದಿ ಹೇಳಿಕೆಗೆ ಕೇಜ್ರಿವಾಲ್ ಆಕ್ರೋಶ

ಲಖನೌ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಸೈಕಲ್‌ಗೆ ಭಯೋತ್ಪಾದನೆಯನ್ನು ತಳಕು ಹಾಕಿದ್ದು ಬಡಜನರ ಮೇಲಿನ ದಾಳಿ ಎಂದು ದೆಹಲಿ ಮುಖ್ಯಮಂತ್ರಿ ಹಾಗೂ ಆಮ್ ಆದ್ಮಿ ಪಕ್ಷದ (ಎಎಪಿ) ರಾಷ್ಟ್ರೀಯ ಸಂಚಾಲಕ ಅರವಿಂದ ಕೇಜ್ರಿವಾಲ್ ಆರೋಪಿಸಿದ್ದಾರೆ.

ನಾಲ್ಕು ದಿನಗಳ ಉತ್ತರ ಪ್ರದೇಶ ಪ್ರವಾಸವನ್ನು ಅವರು ಸೋಮವಾರ ಆರಂಭಿಸಿದರು. ಲಖನೌದಲ್ಲಿ ಪಕ್ಷದ ಅಭ್ಯರ್ಥಿ ಪರ ಪ್ರಚಾರ ನಡೆಸಿ, ‘ಸೈಕಲ್ ಓಡಿಸುವ ಎಲ್ಲರೂ ಭಯೋತ್ಪಾದಕರು ಎಂಬುದಾಗಿ ಪ್ರಧಾನಿ ಹೇಳಿದ ಮಾತನ್ನು ನಾನು ಕೇಳಿಸಿಕೊಂಡೆ. ಇದು ಸೈಕಲ್ ತುಳಿಯುವ ಬಡವರ ಮೇಲೆ ನಡೆಸಿದ ಹಲ್ಲೆ’ ಎಂದಿದ್ದಾರೆ.

ಅಹಮದಾಬಾದ್‌ನಲ್ಲಿ ನಡೆದ ಸರಣಿ ಸ್ಫೋಟ ಪ್ರಕರಣದಲ್ಲಿ 49 ಜನರನ್ನು ದೋಷಿಗಳು ಎಂದು ಕೋರ್ಟ್ ತೀರ್ಪು ನೀಡಿದ್ದನ್ನು ತಮ್ಮ ಭಾಷಣದಲ್ಲಿ ಉಲ್ಲೇಖಿಸಿದ್ದ ಪ್ರಧಾನಿ ಮೋದಿ ಅವರು, ಸಮಾಜವಾದಿ ಪಕ್ಷವು ಭಯೋತ್ಪಾದಕರ ಬಗ್ಗೆ ಅನುಕಂಪ ಹೊಂದಿದೆ ಎಂದು ಆರೋಪಿಸಿದ್ದರು. ಭಯೋತ್ಪಾದಕರು ಸೈಕಲ್‌ನಲ್ಲಿಯೇ ಏಕೆ ಬಾಂಬ್ ಇಡುತ್ತಾರೆ ಎಂದು ಸಮಾಜವಾದಿ ಪಕ್ಷದ ಚಿಹ್ನೆಯನ್ನು (ಸೈಕಲ್) ಅವರು ಲೇವಡಿ ಮಾಡಿದ್ದರು.

ಪಂಜಾಬ್‌ನ ಖಾಲಿಸ್ತಾನ ಪ್ರತ್ಯೇಕತಾವಾದಿಗಳನ್ನು ಕೇಜ್ರಿವಾಲ್ ಬೆಂಬಲಿಸುತ್ತಿದ್ದಾರೆ ಎಂದು ಆರೋಪಿಸಿದ್ದ ಎಎಪಿ ಮಾಜಿ ಮುಖಂಡ ಕುಮಾರ್ ವಿಶ್ವಾಸ್ ಅವರನ್ನೂ ಕೇಜ್ರಿವಾಲ್ ತರಾಟೆಗೆ ತೆಗೆದುಕೊಂಡಿದ್ದಾರೆ.

‘ಈ ಜನರು ದೇಶದ ಭದ್ರತೆಯನ್ನು ಅಣಕ ಮಾಡುತ್ತಿದ್ದಾರೆ. ಇವರು ಎಲ್ಲರಿಗೂ ಭಯೋತ್ಪಾದಕರ ಪಟ್ಟ ಕಟ್ಟುತ್ತಾರೆ. ಪ್ರತಿಭಟನೆ ನಡೆಸುತ್ತಿದ್ದ ರೈತರನ್ನೂ ಇವರು ಭಯೋತ್ಪಾದಕರು ಎಂದು ಕರೆದಿದ್ದರು. ಭಯೋತ್ಪಾದಕರು ಯಾರು ಎಂಬುದನ್ನು ಮತದಾನದ ಮೂಲಕ ತಿಳಿಸಿ’ ಎಂದು ಅವರು ರೈತರಿಗೆ ಕರೆ ನೀಡಿದರು.

ಕೇಜ್ರಿವಾಲ್ ಅವರು ಬಾರಾಬಂಕಿ, ಪ್ರಯಾಗರಾಜ್, ಗೋರಖಪುರದಲ್ಲಿ ಪ್ರಚಾರ ನಡೆಸಲಿದ್ದಾರೆ.

## ‘ರಾಯಬರೇಲಿ: ಬಿಜೆಪಿ ಮಲತಾಯಿ ಧೋರಣೆ’

ರಾಯಬರೇಲಿ (ಪಿಟಿಐ): ಬಿಜೆಪಿಯು ರಾಯಬರೇಲಿ ಬಗ್ಗೆ ಮಲತಾಯಿ ಧೋರಣೆ ಹೊಂದಿದೆ ಎಂದು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಸೋಮವಾರ ಆರೋಪಿಸಿದರು. ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳಿಗೇ ಮತ ನೀಡಿ ಎಂದು ಜನರಲ್ಲಿ ಅವರು ಮನವಿ ಮಾಡಿದರು.

ನಾಲ್ಕನೇ ಹಂತದ ಮತದಾನದ ಪ್ರಚಾರದ ಕೊನೆಯ ದಿನ ತಮ್ಮ ಲೋಕಸಭೆ ಕ್ಷೇತ್ರ ರಾಯಬರೇಲಿಯ ಜನರನ್ನು ಕುರಿತು ವರ್ಚುವಲ್ ಆಗಿ ಮಾತನಾಡಿದರು. ‘ಇದು ಅತ್ಯಂತ ಮುಖ್ಯವಾದ ಚುನಾವಣೆ ಆಗಿದೆ. ಕಳೆದ ಐದು ವರ್ಷಗಳಿಂದ ಇರುವ ಸರ್ಕಾರ ಜನರನ್ನು ಒಡೆಯುವ ಕೆಲಸ ಬಿಟ್ಟರೆ ಬೇರೆ ಏನನ್ನೂ ಮಾಡಿಲ್ಲ’ ಎಂದು ಹೇಳಿದರು.

ವಿಧಾನಸಭೆ ಚುನಾವಣೆ ಪ್ರಕ್ರಿಯೆ ಆರಂಭವಾದಾಗಿನಿಂದ ಇದೇ ಮೊದಲ ಬಾರಿಗೆ ಸೋನಿಯಾ ಅವರು ಚುನಾವಣಾ ಪ್ರಚಾರದಲ್ಲಿ ಭಾಗಿ ಆಗಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಮತ್ತು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ವಿರುದ್ಧ ವಾಗ್ದಾಳಿ ನಡೆಸಿದ ಸೋನಿಯಾ, ‘ನಿಮಗಾಗಿ ನಾವು ಹಲವಾರು ಯೋಜನೆಗಳನ್ನು ತಂದಿದ್ದೆವು. ಆದರೆ ಮೋದಿ–ಯೋಗಿ ಅವುಗಳನ್ನೆಲ್ಲಾ ನಿಷೇಧಿಸಿದರು. ಜೊತೆಗೆ, ಕೋವಿಡ್–19 ಸಾಂಕ್ರಾಮಿಕವನ್ನು ನಿರ್ವಹಿಸುವಲ್ಲಿ ಅವರಿಬ್ಬರೂ ವಿಫಲರಾಗಿದ್ದಾರೆ’ ಎಂದು ಹೇಳಿದರು.



**ನಿಮ್ಮೆಲ್ಲರ ಕುಟುಂಬದ ಅವಿಭಾಜ್ಯ ಭಾಗ ನಾನು ಎಂದು ಪರಿಗಣಿಸುತ್ತೇನೆ. ನಿಮ್ಮ ಜೀವನವನ್ನು ಬದಲಿಸುವಂಥ ರಾಜಕೀಯ ಮಾಡಲು ಕಾಂಗ್ರೆಸ್ ಬದ್ಧವಾಗಿದೆ**

**ಸೋನಿಯಾ ಗಾಂಧಿ,** ಕಾಂಗ್ರೆಸ್ ಅಧ್ಯಕ್ಷೆ

‘ಕಾಂಗ್ರೆಸ್ ರಾಜಕೀಯವನ್ನು ನೀವು ನೋಡಿದ್ದೀರಿ. ಕಾಂಗ್ರೆಸ್‌ನದ್ದು ಸೇವೆ ಆಧಾರಿತ ಮತ್ತು ಜನರಿಗೆ ಹಕ್ಕುಗಳನ್ನು ನೀಡುವ ರಾಜಕೀಯವಾಗಿದೆ. ಕಳೆದ ಐದು ವರ್ಷಗಳಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಉತ್ತರ ಪ್ರದೇಶದಲ್ಲಿ ಬಹಳ ಶ್ರಮವಹಿಸಿದ್ದಾರೆ. ಜನರ ಹಕ್ಕಿಗಾಗಿ ಹೋರಾಡುತ್ತಿದ್ದ ಕಾಂಗ್ರೆಸ್‌ನ 8,000 ಕಾರ್ಯಕರ್ತರನ್ನು ಬಂಧಿಸಲಾಗಿದೆ’ ಎಂದು ಹೇಳಿದರು.

‘ಹಗಲು, ರಾತ್ರಿ ನಿಮಗಾಗಿ ಕೆಲಸ ಮಾಡುವ ಶಾಸಕರನ್ನು ನೀಡಲು ಮತ್ತು ನಿಮ್ಮ ಜೀವನವನ್ನು ಉತ್ತಮಪಡಿಸುವಂಥ ನೀತಿಗಳನ್ನು ತರಲು ನಾವು ಬದ್ಧರಾಗಿದ್ದೇವೆ. ಈ ಚುನಾವಣೆಯಲ್ಲಿ ಕೈಯನ್ನು (ಕಾಂಗ್ರೆಸ್ ಚಿಹ್ನೆ) ಬಲಪಡಿಸಿ. ರಾಯಬರೇಲಿಯಲ್ಲಿ ಸ್ಪರ್ಧಿಸುತ್ತಿರುವ ಕಾಂಗ್ರೆಸ್‌ನ ಎಲ್ಲಾ ಅಭ್ಯರ್ಥಿಗಳನ್ನೂ ಭಾರಿ ಬಹುಮತದೊಂದಿಗೆ ಗೆಲ್ಲಿಸಿ’ ಎಂದು ಮನವಿ ಮಾಡಿದರು.

‘ರೈತರು ಸಾಲದ ಹೊರೆಯಲ್ಲಿದ್ದಾರೆ. ಬೀಡಾಡಿ ಜಾನುವಾರುಗಳು ಅವರ ಬೆಳೆಯನ್ನು ಹಾನಿಗೀಡು ಮಾಡುತ್ತಿವೆ. ಯುವಜನರು ಕೂಡ ಸಂಕಷ್ಟದಲ್ಲಿದ್ದಾರೆ. ಕಷ್ಟಪಟ್ಟು ಶಿಕ್ಷಣ ಪಡೆದ ಅವರನ್ನು ಮನೆಯಲ್ಲೇ ಇರುವಂತೆ ಮೋದಿ ನೇತೃತ್ವದ ಸರ್ಕಾರವು ಮಾಡಿದೆ. ರಾಜ್ಯದಲ್ಲಿ 12 ಲಕ್ಷ ಉದ್ಯೋಗಗಳು ಖಾಲಿ ಇವೆ. ಆದರೆ ಅವನ್ನು ಭರ್ತಿ ಮಾಡಲಾಗುತ್ತಿಲ್ಲ. ಬೆಲೆ ಏರಿಕೆಯಿಂದಾಗಿ ಮನೆ ನಡೆಸುವುದು ಜನರಿಗೆ ಕಷ್ಟವಾಗಿದೆ’ ಎಂದರು.

ಜನರ ಹೊರೆಯನ್ನು ಇಳಿಸುವ ಬದಲು ಸರ್ಕಾರವು ತನ್ನ ಸ್ನೇಹಿತರಿಗೆ ಹಲವಾರು ಸಂಸ್ಥೆಗಳನ್ನು ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದೆ ಎಂದು ಟೀಕಿಸಿದರು.

ಲಖಿಂಪುರ ಖೇರಿ ಹಿಂಸಾಚಾರ ಪ್ರಕರಣ; ಮೃತ ರೈತರ ಕುಟುಂಬದಿಂದ ಅರ್ಜಿ

# ಜಾಮೀನು: ‘ಸುಪ್ರೀಂ’ಗೆ ಮತ್ತೊಂದು ಮೇಲ್ಮನವಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಸಚಿವ ಅಜಯ್ ಮಿಶ್ರಾ ಅವರ ಪುತ್ರ, ಲಖಿಂಪುರ ಖೇರಿ ಹಿಂಸಾಚಾರ ಪ್ರಕರಣದ ಆರೋಪಿ ಆಶಿಶ್ ಮಿಶ್ರಾ ಅವರಿಗೆ ಜಾಮೀನು ನೀಡಿರುವ ಹೈಕೋರ್ಟ್ ಆದೇಶ ಪ್ರಶ್ನಿಸಿ ಮೃತ ರೈತರ ಕುಟುಂಬ ಸದಸ್ಯರು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದಾರೆ.

ಲಖನೌ ಹೈಕೋರ್ಟ್‌ನ ಅಲಹಾಬಾದ್ ಪೀಠ ಫೆಬ್ರುವರಿ 10ರಂದು ಆರೋಪಿಗೆ ಜಾಮೀನು ನೀಡಿರುವುದು ಕಾನೂನಿನ ಪ್ರಕಾರ ಸಮರ್ಥನೀಯವಲ್ಲ ಎಂದು ರೈತರ ಪರವಾಗಿ ಅರ್ಜಿ ಸಲ್ಲಿಸಿರುವ ವಕೀಲ ಪ್ರಶಾಂತ ಭೂಷಣ್ ತಿಳಿಸಿದ್ದಾರೆ.

2022ರ ಜನವರಿ 18ರಂದು ನಡೆದ ವಿಚಾರಣೆ ವೇಳೆ ಹೈಕೋರ್ಟ್‌ಗೆ ಸತ್ಯಾಂಶ ತಿಳಿಸಲು ಬಯಸಿದ್ದ ಸಂತ್ರಸ್ತ ಕುಟುಂಬದ ಸದಸ್ಯರನ್ನು ತಡೆಯಲಾಗಿದೆ. ಈ ಸಂಬಂಧ ನ್ಯಾಯಾಲಯದ ಸಿಬ್ಬಂದಿಯನ್ನು ಸಂಪರ್ಕಿಸಲು ಪದೇ ಪದೇ ಯತ್ನಿಸಿದರೂ ಪ್ರಯೋಜನವಾಗಲಿಲ್ಲ. ಅಲ್ಲದೆ, ಅರ್ಜಿಗಳ ಪರಿಣಾಮಕಾರಿ ವಿಚಾರಣೆ ನಡೆಸದೆ ತಿರಸ್ಕರಿಸಲಾಗಿದೆ ಎಂದೂ ದೂರಲಾಗಿದೆ.

ಆರೋಪಿ ಮತ್ತು ಆತನ ತಂದೆಯ ಪಕ್ಷವೇ ಅಧಿಕಾರದಲ್ಲಿ ಇರುವುದರಿಂದ ಉತ್ತರ ಪ್ರದೇಶದ ಆಡಳಿತಾರೂಢ ಬಿಜೆಪಿ ಸರ್ಕಾರವು ಜಾಮೀನು ಆದೇಶ ಪ್ರಶ್ನಿಸಿ ಮೇಲ್ಮನವಿ ಸಲ್ಲಿಸದಿರುವುದರಿಂದ ಸುಪ್ರೀಂ ಕೋರ್ಟ್ ಮೊರೆ ಹೋಗುವುದು ಅನಿವಾರ್ಯವಾಗಿದೆ ಎಂದು ಸಂತ್ರಸ್ತ ಕುಟುಂಬ ಸದಸ್ಯರಾದ ಜಗಜೀತ್ ಸಿಂಗ್ ಮತ್ತಿತರರು ಮೇಲ್ಮನವಿಯಲ್ಲಿ ತಿಳಿಸಿದ್ದಾರೆ.

ಅಪರಾಧದ ಸ್ವರೂಪವನ್ನು ಅರ್ಥೈಸಿಕೊಳ್ಳುವಲ್ಲಿ ಹೈಕೋರ್ಟ್ ವಿಫಲವಾಗಿದೆ. ಜಾಮೀನು ಮಂಜೂರು ಮಾಡಿರುವುದರಿಂದ ಇಂಥ ಅಪರಾಧ ಪ್ರಕರಣಗಳು ಪುನರಾವರ್ತಿಸುವ ಸಾಧ್ಯತೆ ಇದೆ. ಅಲ್ಲದೆ, ಸಾಕ್ಷ್ಯಗಳನ್ನು ತಿರುಚುವ ಸಾಧ್ಯತೆ ಇದೆ ಎಂದೂ ಅರ್ಜಿಯಲ್ಲಿ ಆರೋಪಿಸಲಾಗಿದೆ.

ಆರೋಪಿಗೆ ಮಂಜೂರು ಮಾಡಿರುವ ಜಾಮೀನು ರದ್ದುಪಡಿಸುವಂತೆ ಕೋರಿ ವಕೀಲರಾದ ಸಿ.ಎಸ್. ಪಾಂಡಾ ಹಾಗೂ ಶಿವಕುಮಾರ ತ್ರಿಪಾಠಿ ಕಳೆದ ವಾರ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದಾರೆ.

## ಲಾಲು ಪ್ರಸಾದ್‌ಗೆ 5 ವರ್ಷ ಸಜೆ, ₹ 60 ಲಕ್ಷ ದಂಡ

ರಾಂಚಿ (ಪಿಟಿಐ): ಮೇವು ಹಗರಣದಲ್ಲಿ ಡೊರಂಡಾ ಖಜಾನೆಯಿಂದ ₹ 139 ಕೋಟಿ ದುರ್ಬಳಕೆಗೆ ಸಂಬಂಧಿಸಿದ ಪ್ರಕರಣದಲ್ಲಿ ಆರ್‌ಜೆಡಿ ಮುಖ್ಯಸ್ಥ, ಮಾಜಿ ಮುಖ್ಯಮಂತ್ರಿ ಲಾಲು ಪ್ರಸಾದ್ ಅವರಿಗೆ 5 ವರ್ಷ ಸಜೆ ಮತ್ತು ₹ 60 ಲಕ್ಷ ದಂಡ ವಿಧಿಸಿ ಕೋರ್ಟ್ ಆದೇಶಿಸಿದೆ.



ಲಾಲು ಪ್ರಸಾದ್

ಲಾಲು ಪ್ರಸಾದ್ ಈ ಪ್ರಕರಣದಲ್ಲಿಯೂ ದೋಷಿಯಾಗಿದ್ದಾರೆ ಎಂದು ಇದೇ 15ರಂದು ಘೋಷಿಸಿದ್ದ ಸಿಬಿಐನ ವಿಶೇಷ ಕೋರ್ಟ್, ಇದಕ್ಕೆ ಸಂಬಂಧಿಸಿದ ಶಿಕ್ಷೆಯ ಪ್ರಮಾಣವನ್ನು ಸೋಮವಾರ ಪ್ರಕಟಿಸಿತು.

ಸೋಮವಾರ ತೀರ್ಪು ಪ್ರಕಟವಾಗುತ್ತಿದ್ದಂತೆಯೇ ಲಾಲು ಅವರನ್ನು ಬಿರ್ಸಾ ಮುಂಡಾ ಕೇಂದ್ರ ಕಾರಾಗೃಹಕ್ಕೆ ಕಳುಹಿಸಲಾಗಿತ್ತು. ಅನಾರೋಗ್ಯದಿಂದ ಬಳಲುತ್ತಿರುವ 73 ವರ್ಷದ ಅವರನ್ನು ಬಳಿಕ ರಾಂಚಿಯಲ್ಲಿರುವ ರಾಜೇಂದ್ರ ವೈದ್ಯಕೀಯ ವಿಜ್ಞಾನ ಸಂಸ್ಥೆಗೆ ದಾಖಲಿಸಲಾಗಿದೆ.

**ಹೆದರಲ್ಲ:** ಲಾಲು ಪ್ರಸಾದ್ ಅವರಿಗೆ ಜೈಲು ಶಿಕ್ಷೆಯಾಗಿರುವುದಕ್ಕೆ ಅವರ ಮಗ, ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

‘ಒಂದು ವೇಳೆ ಲಾಲು ಅವರು ಬಿಜೆಪಿ ಜತೆ ಕೈಜೋಡಿಸಿದ್ದರೆ ಅವರನ್ನು ರಾಜ ಸತ್ಯಹರಿಶ್ಚಂದ್ರ ಎಂದು ಕರೆಯಲಾಗುತ್ತಿತ್ತು. ಆದರೆ ಅವರು ಆರ್‌ಎಸ್‌ಎಸ್–ಬಿಜೆಪಿ ವಿರುದ್ಧ ಹೋರಾಡುತ್ತಿದ್ದಾರೆ. ಹೀಗಾಗಿ ಅವರಿಗೆ ಜೈಲು ಶಿಕ್ಷೆಯಾಗಿದೆ. ಇದಕ್ಕೆಲ್ಲ ನಾವು ಹೆದರುವುದಿಲ್ಲ’ ಎಂದು ಟ್ವೀಟ್ ಮಾಡಿದ್ದಾರೆ.



## ಕಣ್ಣೂರಿನಲ್ಲಿ ಸಿಪಿಎಂ ಕಾರ್ಯಕರ್ತನ ಕೊಲೆ

ಕಣ್ಣೂರು (ಪಿಟಿಐ): ಕೇರಳದ ಕಣ್ಣೂರಿನಲ್ಲಿ ಸಿಪಿಎಂ ಕಾರ್ಯಕರ್ತ ಹರಿದಾಸನ್ (54) ಎಂಬುವವರನ್ನು ದುಷ್ಕರ್ಮಿಗಳು ಭಾನುವಾರ ಮಧ್ಯರಾತ್ರಿ ಬರ್ಬರವಾಗಿ ಕೊಂದಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೀನುಗಾರನೂ ಆಗಿದ್ದ ಹರಿದಾಸನ್ ಅವರು ಕೆಲಸ ಮುಗಿಸಿ 1.30ರ ಸುಮಾರಿಗೆ ಮನೆಗೆ ತೆರಳುತ್ತಿದ್ದಾಗ ನ್ಯೂ ಮಾಹೆಯಲ್ಲಿನ ಅವರ ಮನೆಯ ಸಮೀಪವೇ ದುಷ್ಕರ್ಮಿಗಳ ತಂಡ ಈ ಕೃತ್ಯ ಎಸಗಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ವಾರದ ಹಿಂದೆಯಷ್ಟೇ ಈ ಪ್ರದೇಶದಲ್ಲಿ ಸಿಪಿಎಂ ಮತ್ತು ಬಿಜೆಪಿ ಕಾರ್ಯಕರ್ತರ ನಡುವೆ ಘರ್ಷಣೆ ನಡೆದಿತ್ತು ಎಂದು ಹೇಳಿದ್ದಾರೆ.

ತನ್ನ ಪಕ್ಷದ ಕಾರ್ಯಕರ್ತನನ್ನು ಆರ್‌ಎಸ್‌ಎಸ್– ಬಿಜೆಪಿಯ ಗುಂಪು ಕೊಂದಿದೆ ಎಂದು ಸಿಪಿಎಂ ಆರೋಪಿಸಿದೆ. ಈ ಆರೋಪವನ್ನು ಬಿಜೆಪಿ ತಳ್ಳಿಹಾಕಿದೆ.

ಈ ಕೃತ್ಯವನ್ನು ಖಂಡಿಸಿ ಸಿಪಿಎಂನಿಂದ ಸೋಮವಾರ ತಲಶ್ಶೇರಿ ಪುರಸಭೆ ಮತ್ತು ನ್ಯೂ ಮಾಹೆ ಪಂಚಾಯಿತಿ ವ್ಯಾಪ್ತಿಯಲ್ಲಿ ಬಂದ್ ಆಚರಿಸಲಾಯಿತು.

## ‘ಎನ್‌ಇಪಿ ಅನುಷ್ಠಾನಕ್ಕೆ ಬಜೆಟ್ ಸಹಕಾರಿ’

ನವದೆಹಲಿ (ಪಿಟಿಐ): ರಾಷ್ಟ್ರೀಯ ಶಿಕ್ಷಣ ನೀತಿಯನ್ನು (ಎನ್‌ಇಪಿ) ದೇಶದಾದ್ಯಂತ ಸಮರ್ಪಕವಾಗಿ ಜಾರಿಗೊಳಿಸಲು ಕೇಂದ್ರದ ಪ್ರಸಕ್ತ ಸಾಲಿನ ಬಜೆಟ್ ಸಹಾಯಕವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಸೋಮವಾರ ತಿಳಿಸಿದರು.



ನರೇಂದ್ರ ಮೋದಿ

ರಾಷ್ಟ್ರೀಯ ಡಿಜಿಟಲ್ ವಿಶ್ವವಿದ್ಯಾಲಯ ಸ್ಥಾಪಿಸುವ ಕೇಂದ್ರ ಸರ್ಕಾರದ ನಿರ್ಧಾರದಿಂದ ದೇಶದ ಶೈಕ್ಷಣಿಕ ಸಂಸ್ಥೆಗಳಲ್ಲಿನ ಸೀಟುಗಳ ಸಮಸ್ಯೆ ಬಗೆಹರಿಯಲಿದೆ ಎಂದು ಹೇಳಿದರು.

ಕೇಂದ್ರದ ಬಜೆಟ್‌ನಿಂದ ಉಂಟಾಗುವ ಧನಾತ್ಮಕ ಪರಿಣಾಮಗಳ ಕುರಿತ ವೆಬಿನಾರ್‌ನಲ್ಲಿ ಮಾತನಾಡಿದ ಅವರು, ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದ ಪ್ರಮುಖ ಐದು ವಿಷಯಗಳ ಬಗ್ಗೆ ಬಜೆಟ್ ಕೇಂದ್ರೀಕರಿಸಿದೆ ಎಂದರು.

ಶಿಕ್ಷಣದ ಗುಣಮಟ್ಟ, ಕೌಶಲ ಅಭಿವೃದ್ಧಿ, ನಗರ ಯೋಜನೆ ಮತ್ತು ವಿನ್ಯಾಸ ಹಾಗೂ ಅನಿಮೇಷನ್ ತಂತ್ರಜ್ಞಾನಕ್ಕೆ ಬಜೆಟ್‌ನಲ್ಲಿ ಒತ್ತು ನೀಡಲಾಗಿದೆ ಎಂದು ಹೇಳಿದರು.

ಡಿಜಿಟಲ್ ವಿಶ್ವವಿದ್ಯಾಲಯವು ವಿನೂತನ ಮತ್ತು ಅಭೂತಪೂರ್ವ ಹೆಜ್ಜೆಯಾಗಿದೆ. ಅದು ವಿಶ್ವವಿದ್ಯಾಲಯಗಳಲ್ಲಿನ ಸೀಟುಗಳ ಸಮಸ್ಯೆಯನ್ನು ಸಂಪೂರ್ಣವಾಗಿ ಪರಿಹರಿಸುವ ಸಾಮರ್ಥ್ಯ ಹೊಂದಿದೆ ಎಂದ ಅವರು, ಶಿಕ್ಷಣ ಸಚಿವಾಲಯ, ಯುಜಿಸಿ ಮತ್ತು ಎಐಸಿಟಿಇ ಮತ್ತು ಡಿಜಿಟಲ್ ವಿಶ್ವವಿದ್ಯಾಲಯದ ಎಲ್ಲಾ ಸಂಬಂಧಪಟ್ಟವರು ಈ ಯೋಜನೆಗೆ ವೇಗ ನೀಡಬೇಕು ಎಂದು ಸೂಚಿಸಿದರು. ಈ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುವಾಗ ಅಂತರರಾಷ್ಟ್ರೀಯ ಗುಣಮಟ್ಟವನ್ನು ಗಮನದಲ್ಲಿಟ್ಟುಕೊಳ್ಳಬೇಕು ಎಂದೂ ಅವರು ತಿಳಿಸಿದರು.

ಸಾಂಕ್ರಾಮಿಕದ ಕಾಲಘಟ್ಟದಲ್ಲಿ ಡಿಜಿಟಲ್ ಸಂಪರ್ಕವು ಶಿಕ್ಷಣ ವ್ಯವಸ್ಥೆಯನ್ನು ಚಲನಶೀಲತೆಯಲ್ಲಿ ಇರುವಂತೆ ಮಾಡಿದೆ ಎಂದ ಅವರು, ಶೈಕ್ಷಣಿಕ ಮೂಲಸೌಕರ್ಯಗಳಾದ ಇ-ವಿದ್ಯಾ, ಒಂದು ತರಗತಿ, ಒಂದು ಚಾನೆಲ್, ಡಿಜಿಟಲ್ ಲ್ಯಾಬ್‌ಗಳು ಮತ್ತು ಡಿಜಿಟಲ್ ವಿಶ್ವವಿದ್ಯಾಲಯವು ಯುವಜನತೆಯ ಜ್ಞಾನವೃದ್ಧಿ ಮತ್ತು ಪ್ರಗತಿಗೆ ಸಾಕಷ್ಟು ಸಹಾಯ ಮಾಡಲಿವೆ ಎಂದರು.

### ಮಾತೃಭಾಷೆಗೆ ಒತ್ತು

ಅಂತರರಾಷ್ಟ್ರೀಯ ಮಾತೃಭಾಷಾ ದಿನದ (ಫೆ. 21) ಬಗ್ಗೆ ಉಲ್ಲೇಖಿಸಿದ ಪ್ರಧಾನಿ ನರೇಂದ್ರ ಮೋದಿ, ಮಾತೃಭಾಷಾ ಮಾಧ್ಯಮದಲ್ಲಿ ಶಿಕ್ಷಣ ನೀಡುವುದರಿಂದ ಮಕ್ಕಳ ಮಾನಸಿಕ ಬೆಳವಣಿಗೆ ಸಾಧ್ಯವಾಗುತ್ತದೆ ಎಂದರು.

‘ಈಗಾಗಲೇ ಹಲವು ರಾಜ್ಯಗಳಲ್ಲಿ, ವೈದ್ಯಕೀಯ ಮತ್ತು ತಾಂತ್ರಿಕ ಶಿಕ್ಷಣವನ್ನು ಸ್ಥಳೀಯ ಭಾಷೆಗಳಲ್ಲಿಯೂ ನೀಡಲಾಗುತ್ತಿದೆ. ಸ್ಥಳೀಯ ಭಾರತೀಯ ಭಾಷೆಗಳಲ್ಲಿ ಡಿಜಿಟಲ್ ರೂಪದಲ್ಲಿ ಅತ್ಯುತ್ತಮ ಪಠ್ಯ ಸಿದ್ಧಪಡಿಸಬೇಕು. ಅಂಥ ಪಠ್ಯವು ಇಂಟರ್‌ನೆಟ್, ಮೊಬೈಲ್ ಫೋನ್, ಟಿ.ವಿ ಮತ್ತು ರೇಡಿಯೊ ಮೂಲಕ ದೊರೆಯುವಂತಿರಬೇಕು’ ಎಂದು ಅವರು ಸಲಹೆ ನೀಡಿದರು.

# ಎಲ್ಲರನ್ನು ಒಟ್ಟಾಗಿ ಮುನ್ನಡೆಸುವ ಸಾಮರ್ಥ್ಯ ತೆಲಂಗಾಣ ಮುಖ್ಯಮಂತ್ರಿಗಿದೆ: ರಾವುತ್

ನಾಗ್ಪುರ (ಪಿಟಿಐ): ರಾಷ್ಟ್ರಮಟ್ಟದಲ್ಲಿ ಬಿಜೆಪಿ ವಿರುದ್ಧ ಎಲ್ಲ ಪಕ್ಷಗಳನ್ನು ಒಟ್ಟುಗೂಡಿಸಿ ಮುನ್ನಡೆಸುವ ಸಾಮರ್ಥ್ಯ ತೆಲಂಗಾಣದ ಮುಖ್ಯಮಂತ್ರಿ ಕೆ. ಚಂದ್ರಶೇಖರ್ ರಾವ್ ಅವರಿಗೆ ಇದೆ ಎಂದು ಶಿವಸೇನಾ ಸಂಸದ ಸಂಜಯ್ ರಾವುತ್ ಸೋಮವಾರ ತಿಳಿಸಿದ್ದಾರೆ.



ಸಂಜಯ್ ರಾವುತ್

ಮಹಾರಾಷ್ಟ್ರದ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಮತ್ತು ಎನ್‌ಸಿಪಿ ಅಧ್ಯಕ್ಷ ಶರದ್ ಪವಾರ್ ಅವರನ್ನು ಚಂದ್ರಶೇಖರ್ ರಾವ್ ಅವರು ಭಾನುವಾರಷ್ಟೇ ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ. ಅದರ ಬೆನ್ನಲ್ಲೇ ರಾವುತ್ ಅವರು ಈ ಹೇಳಿಕೆ ನೀಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಸೋಲು ಕಾಣುತ್ತದೆ ಎಂದರು.

ತೆಲಂಗಾಣ ಮುಖ್ಯಮಂತ್ರಿಯನ್ನು ಹೊಗಳಿದ ರಾವುತ್, ‘ಚಂದ್ರಶೇಖರ್ ರಾವ್ ಅವರು ಶ್ರಮವಹಿಸುವ ನಾಯಕರಾಗಿದ್ದಾರೆ. ತಮ್ಮ ರಾಜಕೀಯ ಜೀವನದುದ್ದಕ್ಕೂ ಸಾಕಷ್ಟು ಹೋರಾಟಗಳನ್ನು ಮಾಡಿರುವ ಅವರು, ಎಲ್ಲರನ್ನೂ ಒಟ್ಟಾಗಿ ಮುನ್ನಡೆಸುವ ಸಾಮರ್ಥ್ಯ ಹೊಂದಿದ್ದಾರೆ. ಭಾನುವಾರ ನಡೆದ ಸಭೆಯಲ್ಲಿ, ಉಭಯ ನಾಯಕರು ಅಭಿವೃದ್ಧಿ ಮತ್ತು ದೇಶದ ರಾಜಕೀಯ ಪರಿಸ್ಥಿತಿ ಕುರಿತು ಚರ್ಚೆ ನಡೆಸಿದ್ದಾರೆ’ ಎಂದು ಅವರು ಹೇಳಿದರು.

**‘ಈ ರೀತಿಯ ಪ್ರಯೋಗಗಳು ವಿಫಲವಾಗಿವೆ’:** ಕೇಂದ್ರದ ನರೇಂದ್ರ ಮೋದಿ ಸರ್ಕಾರದ ವಿರುದ್ಧ ಇತರ ಪಕ್ಷಗಳನ್ನು ಒಗ್ಗೂಡಿಸುವ ಹಲವು ಪ್ರಯೋಗಗಳು ಈ ಹಿಂದೆಯೇ ವಿಫಲವಾಗಿವೆ ಎಂದು ಮಹಾರಾಷ್ಟ್ರದ ಬಿಜೆಪಿ ನಾಯಕ ದೇವೇಂದ್ರ ಫಡಣವೀಸ್ ದೂರಿದ್ದಾರೆ.

ಔರಂಗಾಬಾದ್‌ನಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳು ಈ ರೀತಿ ಭೇಟಿಯಾಗುವುದು ಹೊಸದೇನಲ್ಲ. ಈ ಹಿಂದೆ ನಾನು ಮಹಾರಾಷ್ಟ್ರದ ಮುಖ್ಯಮಂತ್ರಿಯಾಗಿದ್ದಾಗಲೂ ತೆಲಂಗಾಣದ ಮುಖ್ಯಮಂತ್ರಿ ಕೆ. ಚಂದ್ರಶೇಖರ್ ರಾವ್ ಅವರು ನನ್ನನ್ನು ಭೇಟಿ ಮಾಡಿದ್ದರು’ ಎಂದು ತಿಳಿಸಿದ್ದಾರೆ.

## ಆಫ್‌ಲೈನ್ ಪರೀಕ್ಷೆ ರದ್ದು; ವಿಚಾರಣೆಗೆ ‘ಸುಪ್ರೀಂ’ ಒಪ್ಪಿಗೆ

ನವದೆಹಲಿ (ಪಿಟಿಐ): ಕೇಂದ್ರೀಯ ಪ್ರೌಢಶಿಕ್ಷಣ ಮಂಡಳಿ (ಸಿಬಿಎಸ್‌ಇ) ಮತ್ತು ಇತರ ಪರೀಕ್ಷಾ ಮಂಡಳಿಗಳು ಪ್ರಸಕ್ತ ವರ್ಷ ನಡೆಸಲಿರುವ 10 ಮತ್ತು 12ನೇ ತರಗತಿಗಳ ಆಫ್‌ಲೈನ್ (ಭೌತಿಕ) ಪರೀಕ್ಷೆಗಳನ್ನು ರದ್ದುಗೊಳಿಸುವಂತೆ ಕೋರಿ ಸಲ್ಲಿಕೆಯಾದ ಅರ್ಜಿಯ ವಿಚಾರಣೆಗೆ ಪಟ್ಟಿ ಮಾಡಲು ಸುಪ್ರೀಂ ಕೋರ್ಟ್ ಸೋಮವಾರ ಒಪ್ಪಿಗೆ ನೀಡಿದೆ.

ಕೋವಿಡ್ -19ರ ಸಾಂಕ್ರಾಮಿಕ ಕಾಲಘಟ್ಟದಲ್ಲಿ ಭೌತಿಕ ಪರೀಕ್ಷೆ ನಡೆಸಬಾರದು ಎಂದು ಕೋರಿ ಸಲ್ಲಿಕೆಯಾಗಿರುವ ಅರ್ಜಿಯನ್ನು ಪರಿಶೀಲಿಸಿದ ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ, ನ್ಯಾಯಮೂರ್ತಿಗಳಾದ ಎ.ಎಸ್. ಬೋಪಣ್ಣ ಮತ್ತು ಹಿಮಾ ಕೊಹ್ಲಿ ಅವರನ್ನೊಳಗೊಂಡ ಪೀಠವು, ‘ಈ ವಿಷಯ ನ್ಯಾಯಮೂರ್ತಿ ಎ.ಎಂ. ಖಾನ್ವಿಲ್ಕರ್ ಅವರ ಪೀಠದ ಮುಂದೆ ಹೋಗಲಿ’ ಎಂದು ಸೂಚಿಸಿತು.

ಸಾಮಾಜಿಕ ಕಾರ್ಯಕರ್ತರಾದ ಅನುಭಾ ಶ್ರೀವಾಸ್ತವ ಸಹಾಯ್ ಅವರ ಪರ ಅರ್ಜಿ ಸಲ್ಲಿಸಿರುವ ವಕೀಲ ಪ್ರಶಾಂತ್ ಪದ್ಮನಾಭನ್, ಶಿಕ್ಷಣ ಮಂಡಳಿಗಳಿಗೆ ಪರ್ಯಾಯ ಮೌಲ್ಯಮಾಪನ ವಿಧಾನಗಳನ್ನು ರೂಪಿಸಲು ನಿರ್ದೇಶಿಸಬೇಕು ಎಂದೂ ಅರ್ಜಿಯಲ್ಲಿ ಮನವಿ ಮಾಡಿದ್ದಾರೆ.

ಸಿಬಿಎಸ್‌ಇಯು 10 ಮತ್ತು 12ನೇ ತರಗತಿಯ ಎರಡನೇ ಹಂತದ ಬೋರ್ಡ್ ಪರೀಕ್ಷೆಗಳನ್ನು ಏಪ್ರಿಲ್ 26ರಿಂದ ನಡೆಸಲು ನಿರ್ಧರಿಸಿದೆ.

# ಕ್ಷೇಮ ಕುಶಲ



# ಒಳ್ಳೆಯ ಜೀವನವೇ ಆರೋಗ್ಯ

ಆರೋಗ್ಯವಂತರಾಗಿರಲು ತೂಕ, ಬಿಪಿ ಅಥವಾ ರಕ್ತದಲ್ಲಿನ ಸಕ್ಕರೆಯ ಪ್ರಮಾಣಗಳೇ ನಮ್ಮ ಗುರಿಯಾಗಬಾರದು.

ಡಾ. ಶ್ರೀನಿವಾಸ ಹರಪನಹಳ್ಳಿ

ಇಂದಿನ ಧಾವಂತದ ಜೀವನಶೈಲಿಯಲ್ಲಿ ಎಲ್ಲರಿಗೂ ಆರೋಗ್ಯದ ಬಗ್ಗೆ ಚಿಂತೆಯಿರುವುದು ಸಹಜ. 'ಅಯ್ಯೋ! ನನ್ನ ಬಿಪಿ ಕಂಟ್ರೋಲಿಗೆ ಬರ್ತಾ ಇಲ್ಲ, ಸಕ್ಕರೆ ಪ್ರಮಾಣ ಇಳೀತಾ ಇಲ್ಲ, ತೂಕ ಹೆಚ್ತಾ ಇದೆ' ಎಂದು ಕೊರಗುವವರೇ ತುಂಬ ಜನರು ಇದ್ದಾರೆ. ಹುಟ್ಟಿನಿಂದ ಹಿಡಿದು ಸಾಯುವವರೆಗೆ ನಾವೆಲ್ಲರೂ ಹಲವಾರು ಬಾರಿಯಾದರೂ ವಿಚಾರ ಮಾಡುವ ಸಂಗತಿಯೆಂದರೆ ಆರೋಗ್ಯ. ಇದರ ಬಗ್ಗೆ ಮಾತನಾಡದ, ಯೋಚಿಸದ ಮನುಜರಿಲ್ಲ. ನಿಜಕ್ಕೂ ಆರೋಗ್ಯ ಎಂದರೇನು? ಅದೊಂದು ಅನುಭವವೇ, ಜೀವನಶೈಲಿಯೇ ಅಥವಾ ದುಡ್ಡು ತೆತ್ತು ತರಬಹುದಾದ ಸರಕೇ?

ರೋಗವಿಲ್ಲದಿರುವಿಕೆಯೇ ಆರೋಗ್ಯ ಎಂಬುದು ಸಾಮಾನ್ಯ ತಿಳಿವಳಿಕೆ. ಆದರೆ ಅದು ಮಾತ್ರ ಆರೋಗ್ಯ ಆಗಿರಲು ಸಾಧ್ಯವಿಲ್ಲ. ಅದಕ್ಕೆಂದೇ 'ವಿಶ್ವ ಆರೋಗ್ಯ ಸಂಸ್ಥೆ' (WHO) 1948ರಲ್ಲಿ ಆರೋಗ್ಯದ ವ್ಯಾಖ್ಯೆಯನ್ನು ಪರಿಚಯಿಸಿತು. ಅದೇನೆಂದರೆ 'ಆರೋಗ್ಯವು ಸಂಪೂರ್ಣ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಯೋಗಕ್ಷೇಮದ ಸ್ಥಿತಿಯಾಗಿದೆ ಮತ್ತು ಕೇವಲ ರೋಗ ಅಥವಾ ದುರ್ಬಲತೆಯ ಅನುಪಸ್ಥಿತಿಯಲ್ಲ'. ಕೆಲವು ವರ್ಷಗಳ ನಂತರ ಇದಕ್ಕೆ 'ಆಧ್ಯಾತ್ಮಿಕ ಯೋಗಕ್ಷೇಮ'ವೂ ಸೇರಿತು. ಇದರ ಜೊತೆಗೆ 2000ದ ಹೊತ್ತಿಗೆ ಎಲ್ಲರೂ ಈ ಯೋಗಕ್ಷೇಮದ ಸ್ಥಿತಿಯನ್ನು ತಲುಪಬೇಕು ಎಂಬ ಆಶಯವನ್ನೂ WHO ವ್ಯಕ್ತಪಡಿಸಿತ್ತು.

ಈಗ ಆರೋಗ್ಯದ ಪರಿಕಲ್ಪನೆಯೂ ಬದಲಾಗಿದೆ. ಅದರ ಪ್ರಕಾರ ಆರೋಗ್ಯವೆಂದರೆ 'ಸಾಮಾಜಿಕ, ದೈಹಿಕ ಮತ್ತು ಭಾವನಾತ್ಮಕ ಸವಾಲುಗಳು ನಮ್ಮಲ್ಲಿ ಇದ್ದಾಗ್ಯೂ, ಹೊಂದಿಕೊಳ್ಳುವ ಮತ್ತು ಸ್ವತಃ ನಿಭಾಯಿಸುವ ಸಾಮರ್ಥ್ಯವೇ ಆರೋಗ್ಯ'. ಎಂದರೆ ನಮ್ಮಲ್ಲಿ ಕೆಲವು ಊನಗಳಿದ್ದಾಗ್ಯೂ ಎಲ್ಲ ಕೆಲಸ-ಕಾರ್ಯಗಳನ್ನು, ಸಾಮಾಜಿಕ ಜವಾಬ್ದಾರಿಗಳನ್ನು ನಾವು ಸಸೂತ್ರವಾಗಿ ನಿರ್ವಹಿಸುತ್ತಿದ್ದೇವೆ ಎಂದರೆ ನಾವು ಆರೋಗ್ಯವಾಗಿದ್ದೇವೆ ಎಂದರ್ಥ. ಇದು ತಮ್ಮ ತಮ್ಮ ಕಾಯಿಲೆಗಳನ್ನು (ಬಿಪಿ, ಸಕ್ಕರೆಕಾಯಿಲೆ ಇತ್ಯಾದಿ) ನಿಯಂತ್ರಣದಲ್ಲಿಟ್ಟುಕೊಂಡು ಧೈರ್ಯದಿಂದ ಜೀವನವನ್ನು ಸಾಗಿಸುತ್ತಿರುವ ಅನೇಕರನ್ನು ಆರೋಗ್ಯವಂತರ ವ್ಯಾಪ್ತಿಗೆ ಒಳಪಡಿಸುತ್ತದೆ.

ಇದಲ್ಲದೆ ಆರೋಗ್ಯವು ಇನ್ನೂ ಅನೇಕ ಅಂಶಗಳಿಂದ ಪ್ರಭಾವಿತವಾಗುತ್ತದೆ ಎಂದು ಕೂಡ ಪ್ರತಿಪಾದಿಸಲಾಗಿದೆ. ಉದಾಹರಣೆಗೆ, ಪರಿಸರತಜ್ಞರು ಆರೋಗ್ಯವನ್ನು ಮಾನವ ಮತ್ತು ಅವನ ಸುತ್ತಲಿನ ಪರಿಸರದ ನಡುವಿನ ಸಮತೋಲನವೆಂದೂ ಮತ್ತು ಅನಾರೋಗ್ಯವನ್ನು ಅಸಮತೋಲನವೆಂದೂ ಪರಿಗಣಿಸಿದ್ದಾರೆ. ಸಾಮಾಜಿಕ ವಿಜ್ಞಾನತಜ್ಞರು ಆರೋಗ್ಯವು ಕೇವಲ ವೈದ್ಯಕೀಯ ಅಂಶಗಳ ಸಮೀಕರಣವಲ್ಲ, ಅದು ಜನರ ಸಾಮಾಜಿಕ, ಸಾಂಸ್ಕೃತಿಕ, ಮತ್ತು ರಾಜಕೀಯ ಅಂಶಗಳಿಂದ ಕೂಡ ಪ್ರಭಾವಿತವಾಗಿದೆ ಎಂದು ತೋರಿಸಿದ್ದಾರೆ. ಪ್ರಾಚೀನ ಗ್ರೀಕ್ ತತ್ವಜ್ಞಾನಿಗಳೂ ಕೂಡ ಆರೋಗ್ಯದ ಬಗ್ಗೆ ಇಂತಹುದೇ ನಿಲುವನ್ನು ಹೊಂದಿದ್ದರು. ಸಮಗ್ರ ಅಥವಾ ಹೋಲಿಸ್ಟಿಕ್ ಪರಿಕಲ್ಪನೆಯು ಆರೋಗ್ಯದ ಮೇಲೆ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಪರಿಸರದ ಪ್ರಭಾವಗಳನ್ನು ಗುರುತಿಸುತ್ತದೆ. ಒಟ್ಟಾರೆಯಾಗಿ ವ್ಯಕ್ತಿಯ ಆರೋಗ್ಯವು ಒಂದು ಬಹು ಆಯಾಮದ ಪ್ರಕ್ರಿಯೆ.

ಡ್ಯಾನಿಷ್ ಸಂಸ್ಕೃತಿಯಲ್ಲಿ ಪ್ರಚಲಿತವಿರುವ ಹ್ಯುಗಾ (Hygge) ಮನೋಭಾವನೆ ನಮ್ಮಲ್ಲಿರುವ 'ಹಾಸಿಗೆ ಇದ್ದಷ್ಟೇ ಕಾಲು ಚಾಚು' ಅಥವಾ 'ನೆಮ್ಮದಿ ಚಿಕ್ಕಚಿಕ್ಕ ವಸ್ತುಗಳಲ್ಲೂ ದೊರಕುವುದು' ಎಂಬ ಅಭಿಪ್ರಾಯವನ್ನೇ ಬಿಂಬಿಸುತ್ತದೆ. ಅದೇ ರೀತಿ ಸ್ವೀಡನ್ ದೇಶದ ಲಾಗೋಮ್ (Lagom) ಮನೋಭಾವನೆ 'ಎಷ್ಟು ಬೇಕೋ ಅಷ್ಟು ಮಾತ್ರ ನಿಮ್ಮ ಹತ್ತಿರವಿರಲಿ' ಎನ್ನುತ್ತದೆ. ಈ ವಿಚಾರಧಾರೆಗಳು ಆರೋಗ್ಯದ ವಿಷಯದಲ್ಲೂ ಇತ್ತೀಚಿಗೆ ಹೆಚ್ಚು ಪ್ರಾಮುಖ್ಯವನ್ನು ಪಡೆಯುತ್ತಿವೆ.

ಈ ಎಲ್ಲ ಹೊಸ ವಿಚಾರಧಾರೆಗಳ ತುಲನೆ ಮಾಡಿದಾಗ ಎರಡು ಅಂಶಗಳನ್ನು ನಾವು ಗಮನಿಸಬಹುದು. ಮೊದಲನೆಯದಾಗಿ, ಈ ವಿಚಾರಗಳು ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಮೊದಲಿನಿಂದಲೇ ಹಾಸುಹೊಕ್ಕಾಗಿವೆ. ಕೌಟುಂಬಿಕ ಮೌಲ್ಯಗಳು, ಸಾಮಾಜಿಕ ಗೌರವ ಹಾಗೂ ಶುಚಿತ್ವ ನಮ್ಮ ಬದುಕಿನ ಭಾಗಗಳೇ ಆಗಿವೆ. ಪಾಶ್ಚಾತ್ಯ ವಿಚಾರಧಾರೆಗಳು ಈಗಲಾದರೂ ನಮ್ಮ ಸನಾತನ ವಿಚಾರಧಾರೆಗಳ ಕಡೆಗೆ ಹರಿಯುತ್ತಿರುವುದು ನಮಗೆ ಹೆಮ್ಮೆಯ ವಿಷಯವಲ್ಲವೇ? ಎರಡನೆಯದಾಗಿ, ಇವ್ಯಾವುವೂ ನಮ್ಮ ತೂಕ, ಬಿಪಿ ಅಥವಾ ರಕ್ತದಲ್ಲಿನ ಸಕ್ಕರೆ ಅಂಶ ಇಷ್ಟೇ ಪ್ರಮಾಣದಲ್ಲಿ ಇರಬೇಕು ಎಂದು ಹೇಳಿಲ್ಲ. ಇದರರ್ಥವೇನೆಂದರೆ ಆರೋಗ್ಯವಂತರಾಗಿರಲು ತೂಕ, ಬಿಪಿ ಅಥವಾ ರಕ್ತದಲ್ಲಿನ ಸಕ್ಕರೆಯ ಪ್ರಮಾಣಗಳೇ ನಮ್ಮ ಗುರಿಯಾಗಬಾರದು. ಮೇಲೆ ತಿಳಿಸಿದಂತೆ ಉತ್ತಮ ಜೀವನಶೈಲಿ, ಸಮತೋಲಿತ ಆಹಾರ, ಸುತ್ತಮುತ್ತಲಿನ ಪರಿಸರದ ಜೊತೆ ಒಂದಾಗುವುದು, ಸಾಮಾಜಿಕವಾಗಿ ಸಕ್ರಿಯವಾಗಿರುವುದು ಇತ್ಯಾದಿಗಳೇ ನಮ್ಮ ಪರಮೋಚ್ಚ ಗುರಿಗಳಾಗಬೇಕು. ಆಗ ತೂಕ, ಬಿಪಿ ಅಥವಾ ರಕ್ತದಲ್ಲಿನ ಸಕ್ಕರೆ ಅಂಶಗಳೂ ತಹಬಂದಿಯಲ್ಲೇ ಇರುತ್ತವೆ.

ಆದರೆ ಇಂದಿನ ಡಿಜಿಟಲ್ ಯುಗದಲ್ಲಿ ಇವೆಲ್ಲಾ ಸಾಧ್ಯವೇ ಎಂದು ಯೋಚಿಸಿದಾಗ ದೂರದಲ್ಲೆಲ್ಲೋ ಬೆಳ್ಳಿರೇಖೆಯೊಂದು ಕಂಡಂತೆ ಭಾಸವಾಗುತ್ತದೆ. ಏಕೆಂದರೆ ಇಂದಿನ ಆಧುನಿಕ ಪದ್ಧತಿಯ ವೈದ್ಯಕೀಯಶಾಸ್ತ್ರ ಕೂಡ ಒಂದು ಹಂತದಲ್ಲಿ ಇದನ್ನೇ ಪ್ರತಿಪಾದಿಸುತ್ತದೆ. ಕೇವಲ ದೇಹಕ್ಕೆ ಚಿಕಿತ್ಸೆ ನೀಡುವುದರ ಬದಲು ರೋಗ ಬರದಂತೆ ತಡೆಯಲು ಏನು ಮಾಡಬಹುದು (Primordial prevention) ಎಂಬುದರ ಬಗ್ಗೆ ಈಗ ಹೆಚ್ಚು ಒತ್ತು ನೀಡಲಾಗುತ್ತಿದೆ. ನಮ್ಮ ಆರೋಗ್ಯದ ರಕ್ಷಣೆಗೆ ವೈದ್ಯರ ಆವಶ್ಯಕತೆ ಖಂಡಿತ ಇದೆ. ಆದರೆ ಅದಕ್ಕಿಂತ ಹೆಚ್ಚು ಅವಶ್ಯವಿರುವುದು ನಮ್ಮ ದೇಹವನ್ನು ಸರಿಯಾಗಿ ತಿಳಿದುಕೊಳ್ಳುವ ಮತ್ತು ಆರೈಕೆಮಾಡುವ ಸುದೃಢ ಮನೋಭಾವವನ್ನು ಬೆಳೆಸಿಕೊಳ್ಳುವುದು. 'A sound mind in a sound body' ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದು ಇದೇ ತಾನೇ!



# ಕೋವಿಡ್ ಕೊಟ್ಟ ಸಕ್ಕರೆ

ಡಾ. ವಿನಯ ಶ್ರೀನಿವಾಸ್



**ಕೋವಿಡ್** ಸೋಂಕಿನಿಂದ ಬಳಲಿದ ಕೆಲವರಲ್ಲಿ ಅನೇಕ ಆರೋಗ್ಯ ಸಮಸ್ಯೆಗಳನ್ನು ವೈದ್ಯರು ಗುರುತಿಸಿದ್ದಾರೆ. ಕೋವಿಡ್‌ನಿಂದ ಗುಣಮುಖರಾದರೂ ಒಂದಿಷ್ಟು ದಿನಗಳ ನಂತರ ವಿವಿಧ ಆರೋಗ್ಯ ಸಮಸ್ಯೆಗಳನ್ನು ಹೊತ್ತು ರೋಗಿಗಳು ವೈದ್ಯರಲ್ಲಿಗೆ ಬರುವುದಿದೆ. ಈ ಸೋಂಕು ಮುಖ್ಯವಾಗಿ ಶ್ವಾಸಕೋಶದ ಮೇಲೆ ಪರಿಣಾಮ ಬೀರಿದರೂ ಶರೀರದ ಇತರ ಅಂಗಾಂಗ ವ್ಯವಸ್ಥೆಗಳ ಕಾರ್ಯಕ್ಷಮತೆ ಕ್ಷೀಣಿಸುವಲ್ಲಿಯೂ ಇದು ಕಾರಣವಾಗಬಹುದು. ಸೋಂಕಿನ ಸಮಯದಲ್ಲಿ ಹೃದಯ, ಮೇದೋಜೀರಕ ಗ್ರಂಥಿ, ಜೀರ್ಣಾಂಗವ್ಯವಸ್ಥೆಯ ಸ್ನಾಯುಗಳು ಮೊದಲಾದ ಅಂಗಾಂಗ ವ್ಯೂಹಗಳೂ ಉರಿಯೂತದ ಸೂಚಕಗಳ ಪ್ರಭಾವಕ್ಕೆ ಒಳಗಾಗುವುದೇ ಇದಕ್ಕೆ ಮುಖ್ಯ ಕಾರಣ. ಹಾಗಾಗಿಯೇ ಹಲವರಲ್ಲಿ ದೀರ್ಘಾವಧಿಯ ಕೆಮ್ಮು, ಕ್ಷಯರೋಗ, ಮಧುಮೇಹ, ನಿದ್ರಾಹೀನತೆ, ಅತಿಯಾದ ಸುಸ್ತು, ಹಸಿವು ಕಡಿಮೆಯಾಗುವುದು ಮೊದಲಾದ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ.

ಈಗಾಗಲೇ ಭಾರತದಲ್ಲಿ ಮಧುಮೇಹಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಏರುತ್ತಿದ್ದು, ಇನ್ನು ಸ್ವಲ್ಪ ಸಮಯದಲ್ಲಿಯೇ ಭಾರತ ಮಧುಮೇಹದ ರಾಜಧಾನಿ ಎನ್ನಿಸಿಕೊಳ್ಳುತ್ತದೆ ಎಂಬುದು ತಜ್ಞರ ಎಣಿಕೆ. ಕೋವಿಡ್ ಬಾಧಿತರಲ್ಲಿ ಹೆಚ್ಚಾಗಿ ಕಂಡು ಬರುತ್ತಿರುವ ಮಧುಮೇಹವು ಎಲ್ಲರಲ್ಲಿಯೂ ಆತಂಕವನ್ನು ಹೆಚ್ಚಿಸಿದೆ. ಇದಕ್ಕೆ ಕಾರಣವೇನಿರಬಹುದು ಎಂಬುದನ್ನು ಅವಲೋಕಿಸಿದಾಗ ಕೆಲವು ಅಂಶಗಳು ಬೆಳಕಿಗೆ ಬರುತ್ತವೆ.

ಕೋವಿಡ್ ಸೋಂಕಿನ ಉರಿಯೂತವನ್ನು ನಿಯಂತ್ರಿಸಲು ವೈದ್ಯರು ಸ್ಟಿರಾಯ್ಡ್ ಬಳಸಬೇಕಾಗಿ ಬಂದಿದ್ದನೋ ಸರಿ. ನುರಿತ, ತಜ್ಞವೈದ್ಯರು ಅದನ್ನು ಸರಿಯಾದ ಕ್ರಮ ಮತ್ತು ಪ್ರಮಾಣದಲ್ಲಿ ಉಪಯೋಗಿಸುವುದರ ಬಗ್ಗೆ ಒತ್ತುಕೊಟ್ಟರು. ಆದರೆ ಆ ಬಗ್ಗೆ ಸರಿಯಾದ ವೈಜ್ಞಾನಿಕ ಮಾಹಿತಿಯಿಲ್ಲದ ಅನೇಕರಿಂದ ಆದ ಅತಿಯಾದ ಸ್ಟಿರಾಯ್ಡ್ ಬಳಕೆ. ಜನರಿಂದ ವೈದ್ಯರನ್ನು ಸಂಪರ್ಕಿಸದೇ ತಮ್ಮ ಪರಿಚಿತರಿಗೆ ವೈದ್ಯರು ಸೂಚಿಸಿದ ಮಾತ್ರೆ-ಔಷಧಗಳ ಸೇವನೆ. ವೈದ್ಯರ ಸಮಾಲೋಚನೆಯಿಲ್ಲದೆ ದೀರ್ಘಾವಧಿಯವರೆಗೆ ಸ್ಟಿರಾಯ್ಡ್ ಔಷಧಗಳ ಉಪಯೋಗ.

ಮೊದಲ ಎರಡು ಅಲೆಗಳ ಸಮಯದಲ್ಲಿ ವ್ಯಕ್ತಿ ತಾನು ಅಥವಾ ತನ್ನ ಹತ್ತಿರದವರು ಕೋವಿಡ್ ಸೋಂಕಿಗೆ ತುತ್ತಾದಾಗ ಅತಿಯಾದ ಒತ್ತಡ ಮತ್ತು ಆತಂಕಕ್ಕೆ ಒಳಗಾಗಿದ್ದು ನಿಜ. ಹತ್ತಿರದವರ ಸಾವು-ನೋವುಗಳಿಂದಾಗಿ ಹಲವರು ದುಃಖಿತರಾಗಿದ್ದೂ ಇದೆ. ಈ ರೀತಿಯ ಅತಿಯಾದ ಒತ್ತಡ ಮತ್ತು ಆತಂಕದಿಂದಾಗಿ ವ್ಯಕ್ತಿಯ ಶರೀರದಲ್ಲಿ ಹೆಚ್ಚಾದ ಆಂತರಿಕ ಸ್ಟಿರಾಯ್ಡ್ ಉತ್ಪತ್ತಿ.

ಸೋಂಕನ್ನು ನಿಯಂತ್ರಿಸಲೆಂದು ಜಾರಿಗೆ ಬಂದ ಲಾಕ್‌ಡೌನ್, ಅದರ ಪರಿಣಾಮವಾಗಿ ನಾವು ಅಳವಡಿಸಿಕೊಳ್ಳಬೇಕಾಗಿ ಬಂದ ಆನ್‌ಲೈನ್ ತರಗತಿ, ಮನೆಯಿಂದಲೇ ಕಚೇರಿಯ ಕೆಲಸ, ಮನೆಯಿಂದ ಹೊರಗೆ ಹೋಗುವುದನ್ನು ತಪ್ಪಿಸಲು ಎಲ್ಲ ಅಗತ್ಯ ಸಾಮಗ್ರಿಗಳನ್ನು ಆನ್‌ಲೈನ್‌ನಲ್ಲಿ ತರಿಸಿಕೊಳ್ಳುವ ಅಭ್ಯಾಸ ಮುಂತಾದುವು ನಮ್ಮ ಬದುಕನ್ನೇ ಜಡವಾಗಿಸಿಬಿಟ್ಟವು. ಇದರಿಂದ ಹೆಚ್ಚಾದ ಬೊಜ್ಜು, ಅಧಿಕ ತೂಕ ಮತ್ತು ರಕ್ತದ ಕೊಲೆಸ್ಟೆರಾಲ್ ಮಟ್ಟ.

ಮನೆಯಲ್ಲಿ ಕುಳಿತು ಒಂದು ರೀತಿಯ ಆತಂಕ ಅಥವಾ ಮನಸ್ಸಿನ ಅಸ್ಥಿರತೆಯಿಂದಾಗಿ ಅತಿಯಾದ ತಿನ್ನುವ ಅಭ್ಯಾಸ. ಲಾಕ್‌ಡೌನ್ ಸಮಯದಲ್ಲಿ ಹೆಚ್ಚಾದ ಜಂಕ್ ಆಹಾರ, ಎಣ್ಣೆಯಲ್ಲಿ ಕರಿದ, ಹುರಿದ ತಿನಿಸುಗಳ ಸೇವನೆ.

ಮನೆಯಲ್ಲಿಯೆ ಕಡ್ಡಾಯವಾಗಿ ಇರಬೇಕಾಗಿ ಬಂದದ್ದರಿಂದ ಜಾಗಿಂಗ್, ವಾಕಿಂಗ್, ಜಿಮ್, ಈಜು ಮೊದಲಾದ ಹೊರಾಂಗಣ ದೇಹದಂಡನೆಗೆ ಹೊಂದಿಕೊಂಡವರಿಗೆ ದಿಢೀರ್ ವ್ಯಾಯಾಮದ ಕೊರತೆ.

ಮನೆಯ ಹೊರಗಿನ ಚಟುವಟಿಕೆಗಳು ಸ್ತಬ್ಧವಾದ್ದರಿಂದ ಕಡಿಮೆಯಾದ ಸೂರ್ಯನ ಹಾಗೂ ಪ್ರಕೃತಿಯೊಂದಿಗಿನ ಒಡನಾಟ. ಸದೃಢ ರೋಗನಿರೋಧಕ ವ್ಯವಸ್ಥೆಗೆ ಇವೆರಡೂ ಬಹಳ ಮುಖ್ಯ.

ಈ ಎಲ್ಲ ಅಂಶಗಳು ಕೋವಿಡ್ ಬಾಧಿತರ ಶರೀರದಲ್ಲಿ ಉರಿಯೂತ ಮತ್ತು ರಕ್ತನಾಳಗಳ ತಡೆಯನ್ನು ಹೆಚ್ಚು ಮಾಡಲು ಪೂರಕವಾದವು. ಅದು ಮೇದೋಜೀರಕ ಗ್ರಂಥಿಯ ಐಲೆಟ್ ಜೀವಕೋಶಗಳ ನಶಿಸುವಿಕೆಗೆ ಕಾರಣವಾದಾಗ ಶರೀರದಲ್ಲಿ ಇನ್‌ಸುಲಿನ್ ಉತ್ಪತ್ತಿ ಕುಂಠಿತಗೊಳ್ಳುತ್ತದೆ. ಹಾಗಾಗಿಯೇ ಮಧುಮೇಹದ ಹೊಸ್ತಿಲಲ್ಲಿದ್ದ (ಪ್ರಿ-ಡಯಾಬಿಟಿಸ್) ಬಹಳಷ್ಟು ಮಂದಿ ಪೂರ್ಣ ಪ್ರಮಾಣದ ಮಧುಮೇಹಕ್ಕೆ ತುತ್ತಾದರು.

## ನಾವು ಮಾಡಬೇಕಾದದ್ದೇನು?

- ಸುದೀರ್ಘ ಅವಧಿಯವರೆಗೆ ಒಂದೇ ಜಾಗದಲ್ಲಿ ಕುಳಿತಿರುವುದು ಬೇಡ, ಕನಿಷ್ಠ ಅರ್ಧ ಗಂಟೆಗೊಮ್ಮೆ ಎದ್ದು ಕೈಕಾಲುಗಳಿಗೆ ಚಲನೆ ನೀಡಿ.
- ದಿನವೂ ಯಾವುದಾದರೊಂದು ಬಗೆಯ ವ್ಯಾಯಾಮವನ್ನು ತಪ್ಪದೇ ಮಾಡಿ.
- ದಿನನಿತ್ಯದ ಆಹಾರದಲ್ಲಿ ಕನಿಷ್ಠ ಮೂರು ಬಗೆಯ ತರಕಾರಿಗಳು, ಸೊಪ್ಪು ಹಾಗೂ ಮೂರು ಬಗೆಯ ಹಣ್ಣುಗಳಿರಲಿ. ಮೂರರಿಂದ ನಾಲ್ಕು ಲೀಟರ್ ನೀರನ್ನು ತಪ್ಪದೇ ಕುಡಿಯಿರಿ.
- ಆಹಾರದಲ್ಲಿ ಅತಿಯಾದ ಸಕ್ಕರೆ ಮತ್ತು ಎಣ್ಣೆಯ ಅಂಶವಿರುವ ಪದಾರ್ಥಗಳನ್ನು ವರ್ಜಿಸಿ.
- ಜಂಕ್ ಆಹಾರ ಹಾಗೂ ಇಂಗಾಲಯುಕ್ತ ತಂಪು ಪಾನೀಯಗಳನ್ನು ಆದಷ್ಟು ಮಿತಗೊಳಿಸಿ.
- ವಾರದಲ್ಲಿ ಕನಿಷ್ಠ ಮೂರು ದಿನಗಳಾದರೂ ಬಿಸಿಲಿನಲ್ಲಿ ಅಡ್ಡಾಡಿ. ಪ್ರಕೃತಿಯೊಂದಿಗೆ ಹೆಚ್ಚು ಸಮಯವನ್ನು ಕಳೆಯಿರಿ.
- ಒಳ್ಳೆಯ ಸ್ನೇಹಿತರನ್ನು ಸಂಪಾದಿಸಿರಿ ಹಾಗೂ ಅವರೊಂದಿಗೆ ನಿಮ್ಮ ಮನಸ್ಸಿನ ತಳಮಳವನ್ನು ಹಂಚಿಕೊಂಡು ಹಗುರಾಗಿರಿ.
- ವೈದ್ಯರ ಸಲಹೆಯಿಲ್ಲದೆ ಔಷಧಗಳ ಸೇವನೆ ಬೇಡ.




---

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಅಧ್ಯಾಯ-7

# ವಿದ್ಯುತ್ ಪ್ರವಾಹದ ಕಾಂತೀಯ ಪರಿಣಾಮಗಳು

ಭೌತಶಾಸ್ತ್ರ

ಎಸ್ಸೆಸ್ಸೆಲ್ಸಿ

## ಪ್ರಮುಖಾಂಶಗಳು:

- ಒಂದು ವಾಹಕದಲ್ಲಿ ವಿದ್ಯುತ್ ಪ್ರವಹಿಸಿದಾಗ ಅದರ ಸುತ್ತಲೂ ಕಾಂತಕ್ಷೇತ್ರ ಉಂಟಾಗುವುದನ್ನು ವಿದ್ಯುತ್ ಪ್ರವಾಹದ ಕಾಂತೀಯ ಪರಿಣಾಮ ಎನ್ನುವರು.
- ಕಾಂತದ ಸುತ್ತಲೂ ಕಾಂತೀಯ ಬಲದ ಪ್ರಭಾವವಿರುವ ಪ್ರದೇಶವನ್ನು ಕಾಂತಕ್ಷೇತ್ರ ಎನ್ನುವರು.
- ಅವಾಹಕ ಹೊದಿಕೆ ಇರುವ ತಾಮ್ರದ ತಂತಿಯ ಅನೇಕ ಸುರುಳಿಗಳನ್ನು ಒತ್ತೊತ್ತಾಗಿ ಸುತ್ತಿರುವ ಸಿಲಿಂಡರ್ ಆಕಾರವನ್ನು ಸೊಲೆನಾಯ್ಡ್ ಎನ್ನುವರು.
- ಹೆಚ್ಚು ಕಾಂತಕ್ಷೇತ್ರ ಹೊಂದಿರುವ ಸೊಲೆನಾಯ್ಡ್‌ನ ಒಳಭಾಗದಲ್ಲಿ ಒಂದು ಕಾಂತೀಯ ವಸ್ತುವಾದ ಮೆದು ಕಬ್ಬಿಣದ ತುಂಡನ್ನು ಇರಿಸಿ ವಿದ್ಯುತ್ ಕಾಂತವನ್ನಾಗಿಸಬಹುದು.
- ವಿದ್ಯುತ್ ಪ್ರವಹಿಸುತ್ತಿರುವ ವಾಹಕ ಮತ್ತು ಕಾಂತಕ್ಷೇತ್ರವನ್ನು ಬಳಸುವ ಸಾಧನಗಳೆಂದರೆ -ವಿದ್ಯುತ್ ಮೋಟಾರ್, ವಿದ್ಯುತ್ ಜನರೇಟರ್, ಧ್ವನಿವರ್ಧಕ ಯಂತ್ರಗಳು, ಮೈಕ್ರೋಫೋನ್‌ಗಳು, ವಿದ್ಯುತ್‌ಮಾಪಕ ಯಂತ್ರಗಳು.
- ವಿದ್ಯುತ್ ಮೋಟಾರ್ ಅನ್ನು ವಿದ್ಯುತ್ ಫ್ಯಾನ್, ರೆಫ್ರಿಜರೇಟರ್, ಮಿಕ್ಸರ್‌ಗಳು, ಬಟ್ಟೆ ತೊಳೆಯುವ ಯಂತ್ರ, ಕಂಪ್ಯೂಟರ್ ಸಾಧನಗಳಲ್ಲಿ ಬಳಸುತ್ತಾರೆ.
- ಕೆಲವೊಮ್ಮೆ ವಿದ್ಯುತ್ ಮಂಡಲದಲ್ಲಿ ಓವರ್ ಲೋಡ್ ಸಂದರ್ಭ ಬಂದಾಗ ವಿದ್ಯುತ್ ಪ್ರವಾಹ ಥಟ್ಟನೆ ಹೆಚ್ಚಾಗಿ ಬಿಡುವುದನ್ನು ಹ್ರಸ್ವಮಂಡಲ (ಶಾರ್ಟ್‌ಸರ್ಕ್ಯೂಟ್) ಎನ್ನುತ್ತೇವೆ.
- ಸಜೀವ ತಂತಿ ಮತ್ತು ತಟಸ್ಥ ತಂತಿಗಳು ಎರಡೂ ನೇರ ಸಂಪರ್ಕಕ್ಕೆ ಬಂದಾಗ ಓವರ್‌ಲೋಡ್ ಉಂಟಾಗಬಹುದು.
- ಸಾಮಾನ್ಯವಾಗಿ ಗೃಹಬಳಕೆಯ ವಿದ್ಯುತ್ ಮಂಡಲದಲ್ಲಿ 15 A & 5 A ಎಂಬ ಎರಡು ಪ್ರತ್ಯೇಕ ವಿದ್ಯುತ್ ಪ್ರವಾಹ ಹರಿಯುವ ಮಂಡಲಗಳನ್ನು ಬಳಸುತ್ತೇವೆ.

## ಮಾದರಿ ಪ್ರಶ್ನೆ-ಉತ್ತರಗಳು

**1. ವಿದ್ಯುತ್‌ಕಾಂತೀಯ ಪ್ರೇರಣೆ ಎಂದರೇನು?**

-ಒಂದು ವಾಹಕದಲ್ಲಿ ಬದಲಾಗುತ್ತಿರುವ ಕಾಂತಕ್ಷೇತ್ರವು ಇನ್ನೊಂದು ವಾಹಕದಲ್ಲಿ ವಿದ್ಯುತ್ ಪ್ರವಾಹವನ್ನು ಪ್ರೇರೇಪಿಸುತ್ತದೆ. ಈ ಪ್ರಕ್ರಿಯೆಯನ್ನು ವಿದ್ಯುತ್ ಕಾಂತೀಯ ಪ್ರೇರಣೆ ಎನ್ನುವರು.

**2. ವಿದ್ಯುತ್ ಮೋಟಾರ್ ಮತ್ತು ವಿದ್ಯುತ್ ಜನಕ/ಜನರೇಟರ್‌ಗಳಿಗಿರುವ ವ್ಯತ್ಯಾಸ ತಿಳಿಸಿ.**

**-ವಿದ್ಯುತ್ ಮೋಟಾರ್**
- ವಿದ್ಯುತ್ ಶಕ್ತಿಯನ್ನು ಯಾಂತ್ರಿಕಶಕ್ತಿಯನ್ನಾಗಿಸುತ್ತದೆ.
- ಇದು ಫ್ಲೆಮಿಂಗ್‌ನ ಎಡಗೈ ನಿಯಮದ ತತ್ವದ ಮೇಲೆ ರೂಪುಗೊಂಡಿದೆ.

**-ವಿದ್ಯುತ್ ಜನಕ/ಜನರೇಟರ್**
- ಯಾಂತ್ರಿಕಶಕ್ತಿಯನ್ನು ವಿದ್ಯುತ್‌ಶಕ್ತಿಯನ್ನಾಗಿಸುತ್ತದೆ.
- ಇದು ಫ್ಲೆಮಿಂಗ್‌ನ ಬಲಗೈ ನಿಯಮದ ತತ್ವದ ಮೇಲೆ ರೂಪುಗೊಂಡಿದೆ.

**3. ಎ.ಸಿ.ವಿದ್ಯುತ್‌ಜನಕ/ಜನರೇಟರ್ ಮತ್ತು ಡಿ.ಸಿ.ವಿದ್ಯುತ್‌ಜನಕ/ಜನರೇಟರ್‌ಗಳಿಗಿರುವ ವ್ಯತ್ಯಾಸ ತಿಳಿಸಿ.**

**-ಎ.ಸಿ.ವಿದ್ಯುತ್‌ಜನಕ/ಜನರೇಟರ್**
- ಪರ್ಯಾಯ ವಿದ್ಯುತ್(ಎ.ಸಿ.) ಅನ್ನು ಉತ್ಪಾದಿಸುತ್ತದೆ.
- ವಿದ್ಯುತ್ ಪ್ರವಹಿಸುವಾಗ ತನ್ನ ದಿಕ್ಕನ್ನು ನಿರಂತರವಾಗಿ ಬದಲಾಯಿಸುತ್ತದೆ.
- ಇದರಲ್ಲಿ ತಾಮ್ರದ ಪೂರ್ಣ ಜಾರು ಉಂಗುರಗಳನ್ನು ಅಳವಡಿಸಿರುತ್ತಾರೆ.

**-ಡಿ.ಸಿ.ವಿದ್ಯುತ್‌ಜನಕ/ಜನರೇಟರ್**
- ನೇರ ವಿದ್ಯುತ್(ಡಿ.ಸಿ.) ಅನ್ನು ಉತ್ಪಾದಿಸುತ್ತದೆ.
- ವಿದ್ಯುತ್ ಏಕಮುಖವಾಗಿ ಪ್ರವಹಿಸುತ್ತದೆ.
- ಇದರಲ್ಲಿ ತಾಮ್ರದ ಒಡಕು ಉಂಗುರಗಳನ್ನು ಅಳವಡಿಸಿರುತ್ತಾರೆ.

**4. ಕಾಂತೀಯ ಬಲರೇಖೆಗಳು ಎಂದರೇನು? ಇವುಗಳ ಗುಣಲಕ್ಷಣಗಳನ್ನು ಪಟ್ಟಿಮಾಡಿ.**
- ಕಾಂತದ ಸುತ್ತಲೂ ಹರಡಿರುವ ಕಾಂತಕ್ಷೇತ್ರವನ್ನು ರೇಖೆಗಳ ರೂಪದಲ್ಲಿ ಸೂಚಿಸುತ್ತಾರೆ. ಇವುಗಳನ್ನು ಕಾಂತೀಯ ಬಲ ರೇಖೆಗಳು ಎನ್ನುವರು.
- ಕಾಂತೀಯ ಬಲ ರೇಖೆಗಳ ಗುಣಲಕ್ಷಣಗಳೆಂದರೆ
- ಇವು ಕಮಾನಿನ ಆಕಾರದಲ್ಲಿರುತ್ತವೆ.
- ಇವು ಪರಸ್ಪರ ಒಂದನ್ನೊಂದು ಛೇದಿಸುವುದಿಲ್ಲ.
- ಕಾಂತಕ್ಷೇತ್ರದ ಬಲವು ಹೆಚ್ಚಾಗಿದ್ದಲ್ಲಿ ಕಾಂತೀಯ ಬಲರೇಖೆಗಳ ಸಾಂದ್ರತೆಯು ಹೆಚ್ಚಾಗಿರುತ್ತದೆ.
- ಇವು ಉತ್ತರ ಧ್ರುವದಲ್ಲಿ ಉತ್ಸರ್ಜಿತವಾಗಿ ದಕ್ಷಿಣ ಧ್ರುವದಲ್ಲಿ ವಿಲೀನಗೊಳ್ಳುತ್ತವೆ.

**5. ನಿಯಮಗಳು:**

**ಎ)ಬಲಗೈನ ಹೆಬ್ಬೆರಳ(ಹಿಡಿಗಟ್ಟು) ನಿಯಮ:-** ನಿಮ್ಮ ಬಲಗೈನಲ್ಲಿ ವಿದ್ಯುತ್ ಪ್ರವಹಿಸುತ್ತಿರುವ ನೇರವಾದ ಒಂದು ವಾಹಕವನ್ನು ಹಿಡಿದಿರುವಿರಿ ಎಂದು ಊಹಿಸಿಕೊಳ್ಳಿರಿ. ಆಗ ಹೆಬ್ಬೆರಳು ವಿದ್ಯುತ್ ಪ್ರವಾಹದ ದಿಕ್ಕನ್ನು ಸೂಚಿಸಿದರೆ, ವಾಹಕದ ಸುತ್ತಲಿನ ಬೆರಳುಗಳು ಕಾಂತಕ್ಷೇತ್ರವನ್ನು ಸೂಚಿಸುತ್ತವೆ.

**ಬಿ)ಫ್ಲೆಮಿಂಗ್‌ನ ಎಡಗೈ ನಿಯಮ:-** ಎಡಗೈನ ಹೆಬ್ಬೆರಳು, ತೋರುಬೆರಳು ಮತ್ತು ಮಧ್ಯದ ಬೆರಳುಗಳನ್ನು ಪರಸ್ಪರ ಲಂಬವಾಗಿರುವಂತೆ ಹಿಡಿದುಕೊಳ್ಳಿ. ತೋರುಬೆರಳು ಕಾಂತಕ್ಷೇತ್ರದ ದಿಕ್ಕನ್ನು, ಮಧ್ಯದ ಬೆರಳು ವಿದ್ಯುತ್‌ಪ್ರವಾಹದ ದಿಕ್ಕನ್ನು ಹಾಗೂ ಹೆಬ್ಬೆರಳು ವಾಹಕದ ಮೇಲೆ ವರ್ತಿಸುವ ಚಲನೆಯ ಅಥವಾ ಬಲದ ದಿಕ್ಕನ್ನು ಸೂಚಿಸುತ್ತದೆ.


**ಸಿ)ಫ್ಲೆಮಿಂಗ್‌ನ ಬಲಗೈ ನಿಯಮ:-** ಬಲಗೈನ ಹೆಬ್ಬೆರಳು, ತೋರುಬೆರಳು ಮತ್ತು ಮಧ್ಯದ ಬೆರಳುಗಳನ್ನು ಪರಸ್ಪರ ಲಂಬವಾಗಿರುವಂತೆ ಹಿಡಿದುಕೊಳ್ಳಿ. ತೋರುಬೆರಳು ಕಾಂತಕ್ಷೇತ್ರದ ದಿಕ್ಕನ್ನು, ಮಧ್ಯದ ಬೆರಳು ಪ್ರೇರಿತ ವಿದ್ಯುತ್‌ಪ್ರವಾಹದ ದಿಕ್ಕನ್ನು ಹಾಗೂ ಹೆಬ್ಬೆರಳು ವಾಹಕದ ಚಲನೆಯ ದಿಕ್ಕನ್ನು ಸೂಚಿಸುತ್ತದೆ.

**6. ಗೃಹಬಳಕೆಯ ವಿದ್ಯುತ್ ಪೂರೈಕೆಯಲ್ಲಿ ಬಳಸುವ 3 ವಿವಿಧ ಬಣ್ಣದ ವಿದ್ಯುತ್ ತಂತಿಗಳನ್ನು ಹೆಸರಿಸಿ.**
- ಕೆಂಪು ಅವಾಹಕವನ್ನು ಹೊಂದಿರುವ ಸಜೀವ ತಂತಿ(ಧನಾತ್ಮಕ)
- ಕಪ್ಪು ಅವಾಹಕವನ್ನು ಹೊಂದಿರುವ ತಟಸ್ಥ ತಂತಿ(ಋಣಾತ್ಮಕ)
- ಹಸಿರು ಅವಾಹಕವನ್ನು ಹೊಂದಿರುವ ಭೂಸಂಪರ್ಕ ತಂತಿ.

**7. ವಿದ್ಯುತ್ ಮಂಡಲ/ಸಾಧನಗಳ ಸುರಕ್ಷತೆಯಲ್ಲಿ ಭೂಸಂಪರ್ಕ ತಂತಿಯ ಪ್ರಾಮುಖ್ಯತೆಯನ್ನು ವಿವರಿಸಿ.**
- ಹಸಿರು ಅವಾಹಕ ಹೊದಿಕೆಯನ್ನು ಹೊಂದಿರುವ ಭೂಸಂಪರ್ಕ ತಂತಿಯನ್ನು ಮನೆಯ ಹತ್ತಿರ ಭೂಮಿಯಲ್ಲಿ ಬಹಳಷ್ಟು ಆಳದಲ್ಲಿ ಹೂಳಲಾಗಿರುವ ಲೋಹದ ತಟ್ಟೆಗೆ ಜೋಡಿಸಲಾಗಿರುತ್ತದೆ. ವಿದ್ಯುತ್ ಉಪಕರಣಗಳಲ್ಲಿ ಅವುಗಳ ಮೇಲ್ಮೈಗೆ ಭೂಸಂಪರ್ಕ ತಂತಿಯನ್ನು ಜೋಡಿಸಲಾಗಿರುತ್ತದೆ.ಇದು ಕಡಿಮೆ ರೋಧವನ್ನು ಹೊಂದಿರುವ ವಿದ್ಯುತ್‌ಪ್ರವಾಹದ ಪಥವನ್ನು ಉಂಟುಮಾಡುತ್ತದೆ. ಹೀಗಾಗಿ, ಲೋಹದ ಮೇಲ್ಮೈ ಹೊಂದಿರುವ ಉಪಕರಣಕ್ಕೆ ಯಾವುದೇ ರೀತಿಯ ವಿದ್ಯುತ್ ಸೋರಿಕೆಯುಂಟಾದಲ್ಲಿ ಅದರ ವಿಭವಾಂತರವನ್ನು ಭೂಮಿಯ ವಿಭವಾಂತರಕ್ಕೆ ಸಮಾನಾಗಿಸುತ್ತದೆ ಮತ್ತು ಬಳಕೆದಾರರಿಗೆ ತೀವ್ರ ವಿದ್ಯುತ್ ಆಘಾತವಾಗುವುದಿಲ್ಲ.

**ಪರೀಕ್ಷೆಗೆ ನೀಡಬಹುದಾದ ಸಂಭವನೀಯ ಚಿತ್ರಗಳು:**

ಎ) ಒಂದು ನೇರವಾದ ವಾಹಕ ತಂತಿಯ ಸುತ್ತ ಕಾಂತೀಯ ಬಲ ರೇಖೆಗಳನ್ನು ಸೂಚಿಸುವ ಏಕಕೇಂದ್ರಿಯ ವೃತ್ತಗಳ ಮಾದರಿ (ಚಿತ್ರ-13.6 ಎ)
ಬಿ) ಒಂದು ಸರಳ ವಿದ್ಯುತ್ ಮೋಟಾರ್ (ಚಿತ್ರ-13.15)
ಸಿ) ವಿದ್ಯುತ್ ಜನಕ (ಚಿತ್ರ-13.19)



ಬಾಲರಾಜು.ಎ ಎಂ.ಎಸ್ಸಿ., ಎಂ.ಇಡಿ., ವಿಜ್ಞಾನ ಶಿಕ್ಷಕರು, ಚಿಕ್ಕಬಳ್ಳಾಪುರ

ಪ್ರಜಾವಾಣಿ ನೋಡಿಯೊ — ಹತ್ತನೇ ತರಗತಿ ಭೌತಶಾಸ್ತ್ರದ 'ಮ್ಯಾಗ್ನೆಟಿಕ್ ಎಫೆಕ್ಟ್ ಆಫ್ ಎಲೆಕ್ಟ್ರಿಕ್ ಕರೆಂಟ್' ಅಧ್ಯಾಯಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

---

ಮಾದರಿ ಪ್ರಶ್ನೋತ್ತರ

# ಅಯಸ್ಕಾಂತೀಯ ಗುಣಲಕ್ಷಣ

ರಸಾಯನ ಶಾಸ್ತ್ರ

ಪಿಯುಸಿ

**5) ಘನವಸ್ತುಗಳನ್ನು ಅವುಗಳ ವಾಹಕತೆಯ ಆಧಾರದ ಮೇಲೆ ಎಷ್ಟು ವಿಧಗಳಾಗಿ ವಿಂಗಡಿಸಬಹುದು?**

**ಉತ್ತರ:-** ಘನವಸ್ತುಗಳನ್ನು ಅವುಗಳ ವಾಹಕತೆಯ ಆಧಾರದ ಮೇಲೆ ಮೂರು ವಿಧಗಳಾಗಿ ವಿಂಗಡಿಸಬಹುದು.

**(i) ವಾಹಕಗಳು:** $10^4$ ರಿಂದ $10^7$ $ohm^{-1}$ $m^{-1}$ ರ ನಡುವಿನ ಹರಿವಿನೊಂದಿಗಿನ ಘನವಸ್ತುಗಳನ್ನು ವಾಹಕಗಳು ಎಂದು ಕರೆಯಲಾಗುತ್ತದೆ. ಲೋಹಗಳು $10^7 ohm^{-1} m^{-1}$ ಶ್ರೇಣಿಯಲ್ಲಿದ್ದು ಉತ್ತಮ ವಾಹಕಗಳಾಗಿರುತ್ತವೆ.

**(ii) ಅವಾಹಕಗಳು:** ಇವುಗಳು $10^{-20}$ ರಿಂದ $10^{-10}$ $ohm^{-1}$ $m^{-1}$ ರವರೆಗಿನ ಕಡಿಮೆ ವಾಹಕತೆ ಹೊಂದಿರುವ ಘನಗಳಾಗಿವೆ.

**(iii) ಅರೆವಾಹಕಗಳು:** ಇವುಗಳು $10^{-6}$ ರಿಂದ $10^4 ohm^{-1}$ $m^{-1}$ ದಿಂದ ಮಧ್ಯಂತರ ವ್ಯಾಪ್ತಿಯಲ್ಲಿ ವಾಹಕತೆಯನ್ನು ಹೊಂದಿರುವ ಘನಗಳಾಗಿವೆ.

**6) ವಸ್ತುಗಳ ಆಯಸ್ಕಾಂತೀಯ ಗುಣಲಕ್ಷಣಗಳ ಆಧಾರದ ಮೇಲೆ ಅವುಗಳನ್ನು ಎಷ್ಟು ವಿಭಾಗಗಳಾಗಿ ವರ್ಗೀಕರಿಸಬಹುದು? ಅವು ಯಾವುವು?**

**ಉತ್ತರ:-** ವಸ್ತುಗಳ ಆಯಸ್ಕಾಂತೀಯ ಗುಣಲಕ್ಷಣಗಳ ಆಧಾರದ ಮೇಲೆ ಅವುಗಳನ್ನು ಐದು ವಿಭಾಗಗಳಾಗಿ ವರ್ಗೀಕರಿಸಬಹುದು (i) ಕಾಂತೀಯ (ii) ಅಕಾಂತೀಯ (iii) ಫೆರೋಕಾಂತೀಯ (iv) ಆ್ಯಂಟಿಫೆರೊಕಾಂತೀಯ ಮತ್ತು (v) ಫೆರಿಕಾಂತೀಯ.

**(i) ಕಾಂತೀಯತೆ:** ಕಾಂತೀಯ ವಸ್ತುಗಳು ಅಯಸ್ಕಾಂತೀಯ ಕ್ಷೇತ್ರದಿಂದ ದುರ್ಬಲವಾಗಿ ಆಕರ್ಷಿತಗೊಳ್ಳುತ್ತವೆ. ಅವು ಒಂದೇ ದಿಕ್ಕಿನಲ್ಲಿ ಕಾಂತಕ್ಷೇತ್ರದಲ್ಲಿ ಕಾಂತೀಯವಾಗುತ್ತವೆ. ಅವು ಕಾಂತೀಯ ಕ್ಷೇತ್ರದ ಅನುಪಸ್ಥಿತಿಯಲ್ಲಿ ತಮ್ಮ ಕಾಂತೀಯತೆಯನ್ನು ಕಳೆದುಕೊಳ್ಳುತ್ತವೆ.

**(ii) ಅಕಾಂತೀಯತೆ:** ಅಕಾಂತೀಯ ವಸ್ತುಗಳು ಆಯಸ್ಕಾಂತೀಯ ಕ್ಷೇತ್ರದಿಂದ ದುರ್ಬಲವಾಗಿ ತಳ್ಳಲ್ಪಡುತ್ತದೆ. $H_2O$, NaCl ಮತ್ತು $C_6H_6$ಗಳು ಅಂತಹ ವಸ್ತುಗಳಿಗೆ ಕೆಲವು ಉದಾಹರಣೆಗಳಾಗಿವೆ. ಅವುಗಳು ವ್ಯತಿರಿಕ್ತ ದಿಕ್ಕಿನಲ್ಲಿ ಕಾಂತಕ್ಷೇತ್ರದಲ್ಲಿ ದುರ್ಬಲವಾಗಿ ಕಾಂತೀಯವಾಗಿದೆ. ಎಲ್ಲಾ ಇಲೆಕ್ಟ್ರಾನುಗಳು ಜೋಡಿಯಾಗಿರುವ ಆ ವಸ್ತುಗಳಿಂದಾಗಿ ಅಕಾಂತೀಯತೆ ತೋರಿಸಲಾಗುತ್ತದೆ ಮತ್ತು ಯಾವುದೇ ಜೋಡಿಯಾಗದ ಎಲೆಕ್ಟ್ರಾನ್‌ಗಳಿಲ್ಲ. ಎಲೆಕ್ಟ್ರಾನ್‌ಗಳ ಜೋಡಣೆ, ಅವುಗಳ ಕಾಂತೀಯ ಪರಿಮಾಣಗಳನ್ನು ರದ್ದುಗೊಳಿಸುತ್ತದೆ ಮತ್ತು ಅವುಗಳು ತಮ್ಮ ಕಾಂತೀಯ ಗುಣವನ್ನು ಕಳೆದುಕೊಳ್ಳುತ್ತವೆ.

**(iii)ಫೆರೋಕಾಂತೀಯತೆ:** ಐರನ್, ಕೋಬಾಲ್ಟ್, ನಿಕ್ಕಲ್, ಗ್ಯಾಡೋಲಿನಿಯಂ ಮತ್ತು $CrO_2$ನಂತಹ ಕೆಲವು ವಸ್ತುಗಳು ಕಾಂತೀಯ ಕ್ಷೇತ್ರದಿಂದ ಬಲವಾಗಿ ಆಕರ್ಷಿತವಾಗುತ್ತವೆ. ಇಂತಹ ವಸ್ತುಗಳನ್ನು ಫೆರೋಕಾಂತೀಯ ವಸ್ತುಗಳೆಂದು ಕರೆಯಲಾಗುತ್ತದೆ. ಬಲವಾದ ಆಕರ್ಷಣೆಗಳಲ್ಲದೆ, ಈ ವಸ್ತುಗಳನ್ನು ಶಾಶ್ವತವಾಗಿ ಕಾಂತೀಯಗೊಳಿಸಬಹುದು. ಘನ ಸ್ಥಿತಿಯಲ್ಲಿ, ಫೆರೋಕಾಂತೀಯ ವಸ್ತುಗಳ ಲೋಹದ ಅಯಾನುಗಳು ಸಣ್ಣ ಗುಂಪುಗಳಾಗಿ ಒಟ್ಟುಗೂಡುತ್ತವೆ ಮತ್ತು ಅದನ್ನು ಡೊಮೇನ್‌ಗಳೆಂದು ಕರೆಯುತ್ತೇವೆ. ಹೀಗಾಗಿ, ಪ್ರತಿ ಡೊಮೈನ್ ಸಣ್ಣ ಮ್ಯಾಗ್ನೆಟ್ ಆಗಿ ಕಾರ್ಯ ನಿರ್ವಹಿಸುತ್ತದೆ. ಒಂದು ಫೆರೋಕಾಂತೀಯ ವಸ್ತುವಿನ ಒಂದು ಕಾಂತಿಯಗೊಳಿಸದ ತುಣುಕಿನಲ್ಲಿ ಡೊಮೇನ್‌ಗಳು ಯಾದೃಚ್ಛಿಕವಾಗಿ ಚದುರಿ ಕೊಂಡಿರುತ್ತವೆ ಮತ್ತು ಅವುಗಳ ಕಾಂತೀಯ ಪರಿಮಾಣಗಳು ರದ್ದುಗೊಳ್ಳುತ್ತವೆ. ಅಯಸ್ಕಾಂತೀಯ ಕ್ಷೇತ್ರದಲ್ಲಿ ವಸ್ತುವನ್ನು ಇರಿಸಿದಾಗ ಎಲ್ಲಾ ಡೊಮೇನ್‌ಗಳು ಕಾಂತೀಯ ಕ್ಷೇತ್ರದ ದಿಕ್ಕಿನಲ್ಲಿ ನೇರಗೊಳ್ಳುತ್ತವೆ ಮತ್ತು ಬಲವಾದ ಕಾಂತೀಯ ಪರಿಣಾಮವನ್ನು ಉಂಟು ಮಾಡುತ್ತವೆ. ಅಯಸ್ಕಾಂತೀಯ ಕ್ಷೇತ್ರವನ್ನು ತೆಗೆದುಹಾಕಿದರೂ, ಡೊಮೇನ್‌ಗಳ ಶ್ರೇಣಿ ಮುಂದುವರಿಯುತ್ತದೆ ಮತ್ತು ಫೆರೋಕಾಂತೀಯ ವಸ್ತುಗಳು ಶಾಶ್ವತ ಆಯಸ್ಕಾಂತವಾಗುತ್ತವೆ.

**(iv)ಆ್ಯಂಟಿ ಫೆರೊಕಾಂತೀಯ:** ಆ್ಯಂಟಿಫೆರೊ ಕಾಂತೀಯತೆಯನ್ನು ತೋರಿಸುವ MnO ನಂತಹ ವಸ್ತುಗಳು ಫೆರೋಕಾಂತೀಯ ವಸ್ತುವಿನಂತೆಯೇ ಡೊಮೇನ್ ರಚನೆಯನ್ನು ಹೊಂದಿವೆ, ಆದರೆ ಅವುಗಳ ಡೊಮೇನ್‌ಗಳು ವಿರುದ್ಧ ದಿಕ್ಕಿನಲ್ಲಿರುತ್ತವೆ ಮತ್ತು ಕಾಂತೀಯ ಪರಿಮಾಣವನ್ನು ಪರಸ್ಪರ ರದ್ದುಗೊಳಿಸುತ್ತವೆ.

**(v) ಫೆರಿಕಾಂತೀಯತೆ:** ವಸ್ತುವಿನ ಡೊಮೇನ್‌ಗಳ ಆಯಸ್ಕಾಂತೀಯ ಪರಿಮಾಣವನ್ನು ಅಸಮಾನ ಸಂಖ್ಯೆಗಳಲ್ಲಿ ಸಮಾನಾಂತರ ಮತ್ತು ವಿರುದ್ಧ ದಿಕ್ಕಿನಲ್ಲಿ ಜೋಡಿಸಿದಾಗ ಫೆರಿ ಕಾಂತೀಯತೆಯನ್ನು ನೋಡಬಹುದು. ಅವು ಫೆರೋಕಾಂತೀಯ ವಸ್ತುಗಳಿಗೆ ಹೋಲಿಸಿದರೆ ಕಾಂತೀಯ ಕ್ಷೇತ್ರದಿಂದ ದುರ್ಬಲವಾಗಿ ಆಕರ್ಷಿಸಲ್ಪಡುತ್ತವೆ. $Fe_3O_4$ (ಕಾಂತೀಯ) ಮತ್ತು $MgFe_2O_4$ ಮತ್ತು $ZnFe_2O_4$ ನಂತಹ ಫೆರೈಟ್‌ಗಳು ಇಂತಹ ವಸ್ತುಗಳಿಗೆ ಉದಾಹರಣೆಗಳಾಗಿವೆ. ಈ ವಸ್ತುಗಳು ಸಹ ಕಾಯಿಸಿದಾಗ ಫೆರಿಕಾಂತೀಯತೆಯನ್ನು ಕಳೆದುಕೊಳ್ಳುತ್ತವೆ ಮತ್ತು ಕಾಂತೀಯ ವಸ್ತುಗಳಾಗುತ್ತವೆ.

**7) ಆವಿ ಒತ್ತಡದ ಇಳಿಕೆಗೆ ಸಂಬಂಧಿಸಿದ ಗುಣಲಕ್ಷಣಗಳನ್ನು ತಿಳಿಸಿ**

ಉತ್ತರ:- ಆವಿ ಒತ್ತಡದ ಇಳಿಕೆಗೆ ಸಂಬಂಧಿಸಿದಂತೆ ದ್ರಾವಣಗಳಿಗೆ ಅನೇಕ ಗುಣಲಕ್ಷಣಗಳಿವೆ. ಇವುಗಳು


1. ದ್ರಾವಕದ ಆವಿ ಒತ್ತಡದ ಸಾಪೇಕ್ಷ ಇಳಿಕೆ (Relative lowering of vapour pressure)
2. ದ್ರಾವಕದ ಘನೀಕರಣ ಬಿಂದುವಿನ ಕುಸಿತ (Depression of freezing point of the solvent)
3. ದ್ರಾವಕದ ಕುದಿ ಬಿಂದುವಿನ ಏರಿಕೆ (Elevation of boiling point of the solvent) ಮತ್ತು
4. ದ್ರಾವಣದ ಪರಾಸರಣ ಒತ್ತಡ (Osmotic pressure of the solution)

## ನೆನಪಿಡಿ

- ಒಂದು ದ್ರವದಲ್ಲಿ ಅನಿಲವೊಂದರ ವಿಲೀನಿಕರಣವು ಹೆನ್ರಿಯ ನಿಯಮದಿಂದ ನಿಯಂತ್ರಿಸಲ್ಪಡುತ್ತದೆ. ದ್ರವವೊಂದರಲ್ಲಿ ಅನಿಲವೊಂದರ ವಿಲೀನತೆಯು ಅನಿಲದ ಆಂಶಿತ ಒತ್ತಡಕ್ಕೆ ಅನುಲೋಮಾನುಪಾತದಲ್ಲಿರುತ್ತದೆ. ದ್ರಾವಕದ ಆವಿ ಒತ್ತಡವು, ದ್ರಾವಣದಲ್ಲಿ ಇರುವ ಒಂದು ಆವಿಶೀಲವಲ್ಲದ ದ್ರಾವಕದಿಂದ ಕಡಿಮೆಯಾಗುತ್ತದೆ ಮತ್ತು ದ್ರಾವಕದ ಆವಿ ಒತ್ತಡಲ್ಲಿ ಆದ ಈ ಇಳಿಕೆಯು, ರೌಲ್ಟ್‌ನ ನಿಯಮಕ್ಕೆ ನಿಯಂತ್ರಿಸಲ್ಪಡುತ್ತದೆ, ಅದರ ಪ್ರಕಾರ ದ್ರಾವಣದ ಮೇಲೆ ಆಗುವ ದ್ರಾವಕದ ಆವಿಒತ್ತಡದ ಸಾಪೇಕ್ಷ ಇಳಿಕೆಯು, ದ್ರಾವಣದಲ್ಲಿ ಇರುವ ಆವಿ ಶೀಲದ ಒಂದು ದ್ರಾವಕದ ಮೋಲ್ ಭಿನ್ನಾಂಶಕ್ಕೆ ನೇರಾನುಪಾತದಲ್ಲಿರುತ್ತದೆ,
- ಸಾರತೆಯ ಎಲ್ಲಾ ವ್ಯಾಪ್ತಿಯಲ್ಲಿ ರೌಲ್ಟ್‌ನ ನಿಯಮವನ್ನು ಪಾಲಿಸುವ ದ್ರಾವಣಗಳನ್ನು ಆದರ್ಶ ದ್ರಾವಣಗಳು ಎಂದು ಕರೆಯುವರು.
- ಧನಾತ್ಮಕ (ಸಕಾರ) ಮತ್ತು ಋಣಾತ್ಮಕ (ನಕಾರ) ವಿಚಲನೆಗಳು ಎಂದು ಕರೆಯಲ್ಪಡುವ ರೌಲ್ಟನ ನಿಯಮದಿಂದಾಗುವ ಎರಡು ಬಗೆಯ ವಿಚಲನೆಗಳಿವೆ. ರೌಲ್ಟನ ನಿಯಮದಿಂದ ಅತ್ಯಧಿಕ ವಿಚಲನೆಯಿಂದ ಸ್ಥಿರಕುದಿಬಿಂದು ಮಿಶ್ರಣಗಳು ಉಗಮಿಸುತ್ತದೆ.

ಸಹಕಾರ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ ಬೆಂಗಳೂರು

ಪ್ರಜಾವಾಣಿ ನೋಡಿಯೊ — ದ್ವಿತೀಯ ಪಿಯುಸಿ ರಸಾಯನಶಾಸ್ತ್ರ ವಿಭಾಗದ ಆಂಗ್ಲಭಾಷೆಯ ಮಾದರಿ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ



## ಸುಭಾಷಿತ

ಸತ್ಯಕ್ಕೆ ಹೆದರುವವನು ಅಥವಾ ನಾಚುವವನು ನಿಜವಾದ ಜಿಜ್ಞಾಸುವಾಗಲಾರ. -ಕುವೆಂಪು

# ಆಧಾರ್ ದತ್ತಾಂಶ ಕೇಂದ್ರದಲ್ಲಿ ಕಳವು ಉನ್ನತ ಮಟ್ಟದ ತನಿಖೆಯಾಗಲಿ

**ಭಾರತೀಯ** ವಿಶಿಷ್ಟ ಗುರುತು ಪ್ರಾಧಿಕಾರವು (ಯುಐಡಿಎಐ) ದೇಶದ ಎಲ್ಲ ನಾಗರಿಕರಿಗೂ 12 ಅಂಕಿಗಳ ವಿಶಿಷ್ಟ ಗುರುತಿನ ಸಂಖ್ಯೆಯನ್ನು (ಆಧಾರ್) ನೀಡುತ್ತಿದೆ. ವ್ಯಕ್ತಿಯ ಛಾಯಾಚಿತ್ರ ಮತ್ತು ಬಯೊಮೆಟ್ರಿಕ್ ಗುರುತುಗಳನ್ನು ದಾಖಲಿಸಿ, ಅವುಗಳ ಆಧಾರದಲ್ಲೇ ಈ ಸಂಖ್ಯೆಯನ್ನು ನೀಡಲಾಗುತ್ತಿದೆ. ವ್ಯಕ್ತಿಯೊಬ್ಬನ ಎಲ್ಲ ವೈಯಕ್ತಿಕ ವಿವರಗಳನ್ನೂ ಆಧಾರ್‌ನೊಂದಿಗೆ ಜೋಡಿಸಲಾಗುತ್ತಿದೆ. 131 ಕೋಟಿಗೂ ಹೆಚ್ಚು ಆಧಾರ್ ಗುರುತಿನ ಚೀಟಿಗಳನ್ನು ಈವರೆಗೆ ವಿತರಣೆ ಮಾಡಲಾಗಿದೆ. ಆಧಾರ್ ಸಂಖ್ಯೆ ನೀಡುವುದರ ಜತೆಗೆ, ಸಂಗ್ರಹಿಸಲಾದ ಮಾಹಿತಿಗಳನ್ನು ಸುರಕ್ಷಿತವಾಗಿ ರಕ್ಷಿಸಿಡುವ ಹೊಣೆಗಾರಿಕೆಯನ್ನೂ ಯುಐಡಿಎಐ ಹೊಂದಿದೆ. ಇದಕ್ಕಾಗಿಯೇ ಬೆಂಗಳೂರಿನಲ್ಲಿ ಮತ್ತು ಹರಿಯಾಣದ ಮಾನೇಸರ್‌ನಲ್ಲಿ ಅತ್ಯುನ್ನತ ಮಟ್ಟದ ಭದ್ರತೆಯನ್ನು ಹೊಂದಿರುವ ಎರಡು ಆಧಾರ್ ದತ್ತಾಂಶ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಬೆಂಗಳೂರಿನ ಕೊಡಿಗೇಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿರುವ ಟಾಟಾನಗರದ ಎನ್‌.ಟಿ.ಐ. ಬಡಾವಣೆಯಲ್ಲಿರುವ ಆಧಾರ್ ದತ್ತಾಂಶ ಕೇಂದ್ರದಲ್ಲಿ ಹೊಸದಾಗಿ ಅಳವಡಿಸಲು ತಂದಿದ್ದ ಸರ್ವರ್ ಒಂದನ್ನು ಒಡೆದು ಬಹುಕೋಟಿ ರೂಪಾಯಿ ಮೌಲ್ಯದ ಕಂಪ್ಯೂಟರ್ ಚಿಪ್‌ಗಳನ್ನು ಕಳವು ಮಾಡಿರುವ ಪ್ರಕರಣ ಐದು ತಿಂಗಳ ಹಿಂದೆ ನಡೆದಿದೆ. 2021ರ ಸೆಪ್ಟೆಂಬರ್‌ನಲ್ಲೇ ಈ ಸಂಬಂಧ ಕೊಡಿಗೇಹಳ್ಳಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ಕೂಡ ದಾಖಲಾಗಿದೆ. ಆದರೆ ಈವರೆಗೂ ಕಳ್ಳರ ಸುಳಿವು ಪತ್ತೆಹಚ್ಚಲು ಪೊಲೀಸರಿಗೆ ಸಾಧ್ಯವಾಗಿಲ್ಲ. ರಾಷ್ಟ್ರೀಯ ಭದ್ರತೆಯ ವ್ಯಾಪ್ತಿಯಲ್ಲಿರುವ ಕೇಂದ್ರವೊಂದರಲ್ಲಿ ನಡೆದಿರುವ ಕಳವಿನ ಪ್ರಕರಣದಲ್ಲಿ ಆರೋಪಿಗಳನ್ನು ಪತ್ತೆಹಚ್ಚುವ ವಿಚಾರದಲ್ಲಿ ನಗರದ ಪೊಲೀಸರ ನಿಷ್ಕ್ರಿಯತೆ ಪ್ರಶ್ನಾರ್ಹವಾಗಿದೆ.



ಬಹುಕೋಟಿ ಮೌಲ್ಯದ ಕಂಪ್ಯೂಟರ್ ಚಿಪ್‌ಗಳ ಕಳವು ಪ್ರಕರಣದಲ್ಲಿ ಪೊಲೀಸರ ನಡೆಯು ಪ್ರಶ್ನಾರ್ಹವಾಗಿದೆ

ಇದು ಯಾವುದೋ ಒಂದು ಸಾಮಾನ್ಯ ಪ್ರಕರಣ ಅಲ್ಲ. ದಿನದ 24 ಗಂಟೆಗಳ ಕಾಲವೂ ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆ (ಸಿಐಎಸ್‌ಎಫ್) ಕಮಾಂಡೊಗಳ ಭದ್ರತೆಯಲ್ಲಿರುವ ಮತ್ತು ಸಿ.ಸಿ.ಟಿ.ವಿ. ಕ್ಯಾಮೆರಾಗಳ ನಿರಂತರ ಕಣ್ಗಾವಲು ಇರುವ ಆಧಾರ್ ದತ್ತಾಂಶ ಕೇಂದ್ರದಿಂದ ಕಂಪ್ಯೂಟರ್ ಚಿಪ್‌ಗಳನ್ನು ಕದ್ದೊಯ್ಯಲಾಗಿದೆ. ಸ್ಮಾರ್ಟ್ ಕಾರ್ಡ್ ಗುರುತಿನ ಚೀಟಿ ಹೊಂದಿರುವವರಷ್ಟೇ ಪ್ರವೇಶಿಸಬಹುದಾದ ಅತಿಭದ್ರತಾ ವಲಯದಲ್ಲೇ ಕೃತ್ಯ ನಡೆದಿದೆ. ಇಂತಹ ಪ್ರಕರಣದಲ್ಲಿ ದೂರು ದಾಖಲಾಗಿ ಐದು ತಿಂಗಳು ಕಳೆದರೂ ತನಿಖೆ ಸರಿಯಾದ ದಿಕ್ಕಿನಲ್ಲಿ ನಡೆದಿಲ್ಲ. ಆರೋಪಿಗಳ ಸುಳಿವು ಪತ್ತೆಯಾಗಿಲ್ಲ ಎಂಬ ವರದಿಯೊಂದನ್ನು ನ್ಯಾಯಾಲಯದ ಮುಂದಿಟ್ಟು, ತನಿಖೆಗೆ ಹೆಚ್ಚಿನ ಕಾಲಾವಕಾಶ ಪಡೆದುಕೊಳ್ಳುವುದಕ್ಕೆ ಪೊಲೀಸರು ತಮ್ಮ ಪ್ರಯತ್ನವನ್ನು ಸೀಮಿತಗೊಳಿಸಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿದೆ. ಒಳಗಿನವರ ಕೈವಾಡದಿಂದಲೇ ಕೃತ್ಯ ನಡೆದಿರುವ ಸಾಧ್ಯತೆ ಹೆಚ್ಚು. ದೀರ್ಘಕಾಲದಿಂದಲೂ ಈ ರೀತಿ ನೂರಾರು ಕೋಟಿ ರೂಪಾಯಿ ಮೌಲ್ಯದ ಚಿಪ್‌ಗಳನ್ನು ಕಳವು ಮಾಡಿ, ಅಂತರರಾಷ್ಟ್ರೀಯ ಮಾರುಕಟ್ಟೆಗೆ ಕಳ್ಳಸಾಗಣೆ ಮಾಡಿರಬಹುದಾದ ಶಂಕೆಯೂ ಇದೆ. ಈ ಎಲ್ಲವನ್ನೂ ಪತ್ತೆಹಚ್ಚಬೇಕಾದ ಹೊಣೆಗಾರಿಕೆ ಪೊಲೀಸ್ ಇಲಾಖೆಯ ಮೇಲಿದೆ. ಆದರೆ, ದೂರು ಕೊಟ್ಟವರು ಸೇರಿದಂತೆ ಕೆಲವರ ವಿಚಾರಣೆಯ ಹೊರತಾಗಿ ತನಿಖೆ ಮುಂದಡಿ ಇಟ್ಟಿಲ್ಲ ಎಂಬುದನ್ನು ಪೊಲೀಸ್ ಇಲಾಖೆಯ ಮಾಹಿತಿಗಳೇ ದೃಢಪಡಿಸುತ್ತವೆ. ಆಧಾರ್ ದತ್ತಾಂಶ ಕೇಂದ್ರದ ಅತಿಭದ್ರತಾ ವಲಯವನ್ನು ಪ್ರವೇಶಿಸಿ ಕಂಪ್ಯೂಟರ್ ಚಿಪ್‌ಗಳನ್ನು ಕಳವು ಮಾಡಿರುವ ಪ್ರಕರಣವನ್ನು ಹಗುರವಾಗಿ ಪರಿಗಣಿಸುವುದು ಸರಿಯಲ್ಲ. ಇಂತಹ ನಡವಳಿಕೆಯು ಮುಂದೊಂದು ದಿನ ದುಷ್ಕರ್ಮಿಗಳು ಇಡೀ ದತ್ತಾಂಶ ಸಂಗ್ರಹಕ್ಕೆ ಹಾನಿ ಮಾಡುವುದಕ್ಕೆ ಕಾರಣವಾಗಬಹುದು. ಇದು ತಮ್ಮ ವ್ಯಾಪ್ತಿ ಮೀರಿದ ಪ್ರಕರಣ ಅಥವಾ ಉನ್ನತ ಮಟ್ಟದ ತನಿಖಾ ಸಂಸ್ಥೆ ವಹಿಸುವುದು ಸೂಕ್ತ ಎಂದು ನಗರದ ಪೊಲೀಸರು ಭಾವಿಸಿದ್ದಲ್ಲಿ ಈ ಕುರಿತು ಸೂಕ್ತ ಶಿಫಾರಸುಗಳನ್ನು ಸರ್ಕಾರದ ಮುಂದೆ ಸಲ್ಲಿಸಬೇಕಿತ್ತಲ್ಲವೇ? ಕೊಡಿಗೇಹಳ್ಳಿ ಠಾಣೆಯ ಅಧಿಕಾರಿಗಳ ಹಂತದಲ್ಲೇ ತನಿಖೆ ನಿಂತಿರುವಂತೆ ಕಾಣುತ್ತದೆ. ಬೆಂಗಳೂರು ನಗರ ಪೊಲೀಸ್ ಕಮಿಷನರ್ ಕೂಡ ಈವರೆಗೂ ಈ ಬಗ್ಗೆ ಯೋಚಿಸದೇ ಇರುವುದು ಅನುಮಾನಕ್ಕೆ ಎಡೆಮಾಡಿದೆ. ಇಂತಹ ಗಂಭೀರ ಪ್ರಕರಣವೊಂದರ ತನಿಖೆಯ ವಿಚಾರದಲ್ಲಿ ಪೊಲೀಸರು ಇನ್ನಾದರೂ ಸರಿಯಾಗಿ ಯೋಚಿಸಿ, ಕ್ರಮ ಕೈಗೊಳ್ಳಬೇಕಿದೆ. ತನಿಖೆಯಲ್ಲಿನ ವಿಳಂಬವು ಆಧಾರ್ ದತ್ತಾಂಶ ಸಂಗ್ರಹ ಮತ್ತು ಸಂರಕ್ಷಣೆ ವ್ಯವಸ್ಥೆಯನ್ನು ದುರ್ಬಲಗೊಳಿಸುವುದಕ್ಕೆ ಕಾರಣವಾಗಬಾರದು. ಕೃತ್ಯ ಎಸಗಿದವರನ್ನು ಪತ್ತೆಹಚ್ಚುವುದರ ಜತೆಯಲ್ಲೇ ಭದ್ರತಾ ಲೋಪಕ್ಕೆ ಕಾರಣವಾದ ಅಂಶಗಳು ಮತ್ತು ಕೃತ್ಯಕ್ಕೆ ಸಹಕರಿಸಿದವರನ್ನೂ ಬಯಲಿಗೆ ತರಬೇಕು. ಪ್ರಕರಣದ ತನಿಖೆಗೆ ಹಿರಿಯ ಅಧಿಕಾರಿಗಳನ್ನು ಒಳಗೊಂಡ ಉನ್ನತ ಮಟ್ಟದ ತಂಡವೊಂದನ್ನು ನೇಮಿಸಿ, ಕ್ಷಿಪ್ರಗತಿಯಲ್ಲಿ ಕಾರ್ಯಾಚರಣೆ ನಡೆಸಬೇಕು. ಅದು ಅಸಾಧ್ಯ ಎನಿಸಿದಲ್ಲಿ ಪ್ರಕರಣವನ್ನು ಕೇಂದ್ರದ ತನಿಖಾ ಸಂಸ್ಥೆಗಳಿಗೆ ವರ್ಗಾಯಿಸುವ ನಿರ್ಧಾರವನ್ನು ರಾಜ್ಯ ಸರ್ಕಾರವೇ ಮಾಡಬೇಕು.

ಎಲ್ಲ ದೇಶಗಳಿಗೂ ಕೋವಿಡ್ ವಿರುದ್ಧದ ಲಸಿಕೆ ಲಭ್ಯವಾಗದಿರುವುದರ ಹಿಂದಿದೆ ಹುನ್ನಾರ

# ‘ಟ್ರಿಪ್ಸ್’ ವಿನಾಯಿತಿಯ ವಿಳಂಬ ರಾಜಕೀಯ



ವಿಶ್ಲೇಷಣೆ

ಡಾ. ಎಚ್.ಆರ್.ಕೃಷ್ಣಮೂರ್ತಿ

**ಒಂದೂಕಾಲು** ವರ್ಷದ ಹಿಂದೆ, ಪ್ರಪಂಚದ 175ಕ್ಕೂ ಹೆಚ್ಚು ದೇಶಗಳು ಕೋವಿಡ್- 19ರ ಬಿಗಿ ಹಿಡಿತದಲ್ಲಿ ತಲ್ಲಣಿಸುತ್ತಿರುವಾಗ, ಭಾರತ ಮತ್ತು ದಕ್ಷಿಣ ಆಫ್ರಿಕಾವು ವಿಶ್ವ ವ್ಯಾಪಾರ ಸಂಘಟನೆಯ ‘ಟ್ರಿಪ್ಸ್’ (ಟ್ರೇಡ್ ರಿಲೇಟೆಡ್ ಆ್ಯಸ್ಪೆಕ್ಟ್ಸ್ ಆಫ್ ಇಂಟಲೆಕ್ಚುಯಲ್ ಪ್ರಾಪರ್ಟಿ ರೈಟ್ಸ್) ಮಂಡಳಿಯ ಮುಂದೆ ಪ್ರಸ್ತಾವವೊಂದನ್ನು ಮಂಡಿಸಿದವು. ಕೋವಿಡ್ ರೋಗ ನಿರ್ಣಯ, ಲಸಿಕೆ ಮತ್ತು ಚಿಕಿತ್ಸಾ ವಿಧಾನಗಳಿಗೆ ಸಂಬಂಧಿಸಿದಂತೆ ಔಷಧ ತಯಾರಿಕಾ ಕಂಪನಿಗಳು ಹಾಗೂ ಸಂಶೋಧನಾ ಸಂಸ್ಥೆಗಳು ಪಡೆದುಕೊಂಡಿರುವ ಪೇಟೆಂಟ್‌ಗಳನ್ನು, ಪ್ರಪಂಚದ ಎಲ್ಲ ದೇಶಗಳ ಜನರ ಒಳಿತಿನ ದೃಷ್ಟಿಯಿಂದ ಕನಿಷ್ಠ ಮೂರು ವರ್ಷಗಳ ಕಾಲ ರದ್ದುಗೊಳಿಸುವಂತೆ ಈ ಪ್ರಸ್ತಾವದಲ್ಲಿ ಕೋರಲಾಗಿತ್ತು.

ಇದರಿಂದ ಲಸಿಕೆಯ ವ್ಯಾಪಕ ಉತ್ಪಾದನೆಗಿರುವ ಅಡ್ಡಿ ನಿವಾರಣೆಯಾಗಿ, ಪ್ರಪಂಚದ ಎಲ್ಲ ಬಡ ರಾಷ್ಟ್ರಗಳಿಗೆ ತ್ವರಿತಗತಿಯಲ್ಲಿ ಲಸಿಕೆಯನ್ನು ಪೂರೈಸುವುದು ಸಾಧ್ಯವಾಗುತ್ತಿತ್ತು. ಆದರೆ ಕಳೆದ ಹದಿನಾರು ತಿಂಗಳ ಅವಧಿಯಲ್ಲಿ ಅನೇಕ ಸಭೆ, ಸಮಾಲೋಚನೆ, ತೆರೆಮರೆಯ ಪ್ರಯತ್ನಗಳು ನಡೆದಿದ್ದರೂ ಈ ಪ್ರಸ್ತಾವಕ್ಕೆ ಒಪ್ಪಿಗೆ ದೊರೆತಿಲ್ಲ. ಇದೀಗ ಮಾರ್ಚ್ ತಿಂಗಳಿನಲ್ಲಿ ಜಿನೀವಾದಲ್ಲಿ ನಡೆಯಲಿರುವ ವಿಶ್ವ ವ್ಯಾಪಾರ ಸಂಘಟನೆಯ 164 ಸದಸ್ಯ ರಾಷ್ಟ್ರಗಳ ಸಭೆಯಲ್ಲಿ, ‘ಟ್ರಿಪ್ಸ್ ವಿನಾಯಿತಿ’ ಎಂದೇ ಹೆಸರಾಗಿರುವ, ಪೇಟೆಂಟ್ ರದ್ದತಿಯ ಈ ವಿಷಯ ಪ್ರಮುಖವಾಗಿ ಚರ್ಚೆಗೆ ಬರಲಿದೆ.

ಕಳೆದ ವರ್ಷದ ಡಿಸೆಂಬರ್ ಅಂತ್ಯದ ವೇಳೆಗೆ ಜಾಗತಿಕವಾಗಿ 850 ಕೋಟಿ ಡೋಸ್‌ಗಳಷ್ಟು ಕೋವಿಡ್ ಲಸಿಕೆಯನ್ನು ನೀಡಲಾಗಿದೆಯೆಂದು ವಿಶ್ವ ಆರೋಗ್ಯ ಸಂಸ್ಥೆಯ ಮೂಲಗಳು ತಿಳಿಸಿವೆ. ಅಭಿವೃದ್ಧಿ ಹೊಂದಿದ ಮತ್ತು ಹೆಚ್ಚಿನ ವರಮಾನದ ದೇಶಗಳ ಶೇ 56ರಷ್ಟು ಪ್ರಜೆಗಳಿಗೆ ಲಸಿಕೆಯ ಮೊದಲನೆಯ ಡೋಸ್ ದೊರೆತಿದ್ದರೆ, ಬಡ ದೇಶಗಳಲ್ಲಿ ಇದರ ಪ್ರಮಾಣ ಶೇ 7ರಷ್ಟು ಮಾತ್ರ. ಆಫ್ರಿಕಾ ಖಂಡದ 58 ದೇಶಗಳಲ್ಲಿ ಕಳೆದ ಸೆಪ್ಟೆಂಬರ್ ಅಂತ್ಯದ ವೇಳೆಗೆ 9 ದೇಶಗಳ ಶೇ 10ರಷ್ಟು ಪ್ರಜೆಗಳಿಗೆ ಮಾತ್ರ ಕನಿಷ್ಠ ಒಂದು ಡೋಸ್ ಲಸಿಕೆ ದೊರೆತಿತ್ತು. ನವೆಂಬರ್ ಅಂತ್ಯದ ವೇಳೆಗೆ ಈ 58 ದೇಶಗಳ 87 ಲಕ್ಷ ಜನರಿಗೆ ಕೋವಿಡ್ ಸಾಂಕ್ರಾಮಿಕ ತಗುಲಿದ್ದು 2.22 ಲಕ್ಷ ಜನ ಸಾವಿಗೀಡಾಗಿದ್ದರು. ಭಾರತ- ದಕ್ಷಿಣ ಆಫ್ರಿಕಾದ ಪ್ರಸ್ತಾವಕ್ಕೆ ಸಕಾಲದಲ್ಲಿ ಒಪ್ಪಿಗೆ ದೊರೆತಿದ್ದರೆ, ಲಸಿಕೆ ವ್ಯಾಪಕವಾಗಿ ಲಭ್ಯವಾಗಿ ಸಾವಿನ ಸಂಖ್ಯೆಯನ್ನು ಗಮನಾರ್ಹವಾಗಿ ಇಳಿಸಬಹುದಿತ್ತೆಂಬ ಅಭಿಪ್ರಾಯವಿದೆ.

ಭಾರತ- ದಕ್ಷಿಣ ಆಫ್ರಿಕಾದ ಪೇಟೆಂಟ್ ವಿನಾಯಿತಿ ಪ್ರಸ್ತಾಪ ಮೊದಲ ಬಾರಿಗೆ ವಿಶ್ವ ವ್ಯಾಪಾರ ಸಂಘಟನೆಯ ಮುಂದೆ ಬಂದಾಗ ಅಮೆರಿಕ, ಇಂಗ್ಲೆಂಡ್, ಸ್ವಿಟ್ಜರ್ಲೆಂಡ್, ನಾರ್ವೆ, ಆಸ್ಟ್ರೇಲಿಯಾ, ಜಪಾನ್ ಮತ್ತು ಐರೋಪ್ಯ ಒಕ್ಕೂಟದ ದೇಶಗಳು ತೀವ್ರ ವಿರೋಧ ವ್ಯಕ್ತಪಡಿಸಿದ್ದವು. ‘ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ಬೃಹತ್ ಬಂಡವಾಳ ಹೂಡಿರುವ ಔಷಧ ತಯಾರಿಕಾ ಕಂಪನಿಗಳ ಆಸಕ್ತಿ, ಉತ್ಸಾಹ, ಶ್ರಮಗಳಿಗೆ ಈ ಪ್ರಸ್ತಾವ ತೀವ್ರ ಹಿನ್ನಡೆ ಉಂಟುಮಾಡುತ್ತದೆ. ಕೋವಿಡ್ ವೈರಾಣುವಿನ ಸ್ವರೂಪ ತ್ವರಿತಗತಿಯಲ್ಲಿ ಬದಲಾಗುತ್ತಿರುವ ಸಂದರ್ಭದಲ್ಲಿ, ಔಷಧ ತಯಾರಿಕಾ ಸಂಸ್ಥೆಗಳು ಎಚ್ಚರದಿಂದ ಇರಬೇಕಾದ ಪರಿಸ್ಥಿತಿಯಲ್ಲಿ, ಪೇಟೆಂಟ್‌ಗಳನ್ನು ತಾತ್ಕಾಲಿಕವಾಗಿ ರದ್ದು ಮಾಡುವ ಕ್ರಮ ಸಮಸ್ಯೆಗಳನ್ನು ಹೆಚ್ಚಿಸಲಿದೆ’ ಎಂಬ ಅಭಿಪ್ರಾಯ ವ್ಯಕ್ತವಾಯಿತು. ಈ ಮಧ್ಯೆ ಪ್ರಸ್ತಾವದ ಪ್ರಾಮಾಣಿಕ ಉದ್ದೇಶ ಸ್ಪಷ್ಟವಾಗುತ್ತಿದ್ದಂತೆ ಅದಕ್ಕೆ ವಿವಿಧ ದೇಶಗಳ ಬೆಂಬಲವೂ ಹೆಚ್ಚಾಯಿತು. ವಿಶ್ವ ವ್ಯಾಪಾರ ಸಂಘಟನೆಯ ನೂರಕ್ಕೂ ಹೆಚ್ಚು ಸದಸ್ಯ ರಾಷ್ಟ್ರಗಳ ಬೆಂಬಲ ದೊರೆಯುತ್ತಿದ್ದಂತೆ, ಈ ಮುಂಚೆ ಪ್ರಸ್ತಾವಕ್ಕೆ ವಿರೋಧ ವ್ಯಕ್ತಪಡಿಸಿದ್ದ ಹಲವಾರು ದೇಶಗಳ ನಿಲುವಿನಲ್ಲಿ ಸ್ವಲ್ಪ ಬದಲಾವಣೆ ಕಂಡುಬಂದಿತು. ಆದರೆ ಅದು ಕೇವಲ ಕಾಟಾಚಾರದ, ಜಾಣತನದ, ರಂಗೋಲಿಯ ಕೆಳಗೆ ತೂರುವ ಪ್ರಯತ್ನವಾಗಿತ್ತು.

ಪೇಟೆಂಟ್ ವಿನಾಯಿತಿಗೆ ಅರೆ ಮನಸ್ಸಿನ ಒಪ್ಪಿಗೆ ಸೂಚಿಸಲು ಚಿಂತಿಸುತ್ತಿದ್ದ ಕಂಪನಿಗಳು, ಲಸಿಕೆ ಉತ್ಪಾದನೆಯ ನೀಲನಕ್ಷೆಗೆ ಮಾತ್ರ ತಮ್ಮ ಸಮ್ಮತಿಯನ್ನು ಸೀಮಿತಗೊಳಿಸುವ ಆಲೋಚನೆ ಮಾಡಿದವು. ಉತ್ಪಾದನೆಗೆ ಅಗತ್ಯವಾದ ತಂತ್ರಜ್ಞಾನದ ವರ್ಗಾವಣೆಯ ಬಗ್ಗೆ ಯಾವುದೇ ಭರವಸೆ ನೀಡಲಿಲ್ಲ. ನೀಲನಕ್ಷೆಯನ್ನು ಪಡೆದ ಕಂಪನಿಗಳೇ ಆ ತಂತ್ರಜ್ಞಾನ ಅಭಿವೃದ್ಧಿಪಡಿಸಿಕೊಳ್ಳಲಿ ಎಂಬುದು ಪಾಶ್ಚಿಮಾತ್ಯ ದೇಶಗಳ ಧೋರಣೆ ಯಾಗಿತ್ತು.

ಲಸಿಕೆಯ ಉತ್ಪಾದನೆಯು ಸಾಮಾನ್ಯ ಔಷಧಗಳ ಉತ್ಪಾದನೆಗಿಂತ ಬಹಳ ಸಂಕೀರ್ಣ. ಹೀಗಾಗಿ ಲಸಿಕೆಯ ಉತ್ಪಾದನೆಗೆ ಅಗತ್ಯವಾದ ತಂತ್ರಜ್ಞಾನ ದೊರೆಯದಿದ್ದಾಗ, ಅಂತಹ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿಕೊಂಡು, ಆನಂತರ ಲಸಿಕೆಯನ್ನು ಉತ್ಪಾದಿಸಲು ಕನಿಷ್ಠ ಎರಡು ವರ್ಷಗಳು ಅಗತ್ಯವೆಂಬುದು ಪರಿಣತರ ಅಭಿಪ್ರಾಯ. ಆದ್ದರಿಂದ ಪೇಟೆಂಟ್ ವಿನಾಯಿತಿ ಮತ್ತು ಉತ್ಪಾದನೆಗೆ ಬೇಕಾದ ತಂತ್ರಜ್ಞಾನದ ವರ್ಗಾವಣೆ ಎರಡೂ ಏಕಕಾಲಕ್ಕೆ ಆಗಬೇಕು.

ಭಾರತ- ದಕ್ಷಿಣ ಆಫ್ರಿಕಾದ ಪ್ರಸ್ತಾವಕ್ಕೆ ಒಪ್ಪಿಗೆ ಕೊಟ್ಟಂತೆಯೂ ಇರಬೇಕು, ಆದರೆ ಅದರಿಂದ ಯಾವ ಹೆಚ್ಚಿನ ಪ್ರಯೋಜನವೂ ಆಗಬಾರದೆಂಬ ಈ ಬಹುರಾಷ್ಟ್ರೀಯ ಔಷಧ ತಯಾರಿಕಾ ಕಂಪನಿಗಳ ಹುನ್ನಾರ ತೀವ್ರ ಟೀಕೆಗೆ ಒಳಗಾಯಿತು. ಇದೀಗ ಅಮೆರಿಕ ಮತ್ತು ಐರೋಪ್ಯ ಒಕ್ಕೂಟದ ದೇಶಗಳು ಹಾಗೂ ಔಷಧ ತಯಾರಿಕಾ ಕಂಪನಿಗಳು, ಭಾರತ- ದಕ್ಷಿಣ ಆಫ್ರಿಕಾ ಪ್ರಸ್ತಾವಕ್ಕೆ ಪ್ರತಿಯಾಗಿ ಬೇರೊಂದು ಪ್ರಸ್ತಾವವನ್ನು ಹೊಸದಾಗಿ ತರುತ್ತಿವೆ. ಟ್ರಿಪ್ಸ್ ವಿನಾಯಿತಿ ಮತ್ತು ಉತ್ಪಾದನಾ ತಂತ್ರಜ್ಞಾನಗಳೆರಡೂ ಏಕಕಾಲದಲ್ಲಿ ಅಭಿವೃದ್ಧಿಶೀಲ ದೇಶಗಳಿಗೆ ದೊರೆತರೆ, ಆ ದೇಶಗಳ ಕಂಪನಿಗಳಿಂದ ಅತ್ಯಂತ ತೀವ್ರವಾದ ಪೈಪೋಟಿಯನ್ನು ಎದುರಿಸಬೇಕಾಗುತ್ತದೆ. ಅದನ್ನು ತಪ್ಪಿಸುವುದು ಈ ಹೊಸ ಪ್ರಸ್ತಾವದ ಮುಖ್ಯ ಉದ್ದೇಶ.

ಭೌಗೋಳಿಕ ಪ್ರತ್ಯೇಕತೆಯ ಉಪಬಂಧವನ್ನು (ಜಿಯೊಗ್ರಾಫಿಕಲ್ ಎಕ್ಸ್‌ಕ್ಲೂಶನ್) ಹೊಂದಿರುವ ಈ ಪ್ರಸ್ತಾವದಂತೆ, ಪೇಟೆಂಟ್ ವಿನಾಯಿತಿ ಮತ್ತು ತಂತ್ರಜ್ಞಾನದ ವರ್ಗಾವಣೆಯಿಂದ ದೊರೆಯುವ ಯಾವುದೇ ಪ್ರಯೋಜನ ಆಫ್ರಿಕಾ ಖಂಡದಲ್ಲಿರುವಂತಹ ಬಡದೇಶಗಳಿಗೆ ಮಾತ್ರ ದೊರೆಯಬೇಕು. ಅಷ್ಟೇ ಅಲ್ಲ, ಭಾರತ ಮತ್ತು ಚೀನಾದಂತಹ ದೇಶಗಳು ಈ ವಿನಾಯಿತಿಯನ್ನು ಪಡೆದು ಯಾವುದೇ ಲಸಿಕೆಯನ್ನು ಉತ್ಪಾದಿಸುವಂತಿಲ್ಲ. ಕೋವಿಡ್ ಸಾಂಕ್ರಾಮಿಕದ ಚಿಕಿತ್ಸೆಗೆ ಬಳಸುವ ಆಯ್ದ ಕೆಲವು ಔಷಧಗಳಿಗೆ ಮತ್ತು ಬೌದ್ಧಿಕ ಆಸ್ತಿ ಹಕ್ಕಿನ ಕೆಲವು ನಿರ್ದಿಷ್ಟ ಅಂಶಗಳಿಗೆ ಮಾತ್ರ ತಾತ್ಕಾಲಿಕ ವಿನಾಯಿತಿ ನೀಡಬಹುದೆಂಬುದು ಈ ಹೊಸ ಪ್ರಸ್ತಾವದಲ್ಲಿದೆ ಎನ್ನಲಾಗಿದೆ. ಈ ಷರತ್ತಿನಿಂದ ನಮ್ಮ ದೇಶಕ್ಕೆ ಯಾವ ತೊಂದರೆಯೂ ಇಲ್ಲ, ನಷ್ಟವಾಗುವುದು ತ್ವರಿತ ಗತಿಯಲ್ಲಿ ಲಸಿಕೆ ಮತ್ತು ಔಷಧಗಳ ಅಗತ್ಯವಿರುವ ಪ್ರಪಂಚದ ಬಡ ದೇಶಗಳಿಗೆ.

ಜನರಿಕ್ ಔಷಧಗಳು ಮತ್ತು ಲಸಿಕೆಗಳನ್ನು ಬೃಹತ್ ಪ್ರಮಾಣದಲ್ಲಿ ಉತ್ಪಾದಿಸುತ್ತಿರುವ ಕೆಲವೇ ದೇಶಗಳಲ್ಲಿ ಭಾರತವೂ ಒಂದು. ವಿವಿಧ ರೋಗಗಳ ವಿರುದ್ಧ ಲಸಿಕೆಗಳನ್ನು ಉತ್ಪಾದಿಸುತ್ತಿರುವ ನಮ್ಮ ದೇಶದ ಸಣ್ಣ ಮತ್ತು ದೊಡ್ಡ ಸಂಸ್ಥೆಗಳು ಪ್ರಪಂಚದ 150 ದೇಶಗಳಿಗೆ, ದುಬಾರಿಯಲ್ಲದ ಬೆಲೆಗಳಲ್ಲಿ ಲಸಿಕೆಗಳನ್ನು ರಫ್ತು ಮಾಡುತ್ತಿವೆ. ಗುಣಮಟ್ಟ, ಕೈಗೆಟುಕುವ ಬೆಲೆ ಮತ್ತು ಲಭ್ಯತೆಗಳ ವಿಷಯದಲ್ಲಿ ನಮ್ಮ ದೇಶದ ಲಸಿಕೆ ಮತ್ತು ಔಷಧ ತಯಾರಿಕಾ ಸಂಸ್ಥೆಗಳೊಡನೆ ಸ್ಪರ್ಧಿಸುವುದು ಬೇಡವಾಗಿರುವುದರಿಂದ, ಭೌಗೋಳಿಕ ಪ್ರತ್ಯೇಕತೆಯ ಉಪಬಂಧವನ್ನು ಉದ್ದೇಶಪೂರ್ವಕವಾಗಿ ಸೇರಿಸಲಾಗಿದೆ ಎಂಬ ಅಭಿಪ್ರಾಯವಿದೆ.

ಭಾರತದ ಔಷಧ ಉತ್ಪಾದಕರ ಸಂಘವು ಪೇಟೆಂಟ್‌ಗೆ ತಾತ್ಕಾಲಿಕ ವಿನಾಯಿತಿ ನೀಡಿ, ಸಂಬಂಧಿಸಿದ ತಂತ್ರಜ್ಞಾನ ವರ್ಗಾವಣೆಗೆ ಸೂಕ್ತವಾದ ರಾಯಧನ ವಿಧಿಸಬಹುದೆಂಬ ಸಲಹೆ ನೀಡಿದೆ. ಈ ಎಲ್ಲ ಗೊಂದಲಗಳ ನಡುವೆಯೇ ನಮ್ಮ ದೇಶದ ಭಾರತ್ ಬಯೊಟೆಕ್ ಕಂಪನಿಯು ಕೋವ್ಯಾಕ್ಸಿನ್ ಲಸಿಕೆಯ ತಂತ್ರಜ್ಞಾನವನ್ನು ಸ್ವಇಚ್ಛೆಯಿಂದ ನಮ್ಮ ದೇಶದ ನಾಲ್ಕು ಕಂಪನಿಗಳಿಗೆ ವರ್ಗಾಯಿಸಿದೆ. ಅವುಗಳಲ್ಲಿ ಒಂದು, ಕೋವ್ಯಾಕ್ಸಿನ್ ಲಸಿಕೆಗೆ ಬೇಕಾದ ಸಕ್ರಿಯ ವಸ್ತುವೊಂದನ್ನು ಉತ್ಪಾದಿಸುತ್ತಿದೆ.

ಮುಂದಿನ ತಿಂಗಳು ಜಿನೀವಾದಲ್ಲಿ ನಡೆಯಲಿರುವ ವಿಶ್ವ ವ್ಯಾಪಾರ ಸಂಘಟನೆಯ ಸಭೆಯಲ್ಲಿ ಭಾರತ- ದಕ್ಷಿಣ ಆಫ್ರಿಕಾದ ಮೂಲ ಪ್ರಸ್ತಾವಕ್ಕೆ ಸರ್ವಾನುಮತದ ಒಪ್ಪಿಗೆ ದೊರೆಯದಿದ್ದಲ್ಲಿ ಪ್ರಸ್ತಾವವನ್ನು ವೋಟಿಗೆ ಹಾಕಬೇಕಾಗುತ್ತದೆ. 164 ಸದಸ್ಯರಲ್ಲಿ ಮುಕ್ಕಾಲು ಭಾಗದಷ್ಟು ಮಂದಿ ಪ್ರಸ್ತಾವಕ್ಕೆ ಒಪ್ಪಿಗೆ ನೀಡಿದಲ್ಲಿ ಮಾತ್ರ ಟ್ರಿಪ್ಸ್ ವಿನಾಯಿತಿ ದೊರೆಯುತ್ತದೆ. ಇಲ್ಲವಾದಲ್ಲಿ ಅಮೆರಿಕ- ಐರೋಪ್ಯ ದೇಶಗಳ ಪ್ರಸ್ತಾವ ಮುನ್ನೆಲೆಗೆ ಬರುವ ಸಾಧ್ಯತೆಯಿದೆ. ಒಟ್ಟಿನಲ್ಲಿ ಜಗತ್ತಿನ ಎಲ್ಲ ದೇಶಗಳಿಗೂ ಕೋವಿಡ್ ವಿರುದ್ಧದ ಲಸಿಕೆ ಲಭ್ಯವಾಗಲು ಬಹಳಷ್ಟು ಕಾಲ ಕಾಯಬೇಕು ಎಂಬುದಂತೂ ಸ್ಪಷ್ಟ.



## ಚುರುಮುರಿ



# ಶಾಶ್ವತ ಸಾಹಿತ್ಯ

• ಆನಂದ

‘25 ಕಿಲೊ ಬಂಗಾರ, 50 ಕಿಲೊ ಬೆಳ್ಳಿ, 250 ಕೋಟಿಗೂ ಮೀರಿದ ಕ್ಯಾಶ್! ಇದೇನು ಕುಬೇರನ ಖಜಾನೆನಾ?’

‘ಯಾರ ಬಗ್ಗೆ ಹೇಳ್ತಿದೀಯ ನೀನು?’

‘ಅದೇರಿ, ಮೊನ್ನೆ ಕಾನ್ಪುರದಲ್ಲಿ ಒಬ್ಬ ಉದ್ಯಮಿ ಮನೆ ಮೇಲೆ ಐ.ಟಿ ರೇಡ್ ಮಾಡಿದಾಗ ಸಿಕ್ಕಿದ ಸಂಪತ್ತು. ಒಂದು ರೂಮ್ ತುಂಬಾ ಬರೀ 500, 2000 ರೂಪಾಯಿ ನೋಟುಗಳನ್ನ ಇಟ್ಟಿಗೆ ತರಹಾ ಜೋಡಿಸಿದ್ದರಂತೆ’.

‘ಬಹುಶಃ ಅಷ್ಟು ಕ್ಯಾಶ್ ಇದೆ ಅಂತ ಮಾಲೀಕರಿಗೇ ಗೊತ್ತಿತ್ತೋ ಇಲ್ಲವೋ...’

‘ಪಾಪ! ಐ.ಟಿ ಮಂದಿ ಎಣಿಸಿ ಎಣಿಸಿ ಸುಸ್ತಾದರಂತೆ’.

‘ಬಚ್ಚಿಟ್ಟದ್ದು ಪರರಿಗೆ ಅಂತ ಕಪ್ಪುಹಣ ಇಲ್ಲದೆ ಇರೋ ಸಮಯದಲ್ಲೇ ನಮ್ಮ ಸರ್ವಜ್ಞ ಹೇಳಿದ್ದರಲ್ಲ’.

‘ನಮ್ಮ ಮನೇಲೂ ಹಾಗೇ ಒಂದಿಷ್ಟು ಆಸ್ತಿ ಇದೇರಿ’.

‘ನಮ್ಮ ಮನೇಲಾ?!’

‘ಅದೇರಿ, ನಿಮ್ಮ ಶಾಶ್ವತ ಸಾಹಿತ್ಯ ಎಂಬ ಆಸ್ತಿ. ನಿಮ್ಮ ಖರ್ಚಾಗದೇ ಇರೋ ಪುಸ್ತಕಗಳು’.

‘ಓ! ಅದಾ, ನಾನು ಎಲ್ಲೋ ಬೆಳ್ಳಿ ಬಂಗಾರ ಬಿಡು, ಅಟ್‌ಲೀಸ್ಟ್ ಒಂದಿಷ್ಟು ಕ್ಯಾಶ್ ಇದೆಯೇನೋ ಅಂತ ಅಂದುಕೊಂಡಿದ್ದೆ’.

‘ಅಟ್ಟದ ಮೇಲಿವೆ ಆ ಎಲ್ಲಾ ಪುಸ್ತಕಗಳು. ಅವೆಲ್ಲ ಖರ್ಚಾಗಿದ್ದಿದ್ದರೆ ನಾನು ಇನ್ನೊಂದು ಸೀರೇನಾದರೂ ತಗೊಬಹುದಿತ್ತು. ಖರ್ಚಾಗದೆ ಶಾಶ್ವತ ಸಾಹಿತ್ಯವಾಗಿ ಉಳಿದಿವೆ. ಕಪ್ಪುಹಣದ ಬಂಡಲ್‌ಗಳಂತೆ’.

‘ಎಲ್ಲಾದಕ್ಕೂ ಒಂದು ಕಾಲ ಬರಬೇಕು’.

‘ನನಗೊಂದು ಐಡಿಯಾ. ಈ ಐ.ಟಿ ದಾಳಿ ತರಹ ಪುಸ್ತಕ ಪ್ರಾಧಿಕಾರದೋರು ನಿಮ್ಮಂತಹ ಶಾಶ್ವತ ಸಾಹಿತಿಗಳ ಮನೆಗಳ ಮೇಲೆ ದಾಳಿ ಮಾಡಿ, ಖರ್ಚಾಗದೆ ಉಳಿದಿರೋ ಪುಸ್ತಕಗಳನ್ನು ಮುಟ್ಟುಗೋಲು ಹಾಕಿಕೊಂಡರೆ ನನಗೆ ಒಂದಿಷ್ಟು ಜಾಗನಾದರೂ ಸಿಗುತ್ತೆ’ ಎಂದು ಹೇಳಿ ಎದ್ದು ಹೋದಳು ಹೆಂಡತಿ.

ಈಗಾಗಲೇ ಪ್ರಾಧಿಕಾರದ ಗೋಡೌನಿನಲ್ಲಿ ಇಂತಹ ಶಾಶ್ವತ ಸಾಹಿತ್ಯದ ಎಷ್ಟು ಬಂಡಲ್‌ಗಳಿವೆಯೋ ಏನೋ? ಯಾರಿಗೆ ಗೊತ್ತು?

## ದಿನದ ಟ್ವೀಟ್


### ಮಕ್ಕಳಿಗೆ ಕಲಿಸಬೇಕಾದುದೇನು?



ಇಂದಿನ ಶಿಕ್ಷಣ ವ್ಯವಸ್ಥೆಯು ಪಠ್ಯಕ್ರಮ ಬೋಧನೆಗಷ್ಟೇ ಗಮನ ಕೇಂದ್ರೀಕರಿಸಿದೆ. ವಿದ್ಯಾರ್ಥಿಗಳಿಗೆ ತಾಳ್ಮೆಯನ್ನಾಗಲೀ ಸಹಿಷ್ಣುತಾ ಮನೋಭಾವವನ್ನಾಗಲೀ ಅಥವಾ ಒತ್ತಡ ನಿರ್ವಹಣೆಯ ಕೌಶಲಗಳನ್ನಾಗಲೀ ಅದು ಕಲಿಸುವುದಿಲ್ಲ. ಬಿಕ್ಕಟ್ಟಿನ ಸನ್ನಿವೇಶವನ್ನು ಎದುರಿಸುವುದು, ಸವಾಲುಗಳಿಗೆ ಮುಖಾಮುಖಿಯಾಗುವುದು ಇಂದಿನ ಪೀಳಿಗೆಯ ಮಕ್ಕಳಿಗೆ ಅತ್ಯಂತ ಕಷ್ಟವಾಗುತ್ತಿದೆ...

**ರೋಹಿತ್ ಸಿಂಹ,** ಎಂಜಿನಿಯರ್

## ಕಿಡಿನುಡಿ



ಶಿವಮೊಗ್ಗದಲ್ಲಿ ಈಗ ಅಶಾಂತಿ ಉಂಟಾಗಿದೆ. ಅಮಾಯಕ ಮಕ್ಕಳ ಬಲಿ ಆಗುತ್ತಿದೆ. ರಾಜಕೀಯ ನಾಯಕರು ಆ ಯುವಕನ ಮನೆಗೆ ಹೋಗುವುದು, ಸಾಂತ್ವನ ಹೇಳುವುದು ಮಾಡುತ್ತಾರೆ. ಹೋದ ಜೀವದ ಹೆಸರಿನಲ್ಲಿ ರಾಜಕೀಯ ಮಾಡುತ್ತಾರೆ. ಮೂರು ದಿನ ಆದ ಮೇಲೆ ಅತ್ತ ಯಾರೂ ಸುಳಿಯಲ್ಲ. ಆ ಅಮಾಯಕನ ಕುಟುಂಬದ ಬಗ್ಗೆ ಕೇಳುವವರು ದಿಕ್ಕಿರುವುದಿಲ್ಲ.

**ಎಚ್.ಡಿ.ಕುಮಾರಸ್ವಾಮಿ,** ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

## 25 ವರ್ಷಗಳ ಹಿಂದೆ

ಶನಿವಾರ, 22-2-1997

• **ಸದನದಲ್ಲಿ ಬಿಕ್ಕಟ್ಟು ಅಂತ್ಯ ವಿರೋಧಿ ಧರಣಿ ವಾಪಸ್**

**ಬೆಂಗಳೂರು, ಫೆ. 21**– ಆಶ್ರಯ ಮನೆ ಹಂಚಿಕೆಯಲ್ಲಿ ಆಗಿರುವ ತಾರತಮ್ಯ ನಿವಾರಿಸುವುದಕ್ಕಾಗಿ, ಕೈಬಿಟ್ಟು ಹೋಗಿರುವ 90 ವಿಧಾನಸಭಾ ಕ್ಷೇತ್ರಗಳಿಗೆ ತಲಾ ನೂರರಂತೆ ಒಂಬತ್ತು ಸಾವಿರ ಮನೆಗಳನ್ನು ಮಂಜೂರು ಮಾಡಲು ಸರ್ಕಾರ ಒಪ್ಪುವುದರೊಂದಿಗೆ, ವಿಧಾನಸಭೆಯಲ್ಲಿ ನಿನ್ನೆಯಿಂದ ಉದ್ಭವಿಸಿದ್ದ ಬಿಕ್ಕಟ್ಟು ನಿವಾರಣೆಯಾಗಿ ವಿರೋಧಿ ಧರಣಿಯೂ ಅಂತ್ಯಗೊಂಡಿತು.

ಸರ್ಕಾರ ಮಂಜೂರು ಮಾಡಿದ 20 ಸಾವಿರ ಆಶ್ರಯ ಮನೆಗಳ ಹಂಚಿಕೆಯಲ್ಲಿ ಭಾರಿ ಪ್ರಮಾಣದ ತಾರತಮ್ಯ ಮಾಡಲಾಗಿದೆ, ‘ಒಂದು ಕಣ್ಣಿಗೆ ಸುಣ್ಣ ಇನ್ನೊಂದಕ್ಕೆ ಬೆಣ್ಣೆ’ ನೀತಿಯ ಮಲತಾಯಿ ಧೋರಣೆಯನ್ನು ಸರ್ಕಾರ ಅನುಸರಿಸಿದೆ ಎಂದು ಆರೋಪಿಸಿ ಕಾಂಗ್ರೆಸ್, ಬಿಜೆಪಿ, ಸಿಪಿಎಂ, ರೈತ ಸಂಘ, ರಿಪಬ್ಲಿಕನ್ ಪಕ್ಷ ಹಾಗೂ ವಾಟಾಳ್ ಪಕ್ಷ ನಿನ್ನೆಯಿಂದ ಧರಣಿ ನಡೆಸಿದ್ದವು.

• **ಏಳು ಭಾರಿ ಕೈಗಾರಿಕೆಗಳ ಸ್ಥಾಪನೆಗೆ ಸಂಪುಟ ಒಪ್ಪಿಗೆ**

**ಬೆಂಗಳೂರು, ಫೆ. 21**– ರಾಜ್ಯದಲ್ಲಿ ಒಟ್ಟು ರೂ 4028.61 ಕೋಟಿ ವೆಚ್ಚದಲ್ಲಿ ಸುಮಾರು 6,278 ಮಂದಿಗೆ ಉದ್ಯೋಗ ಅವಕಾಶ ನೀಡುವ ಏಳು ಭಾರಿ ಕೈಗಾರಿಕೆಗಳ ಸ್ಥಾಪನೆಗೆ ರಾಜ್ಯ ಸಚಿವ ಸಂಪುಟ ಇಂದು ಒಪ್ಪಿಗೆ ನೀಡಿದೆ.

## 50 ವರ್ಷಗಳ ಹಿಂದೆ

ಮಂಗಳವಾರ, 22-2-1972

• **‘ಏಷ್ಯಾದ ಭವಿಷ್ಯ ಚೀನಾ, ಅಮೆರಿಕ ನಿರ್ಧರಿಸವು’**

**ನವದೆಹಲಿ, ಫೆ. 21**– ‘ಏಷ್ಯಾದ ಹಣೆಬರಹವನ್ನು ನಿರ್ಧರಿಸುವುದಕ್ಕಾಗಿ ಅಮೆರಿಕದ ಅಧ್ಯಕ್ಷ ನಿಕ್ಸನ್ ಹಾಗೂ ಚೀನಾದ ಪ್ರಧಾನಿ ಚೌ-ಎನ್-ಲಾಯ್ ಅವರು ಪ್ರಸಕ್ತ ಮಾತುಕತೆಯಲ್ಲಿ ಯಾವುದೇ ನಿರ್ಧಾರ ಕೈಗೊಂಡಲ್ಲಿ ಅದು ಭಾರತಕ್ಕಾಗಲಿ ಅಥವಾ ಏಷ್ಯಾದ ಯಾವುದೇ ರಾಷ್ಟ್ರಕ್ಕಾಗಲಿ ಒಪ್ಪಿಗೆಯಾಗದು’ ಎಂದು ಪ್ರಧಾನಿ ಇಂದಿರಾ ಗಾಂಧಿ ಅವರು ಇಂದು ಹೇಳಿದರು.

ಕೇಂದ್ರ ಸಚಿವಾಲಯದ ಎದುರುಗಡೆಯಲ್ಲಿನ ಬೋಟ್ ಕ್ಲಬ್‌ನಲ್ಲಿ ಭಾರಿ ಬಹಿರಂಗ ಸಭೆಯೊಂದನ್ನು ಉದ್ದೇಶಿಸಿ ಮಾತನಾಡುತ್ತಿದ್ದ ಪ್ರಧಾನಿ ಅವರು ‘ಚೀನಾ ಮತ್ತು ಅಮೆರಿಕ ನಾಯಕರ ಭೇಟಿ ಸ್ನೇಹವನ್ನುಂಟು ಮಾಡುವ ಉದ್ದೇಶದಿಂದ ಕೂಡಿದ್ದರೆ ಅದನ್ನು ನಾವು ಸ್ವಾಗತಿಸುತ್ತೇವೆ’ ಎಂದರು.

ಆದರೆ, ‘ಹೊಸ ಶಕ್ತಿ ಬಣವೊಂದನ್ನು ರಚಿಸುವುದೇ ಆ ಮಾತುಕತೆಯ ಉದ್ದೇಶವೆಂದು ಕಳವಳ ವ್ಯಕ್ತವಾಗಿದೆ. ಹಾಗೇನಾದರೂ ಆದಲ್ಲಿ ಏಷ್ಯಾ ರಾಷ್ಟ್ರಗಳಿಗೆ ಷರತ್ತುಗಳನ್ನು ಆಜ್ಞಾಪಿಸುವಂಥ ಯಾವುದೇ ನಿರ್ಧಾರಕ್ಕೆ ಚಿಕ್ಕ ರಾಷ್ಟ್ರವಾದರೂ ಭಾರತ ಬದ್ಧವಲ್ಲ’ ಎಂದೂ ಅವರು ಸ್ಪಷ್ಟಪಡಿಸಿದರು.

• **5 ಲಕ್ಷ ಗ್ರಾಮಗಳಲ್ಲಿ ಸಹಕಾರದಿಂದ ಬ್ಯಾಂಕ್ ತೆರೆಯಲು ಶಿಫಾರಸು**

**ನವದೆಹಲಿ, ಫೆ. 21**– ಭಾರತದ ಐದು ಲಕ್ಷ ಗ್ರಾಮಗಳಲ್ಲಿ ಸಹಕಾರಿ ಕ್ಷೇತ್ರದ ಸಂಪರ್ಕ ಪಡೆದ ಗ್ರಾಮೀಣ ಬ್ಯಾಂಕುಗಳನ್ನು ತೆರೆಯುವ ಬೃಹತ್ ಕಾರ್ಯವನ್ನು ಬ್ಯಾಂಕಿಂಗ್ ಆಯೋಗ ಶಿಫಾರಸು ಮಾಡಿದೆ.

## ಸಂಗತ

# ಕನ್ನಡ ಇಷ್ಟ, ಆದರೆ... ಕಷ್ಟ!

ಕನ್ನಡ ತಿಳಿಯದವರೊಬ್ಬರು ತತ್‌ಕ್ಷಣ ಬಂದು ‘ಕನ್ನಡ ಕಲಿಸುತ್ತೀರಾ?’ ಎಂದು ಕೇಳಿದರೆ ನಮ್ಮಲ್ಲಿ ಯಾವ ತಯಾರಿ ಇದೆ?

• ರಾಹುಲ್ ಪುಟ್ಟಿ, ಪೃಥ್ವೀರಾಜ ಕವತ್ತಾರು

**ರಾಷ್ಟ್ರೀಯ** ಶಿಕ್ಷಣ ನೀತಿ- 2020 ಅನುಷ್ಠಾನದ ಹೊಸ್ತಿಲಲ್ಲಿ ನಾವೆಲ್ಲ ನಿಂತಿರುವಾಗ, ನಮ್ಮ ಶಿಕ್ಷಣ ಮಾಧ್ಯಮ ಮತ್ತು ಭಾಷಾ ಕಲಿಕೆಯ ಕುರಿತು ಯೋಚಿಸದಿದ್ದರೆ ಹೇಗೆ? ಹಾಗೆ ನೋಡಿದರೆ ಇಂಥ ಚರ್ಚೆ ಎಂದೋ ಆರಂಭವಾಗಬೇಕಿತ್ತು. ಅಂತರರಾಷ್ಟ್ರೀಯ ಮಾತೃಭಾಷಾ ದಿನವು (ಫೆ. 21) ಸದ್ದಿಲ್ಲದೇ ಬಂದು ಹೋಗಿರುವ ಈ ಸಂದರ್ಭದಲ್ಲಾದರೂ ನಾವು ಈ ಕುರಿತು ಮಾತನಾಡುವ ಅಗತ್ಯವಿದೆ.

ನಮ್ಮ ಶಾಲೆಗಳಿಗೆ ಅಂದಾಜು ನೂರು ವರ್ಷಗಳ ಇತಿಹಾಸವಿದೆ. ಅದರೊಂದಿಗೆ ಬಹುಶಃ ‘ಶಿಕ್ಷಣದಲ್ಲಿ ಕನ್ನಡ’ ಎಂಬ ವಿಚಾರಕ್ಕೂ ಅಷ್ಟೇ ಹರೆಯವಾದೀತು. ಆದರೆ ಆಶ್ಚರ್ಯ ಮತ್ತು ಬೇಸರದ ಸಂಗತಿಯೆಂದರೆ, ಇಂದು ಶಾಲೆ-ಕಾಲೇಜುಗಳಲ್ಲಿ ಓದುತ್ತಿರುವ ಹೆಚ್ಚಿನ ಮಕ್ಕಳಿಗೆ ಕನ್ನಡ ‘ಕಷ್ಟ’ದ ವಿಷಯವಾಗುತ್ತಿರುವುದು! ಮಗುವಿಗೆ ಕನ್ನಡ ಪರೀಕ್ಷೆಯ ದಿನ ಬಂತೆಂದರೆ ಹೆತ್ತವರು ಕಂಗಾಲಾಗಿ ಬಿಡುತ್ತಾರೆ. ಇದಕ್ಕೆ ಕಾರಣವೇನು? ಬಾಲ್ಯದಲ್ಲಿಯೇ ಇಂಗ್ಲಿಷ್ ಮಾಧ್ಯಮದಲ್ಲಿ ಕಲಿಯುವುದರಿಂದ ಕನ್ನಡ ಕಷ್ಟವಾಗಬಹುದು ಎಂದು ಹೇಳಬಹುದಾದರೂ ‘ಕನ್ನಡ ಬೋಧನೆ’ಯಲ್ಲಿ ಏನಾದರೂ ಸಮಸ್ಯೆಯಿದೆಯೇ ಎಂದು ಯಾಕೆ ಕೇಳಿಕೊಳ್ಳಬಾರದು?

ನೀವು ಸುಮ್ಮನೆ ಗೂಗಲ್‌ನಲ್ಲಿ ‘ಟೀಚಿಂಗ್ ಇಂಗ್ಲಿಷ್ ಆ್ಯಸ್ ಸೆಕೆಂಡ್ ಲ್ಯಾಂಗ್ವೇಜ್’ ಎಂದು ಹಾಕಿ. ನಿಮ್ಮ ಮುಂದೆ ಮಾಹಿತಿಯ ಮಳೆ ಸುರಿಯುತ್ತದೆ. ಗೂಗಲ್ ಸ್ಕಾಲರ್‌ನಲ್ಲಿ ಇಣುಕಿ ನೋಡಿ, ಅಲ್ಲಿಯೂ ಮಾಹಿತಿಯ ಹೊಳೆಯೇ ಇದೆ. ಅದರ ಬದಲಿಗೆ ‘ಟೀಚಿಂಗ್ ಕನ್ನಡ ಆ್ಯಸ್ ಸೆಕೆಂಡ್ ಲ್ಯಾಂಗ್ವೇಜ್’ ಎಂದು ಬರೆಯಿರಿ. ನಿಮಗೆ ಶೈಕ್ಷಣಿಕ ಮಹತ್ವದ ಮಾಹಿತಿಗಳು ಸಿಗುವುದೇ ಇಲ್ಲ. ಅದರ ಬದಲಿಗೆ ಒಂದಷ್ಟು ಪತ್ರಿಕಾ ವರದಿಗಳ ಭಾಗಗಳಷ್ಟೇ ಲಭ್ಯವಿರುತ್ತವೆ. ಅದರಲ್ಲಿಯೂ ಕೆಲವು ಲೇಖನಗಳಲ್ಲಿ ಅಥವಾ ಬ್ಲಾಗ್‌ಗಳಲ್ಲಂತೂ ಪೋಷಕರು, ಅಧ್ಯಾಪಕರು, ಶಾಲಾ ಮುಖ್ಯಸ್ಥರು, ಅಧಿಕಾರಿಗಳ ಬಿರುಸು ಧಾಟಿಯ ಪ್ರತಿಕ್ರಿಯೆಗಳಿರುತ್ತವೆ.

ಕನ್ನಡ ಒಂದು ವೇಳೆ ಕಡ್ಡಾಯವಾಗಿ ಶಾಲೆಯಲ್ಲಿ ಕಲಿಕೆಯ ವಿಷಯವಾದರೆ ಪೋಷಕರಿಗೆ ಮಕ್ಕಳ ಅಂಕದ ಚಿಂತೆ! ಶಿಕ್ಷಣ ಸಂಸ್ಥೆಗಳಲ್ಲಿ ಭಾಷಾ ಬಳಕೆಗೆ ಸಂಬಂಧಿಸಿದ ವಿಷಯವು ಕರ್ನಾಟಕ ಹೈಕೋರ್ಟ್‌ನಲ್ಲಿ ವಿಚಾರಣೆಯ ಹಂತದಲ್ಲಿಯೇ ಇದೆ. ಕರ್ನಾಟಕದಲ್ಲಿ ಕನ್ನಡದ ಪರವೇ ನ್ಯಾಯ ಕೇಳಬೇಕಾಗಿ ಬಂದಿರುವ ಸ್ಥಿತಿಯ ವ್ಯಂಗ್ಯವೇನೇ ಇರಲಿ, ದಶಕಗಳ ದೀರ್ಘಹಾದಿಯಲ್ಲಿ ಕನ್ನಡ ಭಾಷೆಗೆ ಸಂಬಂಧಿಸಿ ಇತ್ತೀಚೆಗಿನ ಬೆಳವಣಿಗೆಗಳನ್ನು ಪ್ರಮುಖವಾಗಿ ಪರಿಗಣಿಸುವ ಅಗತ್ಯವಿದೆ.

ಕನ್ನಡಕ್ಕೆ ನವೀನ ರೀತಿಯ ಬೋಧನಾ ವಿಧಾನವನ್ನು ಶೋಧಿಸುವುದು ಇಂದಿನ ಅವಶ್ಯಕತೆಯಾಗಿದೆ. ಅಂದರೆ ಒಂದು ರೀತಿಯ ಭಾಷಾ ವೈಜ್ಞಾನಿಕ ವಿಧಾನವನ್ನು ರೂಪಿಸಬೇಕಾಗಿದೆ. ಅದಕ್ಕನುಗುಣವಾದ ಪಠ್ಯಗಳನ್ನು ಸಿದ್ಧಗೊಳಿಸಬೇಕಾಗಿದೆ. ಸಮಾಜದ ಬಹುಆಸಕ್ತಿಗಳಿಗೆ, ವೈವಿಧ್ಯಮಯ ಅಗತ್ಯಗಳಿಗೆ ಸ್ಪಂದಿಸುವ ಭಾಷೆಯ ಆಕರಗಳನ್ನು ಒದಗಿಸಬೇಕಾಗಿದೆ. ಜಪಾನಿ, ಚೀನಿ, ಕೊರಿಯಾಗಳಂಥ ಭಾಷೆಗಳು ಭಾಷಾಪ್ರಾವೀಣ್ಯವನ್ನು ಅಳೆಯುವ ಅಂತರರಾಷ್ಟ್ರೀಯ ಮಾನದಂಡಕ್ಕೆ ತಮ್ಮನ್ನು ತಾವು ಹೊಂದಿಸಿಕೊಂಡಿರುವುದನ್ನು ಇಲ್ಲಿ ಉಲ್ಲೇಖಿಸಬೇಕಾಗಿದೆ.

ಕನ್ನಡವಲ್ಲದೆ ಬೇರೆ ಭಾಷೆಯನ್ನು ಆಯ್ಕೆ ಮಾಡಿಕೊಳ್ಳುವಲ್ಲಿ ವಿದ್ಯಾರ್ಥಿಗಳು ಮತ್ತು ಪೋಷಕರು ನೀಡುವ ಒಂದು ಕಾರಣವೆಂದರೆ ಕನ್ನಡ ಕಷ್ಟ! ಮನೆಯಲ್ಲಿ ಕನ್ನಡ ಮಾತನಾಡುವವರೇ ತಮ್ಮ ಮಕ್ಕಳಿಗೆ ಕನ್ನಡದಲ್ಲಿ ಕಲಿಸಲು ಅಥವಾ ಕನ್ನಡದಲ್ಲಿ ಕಲಿಯಲು ಹಿಂದೇಟು ಹಾಕುತ್ತಿರುವುದಕ್ಕೆ ಏನೆನ್ನಬೇಕು?! ‘ಇದಕ್ಕೆ ಅವರು ನೀಡುವ ಒಂದು ಕಾರಣ- ‘ಕನ್ನಡದಲ್ಲಿ ಒಳ್ಳೆಯ ಮಾರ್ಕು ತೆಗೆಯಲು ಆಗುವುದಿಲ್ಲ’ ಎಂಬುದು. ಅದು ಹಾಗಿರಲಿ.



ಪ್ರಸ್ತುತ ಶೈಕ್ಷಣಿಕ ವ್ಯವಸ್ಥೆಯಲ್ಲಿ ಕನ್ನಡ ಭಾಷೆಯನ್ನು ಕಲಿಸುವ ವಿಧಾನವು ಪಠ್ಯಕೇಂದ್ರಿತವಾಗಿದೆ. ಸಾಹಿತ್ಯ ಕಲಿಕೆಯನ್ನೇ ಭಾಷೆಯ ಕಲಿಕೆ ಎಂಬುದಾಗಿ ನಾವು ಭಾವಿಸಿದ್ದೇವೆ. ಭಾಷಾಪ್ರಾವೀಣ್ಯವನ್ನು ಅಳೆಯುವುದಕ್ಕೆ ನಾವು ಬರಹದ ಮಾರ್ಗವನ್ನು ಅನುಸರಿಸುತ್ತೇವೆ. ಭಾಷೆಯ ಪರಿಣಾಮಕಾರಿಯಾದ ಮತ್ತು ಪ್ರಾಯೋಗಿಕವಾದ ಬಳಕೆಯ ಕುರಿತು ನಾವು ಗಮನಹರಿಸುತ್ತಿಲ್ಲ. ಸಾಮಾಜಿಕ ಸಂದರ್ಭದಲ್ಲಿ ಕನ್ನಡದ ಬಳಕೆಯ ಕುರಿತ ಬಹುನೆಲೆಯ ಸಾಧ್ಯತೆಗಳ ಬಗ್ಗೆ ಗಂಭೀರವಾಗಿ ಚಿಂತಿಸುತ್ತಿಲ್ಲ. ಭಾಷೆಯ ಕಲಿಕೆ ಎಂದರೆ ಸಾಹಿತ್ಯದ ಓದುವಿಕೆ ಮಾತ್ರವಲ್ಲ, ಕೇಳುವ, ಓದುವ, ಮಾತನಾಡುವ ಮತ್ತು ಬರವಣಿಗೆಯ ಪ್ರಾವೀಣ್ಯವನ್ನು ಹೊಂದುವಂತೆ ಮಾಡುವುದು ಕೂಡ ಭಾಷೆಯ ಕಲಿಕೆಯೇ.

ಹಾಗಾಗಿ, ಕನ್ನಡವನ್ನು ನೀವು ಯಾರಿಗಾದರೂ ಕಲಿಸುತ್ತಿದ್ದೀರಿ ಎಂದರೆ ನೀವು ಎಷ್ಟು ಕಲಿಸಿದ್ದೀರಿ ಮತ್ತು ಏನನ್ನು ಕಲಿಸುತ್ತಿದ್ದೀರಿ ಎಂಬಷ್ಟೇ, ಕಲಿಯುವ ವಿದ್ಯಾರ್ಥಿಯು ಎಷ್ಟನ್ನು ಮತ್ತು ಏನನ್ನು ಕಲಿತಿದ್ದಾನೆ ಎಂಬುದು ಕೂಡ ಮುಖ್ಯ. ಒಬ್ಬ ವಿದ್ಯಾರ್ಥಿಯು ತಾನು ಕಲಿತಿದ್ದೇನೆ ಎಂಬ ಪುಳಕವನ್ನುಂಟು ಮಾಡದಂಥ ಪಾಠಗಳು ನಿರರ್ಥಕವೆನಿಸುತ್ತವೆ. ಕರ್ನಾಟಕದಲ್ಲಿ ಕನ್ನಡ ಕಷ್ಟವಾಗುವಂಥ ಸ್ಥಿತಿಯ ಹಿಂದೆ ಇಂಥ ಕಾರಣ ಇರಬಹುದೇ? ಚಿಂತಿಸಬೇಕಾಗಿದೆ.

ಕನ್ನಡ ತಿಳಿಯದವನೊಬ್ಬ ತತ್‌ಕ್ಷಣ ಬಂದು ‘ಕನ್ನಡ ಕಲಿಸುತ್ತೀರಾ?’ ಎಂದು ಕೇಳಿದರೆ ನಮ್ಮಲ್ಲಿ ಯಾವ ತಯಾರಿ ಇದೆ? ಇಂಥ ಸಿದ್ಧತೆಯನ್ನು ಯುರೋಪಿಯನ್ ಮತ್ತು ಹೆಚ್ಚಿನ ವಿದೇಶಿ ಭಾಷೆಗಳು ಮಾಡಿಕೊಂಡಿವೆ. ಕನ್ನಡ ಬಾರದವರಿಗೆ ಕನ್ನಡ ಕಲಿಸುವ ಹಾದಿಯಲ್ಲಿಯೇ ‘ಕನ್ನಡ ಕಷ್ಟ’ ಎನ್ನುವ ವಿದ್ಯಾರ್ಥಿಗಳಿಗೂ ಕನ್ನಡವನ್ನು ಇಷ್ಟವಾಗಿಸುವ ಕವಲುಹಾದಿಗಳಿರಬಹುದು. ಅವುಗಳನ್ನೂ ಶೋಧಿಸಬೇಕಾಗಿದೆ.

## ವಾಚಕರ ವಾಣಿ

### ಮೂಕಪ್ರಾಣಿಗಳ ರೋದನ ನಿಲ್ಲಲಿ

ಮಂಡ್ಯದ ಸಂತೇಬಾಚಹಳ್ಳಿಯ ಕೆಲ ರೈತರು ಊರಿನ ದೇವಸ್ಥಾನದ ಬಳಿ ಗಂಡು ಕರು ಮತ್ತು ವಯಸ್ಸಾದ ದನಗಳನ್ನು ಬಿಟ್ಟು ಹೋಗುತ್ತಿರುವುದರಿಂದ, ಅವು ಮೇವು, ನೀರಿಲ್ಲದೆ ಸಾವಿಗೀಡಾಗುತ್ತಿರುವುದನ್ನು ತಿಳಿದು (ಪ್ರ.ವಾ., ಫೆ. 21) ಬಹಳ ನೋವಾಯಿತು. ಇಂಥ ಸಮಸ್ಯೆ ನಿವಾರಣೆಗೆ ಅಗತ್ಯ ಗೋಶಾಲೆಗಳನ್ನು ತೆರೆಯಬೇಕು. ಅವು ಸಮರ್ಪಕವಾಗಿ ಕೆಲಸ ನಿರ್ವಹಿಸುವ ಮೂಲಕ ಜಾನುವಾರುಗಳನ್ನು ಸಂರಕ್ಷಿಸಿ, ಕಾಲಕಾಲಕ್ಕೆ ಅವುಗಳಿಗೆ ಮೇವು, ನೀರು ಸಿಗುವಂತೆ ನೋಡಿಕೊಳ್ಳಬೇಕು. ಇದರಿಂದ ಮೂಕಪ್ರಾಣಿಗಳ ರೋದನ ನಿಲ್ಲುವಂತಾಗಲಿ.

**ಡಾ. ಮುರುಗೇಶ ಸಂಗಮ,** ಬಸವನಬಾಗೇವಾಡಿ

### ತಲೆಮಾರಿನ ನೆನಪುಗಳಿಗೆ ಸಾವೆಲ್ಲಿದೆ?

ಈಚೆಗೆ ನಿಧನರಾದ ಚಿತ್ರನಟ ರಾಜೇಶ್ ಅವರನ್ನು ನೆನೆದಾಗಲೆಲ್ಲ ‘ನಮ್ಮ ಊರು’ ಸಿನಿಮಾದ ‘ಹೋಗದಿರಿ ಸೋದರರೇ...’ ಎಂಬ ಹಾಡು ನೆನಪಾಗುತ್ತದೆ. ಹಳ್ಳಿಯನ್ನು ತೊರೆದು ಪೇಟೆಗೆ ಹೊರಟ ಯುವಜನರನ್ನು ತಡೆಯಲೆತ್ನಿಸುವ ಈ ಹಾಡು ಇಂದಿಗೂ ತುಂಬ ಮನನೀಯವಾಗಿದೆ, ಪ್ರಸ್ತುತವಾಗಿದೆ. ಹಳ್ಳಿಯ ಬಾಳಿನ ಸೊಗಸು ಮತ್ತು ಸೌಹಾರ್ದವನ್ನು ನಿವೇದಿಸುವ ರಾಜೇಶ್ ಅವರ ಅಭಿನಯ ಮನನೀಯವಾಗಿದೆ. ‘ಬೆಳುವಲದ ಮಡಿಲಲ್ಲಿ’ ಎಂಬ ಅವರ ಸಿನಿಮಾ ಸಹ ರೈತರ ಪರಿ ಪರಿಯಾದ ಕಷ್ಟಗಳನ್ನು ನಿರೂಪಿಸಿದೆ. ಈ ಥರದ ನನ್ನ ತಲೆಮಾರಿನ ನೆನಪುಗಳಿಗೆ ಸಾವೆಲ್ಲಿದೆ?

**ಹುರುಕಡ್ಲಿ ಶಿವಕುಮಾರ,** ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

### ಅನುಕೂಲಸಿಂಧು ಸತ್ಯದ ಪ್ರತಿಪಾದನೆ

ಪ್ರಧಾನಮಂತ್ರಿಯವರು ಉತ್ತರಪ್ರದೇಶದ ಹರ್ದೋಯಿಯಲ್ಲಿ ನಡೆದ ಚುನಾವಣಾ ಸಭೆಯಲ್ಲಿ ಮಾಡಿದ ಭಾಷಣದಲ್ಲಿ, ‘ಕೋವಿಡ್ ಅವಧಿಯಲ್ಲಿ ರೇಶನ್ (ಪಡಿತರ ಧಾನ್ಯ) ನೀಡಿದರು. ಅವರ ಉಪ್ಪು ತಿಂದು ಅವರಿಗೆ ದ್ರೋಹ ಬಗೆಯುವುದಿಲ್ಲ’ ಎಂದು ವೃದ್ಧೆಯೊಬ್ಬರು ಹೇಳಿದ್ದನ್ನು ಪ್ರಸ್ತಾಪಿಸಿದರು. ಮುಂದುವರಿದು, ‘ಮೊದಲೆಲ್ಲ ವ್ಯಾಕ್ಸಿನೇಷನ್ ಕೇವಲ ಕೆಲವು ದೊಡ್ಡವರನ್ನು ತಲುಪುತ್ತಿತ್ತು, ಬಡವರಿಗೆ ಚುಚ್ಚುಮದ್ದು ತಲುಪಲು 10– 20 ವರ್ಷ (?) ತಗಲುತ್ತಿತ್ತು. ಈಗ ನಾವು ಎಲ್ಲರಿಗೂ ಲಸಿಕೆ ಲಭ್ಯವಾಗುವಂತೆ ನೋಡಿಕೊಂಡಿದ್ದೇವೆ’ ಎಂದರು. ‘ದೇಶೀಯ ವ್ಯಾಕ್ಸಿನ್ ಬಗೆಗೆ ಸಂದೇಹ ಹುಟ್ಟಿಸಿದರು’ ಅನ್ನುವ ಹಿಂದಿನ ಆರೋಪವನ್ನು ಪುನರುಚ್ಚರಿಸಿದರು.

ಇಲ್ಲಿ ಉದ್ಭವಿಸುವ ಪ್ರಶ್ನೆಯೆಂದರೆ- ಇದನ್ನು ಚುನಾವಣಾ ವಸ್ತುವಾಗಿ ಬಳಸಲಾಗುತ್ತಿರುವುದು ಸರಿಯೇ? ಕೊರೊನಾ ಹಿಂದೆ ಬಂದಿರಲಿಲ್ಲ. ಲಾಕ್‌ಡೌನ್ ಮಾಡಿದ್ದು ಸರ್ಕಾರ- ಬಡವರಿಗೆ ಆದಾಯದ ಮೂಲ ಬಂದ್ ಆಯಿತು, ಅನಿವಾರ್ಯವಾಗಿ ದೈನಿಕ ಆಹಾರ ಅಗತ್ಯದ ಪೂರೈಕೆಗೆ ವ್ಯವಸ್ಥೆ ಕಲ್ಪಿಸಬೇಕಾಯಿತು. ಈ ‘ಋಣ’ವನ್ನು ಅಧಿಕಾರದಲ್ಲಿರುವ ಪಕ್ಷಕ್ಕೆ ಈಗ ಮತ ಹಾಕುವ ಮೂಲಕ ತೀರಿಸಬೇಕೇ? ‘ಸಹಸ್ರಾರು ಸಾವುಗಳನ್ನು ತಪ್ಪಿಸಿದೆವು’ ಎಂಬ ಮಾತೂ ಬಂತು. ಭಾರತದಲ್ಲಿ ಕೋವಿಡ್‌ನಿಂದ ಸಂಭವಿಸಿದ ಸಾವಿನ ನೈಜ ಸಂಖ್ಯೆ ಅಧಿಕೃತ ಅಂಕಿಅಂಶಕ್ಕಿಂತ ಕೆಲವು ಪಟ್ಟು ಹೆಚ್ಚು ಎಂಬ ಇನ್ನೊಂದು ವಿಶ್ಲೇಷಣೆ ಇತ್ತೀಚೆಗೆ ಬಂದಿದೆ (ಪ್ರ.ವಾ., ಫೆ. 17). ಇದನ್ನು ಸಮರ್ಥ ರೀತಿಯಲ್ಲಿ ಅಲ್ಲಗಳೆಯಲು ಪ್ರಧಾನಿ ಅಥವಾ ಆರೋಗ್ಯ ಸಚಿವರು ಹೋಗಿಲ್ಲ. ಜನಸಾಮಾನ್ಯರ ಅನಿಸಿಕೆಯೆಂದರೆ, ‘ದಾಖಲೇ ಆಗದ ಅಥವಾ ಸಾವಿಗೆ ಬೇರೆ ಕಾರಣ ತೋರಿಸಿರುವ ಗಮನಾರ್ಹ ಸಂಖ್ಯೆಯ ಪ್ರಕರಣಗಳಿವೆ’. ಈ ಬಗೆಯ ಪಾರ್ಶ್ವಿಕ ಅಥವಾ ಅನುಕೂಲಸಿಂಧು ಸತ್ಯದ ಪ್ರತಿಪಾದನೆ ನಿಲ್ಲುವುದೆಂದು?

**ಎಚ್.ಎಸ್.ಮಂಜುನಾಥ,** ಬೆಂಗಳೂರು

### ಹೊಸ ಪಿಂಚಣಿ ಯೋಜನೆ: ಸಂಕಷ್ಟ ನೀಗಲಿ

ಮಾಸಿಕ ₹ 15 ಸಾವಿರಕ್ಕಿಂತ ಹೆಚ್ಚು ಮೂಲವೇತನ ಪಡೆಯುತ್ತಿರುವ ಹಾಗೂ ‘ನೌಕರರ ಪಿಂಚಣಿ ಯೋಜನೆ-1995’ರ ಅಡಿಯಲ್ಲಿ ಬಾರದ ಸಂಘಟಿತ ವಲಯದ ನೌಕರರಿಗೆ ನೂತನ ಪಿಂಚಣಿ ಯೋಜನೆ ರೂಪಿಸಲು ನೌಕರರ ಭವಿಷ್ಯನಿಧಿ ಸಂಘಟನೆಯು ಚಿಂತನೆ ನಡೆಸಿರುವುದಾಗಿ ತಿಳಿದುಬಂದಿದೆ. 1995ರ ಯೋಜನೆಯಡಿ ನಿವೃತ್ತ ನೌಕರರಿಗೆ ಈಗ ಕನಿಷ್ಠ ಪಿಂಚಣಿ ₹ 1,000 ಮಾತ್ರ ಬರುತ್ತಿದೆ (ಗರಿಷ್ಠ ₹ 5,000). ಇದು ಎಷ್ಟೋ ರಾಜ್ಯಗಳ ವೃದ್ಧಾಪ್ಯ ವೇತನಕ್ಕಿಂತ ಕಮ್ಮಿಯಿದೆ. 25- 30 ವರ್ಷಗಳು ವಂತಿಗೆ ನೀಡಿ ನಿವೃತ್ತರಾದ ಕಾರ್ಮಿಕರಿಗೆ ಗೌರವಯುತ ಬದುಕು ನಡೆಸಲು ಅಗತ್ಯವಾದ ಕನಿಷ್ಠ ಹಣವನ್ನು ಒದಗಿಸುವಷ್ಟಾದರೂ ಪಿಂಚಣಿಯನ್ನು ಹೆಚ್ಚಿಸಬೇಕಿದೆ.

ಈ ಯೋಜನೆಯಲ್ಲಿ ಒಮ್ಮೆ ನಿಗದಿಪಡಿಸಿದ ಮೊತ್ತ ಬದಲಾಗುವುದಿಲ್ಲ. ಸರ್ಕಾರದ ನೌಕರರಿಗೆ ತುಟ್ಟಿಭತ್ಯೆ ಬದಲಾದಾಗ ಅದು ಪಿಂಚಣಿದಾರರಿಗೂ ಅನ್ವಯವಾಗುತ್ತದೆ. 2016ರಲ್ಲಿ ಕನಿಷ್ಠ ಪಿಂಚಣಿಯನ್ನು ₹ 5,000ಕ್ಕೆ ಏರಿಸಲು ತಜ್ಞರು ವರದಿ ನೀಡಿದ್ದರೆಂಬ ಸುದ್ದಿ ಬಂದಿತ್ತು. ಮುಂದಿನ ತಿಂಗಳು ಸಭೆ ಸೇರಲಿರುವ ಇಪಿಎಫ್‌ಒ ಧರ್ಮದರ್ಶಿಗಳ ಮಂಡಳಿಯು ನಿವೃತ್ತ ನೌಕರರ ದುಃಸ್ಥಿತಿಯನ್ನು ಗಮನಿಸಿ, ಮಾನವೀಯ ದೃಷ್ಟಿಯಿಂದ ಕನಿಷ್ಠ ಪಿಂಚಣಿಯನ್ನು ₹ 5,000ಕ್ಕೆ ಏರಿಸಬೇಕು.

**ರಾ.ನಂ.ಚಂದ್ರಶೇಖರ,** ಬೆಂಗಳೂರು


### ಕಾಳಜಿರಹಿತ ವ್ಯಾವಹಾರಿಕ ನಡೆ

ವಿದ್ಯೆ ಕಲಿಯಲು ಬಸ್‌ನಲ್ಲಿ ಹೋಗುವವರು ಇತರ ಪ್ರಯಾಣಿಕರಿಗೆ ಅನನುಕೂಲ ಆಗದಂತೆ ವ್ಯವಹರಿಸುವ ಬಗ್ಗೆ ಕಾಳಜಿಯಿಂದ ಪ.ರಾಮಕೃಷ್ಣ ಶಾಸ್ತ್ರಿ ಅವರು ಬರೆದಿದ್ದನ್ನು (ಸಂಗತ, ಫೆ. 21) ಓದಿದಾಗ, ಕೆಲ ವರ್ಷಗಳ ಹಿಂದೆ ನಡೆದ ಘಟನೆ ನನಗೆ ನೆನಪಾಯಿತು. ಬಸ್ ನಿಲ್ದಾಣದಲ್ಲಿ 20– 25 ವಿದ್ಯಾರ್ಥಿಗಳು ಕಾಲೇಜಿಗೆ ಹೋಗಲು, ಇನ್ನೇನು ಹೊರಡುವುದರಲ್ಲಿದ್ದ ಬಸ್ಸೊಂದನ್ನು ಏರಿ ಕುಳಿತಿದ್ದರು. ಚಾಲಕ ಗಾಡಿ ಚಾಲೂ ಮಾಡಲು ಎಷ್ಟೇ ಪ್ರಯತ್ನ ಮಾಡಿದರೂ ಎಂಜಿನ್ ಚಾಲೂ ಆಗುತ್ತಿರಲಿಲ್ಲ. ಸೋತ ಆತ ಒಳಗೆ ಕುಳಿತ ಪ್ರಯಾಣಿಕರನ್ನು, ‘ದಯವಿಟ್ಟು ಯಾರಾದರೂ ನಾಲ್ಕು ಜನ ಕೆಳಗಿಳಿದು ಬಸ್ ದೂಡಿ. ದೂಡಿದರೆ ಗಾಡಿ ಚಾಲೂ ಆಗುತ್ತದೆ. ಆಗ ಎಲ್ಲರೂ ಹೋಗಬಹುದು’ ಎಂದು ಕೋರಿದ. ಆಗ, ಆ ವಿದ್ಯಾರ್ಥಿಗಳು ದಡಬಡನೆ ಇಳಿದು ದುಡುದುಡನೆ ಓಡಿದರು. ನೋಡಿದರೆ, ಅದೇ ಆಗತಾನೇ ನಿಲ್ದಾಣದ ಒಳಗೆ ಬಂದ ಬಸ್ಸನ್ನು ಏರಲು ಇವರು ಓಡಿದ್ದು. ಒಬ್ಬರಿಗೂ ಈ ಬಸ್ ಬಗ್ಗೆ ಚಿಂತೆ ಇರಲಿಲ್ಲ. ಚಾಲಕ ಹಣೆ ಚಚ್ಚಿಕೊಂಡ! ಯಾವ ಬಸ್ಸಾದರೂ ಅವರಿಗೆ ಒಂದೇ. ಟಿಕೆಟ್ ತೆಗೆದುಕೊಳ್ಳುವ ಅವಶ್ಯಕತೆ ಇಲ್ಲ. ಅವರೆಲ್ಲರೂ ರಿಯಾಯಿತಿ ದರದ ಬಸ್‌ಪಾಸ್ ಪಡೆದವರಾಗಿದ್ದರು!

**ಡಾ. ಈಶ್ವರ ಶಾಸ್ತ್ರಿ ಮೋಟಿನಸರ,** ಶಿರಸಿ


Printed and published by B A Ravi on behalf of The Printers (Mysore ) Private Ltd., at The Printers ( Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

## 28 ಬ್ಯಾಂಕ್‌ಗಳಿಗೆ ₹22,842 ಕೋಟಿ ವಂಚನೆ



# ಎಬಿಜಿ ಶಿಪ್‌ಯಾರ್ಡ್ ಬೃಹತ್ ವಂಚನೆಯ ಕತೆ

• ಜಯಸಿಂಹ ಆರ್. ಅಮೃತ್ ಕಿರಣ್ ಬಿ.ಎಂ

**ಹಡಗು** ನಿರ್ಮಾಣದ ಬೃಹತ್ ಸಂಸ್ಥೆ ಎಂದು ಹೆಸರಾಗಿದ್ದ ಗುಜರಾತಿನ ಎಬಿಜಿ ಶಿಪ್‌ಯಾರ್ಡ್ ಕಂಪನಿಯು ವಂಚನೆ ಪ್ರಕರಣದಲ್ಲಿ ಈಗ ತನಿಖೆ ಎದುರಿಸುತ್ತಿದೆ. ಎಸ್‌ಬಿಐ ನೀಡಿದ ದೂರಿನ ಆಧಾರದಲ್ಲಿ ಎಬಿಜಿ ಶಿಪ್‌ಯಾರ್ಡ್, ಕಂಪನಿಯ ನಿರ್ದೇಶಕರು ಹಾಗೂ ಎಬಿಜಿ ಇಂಟರ್ ನ್ಯಾಷನಲ್ ಪ್ರೈ.ಲಿ. ಸಂಸ್ಥೆಯ ವಿರುದ್ಧ ಸಿಬಿಐ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದೆ. 28 ಬ್ಯಾಂಕ್‌ಗಳ ಒಕ್ಕೂಟಕ್ಕೆ ₹22,842 ಕೋಟಿ ಸಾಲ ಮರುಪಾವತಿ ಮಾಡಿಲ್ಲ ಎಂಬ ಆರೋಪವು ಶಿಪ್‌ಯಾರ್ಡ್ ಮೇಲಿದೆ.

2012–13ರಲ್ಲಿ ಕಂಪನಿಯ ನಿವ್ವಳ ಲಾಭ ₹107 ಕೋಟಿ. ಆದರೆ ಇದರ ಮರುವರ್ಷವೇ ಕಂಪನಿಯ ಆರ್ಥಿಕ ಚಿತ್ರಣ ಬದಲಾಗಿ, ₹199 ಕೋಟಿ ನಷ್ಟ ದಾಖಲಿಸಿತು. 2016ರ ಹೊತ್ತಿಗೆ ಕಂಪನಿಯ ಒಟ್ಟು ನಷ್ಟ ₹3,704 ಕೋಟಿಗೆ ತಲುಪಿತು. 2013–14ರಲ್ಲಿ ಕಂಪನಿಯು ತನ್ನ ವಾರ್ಷಿಕ ವರದಿಯಲ್ಲಿ ನಷ್ಟದ ಕಾರಣಗಳನ್ನು ಪಟ್ಟಿ ಮಾಡಿತ್ತು. ಹೊಸ ಹಡಗುಗಳ ನಿರ್ಮಾಣದ ಹಲವು ಗುತ್ತಿಗೆಗಳು ರದ್ದಾಗಿರುವುದು, ಬ್ಯಾಂಕ್ ಸಾಲದಲ್ಲಿ ಇಳಿಕೆ, ಕೇಂದ್ರ ಸರ್ಕಾರ ನೀಡುವ ಹಡಗು ನಿರ್ಮಾಣ ಸಹಾಯಧನ ಯೋಜನೆಯು 2007ರಲ್ಲಿ ಮುಕ್ತಾಯವಾಗಿರುವುದರಿಂದ ನಷ್ಟ ಉಂಟಾಗಿದೆ ಎಂದು ಉಲ್ಲೇಖಿಸಲಾಗಿತ್ತು. ಸಿಬಿಐಗೆ ನೀಡಿದ ದೂರಿನಲ್ಲಿ ಎಸ್‌ಬಿಐ ಸಹ ಇದೇ ಅಂಶವನ್ನು ಉಲ್ಲೇಖಿಸಿದೆ.

ಎಬಿಜಿ ಶಿಪ್‌ಯಾರ್ಡ್ ಕಂಪನಿಯು ಬ್ಯಾಂಕ್‌ನಿಂದ ಪಡೆದ ಸಾಲವನ್ನು ವಿದೇಶದಲ್ಲಿ ವಿವಿಧ ಕಂಪನಿಗಳಲ್ಲಿ ದೊಡ್ಡ ಮಟ್ಟದ ಬಂಡವಾಳ ಹೂಡಿಕೆಗೆ ಬಳಸಿಕೊಂಡಿದೆ ಎಂದು ಆರೋಪಿಸಲಾಗಿದೆ. ಬ್ಯಾಂಕ್‌ನಿಂದ ಪಡೆದ ಸಾಲವನ್ನು ಆಸ್ತಿ ಖರೀದಿಯಂತಹ ಅನ್ಯ ಉದ್ದೇಶಗಳಿಗೆ ಬಳಸಿಕೊಳ್ಳಲಾಗಿದೆ ಎಂದು ಆರೋಪಿಸಲಾಗಿದೆ. ಪ್ರಕರಣದ ತನಿಖೆ ಆರಂಭಿಸಿರುವ ಸಿಬಿಐ, ಕಂಪನಿಯ ಅಂದಿನ ವ್ಯವಸ್ಥಾಪಕ ನಿರ್ದೇಶಕ ರಿಷಿ ಕಮಲೇಶ್ ಅಗರ್‌ವಾಲ್ ಸೇರಿದಂತೆ ಸಂಸ್ಥೆಯ ಎಲ್ಲ ನಿರ್ದೇಶಕರನ್ನು ತನಿಖೆಗೆ ಒಳಪಡಿಸಿದೆ.

ಸಾಲವನ್ನು ಮರು ಪಾವತಿಸಲು ಅನುಕೂಲ ವಾಗುವಂತೆ ಶಿಪ್‌ಯಾರ್ಡ್ ಕಂಪನಿಗೆ ಬ್ಯಾಂಕ್‌ಗಳು 2014ರಲ್ಲಿ ಕೆಲವು ಸವಲತ್ತುಗಳನ್ನು ನೀಡಿದವು. ಬಡ್ಡಿ ಕಡಿತ, ಸಾಲ ಮರುಪಾವತಿ ಅವಧಿ ವಿಸ್ತರಣೆಯಂತಹ ಕ್ರಮಗಳ ಹೊರತಾಗಿಯೂ ಕಂಪನಿಯು ಸಾಲದಿಂದ ಮೇಲೇಳಲಿಲ್ಲ. 2013ರಿಂದ ಪೂರ್ವಾನ್ವಯ- ವಾಗುವಂತೆ ಎಬಿಜಿ ಶಿಪ್‌ಯಾರ್ಡ್ ಸಾಲವನ್ನು ಎನ್‌ಪಿಎ (ವಸೂಲಾಗದ ಸಾಲ) ಎಂದು 2016ರಲ್ಲಿ ಘೋಷಿಸಲಾಯಿತು.

2012ರಿಂದ 2017ರ ಅವಧಿಯಲ್ಲಿ ಕಂಪನಿಯಲ್ಲಿ ಆಗಿರುವ ಲೋಪಗಳನ್ನು ಪತ್ತೆಹಚ್ಚಲು ಅರ್ನೆಸ್ಟ್ & ಯಂಗ್ ಸಂಸ್ಥೆಯು ವಿಧಿವಿಜ್ಞಾನ ಲೆಕ್ಕಪತ್ರಗಳ ಪರಿಶೀಲನೆ (ಫೊರೆನ್ಸಿಕ್) ಆರಂಭಿಸಿತು. ಮೂರ್ನಾಲ್ಕು ವರ್ಷಗಳ ಕಾಲ ದಾಖಲೆಗಳ ಪರಿಶೋಧನೆ ನಡೆಯಿತು. ಉದ್ಯಮ ದಿವಾಳಿತನ ಪ್ರಕ್ರಿಯೆಗಾಗಿ ಈ ಪ್ರಕರಣವನ್ನು 2017ರಲ್ಲಿ ನ್ಯಾಷನಲ್ ಕಂಪನಿ ಲಾ ಟ್ರಿಬ್ಯುನಲ್‌ಗೆ (ಎನ್‌ಸಿಎಲ್‌ಟಿ) ವಹಿಸಲಾಯಿತು. ಎಬಿಜಿ ಶಿಪ್‌ಯಾರ್ಡ್ ಪ್ರಕರಣವನ್ನು ವಂಚನೆ ಎಂಬುದಾಗಿ ಎಲ್ಲ 28 ಬ್ಯಾಂಕ್‌ಗಳು ಘೋಷಿಸಿದವು.

2019ರಲ್ಲಿ ಸಿಬಿಐನಲ್ಲಿ ಮೊದಲ ದೂರು ದಾಖಲಾಯಿತು. 2020ರ ಆಗಸ್ಟ್‌ನಲ್ಲಿ ಹೆಚ್ಚಿನ ವಿವರಗಳೊಂದಿಗೆ ಎಸ್‌ಬಿಐ ಎರಡನೇ ದೂರು ದಾಖಲಿಸಿತು. ಪ್ರಕರಣವನ್ನು ಸಂಪೂರ್ಣ ಪರಿಶೀಲಿಸಿದ ಬಳಿಕ, 2022ರ ಫೆಬ್ರುವರಿ 7ರಂದು ಎಫ್‌ಐಆರ್ ದಾಖಲಾಯಿತು. ಫೆ.12ರಂದು ವಿವಿಧ ಕಡೆ ಶೋಧ ನಡೆಸಿದ ಸಿಬಿಐ, ದಾಖಲೆಗಳನ್ನು ಕಲೆಹಾಕಿತು. ಸಾಲ ನೀಡಿಕೆಗೆ ಸಂಬಂಧಿಸಿದ ಮತ್ತಷ್ಟು ದಾಖಲಾತಿ ಗಳನ್ನು ಒದಗಿಸುವಂತೆ ಬ್ಯಾಂಕ್‌ಗಳಿಗೆ ಸಿಬಿಐ ನಿರ್ದೇಶನ ನೀಡಿದ್ದು, ತನಿಖೆ ಮುಂದುವರಿಸಿದೆ.

## ಬೃಹತ್ ಸಂಸ್ಥೆ

ಎಬಿಜಿ ಶಿಪ್‌ಯಾರ್ಡ್ 1995ರ ಜೂನ್‌ನಲ್ಲಿ ಕಾರ್ಯಾರಂಭ ಮಾಡಿತು. ಅಲ್ಲಿಂದ 2013ರ ವರೆಗಿನ ಅವಧಿಯಲ್ಲಿ ಕಂಪನಿಯು 165 ಹಡಗುಗಳನ್ನು ಕಟ್ಟಿದೆ. ಇವುಗಳಲ್ಲಿ ಶೇ 80ರಷ್ಟು ವಿದೇಶಗಳಿಗೆ ಮಾರಾಟವಾಗಿವೆ. 2000ನೇ ಇಸ್ವಿಯಲ್ಲಿ ಸರ್ಕಾರದ ಮೊದಲ ಗುತ್ತಿಗೆ ವಹಿಸಿಕೊಂಡ ಕಂಪನಿಯು, ಕರಾವಳಿ ಕಾವಲು ಪಡೆಗಾಗಿ ದೋಣಿಗಳನ್ನು ನಿರ್ಮಿಸಿತು. 2011ರಲ್ಲಿ, ಜಲಾಂತರ್ಗಾಮಿಗಳು ಸೇರಿದಂತೆ ರಕ್ಷಣಾ ಇಲಾಖೆಗೆ ಹಡಗುಗಳನ್ನು ನಿರ್ಮಿಸುವ ಪರವಾನಗಿ ಸಿಕ್ಕಿತು. 2012ರಲ್ಲಿ ₹16,600 ಕೋಟಿ ಮೊತ್ತದ ಗುತ್ತಿಗೆಯನ್ನು ಪಡೆದಿತ್ತು.

ಇದರ ಮುಖ್ಯ ಹಡಗುಕಟ್ಟೆಯು ತಾಪಿ ನದಿ ದಂಡೆಯ ಮಗದಲ್ಲಾ ಎಂಬಲ್ಲಿ 35 ಕಿಲೋಮೀಟರ್‌ನಷ್ಟು ವಿಸ್ತಾರವಾಗಿದೆ. ಗುಜರಾತ್ ಸರ್ಕಾರದ ಜೊತೆ ಒಪ್ಪಂದ ಮಾಡಿಕೊಂಡು, ಭರೂಚ್‌ನ ದಹೆಜ್ ಎಂಬಲ್ಲಿ ಎರಡನೇ ಹಡಗುಕಟ್ಟೆ ನಿರ್ಮಿಸಲಾಯಿತು.

### ಯಾರಿಂದ ಎಷ್ಟು ಸಾಲ

| ಬ್ಯಾಂಕ್‌ಗಳು | ಸಾಲದ ಮೊತ್ತ (₹ ಕೋಟಿಗಳಲ್ಲಿ) |
|---|---|
| ಐಸಿಐಸಿಐ | 7,089 |
| ಎಸ್‌ಬಿಐ | 2,925 |
| ಐಡಿಬಿಐ | 3,639 |
| ಬ್ಯಾಂಕ್ ಆಫ್ ಬರೋಡ | 1,614 |
| ಪಂಜಾಬ್ ನ್ಯಾಷನಲ್ ಬ್ಯಾಂಕ್ | 1,244 |
| ಎಕ್ಸಿಂ ಬ್ಯಾಂಕ್ ಆಫ್ ಇಂಡಿಯಾ | 1,327 |
| ಇಂಡಿಯನ್ ಓವರ್‌ಸೀಸ್ ಬ್ಯಾಂಕ್ | 1,228 |
| ಬ್ಯಾಂಕ್ ಆಫ್ ಇಂಡಿಯಾ | 719 |
| ಓರಿಯಂಟಲ್ ಬ್ಯಾಂಕ್ ಆಫ್ ಕಾಮರ್ಸ್ | 714 |
| ಸ್ಟಾಂಡರ್ಡ್ ಚಾರ್ಟರ್ಡ್ ಬ್ಯಾಂಕ್ | 743 |
| ಸಿಂಡಿಕೇಟ್ ಬ್ಯಾಂಕ್ | 408 |
| ಎಸ್‌ಬಿಐ, ಸಿಂಗಪುರ | 458 |
| ದೇನಾ ಬ್ಯಾಂಕ್ | 406 |
| ಆಂಧ್ರ ಬ್ಯಾಂಕ್ | 350 |
| ಎಸ್‌ಐಸಿಒಎಂ ಲಿಮಿಟೆಡ್ | 260 |
| ಐಎಫ್‌ಸಿಐ ಲಿಮಿಟೆಡ್ | 300 |
| ಎಸ್‌ಬಿಎಂ ಬ್ಯಾಂಕ್ | 125 |
| ಫಿನಿಕ್ಸ್ ಎಆರ್‌ಸಿ ಪ್ರೈ.ಲಿ. | 141 |
| ಎಲ್‌ಐಸಿ | 136 |
| ಡಿಸಿಬಿ ಬ್ಯಾಂಕ್ | 106 |
| ಪಿಎನ್‌ಬಿ (ಇಂಟರ್‌ನ್ಯಾಷನಲ್) | 97 |
| ಲಕ್ಷ್ಮಿ ವಿಲಾಸ ಬ್ಯಾಂಕ್ | 61 |
| ಇಂಡಿಯನ್ ಬ್ಯಾಂಕ್ | 17 |
| ಇಂಡಿಯನ್ ಬ್ಯಾಂಕ್ ಸಿಂಗಪುರ | 43 |
| ಕೆನರಾ ಬ್ಯಾಂಕ್ | 40 |
| ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ | 39 |
| ಪಂಜಾಬ್ ಸಿಂಧ್ ಬ್ಯಾಂಕ್ | 37 |
| ಯೆಸ್ ಬ್ಯಾಂಕ್ | 2 |

ಆಧಾರ: ಸಿಬಿಐ ದಾಖಲಿಸಿರುವ ಎಫ್‌ಐಆರ್, ಪಿಟಿಐ

## ಎಸ್‌ಬಿಐ ದೂರಿನಲ್ಲಿ ಬಿಟ್ಟುಹೋದ ವಿವರಗಳು

ಈ ಪ್ರಕರಣದಲ್ಲಿ ಸಿಬಿಐಗೆ ದೂರು ನೀಡಲು ಎಸ್‌ಬಿಐ ವಿಳಂಬ ಮಾಡಿದೆ ಎಂದು ಕಾಂಗ್ರೆಸ್ ಮತ್ತು ಇನ್ನೂ ಹಲವು ವಿರೋಧ ಪಕ್ಷಗಳು ಆರೋಪಿಸಿವೆ. ಇದರಲ್ಲಿ ಯಾವುದೇ ವಿಳಂಬವಾಗಿಲ್ಲ ಎಂದು ಎಸ್‌ಬಿಐ ಸ್ಪಷ್ಟನೆ ನೀಡಿದೆ. ಆದರೆ ಎಸ್‌ಬಿಐ ನೀಡಿದ್ದ ದೂರಿನಲ್ಲಿ ಅಗತ್ಯ ಮಾಹಿತಿಗಳು ಇರಲಿಲ್ಲ. ಹೀಗಾಗಿ ಆ ಮಾಹಿತಿಯನ್ನು ಸಲ್ಲಿಸಲು ಎಸ್‌ಬಿಐಗೆ ಸೂಚಿಸಲಾಗಿತ್ತು ಎಂದು ಸಿಬಿಐ ತನ್ನ ಎಫ್‌ಐಆರ್‌ನಲ್ಲಿ ಉಲ್ಲೇಖಿಸಿದೆ.

ಎಬಿಜಿ ಶಿಪ್‌ಯಾರ್ಡ್ ಕಂಪನಿಯ ಸಾಲಗಳು ಎನ್‌ಪಿಎ ಆಗಿವೆ ಎಂದು 2016ರಲ್ಲೇ ಘೋಷಿಸಲಾಗಿತ್ತು. ಈ ಸಾಲಗಳೆಲ್ಲವೂ ವಂಚನೆ ಎಂದು 2019ರಲ್ಲಿ ಘೋಷಿಸಲಾಗಿತ್ತು. ಈ ಸಂಬಂಧ ಎಸ್‌ಬಿಐ, ಸಿಬಿಐಗೆ ಮೊದಲ ದೂರು ನೀಡಿದ್ದು 2019ರ ನವೆಂಬರ್ 8ರಂದು. ಆದರೆ ಈ ದೂರಿನಲ್ಲಿ ಅಗತ್ಯ ಮಾಹಿತಿಗಳು ಇಲ್ಲ ಎಂದು ಸಿಬಿಐ ಸ್ಪಷ್ಟನೆ ಕೇಳಿ 2020ರ ಮಾರ್ಚ್ 12ರಂದು ಎಸ್‌ಬಿಐಗೆ ಪತ್ರ ಬರೆದಿತ್ತು. ಸಿಬಿಐ ಕೇಳಿದ್ದ ಸ್ಪಷ್ಟನೆಗಳೊಂದಿಗೆ ಎಸ್‌ಬಿಐ 2020ರ ಆಗಸ್ಟ್ 25ರಂದು ಎರಡನೇ ದೂರು ನೀಡಿತ್ತು. ಆನಂತರ ದೂರನ್ನು ಪರಿಶೀಲಿಸಿ, 2022ರ ಫೆಬ್ರುವರಿ 7ರಂದು ಎಫ್‌ಐಆರ್ ದಾಖಲಿಸಿದೆ.

ಇಡೀ ಪ್ರಕ್ರಿಯೆಯಲ್ಲಿ ವಿಳಂಬವಾಗಿರುವುದು ಕಾಣುತ್ತದೆ. ಎಸ್‌ಬಿಐ ಮೊದಲ ದೂರು ನೀಡುವಾಗ ಹಲವು ಮಾಹಿತಿಗಳನ್ನು ಸಲ್ಲಿಸಿಲ್ಲ. ಈ ದೂರನ್ನು ಪರಿಶೀಲಿಸಿ, ಸ್ಪಷ್ಟನೆ ಕೇಳಲು ಸಿಬಿಐ ನಾಲ್ಕು ತಿಂಗಳು ಸಮಯ ತೆಗೆದುಕೊಂಡಿದೆ. ಆನಂತರ ಆ ಆಕ್ಷೇಪಗಳಿಗೆ ಸ್ಪಷ್ಟನೆ ನೀಡಲು ಎಸ್‌ಬಿಐ ಮತ್ತೆ ಐದು ತಿಂಗಳು ಸಮಯ ತೆಗೆದುಕೊಂಡಿದೆ. ಆನಂತರ ಸಲ್ಲಿಸಲಾದ ಎರಡನೇ ದೂರನ್ನು ಪರಿಶೀಲಿಸಿ, ಪ್ರಕರಣ ದಾಖಲಿಸಲು ಸಿಬಿಐ 18 ತಿಂಗಳು ತೆಗೆದುಕೊಂಡಿದೆ.

ಸಿಬಿಐ ನೀಡಿದ್ದ ದೂರಿನಲ್ಲಿ ಅಗತ್ಯ ಮಾಹಿತಿಗಳು ಇರದಿದ್ದ ಕಾರಣ, ಪ್ರಕರಣ ದಾಖಲಿಸಲು ಒಂಬತ್ತು ತಿಂಗಳು ವಿಳಂಬವಾಗಿದೆ. ಆದರೆ ಆ ಮಾಹಿತಿಗಳನ್ನು ನೀಡಿದ ನಂತರ ಪ್ರಕರಣ ದಾಖಲಿಸಲು ಸಿಬಿಐ ಮತ್ತೆ 18 ತಿಂಗಳು ತೆಗೆದುಕೊಳ್ಳುವ ಮೂಲಕ ಮತ್ತಷ್ಟು ವಿಳಂಬ ಮಾಡಿದೆ. ಒಟ್ಟಾರೆ ಪ್ರಕರಣ ದಾಖಲಿಸುವಲ್ಲಿ ದೀರ್ಘಾವಧಿಯ ವಿಳಂಬವಾಗಿರುವುದು ಎದ್ದು ಕಾಣುತ್ತದೆ.

### ಸಿಬಿಐನ ಆಕ್ಷೇಪಗಳು

1. ಆಂತರಿಕ ತನಿಖೆ ನಡೆಸಿರುವ ಬಗ್ಗೆ ದೂರಿನಲ್ಲಿ ಯಾವುದೇ ವಿವರಗಳು ಇಲ್ಲ.
2. ಈ ವಂಚನೆಯಲ್ಲಿ ಯಾವುದೇ ಸರ್ಕಾರಿ ಅಧಿಕಾರಿ ಭಾಗಿಯಾಗಿರುವ ಬಗ್ಗೆ ಅನುಮಾನಗಳಿಲ್ಲ ಎಂದು ಬ್ಯಾಂಕ್ ಹೇಳಿದೆ.
3. ಲೆಟರ್ ಆಫ್ ಕ್ರೆಡಿಟ್‌ನ (ಸಾಲ ಖಾತರಿ ಪತ್ರ) ಬಗ್ಗೆ ದೂರಿನಲ್ಲಿ ಉಲ್ಲೇಖವೇ ಇಲ್ಲ.
4. ವಂಚನೆ ನಡೆದ ಅವಧಿ ಮತ್ತು ಹಣವನ್ನು ದುರ್ಬಳಕೆ ಮಾಡಿಕೊಂಡ ಬಗ್ಗೆ ದೂರಿನಲ್ಲಿ ವಿವರಗಳು ಇಲ್ಲ.
5. ಸಾಲ ನೀಡಿದ ಬ್ಯಾಂಕ್‌ಗಳ ಒಪ್ಪಿಗೆ ಪಡೆಯಲಾಗಿದೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಆದರೆ ಒಪ್ಪಿಗೆ ಪಡೆದುದರ ದಾಖಲೆಯನ್ನು ದೂರಿನ ಜತೆಗೆ ಸಲ್ಲಿಸಿಲ್ಲ.

- ಇವುಗಳಲ್ಲಿ ನಾಲ್ಕು ಆಕ್ಷೇಪಗಳಿಗೆ (ಮೂರನೇ ಆಕ್ಷೇಪ ಹೊರತುಪಡಿಸಿ) ಎಸ್‌ಬಿಐ ಸ್ಪಷ್ಟನೆ ನೀಡಿದೆ

### ಎಲ್‌ಸಿ ವಿವರ ಇಲ್ಲ

ಸಿಬಿಐ ನೀಡಿದ್ದ ಮೊದಲ ದೂರಿನಲ್ಲಿ ಸಾಲ ಖಾತರಿ ಪತ್ರದ (ಎಲ್‌ಸಿ) ಉಲ್ಲೇಖವಿರಲಿಲ್ಲ ಮತ್ತು ಅದನ್ನು ಲಗತ್ತಿಸಿಯೂ ಇರಲಿಲ್ಲ. ಆ ದೂರಿಗೆ ಸಿಬಿಐ ಸಲ್ಲಿಸಿದ್ದ ಆಕ್ಷೇಪಗಳಲ್ಲಿ ಎಲ್‌ಸಿಗೆ ಸಂಬಂಧಿಸಿದ ಆಕ್ಷೇಪವೂ ಒಂದು. ಎರಡನೇ ದೂರಿನಲ್ಲಿ ಬೇರೆಲ್ಲಾ ಆಕ್ಷೇಪಗಳಿಗೆ ಅಗತ್ಯವಾದ ಸ್ಪಷ್ಟನೆಯನ್ನು ಎಸ್‌ಬಿಐ ನೀಡಿದೆ. ಆದರೆ ಎಲ್‌ಸಿಯ ವಿವರ ನೀಡಿಲ್ಲ. ಎಲ್‌ಸಿಯನ್ನು ಸಲ್ಲಿಸಿಯೂ ಇಲ್ಲ.

ಅಲ್ಲದೆ, ‘ಇದನ್ನು ಗಮನಿಸಿದ್ದೇವೆ’ ಎಂದಷ್ಟೇ ಉತ್ತರ ನೀಡಿದೆ.

## ಆರೋಪ, ಪ್ರತ್ಯಾರೋಪ

ಎಬಿಜಿ ಶಿಪ್‌ಯಾರ್ಡ್ ಬ್ಯಾಂಕ್ ವಂಚನೆ ಪ್ರಕರಣವು ಆಡಳಿತಾರೂಢ ಬಿಜೆಪಿ ಮತ್ತು ವಿರೋಧ ಪಕ್ಷವಾದ ಕಾಂಗ್ರೆಸ್ ಮಧ್ಯೆ ಮಾತಿನ ಜಟಾಪಟಿಗೂ ಕಾರಣವಾಗಿದೆ. ಎಬಿಜಿ ಶಿಪ್‌ಯಾರ್ಡ್ ಪ್ರವರ್ತಕರ ವಿರುದ್ಧ ಸಿಬಿಐ ಎಫ್‌ಐಆರ್ ದಾಖಲಿಸಿದ ಬೆನ್ನಲ್ಲೇ ವಿರೋಧ ಪಕ್ಷಗಳು, ‘ಇಂತಹ ಎಲ್ಲಾ ವಂಚನೆ ಪ್ರಕರಣಗಳ ಮೂಲ ಯಾವಾಗಲೂ ಗುಜರಾತ್ ಆಗಿರುವುದು ಏತಕ್ಕೆ’ ಎಂದು ಪ್ರಶ್ನಿಸಿದ್ದವು. ಅಲ್ಲದೆ ಎಫ್‌ಐಆರ್ ಪ್ರಕಾರ, 2016ರಲ್ಲೇ ಕಂಪನಿಯ ಸಾಲವನ್ನು ಎನ್‌ಪಿಎ ಎಂದು ಘೋಷಿಸಲಾಗಿತ್ತು. ಹೀಗಿದ್ದೂ ಪ್ರಕರಣ ದಾಖಲಿಸಲು ಇಷ್ಟೊಂದು ಸಮಯ ತೆಗೆದುಕೊಂಡಿದ್ದು ಏಕೆ ಎಂದು ವಿರೋಧ ಪಕ್ಷಗಳು ಪ್ರಶ್ನಿಸಿದ್ದವು.

ಇದಕ್ಕೆ ಪ್ರತಿಕ್ರಿಯೆ ನೀಡಿದ್ದ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು, ‘ಇಂತಹ ಪ್ರಕರಣಗಳಲ್ಲಿ ವಂಚನೆಯನ್ನು ಪತ್ತೆ ಹಚ್ಚಲು ಬ್ಯಾಂಕ್‌ಗಳು ಸಾಮಾನ್ಯವಾಗಿ 50–60 ತಿಂಗಳು ಸಮಯ ತೆಗೆದುಕೊಳ್ಳುತ್ತವೆ. ಆದರೆ ಈ ಪ್ರಕರಣದಲ್ಲಿ ಇನ್ನೂ ಕಡಿಮೆ ಸಮಯದಲ್ಲಿ ವಂಚನೆಯನ್ನು ಪತ್ತೆ ಮಾಡಲಾಗಿದೆ. ಇದು ಅತ್ಯಂತ ತ್ವರಿತವಾಗಿ ಪತ್ತೆ ಮಾಡಲಾದ ಪ್ರಕರಣವಾಗಿದೆಯೇ ಹೊರತು, ಯಾವುದೇ ವಿಳಂಬವಾಗಿಲ್ಲ’ ಎಂದು ಹೇಳಿದ್ದರು.

‘ಇಂತಹ ಪ್ರಕರಣಗಳ ಮೂಲ ಯಾವಾಗಲೂ ಗುಜರಾತ್ ಆಗಿರುತ್ತದೆ ಮತ್ತು ಬಿಜೆಪಿ ಇಂತಹ ವಂಚನೆಗಳು ನಡೆಯಲು ಅನುವು ಮಾಡಿಕೊಡುತ್ತದೆ’ ಎಂದು ಕಾಂಗ್ರೆಸ್ ಆರೋಪಿಸಿತ್ತು. ಈ ಆರೋಪವನ್ನು ನಿರ್ಮಲಾ ಸೀತಾರಾಮನ್ ಅವರು ತಳ್ಳಿಹಾಕಿದ್ದರು. ‘ಎಬಿಜಿ ಶಿಪ್‌ಯಾರ್ಡ್‌ನ ಸಾಲಗಳು ಎನ್‌ಪಿಎ ಆಗಿದ್ದು 2013ರಲ್ಲಿ. ಆಗಿನ್ನೂ ನಾವು ಅಧಿಕಾರಕ್ಕೇ ಬಂದಿರಲಿಲ್ಲ’ ಎಂದು ಹೇಳಿದ್ದರು.

## ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 51

### ಶಿವದರ್ಶನದಿಂದ ಆತ್ಮಾರಾಮತೆ

ವೃಷಭರೂಪವಾಗಿರುವ ಧರ್ಮವು ಬ್ರಹ್ಮಚರ್ಯದ ಸ್ವರೂಪವನ್ನು ಧರಿಸಿ ಸತ್ಯ ಮೊದಲಾದ ನಾಲ್ಕು ಪಾದಗಳನ್ನು ಧರಿಸಿ ಶಿವಲೋಕದ ಮೇಲ್ಭಾಗದಲ್ಲಿದೆ. ಧರ್ಮರೂಪವಾದ ವೃಷಭಕ್ಕೆ ಕ್ಷಮೆಯೇ ಶೃಂಗ, ಶಾಂತಿಯೇ ಕಿವಿಗಳು, ವೇದಧ್ವನಿಯೇ ಶಬ್ದ, ಆಸ್ತಿಕತೆಯೇ ಚಕ್ಷುಸ್ಸು, ನಿಃಶ್ವಾಸವೇ ಅಚಲವಾದ ಮನಸ್ಸು. ವೃಷಭರೂಪವಾದ ಧರ್ಮಗಳನ್ನು ಕಾಲಾತೀತೇಶ್ವರನು ನಿರ್ವಹಿಸುವನು ಎಂದು ಸೂತಮುನಿ ಶಿವಮಹಿಮೆಯ ವಿವರ ನೀಡುತ್ತಾನೆ.

ಬ್ರಹ್ಮ, ವಿಷ್ಣು ಮತ್ತು ಶಿವರ ಆಯುಸ್ಸಿಗೆ ದಿನವೆಂದು ಹೆಸರು. ಅವರ ದಿನಕ್ಕೆ ಹಗಲಾಗಲೀ ರಾತ್ರಿಯಾಗಲೀ ಜನ್ಮಮರಣಗಳಾಗಲೀ ಇಲ್ಲ. ಕಾಲಾತೀತಲೋಕದ ಮೇಲೆ ಬ್ರಹ್ಮನಿರುವ ಸತ್ಯಲೋಕವಿದೆ. ಅಲ್ಲಿ ಗಂಧ ಮುಂತಾದ ಸೂಕ್ಷ್ಮಭೂತಗಳಿಂದ ನಿರ್ಮಿಸಿದ ಹದಿನಾಲ್ಕು ಬ್ರಹ್ಮಲೋಕಗಳಿವೆ. ಇದರ ಮೇಲೆ ವಿಷ್ಣುವಿನ ಹದಿನಾಲ್ಕು ಲೋಕಗಳಿವೆ. ವಿಷ್ಣುವಿನ ಹದಿನಾಲ್ಕು ಲೋಕಗಳ ಮೇಲೆ ಇಪ್ಪತ್ತೆಂಟು ರುದ್ರನ ಲೋಕಗಳಿವೆ. ಅದಕ್ಕೂ ಮೇಲೆ ಐವತ್ತಾರು ಕಾರಣೇಶ್ವರ ಲೋಕಗಳಿವೆ. ಅದಕ್ಕೆ ಮೇಲೆ ಶಿವನಿಗೆ ಪ್ರಿಯವಾದ ಬ್ರಹ್ಮಚರ್ಯ ಎಂಬ ಲೋಕವಿದೆ.

ಬ್ರಹ್ಮಚರ್ಯಲೋಕದಲ್ಲಿ ಐದು ಪ್ರಾಕಾರಗಳಿಂದ ಕೂಡಿದ ಜ್ಞಾನಕೈಲಾಸವಿದೆ. ಇಲ್ಲಿ ಐದು ಮಂಡಲಸಹಿತವಾಗಿ ಐದು ಬ್ರಹ್ಮರಿರುವಂತಹ ಲಿಂಗವು ಆದಿಶಕ್ತಿಯೊಡನೆ ಇದೆ. ಜ್ಞಾನಕೈಲಾಸವೇ ಪರಮಾತ್ಮನಾದ ಶಿವನ ಮಂಗಳಕರವಾದ ಆಲಯ. ಅಲ್ಲಿ ಪರಮೇಶ್ವರನು ಪರಾಶಕ್ತಿಯೊಡನೆ ಇರುತ್ತಾನೆ. ಪರಮೇಶ್ವರನು ಸೃಷ್ಟಿ, ಸ್ಥಿತಿ, ಸಂಹಾರ, ನಿಗ್ರಹ, ಅನುಗ್ರಹೀ ಎಂಬ ಐದು ಕೃತ್ಯಗಳನ್ನು ಮಾಡುತ್ತಾನೆ. ಆತ ಸತ್ಯವೂ ಜ್ಞಾನಸ್ವರೂಪವೂ ಆದ, ಆನಂದಸ್ವರೂಪವಾದಂತಹ ಶರೀರವುಳ್ಳವನಾಗಿದ್ದಾನೆ. ಸದಾ ಧ್ಯಾನ ನಿರತನಾಗಿ, ಸಮಾಧಿಸ್ಥಿತಿಯಲ್ಲಿ ಕುಳಿತು ಆತ್ಮಾರಾಮನಾಗಿ ವಿಹರಿಸುತ್ತಾ ಪ್ರಕಾಶಿಸುತ್ತಿರುತ್ತಾನೆ.

ಕರ್ಮ, ಧ್ಯಾನ ಮತ್ತಿತರ ಕ್ರಮಗಳಿಂದ ಶಿವನನ್ನು ಸಾಕ್ಷಾತ್ಕರಿಸಿಕೊಳ್ಳಬಹುದು. ಶಿವಜ್ಞಾನವನ್ನು ಪಡೆದರೆ ಶಿವದರ್ಶನ ಲಭಿಸುತ್ತದೆ. ಶಿವನನ್ನು ದರ್ಶನಮಾಡಿದವರು ಮುಕ್ತಿಯನ್ನೇ ಹೊಂದುವರು. ಕರ್ಮ, ತಪಸ್ಸು, ಜಪ, ಜ್ಞಾನ, ಧ್ಯಾನ ಮುಂತಾದ ಧರ್ಮನಿರತನಾಗಿ ಶಿವನ ದರ್ಶನ ಪಡೆದರೆ ಆತ್ಮಾರಾಮತೆಯೇ ಲಭಿಸುವುದು. ಪರಬ್ರಹ್ಮಸ್ವರೂಪನಾದ ಶಿವನೇ ಆತ್ಮಸ್ವರೂಪನಾದುದರಿಂದ ಶಿವನ ದರ್ಶನ (ಜ್ಞಾನ) ಪಡೆದರೆ, ತನ್ನ ಸ್ವರೂಪವನ್ನೇ ತಿಳಿದಂತಾಗಿ, ‘ಅಹಂ ಬ್ರಹ್ಮಾಸ್ಮಿ’ ಅಂತ ‘ನಾನೇ ಬ್ರಹ್ಮಸ್ವರೂಪ’ ಎಂದು ತಿಳಿದು ಆತ್ಮಾರಾಮನಾಗುವನು. ತನ್ನ ಆತ್ಮಸ್ವರೂಪವನ್ನು ತಿಳಿದು, ತನ್ನಲ್ಲಿಯೇ ಆನಂದಸ್ವರೂಪವಾಗಿ ವಿಹರಿಸುವುದೇ ಮುಕ್ತಿ. ಆತ್ಮಸ್ವರೂಪದ ಹೊರತು ಬೇರೆ ಇನ್ನೊಂದು ವಿಹರಿಸುವಂತಹ ಆನಂದದಾಯಕವಾದ ವಸ್ತು ಪ್ರಪಂಚದಲ್ಲಿಲ್ಲ.

ರವಿಯು ಹೇಗೆ ತನ್ನ ಕಿರಣಗಳಿಂದ ಅಶುದ್ಧಿಯನ್ನು ಹೋಗಲಾಡಿಸುವನೋ ಅದರಂತೆಯೇ, ಶಿವನೂ ತನ್ನ ಭಕ್ತರ ಅಜ್ಞಾನವನ್ನು ಕೃಪಾದೃಷ್ಟಿಯಿಂದ ಹೋಗಲಾಡಿಸುವನು. ಅಜ್ಞಾನ ತೊಲಗಿದ ಮೇಲೆ ಭಕ್ತರಿಗೆ ಶಿವನಸ್ವರೂಪ ತಿಳಿಯುತ್ತದೆ. ಶಿವಸ್ವರೂಪಜ್ಞಾನದಿಂದ ಸ್ವಸ್ವರೂಪವು ತಿಳಿಯುತ್ತದೆ. ಮುಂದೆ ಆತ್ಮಾರಾಮ, ಅಂದರೆ ಜೀವನ್ಮುಕ್ತನಾಗುವನು. ಆತ್ಮಾರಾಮತೆಯು ಸಿದ್ಧಿಸಿದರೆ ಕೃತಕೃತ್ಯನಾಗಿ ಶಿವಲೋಕಕ್ಕೆ ಮೂಲವಾದ ಕಾಲಚಕ್ರ ಪಡೆಯುವನು.

ಕಾಲಚಕ್ರದಲ್ಲಿ ಬ್ರಹ್ಮಚಕ್ರ, ವಿಷ್ಣುಚಕ್ರ, ರುದ್ರಚಕ್ರ, ಈಶ್ವರಚಕ್ರ, ಶಿವಚಕ್ರ ಎಂಬ ಐದು ಚಕ್ರಗಳಿವೆ. ದೃಷ್ಟಿ ಮತ್ತು ಮೋಹಗಳು ಬ್ರಹ್ಮಚಕ್ರ. ಭೋಗ ಮತ್ತು ಮೋಹಗಳು ವಿಷ್ಣುಚಕ್ರ. ಕೋಪ ಮತ್ತು ಮೋಹಗಳು ರುದ್ರಚಕ್ರ. ಜಗತ್ತಿನ ಭ್ರಮೆ (ಭೂಮಿ ತಿರುಗುವಿಕೆ) ಈಶ್ವರಚಕ್ರ. ಜ್ಞಾನ ಮತ್ತು ಮೋಹಗಳು ಶಿವಚಕ್ರ. ಶಿವಲೋಕದ ಐದನೆಯ ಪ್ರಕಾರದ ಹೊರಪ್ರದೇಶದಲ್ಲಿ ರಾಜಸ್ವದ ಮಂಡಪವಿದೆ. ಅಲ್ಲಿ ನಂದಿಕೇಶ್ವರನಿರುತ್ತಾನೆ.

ಆ ಐದು ಪ್ರಾಕಾರಗಳಲ್ಲಿ ಐದು ಮಂಡಪಗಳಿರುವೆ. ಅವುಗಳಲ್ಲಿ ಮೊದಲನೆಯ ಮಂಡಪದಲ್ಲಿ ಧ್ಯಾನನಿರತ ಸದ್ಯೋಜಾತ ಮತ್ತು ಅಮೃತ ಕೊಡುವ ಬಲಿನಾಥ ನೆಲೆಸಿದ್ದಾರೆ. ಎರಡನೆ ಮಂಡಪವು ನರ್ತನರಂಗವಾದರೆ, ಮೂರನೆಯ ಮಂಡಪದಲ್ಲಿ ಸೋಮಸ್ಕಂದೇಶ್ವರ ಮತ್ತು ನಾಲ್ಕನೆಯ ಮಂಡಪದಲ್ಲಿ ಚಂದ್ರಶೇಖರಮೂರ್ತಿ ಇದ್ದಾರೆ. ಮೊದಲನೆಯ ಮಂಡಪದಲ್ಲಿ ಆದಿಮಾಯೆ ಇದ್ದರೆ, ಇದರ ಮುಂದಿನ ಗರ್ಭಗುಡಿಯಲ್ಲಿ ಮಹಾಲಿಂಗವಿದೆ. ಈ ಗರ್ಭಗುಡಿಯ ಪ್ರಾಕಾರದ ಹೊರಪ್ರದೇಶದಲ್ಲಿ ನಂದಿಕೇಶ್ವರ ಕುಳಿತು ಶಿವಪಂಚಾಕ್ಷರೀಮಂತ್ರವನ್ನು ಜಪಿಸುತ್ತಿರುತ್ತಾನೆ ಎಂದು ಸೂತಮುನಿ ಹೇಳುತ್ತಾನೆ. ಶಿವನ ಅನುಗ್ರಹವಿದ್ದರೆ ಶಿವಲೋಕದ ವೈಭವವನ್ನು ಸಾಕ್ಷಾತ್ತಾಗಿ ನೋಡಬಹುದೆಂದು ಸ್ಪಷ್ಟಪಡಿಸುತ್ತಾನೆ.

## ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ **ಹಿಜಾಬ್ ವಿರುದ್ಧ** ಕರ್ನಾಟಕದಲ್ಲಿ ದೊಡ್ಡ ಪ್ರಮಾಣದ ಪ್ರತಿಭಟನೆ ನಡೆಯುತ್ತಿದೆ ಎಂಬ ವಿವರ ಇರುವ ಪೋಸ್ಟ್ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಇದರ ಜತೆಯಲ್ಲಿ ಸಾವಿರಾರು ಮಂದಿ ಮೇಲ್ಸೇತುವೆ ಮೇಲೆ ಮೆರವಣಿಗೆ ನಡೆಸುತ್ತಿರುವ ವಿಡಿಯೊವನ್ನು ಹಂಚಿಕೊಳ್ಳಲಾಗಿದೆ. ‘ಹಿಂದೂ ಧರ್ಮವನ್ನು ರಕ್ಷಿಸಲು ಕರ್ನಾಟಕದಲ್ಲಿ ಹೊಸ ಸೇನೆಯೊಂದು ಜನ್ಮತಾಳಿದೆ ಎಂಬುದು ಅತ್ಯಂತ ಸಮಾಧಾನಕರ ವಿಚಾರ. ಇನ್ನು ಮುಂದೆ ಧರ್ಮ ರಕ್ಷಣೆಗಾಗಿ ಹಿಂದೂಗಳು ಹೆದರಬೇಕಿಲ್ಲ. ಕೇಸರಿ ಧ್ವಜ ಹಿಡಿದು ಮೆರವಣಿಗೆ ನಡೆಸುತ್ತಿರುವ ಈ ವಿದ್ಯಾರ್ಥಿಗಳನ್ನು ನೋಡಿ’ ಎಂದು ಈ ಪೋಸ್ಟ್‌ಗಳಲ್ಲಿ ಹೇಳಲಾಗಿದೆ.

✓ **ಆದರೆ ವಿಡಿಯೊ** ಮತ್ತು ಈ ಪೋಸ್ಟ್‌ಗಳಲ್ಲಿ ಹಂಚಿಕೊಂಡಿರುವ ವಿವರಗಳಿಗೆ ಸಂಬಂಧವಿಲ್ಲ ಎಂದು ಆಲ್ಟ್ ನ್ಯೂಸ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. ಇದು ಕರ್ನಾಟಕದಲ್ಲಿ ಹಿಜಾಬ್ ವಿರುದ್ಧ ನಡೆದ ಮೆರವಣಿಗೆಯ ವಿಡಿಯೊ ಅಲ್ಲ. ಬದಲಿಗೆ 2017ರಲ್ಲಿ ಮಹಾರಾಷ್ಟ್ರದಲ್ಲಿ ಮರಾಠರು ಮೀಸಲಾತಿಗಾಗಿ ಒತ್ತಾಯಿಸಿ ಮೆರವಣಿಗೆ ನಡೆಸಿದ್ದರು. ಆ ಮೆರವಣಿಗೆ ವೇಳೆ ಕೇಸರಿ ಧ್ವಜಗಳನ್ನು ಹಿಡಿದಿದ್ದರು. ಆ ಹಳೆಯ ವಿಡಿಯೊವನ್ನೇ ಈಗ ತಪ್ಪು ಮಾಹಿತಿಯೊಂದಿಗೆ, ಕರ್ನಾಟಕದಲ್ಲಿ ಹಿಜಾಬ್ ವಿರುದ್ಧ ನಡೆಯುತ್ತಿರುವ ಪ್ರತಿಭಟನೆ ಎಂದು ಹಂಚಿಕೊಳ್ಳಲಾಗಿದೆ. ಇದು ಸಂಪೂರ್ಣ ಸುಳ್ಳು ಸುದ್ದಿ ಎಂದು ಆಲ್ಟ್ ನ್ಯೂಸ್ ವಿವರಿಸಿದೆ.

## ಗುಂಡಣ್ಣ




## ಬೆರಗಿನ ಬೆಳಕು

ಗುರುರಾಜ ಕರಜಗಿ

### ಪ್ರತಿಭಾ ವಿಕಾಸನ

**ಕ್ಷಿತಿರುಹಕೆ ಸುಮಫಲಮುಹೂರ್ತ ನಿಶ್ಚಿತವೇನು? |**
**ಮತಿಮನಗಳ ಕೃಷಿತಪ:ಫಲವುಮಂತು ||**
**ಸತತ ಕೃಷಿ, ಬೀಜಗುಣ, ಕಾಲವರ್ಷಗಳೊಡನೆ |**
**ಪ್ರತಿಭೆ ವಿಕಸಿತವಹುದೊ – ಮಂಕುತಿಮ್ಮ**
|| **569** ||

**ಪದ-ಅರ್ಥ:** ಕ್ಷಿತಿರುಹಕೆ = ಮರಕ್ಕೆ, ಸುಮಫಲ- ಮುಹೂರ್ತ = ಸುಮ(ಹೂವು) + ಫಲ(ಹಣ್ಣು- ) + ಮುಹೂರ್ತ, ಕೃಷಿತಪ:ಫಲವುಮಂತು = - ಕೃಷಿ + ತಪ:ಫಲವು(ತಪಸ್ಸಿನಫಲ) + ಅಂತು, ಕಾಲವರ್ಷಗಳೊಡನೆ = ಕಾಲ = ವರ್ಷಗಳು + ಒಡ- ನೆ(ಒದಗಿದರೆ), ವಿಕಸಿತವಹುದೊ = ವಿಕಸಿತ(ಅರ- ಳುವಿಕೆ) + ಅಹುದೊ.

**ವಾಚ್ಯಾರ್ಥ:** ಮರಕ್ಕೆ ಯಾವಾಗ ಹೂವು ಹಣ್ಣು- ಗಳಾಗುತ್ತವೆಂಬ ಮುಹೂರ್ತ ಗೊತ್ತಾಗಿದೆಯೆ? ಮನಸ್ಸು ಮತ್ತು ಬುದ್ಧಿಗಳ ಬೆಳವಣಿಗೆ ಮತ್ತು ತಪಸ್ಸಿನ ಫಲವೂ ಹಾಗೆಯೇ. ಸತತವಾದ ಪರಿಶ್ರಮ, ಒಳ್ಳೆಯ ಚಿಂತನೆಯ ಬೀಜಗಳೊಡನೆ, ಸಕಾಲದಲ್ಲಿ ಸಹಕಾರದ ಮಳೆ ಒದಗಿದರೆ ಪ್ರತಿಭೆಯ ವಿಕಾಸ- ವಾಗುತ್ತದೆ.

**ವಿವರಣೆ:** ಎನ್ರಿಕೋ ಕಾರುಜೋ ಅತ್ಯಂತ ಬಡಕು- ಟುಂಬದಲ್ಲಿ ನೇಪಲ್ಸ್‌ನಲ್ಲಿ ಜನಿಸಿದವನು. ಅವನ ತಂದೆ-ತಾಯಿಯರಿಗೆ 21 ಜನ ಮಕ್ಕಳಂತೆ. ಅವರಲ್ಲಿ ಮೂವರು ಮಾತ್ರ ಬದುಕಿ ಉಳಿದರು. ಎನ್ರಿಕೋನ ತಾಯಿ ಮಗನನ್ನು ಶಾಲೆಗೆ ಕಳುಹಿಸಿ ಓದಲು ಪ್ರೋತ್ಸಾಹಿಸಿದಳು. ಹುಡುಗ ಚರ್ಚ್‌ನಲ್ಲಿ ಹಾಡು- ತ್ತಿದ್ದನ್ನು ಗಮನಿಸಿ ಕೆಲವರು ಅವನಿಗೆ ನಾಟಕಗಳಲ್ಲಿ ಹಾಡುವ ಅವಕಾಶ ನೀಡಿದರು. ಎನ್ರಿಕೋ ತುಂಬ ಪರಿಶ್ರಮಿ. ಅವನ ಮೊದಲ ಹಾಡಿನ ರೆಕಾರ್ಡಿಂಗ್‌ಗೆ ಹೋದಾಗ ಅಲ್ಲಿದ್ದವರು, ಈತನ ಧ್ವನಿ ಕೀಚಲು, ಹಾಡುವುದಕ್ಕೆ ಲಾಯಕ್ಕಲ್ಲ ಎಂದುಬಿಟ್ಟರು. ಹುಡುಗ ಮತ್ತೆ ನಾಲ್ಕಾರು ವರ್ಷ ಪರಿಶ್ರಮ ಮಾಡಿ ನಾಟಕಗಳಲ್ಲಿ ಪಾತ್ರ ಮಾಡುತ್ತ ಹಾಡತೊಡಗಿದ. ಅವನ ಹಾಡುಗಳು ತುಂಬ ಪ್ರಸಿದ್ಧವಾಗತೊಡಗಿ- ದವು. ಮುಂದೆ ಸಲಗದಂತೆ ಅವನು ನಡೆದದ್ದೇ ದಾರಿ. ಬದುಕಿದಾಗಲೇ ದಂತಕಥೆಯಾದ, ಅತ್ಯಂತ ಶ್ರೀಮಂತನಾದ.

ಮುದ್ದೇನಹಳ್ಳಿಯಲ್ಲಿ ಬಡ ಬ್ರಾಹ್ಮಣ ಕುಟುಂಬದಲ್ಲಿ ಹುಟ್ಟಿದ ಹುಡುಗ ವಿಶ್ವೇಶ್ವರಯ್ಯ. ಅವರ ಬೆಳವಣಿಗೆ ಸುಲಭವಾದದ್ದಲ್ಲ. ತುಂಬ ಪರಿಶ್ರಮದ ಬದುಕು. ಶಿಸ್ತುಬದ್ಧ ಜೀವನದ ಮಾರ್ಗ ಹಿಡಿದು ಅವರು ಬೆಳೆದ ದಾರಿ ಯಾರಿಗಾದರೂ ಬೆರಗು ಹುಟ್ಟಿಸುವಂಥದ್ದು. ಪುಣೆಯಲ್ಲಿ ಎಂಜಿನಿಯರಿಂಗ್ ಪದವಿ ಪಡೆದು, ಮುಂಬೈನಲ್ಲಿ ಕೆಲಸ ಮಾಡಿ, ನಂತರ ಕನ್ನಂಬಾಡಿಯಲ್ಲಿ ಕಟ್ಟೆಯನ್ನು ಕಟ್ಟಿಸಿ, ಮೈಸೂರಿನ ದಿವಾನರಾಗಿ ಮಾಡಿದ ಕೆಲಸ ಅವರನ್ನು ಭಾರತರತ್ನರನ್ನಾಗಿಸಿತು. ಇಂದಿಗೂ ಡಾ. ಎಂ. ವಿಶ್ವೇಶ್ವರಯ್ಯ ಎಂದರೆ ಸಮಯ ಪರಿಪಾಲನೆಗೆ, ಕರ್ತವ್ಯನಿಷ್ಠೆಗೆ ಮತ್ತೊಂದು ಹೆಸರು.

ಇವರಿಬ್ಬರ ಜೀವನ ಚರಿತ್ರೆಯನ್ನು ಮೆಲಕು ಹಾಕಿದರೆ, ಬಾಲ್ಯದಲ್ಲಿ ಅವರು ಅಷ್ಟು ದೊಡ್ಡ ವ್ಯಕ್ತಿಗ- ಳಾಗುತ್ತಾರೆ ಎಂದು ಯಾರೂ ಹೇಳಲು ಸಾಧ್ಯವಿರ- ಲಿಲ್ಲ. ಹಾಗಾದರೆ ಅವರ ಸಾಧನೆಗೆ ಕಾರಣವೇನು? ಮೂಲತ: ಅವರಿಗೆ ದೈವದತ್ತವಾಗಿ ಬಂದ ಬುದ್ಧಿಶಕ್ತಿ ಮತ್ತು ಕಲೆ. ಅದರೊಂದಿಗೆ ಮುಖ್ಯವಾದದ್ದು ಅವರ ಪರಿಶ್ರಮ. ಆ ಪರಿಯ ಪರಿಶ್ರಮವಿರದಿ- ದ್ದರೆ ಅವರು ಬೆಳೆಯುವುದು ಸಾಧ್ಯವಿರಲಿಲ್ಲ. ಇದರೊಂದಿಗೆ ಕಾಲಕಾಲಕ್ಕೆ ದೊರೆತ ಸಹೃದಯರ, ಪರಿಸರದ ಸಹಾಯ. ಕಗ್ಗ ಈ ಮಾತನ್ನು ಹೇಳುತ್ತದೆ. ಪ್ರತಿಯೊಂದು ಮರಕ್ಕೆ ಹೂವು, ಹಣ್ಣು ಯಾವಾಗ ಆಗುತ್ತವೆ ಎಂದು ಖಚಿತವಾಗಿ ಹೇಳಲು ಸಾಧ್ಯವೇ? ಅವು ಆಗುವುದು ಬೀಜಗುಣದಿಂದ, ಸತತವಾದ ಕೃಷಿಯಿಂದ ಮತ್ತು ಕಾಲಕಾಲಕ್ಕೆ ದೊರಕುವ ನೀರು, ಪೋಷಣೆ ದ್ರವ್ಯಗಳಿಂದ. ಅಂತೆಯೇ ಮನುಷ್ಯನ ಬುದ್ಧಿ ಮತ್ತು ಮನಸ್ಸುಗಳು ಹದವಾಗಿ ಕೃಷಿಯಾದರೆ ಅದ್ಭುತವಾದ ಫಲಗಳು ದೊರಕಿ ಸಾಧನೆಯಾ- ಗುತ್ತದೆ. ಅದರೊಂದಿಗೆ ಸರಿಯಾದ ಪ್ರಯತ್ನ, ಸಹಕಾರಗಳು ದೊರೆತಾಗ ಪ್ರತಿಭೆ ವಿಕಾಸವಾಗುತ್ತದೆ.

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಫೆಬ್ರುವರಿ 22, 2022

**ಶ್ರೀ ಪ್ಲವನಾಮ ಸಂವತ್ಸರ ಉತ್ತರಾಯಣ–ಶಿಶಿರ ಋತು ಕುಂಭ ಮಾಸದ 10 ನೇ ದಿನ ತಿಥಿ:** (ಮಾಘ ಕೃಷ್ಣ) ಷಷ್ಠಿ ಗಂ. 18-35 ನಕ್ಷತ್ರ: ಸ್ವಾತಿ ಗಂ. 15-36 ಯೋಗ: ವೃದ್ಧಿ ಗಂ. 10-51, ಕರಣ: ಗರಜೆ ಗಂ. 07-18.
ರಾಹುಕಾಲ : ಮಧ್ಯಾಹ್ನ 03:00 – 04:30 ಸೂರ್ಯೋದಯ : 06-54 ಸೂರ್ಯಾಸ್ತ : 06-34 ಮುಸ್ಲಿಂ ದಿನಾಂಕ : 20 ರಜಬ್ ಅದೃಷ್ಟ ಸಂಖ್ಯೆ: 3, 10

**ಮೇಷ:** ಮೇಲಧಿಕಾರಿಗಳ ಜೊತೆಯಲ್ಲಿ ಮಿತ್ರತ್ವವನ್ನು ಕಾಪಾಡಿಕೊಳ್ಳಿ, ಇಲ್ಲವಾದಲ್ಲಿ ಪಶ್ಚಾತ್ತಾಪ ಪಡಬೇಕಾಗುವುದು. ಸ್ವಂತ ಉದ್ಯೋಗಿಗಳಿಗೆ ವೃತ್ತಿಯಲ್ಲಿ ಲಾಭವಾಗುವುದು. ನೂತನ ವಸ್ತ್ರ ಖರೀದಿಯ ಯೋಗವಿದೆ.

**ವೃಷಭ:** ಪ್ರತಿ ವರ್ಷದಲ್ಲಿ ಆಚರಿಸಿಕೊಂಡು ಬಂದ ಕುಟುಂಬದ ಧಾರ್ಮಿಕ ಕೆಲಸವನ್ನು ಮಾಡುವ ಬಗ್ಗೆ ತೀರ್ಮಾನಿಸಿ. ಸಂಗಾತಿಯೊಂದಿಗೆ ಬಾಂಧವ್ಯ ವೃದ್ಧಿಯಾಗಲಿದೆ. ಕೌಟುಂಬಿಕ ಸುಖದೊಂದಿಗೆ ಸರ್ವತೋಮುಖ ಅಭಿವೃದ್ಧಿ.

**ಮಿಥುನ:** ನಿಮ್ಮ ಕಂಪನಿಯ ವಿದೇಶದಲ್ಲಿನ ಹುದ್ದೆಗಾಗಿ ಅರ್ಜಿ ಸಲ್ಲಿಸಬಹುದು. ಹಿರಿಯರ ಆಸೆಯಂತೆ ಹೊಸ ಆಸ್ತಿಕೊಳ್ಳುವ ಅವಕಾಶ. ಧ್ಯಾನ ಹಾಗೂ ಕ್ರೀಡೆಯಂತಹ ಚಟುವಟಿಕೆಗಳಲ್ಲಿ ಹೆಚ್ಚಿನ ಆಸಕ್ತಿಯನ್ನು ಹೊಂದುವಿರಿ.

**ಕರ್ಕಾಟಕ:** ಸರ್ಕಾರಿ ಲೋಕೋಪಯೋಗಿ ಕೆಲಸದ ಗುತ್ತಿಗೆದಾರರು ಕಾಮಗಾರಿಗಳನ್ನು ನಿಮ್ಮೆಡೆಗೆ ಮಾಡಿಕೊಳ್ಳುವ ವಿಚಾರದಲ್ಲಿ ಎಡವುವ ಪರಿಸ್ಥಿತಿಗೆ ಹೋಗುವಿರಿ. ಅಡಿಕೆ ಬೆಳೆಗಾರರು ದಾಸ್ತಾನು ಬೆಳೆಯಿಂದ ಹೆಚ್ಚಿನ ಲಾಭ.

**ಸಿಂಹ:** ನಿಮ್ಮ ವ್ಯಾವಹಾರಿಕವಾದ ಕಲ್ಪನೆಗಳು ಗರಿಗೆದರುವುವು. ಸ್ವಂತ ಉದ್ಯಮದಲ್ಲಿರುವವರು ತಮ್ಮ ಕಾರ್ಯ ಕ್ಷೇತ್ರವನ್ನು ಅಭಿವೃದ್ಧಿಪಡಿಸಿಕೊಳ್ಳುವುದರಲ್ಲಿ ಬಹಳ ಉತ್ಸಾಹವನ್ನು ತೋರಿ ಅದರಲ್ಲಿ ಸಫಲತೆಯನ್ನು ಹೊಂದುವರು.

**ಕನ್ಯಾ:** ತಂದೆ-ತಾಯಿಯ ಶುಭ ಆಶೀರ್ವಾದದೊಂದಿಗೆ ದಿನ ಪ್ರಾರಂಭಿಸಿ. ನಿರುದ್ಯೋಗಿಗಳಿಗೆ ಅವರ ನಿರೀಕ್ಷೆಗೂ ಮೀರಿದಂತಹ ಕೆಲಸ ಸಿಗುವ ಸಾಧ್ಯತೆ. ಕೆಲಸಗಳಲ್ಲಿನ ಜವಾಬ್ದಾರಿಗಳು ಹೆಚ್ಚಿ, ಆರ್ಥಿಕ ಸ್ಥಿತಿ ಸುಧಾರಣೆ.

**ತುಲಾ:** ನಾಟಕ ಹಾಗೂ ಸಿನಿಮಾರಂಗದಲ್ಲಿ ಕೆಲಸ ನಿರ್ವಹಿಸುವವರಿಗೆ ಯಶಸ್ಸು ಇದ್ದು ಹೆಚ್ಚಿನ ಪ್ರೋತ್ಸಾಹಗಳು ದೊರೆತು ಸಮಾಜದಲ್ಲಿ ಸ್ಥಾನಮಾನಗಳಿಂದ ಉನ್ನತ ಸ್ಥಿತಿಗೆ ಬರುವರು. ಆರೋಗ್ಯದಲ್ಲಿ ತೊಂದರೆಗಳು ಇಲ್ಲವಾಗುವುದು.

**ವೃಶ್ಚಿಕ:** ನಿಮ್ಮ ಸಲಹೆ ಸೂಚನೆಗಳನ್ನು ಹೆಚ್ಚಿನ ಯೋಚನೆ ಇಲ್ಲದೆ ನಿಮ್ಮ ಮೇಲಧಿಕಾರಿಗಳು ಒಪ್ಪುವಂತೆ ಆಗುತ್ತದೆ. ಮಕ್ಕಳ ಸರ್ವತೋಮುಖ ಚಟುವಟಿಕೆ ಮತ್ತು ವಿದ್ಯಾಭ್ಯಾಸವು ಉತ್ತಮವಾಗಿರುತ್ತದೆ.

**ಧನು:** ಉಪಹಾರ ಗೃಹಗಳಿಂದ ಅಧಿಕ ಲಾಭ. ಹಿರಿಯರಿಂದ ಪಡೆದ ಸಲಹೆಯು ನಿಮ್ಮ ಜೀವನಕ್ಕೆ ಹೊಸ ಬುನಾದಿಯಾಗಲಿದೆ. ತೆಂಗಿನ ಬೆಳೆಗಳು ಹೇರಳವಾಗಿರುವುದು ಜೊತೆಗೆ ಲಾಭದಾಯಕವಾಗಿಯೂ ಇರುತ್ತವೆ.

**ಮಕರ:** ಹಿರಿಯರ ಅಭಿಪ್ರಾಯದಂತೆ ಮನೆಯನ್ನು ಆಧುನಿಕಗೊಳಿಸುವ ಕೆಲಸದಲ್ಲಿ ಮುಂದುವರೆಯಬಹುದು. ಚುನಾವಣೆಯ ತಯಾರಿಯು ಭರದಿಂದ ಸಾಗುವುದು. ವಾಣಿಜ್ಯ ರಂಗದಲ್ಲಿ ಹೊಸ ತಿರುವು ಮೂಡಲಿದೆ.

**ಕುಂಭ:** ಕೋರ್ಟು ಕಚೇರಿಯ ಕೆಲಸ ಕಾರ್ಯಗಳು ಯಾವುದೇ ರೀತಿಯ ಪರದಾಟವಿಲ್ಲದೆ ನಿಮ್ಮ ಅನುಕೂಲಕ್ಕೆ ತಕ್ಕಂತೆ ನಡೆಯುತ್ತದೆ. ಅಧ್ಯಾಪಕ ವರ್ಗದವರಿಗೆ ವಿದ್ಯಾರ್ಥಿಗಳ ಮೇಲುಗೈಯಿಂದ ಗೌರವ ಸಿಗುವುದು.


**ಮೀನ:** ಕೆಲಸ ಕಾರ್ಯಗಳ ಬಗ್ಗೆ ಹೆಚ್ಚಿನ ನಿಗಾ ಕೊಡುವಂತೆ ಅಧಿಕಾರಿಗಳಿಂದ ತೀಕ್ಷ್ಣವಾದ ಸಂದೇಶ. ಬಹಳ ದಿನಗಳ ನಂತರ ಮನಸ್ಸಿಗೆ ಹಿತ ಅನುಭವ ಸಿಗಲಿದೆ. ನಿಮ್ಮಲ್ಲಿರುವ ಅಗಾಧ ಜ್ಞಾನ ಶಕ್ತಿ ಹೊರ ಹೊಮ್ಮಲು ಸೂಕ್ತ ಕಾಲ.

## ಪದಬಂಧ 4877

– ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**
1.ಬೇರೆಯ ದೇಹವಿದು (4)
3.ಮಂಗಳಗ್ರಹವನ್ನೂ ಹೀಗೂ ಕರೆವರು (4)
5.ಮಡಿಯಿಂದ ಮಾಡಿರುವ ನೆರಿಗೆ (3)
6.ಎಳ್ಳಿನಿಂದ ಇರಿಸಿದ ಬೊಟ್ಟು (3)
8.ಮರದ ಬಳಿ ಸಂಭವಿಸಿದ ಸಾವು (3)
9.ಕೊಡು ಕೊಡು ಎನ್ನುತ್ತಾ ಬಂದಿರುವ ಅಜ್ಜ (2)
10. ನವರತ್ನಗಳಲ್ಲಿ ಇದೊಂದು (2)
11.ವನದಲ್ಲಿ ಉಡುಗೆಯನ್ನು ಹುಡುಕಿ! (3)
12.ಕೆಲವರು ಮಾಡುವ ಕಾರ್ಯ (3)
14.ಕಂಬದ ಹತ್ತಿರ ಸುರಿಸಿದ ಅಶ್ರು (3)
16.ಆನಂದಾನುಭವಕ್ಕೆ ಉಂಟಾದ ಅಡ್ಡಿ (4)
17.ಅತಿ ಘೋರವಾದ ವಿಷ (4)

**ಮೇಲಿಂದ ಕೆಳಕ್ಕೆ**
1.ಪತಿಯೊಡನಿರುವ ಕಾಲಾಳು (3)
2.ಈತ ನರಕಾಧಿಪತಿ (2)
3.ಕಡಿವಾಣ ಅಥವಾ ಸಂಖ್ಯೆಯೂ ಆದೀತು (2)
4.ಕಣದಲ್ಲಿ ನಡೆದ ಲಗ್ನ (3)
7.ಕರ ಜೋಡಿಸಿ ತಟ್ಟಿದ ಚಪ್ಪಾಳೆ (5)
8.ಮನ ಮೊದಲಿದ್ದಾಗ ಬಂದಿರುವ ತಿಳುವಳಿಕೆ (5)
11.ವರನ ಹತ್ತಿರವಿರುವ ವಾಗ್ಮಿ (3)
13.ಒಳ್ಳೆಯ ಕುಲ (3)
14.ಶ್ರೀ ಕೃಷ್ಣನ ಸೋದರಮಾವ (2)
15.ಉಲ್ಟಾ ನಿಂತಾಗ ಆಗಿರುವ ನಷ್ಟ! (2)



### 4876ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:** 1.ಪಿತಾಮಹ 3.ರಾಜಾರೋಷ 5.ಸುಭಗ 7.ನಾಕ 8.ಹಿಮ 11.ರಿಪು 13.ಕುರು 14.ಗವಸು 16.ರತ್ನಾಕರ 17.ಮರುಭೂಮಿ
**ಮೇಲಿಂದ ಕೆಳಕ್ಕೆ:** 1.ಪಿತಾಮಹಿ 2.ಹಸು 3.ರಾಗ 4.ಷಡ್ಡಕ 6.ಭವಿಷ್ಯ 7.ನಾಮಧಾರಿ 9.ಮಜಕೂರು 10.ಕೌರವ 12.ಪುರೋಗಾಮಿ 13.ಕುಟೀರ 14.ಗರ 15.ಸುಮ

## ಸುಡೊಕು 5263

| | | | | | | | | |
|---|---|---|---|---|---|---|---|---|
| | 7 | | | 5 | | 2 | | 8 |
| 5 | | 4 | 1 | | 8 | | | |
| | 8 | | | 7 | | | 5 | |
| | 6 | | 9 | 3 | | 1 | | 2 |
| 2 | | 5 | | | | | | |
| | 3 | | | 8 | 2 | 5 | | 6 |
| | | | 5 | | 6 | | 2 | |
| 3 | | 2 | | | | | | |
| | 5 | | | 2 | | 4 | | 1 |


**ಆಡುವುದು ಹೇಗೆ?** ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 5262 ಸುಡೊಕು

| | | | | | | | | |
|---|---|---|---|---|---|---|---|---|
| 7 | 5 | 9 | 3 | 1 | 6 | 4 | 8 | 2 |
| 2 | 3 | 6 | 8 | 4 | 9 | 5 | 1 | 7 |
| 4 | 1 | 8 | 7 | 5 | 2 | 3 | 9 | 6 |
| 9 | 7 | 3 | 4 | 2 | 1 | 6 | 5 | 8 |
| 5 | 6 | 4 | 9 | 3 | 8 | 2 | 7 | 1 |
| 8 | 2 | 1 | 6 | 7 | 5 | 9 | 3 | 4 |
| 6 | 8 | 7 | 2 | 9 | 3 | 1 | 4 | 5 |
| 1 | 9 | 2 | 5 | 8 | 4 | 7 | 6 | 3 |
| 3 | 4 | 5 | 1 | 6 | 7 | 8 | 2 | 9 |

## ಷೇರುಪೇಟೆ ವಹಿವಾಟು

149




## ಎನ್‌ಎಸ್‌ಇ ನಿಫ್ಟಿ

| | |
|---|---|
| ಹಿಂದಿನ ಅಂತ್ಯ | 17,276 |
| ಇಂದಿನ ಅಂತ್ಯ | 17,206 |
| ▼ | 70 |
| ದಿನದ ಕನಿಷ್ಠ | 17,070 |

## ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

| | |
|---|---|
| 100 ಮೊಟ್ಟೆಗೆ | ₹415 |
| 12 ಮೊಟ್ಟೆಗೆ | ₹58 |

ಮೈಸೂರು

| | |
|---|---|
| 100 ಮೊಟ್ಟೆಗೆ | ₹415 |

## ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

| | |
|---|---|
| ದಪ್ಪ | ₹2500-3300 |
| ಮಧ್ಯಮ | ₹2000-2500 |
| ಸಣ್ಣ | ₹1500-2000 |

## ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು

1ನೇ ದರ್ಜೆ ₹18000-20000

2ನೇ ದರ್ಜೆ ₹10000-16000



# ಸೆನ್ಸೆಕ್ಸ್, ನಿಫ್ಟಿ ಇಳಿಕೆ

ಮುಂಬೈ (ಪಿಟಿಐ): ರಷ್ಯಾ ಮತ್ತು ಉಕ್ರೇನ್ ನಡುವಿನ ಬಿಕ್ಕಟ್ಟಿನ ಕಾರಣದಿಂದಾಗಿ ದೇಶದ ಷೇರುಪೇಟೆಗಳ ವಹಿವಾಟು ಸೋಮವಾರ ಇಳಿಕೆ ಕಾಣುವಂತಾಯಿತು.

ವಹಿವಾಟಿನ ಆರಂಭದಲ್ಲಿ ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ 700 ಅಂಶಗಳವರೆಗೂ ಇಳಿಕೆ ಕಂಡಿತ್ತು. ಆದರೆ, ಉಕ್ರೇನ್ ಕುರಿತಾಗಿ ಅಮೆರಿಕ ಮತ್ತು ರಷ್ಯಾ ಮಧ್ಯೆ ಮಾತುಕತೆ ನಡೆಯುವ ಸಾಧ್ಯತೆಯಿಂದಾಗಿ ವಹಿವಾಟು ತುಸು ಚೇತರಿಸಿಕೊಂಡಿತು.

ವಹಿವಾಟಿನ ಅಂತ್ಯದ ವೇಳೆಗೆ ಸೆನ್ಸೆಕ್ಸ್ 149 ಅಂಶ ಇಳಿಕೆ ಕಂಡು 57,683 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 69 ಅಂಶ ಇಳಿಕೆ ಆಗಿ 17,206 ಅಂಶಗಳಿಗೆ ತಲುಪಿತು.

**ರೂಪಾಯಿ ಮೌಲ್ಯ ವೃದ್ಧಿ:** ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ 11 ಪೈಸೆ ಹೆಚ್ಚಾಗಿ ಒಂದು ಡಾಲರ್‌ಗೆ ₹ 74.55ರಂತೆ ವಿನಿಮಯಗೊಂಡಿತು.

## ದೇಶದಾದ್ಯಂತ ಮಾರುಕಟ್ಟೆ ಧಾರಣೆ

**ಏಲಕ್ಕಿ ಧಾರಣೆ**
**ಸಕಲೇಶಪುರ**

| | |
|---|---|
| ಕೂಳೆ | 430-450 |
| ನಡುಗೋಲು | 500-550 |
| ರಾಶಿ | 600-650 |
| ರಾಶಿ ಉತ್ತಮ | 650-700 |
| ಜರಡಿ | 750-800 |
| ಹೆರಕಿದ್ದು | 1100-1150 |
| ಹಸಿರು ಸಾಧಾರಣ | 600-700 |
| ಹಸಿರು ಉತ್ತಮ | 900-950 |
| ಹಸಿರು ಅತಿ ಉತ್ತಮ | 1200-1250 |
| ಕಾಳು ಮೆಣಸು | 515 |

**ಅಡಿಕೆ**

| | |
|---|---|
| **ಬಂಟ್ವಾಳ** | |
| ಕೋಕ | 12500-25000 |
| ಹೊಸತು | 27500-45000 |
| ಹಳತು | 46000-53000 |
| **ಕಾರ್ಕಳ** | |
| ಹೊಸತು | 40000-44500 |
| ಹಳತು | 46000-53000 |
| **ಚಿತ್ರದುರ್ಗ** | |
| ಆಪಿ | 45119-45549 |
| ಬೆಟ್ಟೆ | 36229-36669 |
| ಕೆಂಪುಗೋಟು | 30800-31200 |
| ರಾಶಿ | 44639-45089 |
| **ಪುತ್ತೂರು** | |
| ಕೋಕ | 11000-26000 |
| ಹೊಸತು | 27500-45000 |
| **ಕುಮಟ** | |
| ಚಿಪ್ಪು | 25019-29019 |
| ಕೋಕ | 16509-27019 |
| ಫ್ಯಾಕ್ಟರಿ | 13509-19869 |
| ಹಳೆಚಾಲಿ | 46019-47599 |
| ಹೊಸಚಾಲಿ | 39089-41009 |
| **ಸಿದ್ದಾಪುರ** | |
| ಬಿಳಿಗೋಟು | 21099-30811 |
| ಚಾಲಿ | 45299-45299 |
| ಕೋಕ | 21012-30612 |
| ಹೊಸಚಾಲಿ | 35099-41419 |
| ಕೆಂಪುಗೋಟು | 30469-32499 |
| ರಾಶಿ | 43999-47009 |
| ತಟ್ಟಿಬೆಟ್ಟೆ | 37689-44689 |
| **ಶಿರಸಿ** | |
| ಬೆಟ್ಟೆ | 18099-43399 |
| ಬಿಳಿಗೋಟು | 20069-33099 |
| ಚಾಲಿ | 34191-42899 |
| ರಾಶಿ | 34099-46769 |
| **ಯಲ್ಲಾಪುರ** | |
| ಬಿಳಿಗೋಟು | 26299-32899 |
| ಕೋಕ | 19122-29299 |
| ಹಳೆಚಾಲಿ | 46111-46111 |
| ಹೊಸಚಾಲಿ | 35696-42669 |
| ಕೆಂಪುಗೋಟು | 30009-36499 |
| ರಾಶಿ | 45890-51700 |
| ತಟ್ಟಿಬೆಟ್ಟೆ | 37499-45419 |
| **ಶಿವಮೊಗ್ಗ** | |
| ಬೆಟ್ಟೆ | 46189-52199 |
| ಗೊರಬಲು | 17019-34219 |
| ರಾಶಿ | 43649-46000 |
| ಸರಕು | 53109-75200 |
| **ಸಾಗರ** | |
| ಬಿಳಿಗೋಟು | 21209-29109 |
| ಚಾಲಿ | 32099-37449 |
| ಕೋಕ | 13119-30189 |
| ಕೆಂಪುಗೋಟು | 21099-37019 |
| ರಾಶಿ | 33269-46649 |
| ಸಿಪ್ಪೆಗೋಟು | 7269-18599 |

**ರಾಮನಗರ ರೇಷ್ಮೆ**

| | |
|---|---|
| ಮಿಶ್ರತಳಿ | 400-761 |
| ದ್ವಿತಳಿ | 608-985 |

**ಕಾಫಿ** (50 ಕೆ.ಜಿಗೆ ₹ ಗಳಲ್ಲಿ)

| | ಮೂಡಿಗೆರೆ | ಹಾಸನ | | |
|---|---|---|---|---|
| | ಮುದ್ರೆಮನೆ | ಪ್ಲಾಂಟರ್ಸ್ | ಅಲ್ಲಾನಾ | ನ್ಯೂಯಾರ್ಕ್ |
| ಎಪಿ | 16000 | 15900 | 16050 | 246.85 ಸೆಂಟ್ಸ್ |
| ಎಸಿ | 7810 | 7400 | 8000 | |
| ಆರ್‌ಪಿ | 8000 | 7800 | 8100 | ಲಂಡನ್ |
| ಆರ್‌ಸಿ | 4100 | 3950 | 4050 | 2271 ಡಾಲರ್ಸ್ |

ಮುಂಬೈ ಧಾರಣೆ ಲಭ್ಯವಾಗಿಲ್ಲ

ಆರೋಗ್ಯ ಸೇವಾ ವಲಯಕ್ಕೆ ಕೇಂದ್ರ ಬಜೆಟ್ ಅನುದಾನ

# ರಾಜ್ಯಗಳ ಮೇಲೆ ಹೊಣೆ ಹೊರಿಸಿದ ಕೇಂದ್ರ



ಮುಂಬೈ (ಪಿಟಿಐ): ಆರೋಗ್ಯ ಸೇವಾ ವಲಯಕ್ಕೆ ಕೇಂದ್ರ ಬಜೆಟ್‌ನಲ್ಲಿ ನೀಡಿರುವ ಅನುದಾನವು ನಿರೀಕ್ಷೆಗಿಂತಲೂ ಕಡಿಮೆ ಎಂಬ ಅಭಿಪ್ರಾಯಕ್ಕೆ ಪ್ರತಿಕ್ರಿಯೆ ನೀಡಿರುವ ಕೇಂದ್ರ ಹಣಕಾಸು ಕಾರ್ಯದರ್ಶಿ ಟಿ.ವಿ. ಸೋಮನಾಥನ್, 'ಆರೋಗ್ಯ ಸೇವೆಗಳನ್ನು ಒದಗಿಸುವುದು ರಾಜ್ಯಗಳ ಪ್ರಾಥಮಿಕ ಜವಾಬ್ದಾರಿ' ಎಂದು ಹೇಳಿದ್ದಾರೆ.

'ಆರೋಗ್ಯ ಮೂಲಸೌಕರ್ಯಕ್ಕೆ ಕೇಂದ್ರವು ಒಂದಿಷ್ಟು ನೆರವು ನೀಡುತ್ತದೆ. ಅಲ್ಲದೆ, ಸಮಾಜದ ತಳಮಟ್ಟದಲ್ಲಿನ ಜನರಿಗೆ ಆರೋಗ್ಯ ಸೇವೆಗಳನ್ನು ಪಡೆಯಲು ಅನುಕೂಲ ಆಗುವಂತೆ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ ಮೇಲೆ ಸರ್ಕಾರವು ವೆಚ್ಚ ಮಾಡುತ್ತಿದೆ' ಎಂದು ಬಜೆಟ್ ಕುರಿತ ಸಂವಾದ ಕಾರ್ಯಕ್ರಮದಲ್ಲಿ ಅವರು ಹೇಳಿದ್ದಾರೆ.

ಬಜೆಟ್ ಪ್ರಸ್ತಾವದ ಪ್ರಕಾರ, 2022–23ನೇ ಹಣಕಾಸು ವರ್ಷಕ್ಕೆ ಆರೋಗ್ಯ ಸೇವಾ ವಲಯಕ್ಕೆ ₹ 83 ಸಾವಿರ ಕೋಟಿ ನಿಗದಿ ಮಾಡಲಾಗಿದೆ. 2021–22ರಲ್ಲಿಯೂ ಇಷ್ಟೇ ಮೊತ್ತ ತೆಗೆದಿಡಲಾಗಿತ್ತು.

ಕಾರ್ಯಕ್ರಮದಲ್ಲಿ ಮಾತನಾಡಿದ ಸಿಐಐ ಅಧ್ಯಕ್ಷ ಟಿ.ವಿ. ನರೇಂದ್ರನ್, 'ಆರೋಗ್ಯ ಸೇವಾ ವಲಯದ ಮೇಲಿನ ವೆಚ್ಚವು ಹಿಂದೆ ಮಾಡುತ್ತಿದ್ದ ವೆಚ್ಚಕ್ಕಿಂತ ಹೆಚ್ಚಿದೆ. ಜಿಡಿಪಿಯ ಶೇಕಡ 1.3ರಷ್ಟು ಮೊತ್ತ ವೆಚ್ಚ ಮಾಡಲು ನಿರ್ಧರಿಸಲಾಗಿದೆ. ಹೀಗಿದ್ದರೂ ಸರ್ಕಾರವು ಜಿಡಿಪಿಯ ಶೇ 3ರಷ್ಟನ್ನು ಆರೋಗ್ಯ ಸೇವೆಗಳಿಗಾಗಿ ವೆಚ್ಚ ಮಾಡಬೇಕು ಎನ್ನುವ ನಿರೀಕ್ಷೆಗಳು ಇದ್ದವು' ಎಂದು ಹೇಳಿದ್ದರು.

'ವೆಚ್ಚದ ಪ್ರಮಾಣವನ್ನು ರಾಜ್ಯ ಸರ್ಕಾರದ ಜವಾಬ್ದಾರಿಯ ಹಿನ್ನೆಲೆಯಲ್ಲಿ ನೋಡಬೇಕು' ಎಂದು ಸೋಮನಾಥನ್ ಪ್ರತಿಕ್ರಿಯೆ ನೀಡಿದರು.

'ಆರೋಗ್ಯ, ಶಿಕ್ಷಣ, ರಕ್ಷಣೆ ಸೇರಿದಂತೆ ವಿವಿಧ ವಲಯಗಳ ಮೇಲೆ ಮಾಡುವ ವೆಚ್ಚವು ಜಿಡಿಪಿಯ ಶೇಕಡಾವಾರು ಎಷ್ಟಿರಬೇಕು ಎಂದು ಚರ್ಚೆ ನಡೆಸುವಾಗ, ವೆಚ್ಚದ ಪ್ರಮಾಣದಲ್ಲಿ ಯಾವುದೇ ಹೆಚ್ಚಳ ಆದರೂ ತೆರಿಗೆ–ಜಿಡಿಪಿ ಅನುಪಾತದಲ್ಲಿಯೂ ಅಷ್ಟೇ ಪ್ರಮಾಣದ ಹೆಚ್ಚಳ ಆಗಬೇಕು ಎನ್ನುವುದನ್ನೂ ನಾವು ನೆನಪಿಟ್ಟುಕೊಳ್ಳಬೇಕು. ಅದನ್ನು ಹೆಚ್ಚಿಸುವ ಬಗ್ಗೆಯೂ ಸಹಕಾರ ನೀಡುವಂತೆ ಉದ್ಯಮಕ್ಕೆ ನಾನು ಮನವಿ ಮಾಡುತ್ತೇನೆ' ಎಂದು ಅವರು ಹೇಳಿದ್ದಾರೆ.

'ಕೋವಿಡ್ ಸಾಂಕ್ರಾಮಿಕ ಬಂದ ನಂತರ ಸರ್ಕಾರದ ತುರ್ತು ಸಾಲ ಖಾತರಿ ಯೋಜನೆ ಅಡಿಯಲ್ಲಿ ಆರೋಗ್ಯ ಸೇವಾ ವಲಯಕ್ಕೆ ₹ 50 ಸಾವಿರ ಕೋಟಿ ಸಾಲ ಸಿಗುತ್ತಿದೆ. ಕಾರ್ಪೊರೇಟ್ ವಲಯವು ಅದರ ಸಂಪೂರ್ಣ ಪ್ರಯೋಜನ ಪಡೆದುಕೊಳ್ಳಬೇಕು' ಎಂದರು.

# ಸರ್ಕಾರಿ ನಿಯಂತ್ರಣದ ಭಯ ಬೇಡ: ಎಲ್‌ಐಸಿ ಅಧ್ಯಕ್ಷ

ನವದೆಹಲಿ (ರಾಯಿಟರ್ಸ್): 'ಸರ್ಕಾರಿ ಸ್ವಾಮ್ಯದ ಭಾರತೀಯ ಜೀವ ವಿಮಾ ನಿಗಮದಲ್ಲಿ (ಎಲ್‌ಐಸಿ) ಹೂಡಿಕೆ ಮಾಡುವ ಮನಸ್ಸು ಇರುವವರು ಕಂಪನಿಯ ಮೇಲೆ ಸರ್ಕಾರದ ನಿಯಂತ್ರಣ ಇರುವ ಬಗ್ಗೆ ಭಯಪಡುವ ಅಗತ್ಯ ಇಲ್ಲ. ಏಕೆಂದರೆ, ಕಂಪನಿಯ ಆಡಳಿತ ಮಂಡಳಿ ಅಗತ್ಯ ತೀರ್ಮಾನಗಳನ್ನು ತೆಗೆದುಕೊಳ್ಳುತ್ತದೆಯೇ ಹೊರತು ಸರ್ಕಾರ ಅಲ್ಲ' ಎಂದು ಎಲ್‌ಐಸಿ ಅಧ್ಯಕ್ಷ ಎಂ.ಆರ್. ಕುಮಾರ್ ಹೇಳಿದ್ದಾರೆ.

ಎಲ್‌ಐಸಿ ಬಳಿ ಸಾಕಷ್ಟು ಬಂಡವಾಳ ಲಭ್ಯವಿದೆ ಎಂದೂ ಅವರು ಹೇಳಿದ್ದಾರೆ. ಐಪಿಒ ನಂತರ ಸರ್ಕಾರದ ಬಳಿ ಶೇ 95ರಷ್ಟು ಷೇರುಪಾಲು ಉಳಿಯಲಿದೆ ಎಂದು ಅವರು ತಿಳಿಸಿದ್ದಾರೆ. ಎಲ್‌ಐಸಿ ಐಪಿಒ ಪ್ರಕ್ರಿಯೆಯು ಮಾರ್ಚ್ 11ರಿಂದ ಶುರುವಾಗುವ ಸಾಧ್ಯತೆ ಇದೆ. ಈ ಐಪಿಒ ಮೂಲಕ ₹ 60 ಸಾವಿರ ಕೋಟಿ ಬಂಡವಾಳ ಸಂಗ್ರಹಿಸುವ ಉದ್ದೇಶವನ್ನು ಕೇಂದ್ರ ಸರ್ಕಾರ ಹೊಂದಿದೆ.

ಐಡಿಬಿಐ ಬ್ಯಾಂಕ್‌ನಲ್ಲಿ ಹೊಂದಿರುವ ಎಲ್ಲಾ ಷೇರುಗಳನ್ನೂ ಎಲ್‌ಐಸಿಯು ಮಾರಾಟ ಮಾಡದೇ ಇರಬಹುದು. ಗ್ರಾಹಕರಿಗೆ ತನ್ನ ವಿಮಾ ಸೇವೆಗಳನ್ನು ನೀಡಲು ಐಡಿಬಿಐ ಬ್ಯಾಂಕ್‌ನ ಶಾಖೆಗಳನ್ನು ಎಲ್‌ಐಸಿ ಬಳಸಬಹುದು ಎಂದು ಕುಮಾರ್ ಹೇಳಿದ್ದಾರೆ.

ಐಡಿಬಿಐ ಬ್ಯಾಂಕ್‌ನಲ್ಲಿ ಸರ್ಕಾರ ಮತ್ತು ಎಲ್‌ಐಸಿ ಶೇ 90ಕ್ಕೂ ಹೆಚ್ಚಿನ ಷೇರುಪಾಲು ಹೊಂದಿವೆ. ಡಿಸೆಂಬರ್ ಅಂತ್ಯದ ವೇಳೆಗೆ ಬ್ಯಾಂಕ್‌ನ ಆಸ್ತಿ ಮೌಲ್ಯವು ₹ 2.91 ಲಕ್ಷ ಕೋಟಿಗಳಷ್ಟು ಇತ್ತು. ಈ ಬ್ಯಾಂಕ್ ದೇಶದಾದ್ಯಂತ 1,800 ಶಾಖೆಗಳನ್ನು ಹೊಂದಿದೆ.

# ಬ್ಯಾಂಕಿಂಗ್ ವಂಚನೆ: ವಿಚಾರಣೆಗೆ ಹಾಜರಾದ ರಿಷಿ

ನವದೆಹಲಿ (ಪಿಟಿಐ): ಬ್ಯಾಂಕ್‌ಗಳಿಗೆ ₹ 22,848 ಕೋಟಿ ವಂಚಿಸಿರುವ ಆರೋಪಕ್ಕೆ ಸಂಬಂಧಿಸಿದಂತೆ ಎಬಿಜಿ ಶಿಪ್‌ಯಾರ್ಡ್ ಲಿಮಿಟೆಡ್‌ನ ಮಾಜಿ ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕ ರಿಷಿ ಅಗರ್ವಾಲ್ ಅವರು ಕೇಂದ್ರೀಯ ತನಿಖಾ ದಳದ (ಸಿಬಿಐ) ಎದುರು ಸೋಮವಾರ ವಿಚಾರಣೆಗೆ ಹಾಜರಾದರು.

ಬ್ಯಾಂಕ್‌ಗಳಿಗೆ ವಂಚಿಸಿರುವುದಕ್ಕೆ ಸಂಬಂಧಿಸಿದಂತೆ ಸಿಬಿಐ ಇದುವರೆಗೆ ದಾಖಲಿಸಿಕೊಂಡಿರುವ ಅತಿದೊಡ್ಡ ಮೊತ್ತದ ಪ್ರಕರಣ ಇದು.

ಸಿಬಿಐ ಅಧಿಕಾರಿಗಳು ಅಗರ್ವಾಲ್ ಅವರನ್ನು ಹಿಂದಿನ ವಾರವೂ ವಿಚಾರಣೆಗೆ ಒಳಪಡಿಸಿದ್ದರು. ಹಣದ ವರ್ಗಾವಣೆಗೆ ಸಂಬಂಧಿಸಿದ ವಿವಿಧ ಆಯಾಮಗಳ ಕುರಿತು ಮುಂದಿನ ದಿನಗಳಲ್ಲಿ ಕೂಡ ಅವರ ಹೇಳಿಕೆ ದಾಖಲಿಸಿಕೊಳ್ಳಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆರೋಪಿ ಸ್ಥಾನದಲ್ಲಿ ನಿಂತಿರುವ ಕಂಪನಿಯ ಖಾತೆಗಳ ಪುಸ್ತಕ ಹಾಗೂ ಇತರ ಕೆಲವು ಮಹತ್ವದ ದಾಖಲೆಗಳು ದೊರೆತಿವೆ ಎಂದು ಸಿಬಿಐ ಅಧಿಕಾರಿಗಳು ಹೇಳಿದ್ದಾರೆ. ಈ ವಂಚನೆಯ ವಿಚಾರವಾಗಿ ಬ್ಯಾಂಕ್‌ಗಳ ಕಡೆಯಿಂದ 2019ರ ನವೆಂಬರ್ 8ರಂದು ಮೊದಲ ದೂರು ದಾಖಲಾಗಿತ್ತು. ದೂರಿನ ವಿಚಾರವಾಗಿ ಕೆಲವು ಸ್ಪಷ್ಟನೆಗಳನ್ನು ಒದಗಿಸುವಂತೆ ಸಿಬಿಐ 2020ರ ಮಾರ್ಚ್ 12ರಂದು ಕೋರಿತ್ತು.

2020ರ ಆಗಸ್ಟ್‌ನಲ್ಲಿ ಬ್ಯಾಂಕ್‌ಗಳು ಹೊಸದಾಗಿ ದೂರು ಸಲ್ಲಿಸಿದವು. ದೂರನ್ನು ಪರಿಶೀಲಿಸಿದ ಸಿಬಿಐ ಒಂದೂವರೆ ವರ್ಷದ ನಂತರ, ಈ ವರ್ಷದ ಫೆಬ್ರುವರಿ 7ರಂದು, ಪ್ರಥಮ ಮಾಹಿತಿ ವರದಿ (ಎಫ್‌ಐಆರ್) ದಾಖಲಿಸಿಕೊಂಡಿತು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಅಂತರ ಕಾಯ್ದುಕೊಳ್ಳಿ

# ಹೂಡಿಕೆಗೆ ವಾರನ್ ಬಫೆಟ್ ಸೂತ್ರಗಳು


ಷೇರು ಮಾತು

ಶರತ್ ಎಂ.ಎಸ್.



ಷೇರು ಮಾರುಕಟ್ಟೆ ಪ್ರವೇಶಿಸುವ ಪ್ರತಿಯೊಬ್ಬರೂ ಕೇಳುವ ಮೊದಲ ಹೆಸರು ವಾರನ್ ಬಫೆಟ್. ಜಗತ್ತಿನ ಅಗ್ರಮಾನ್ಯ ಶ್ರೀಮಂತರ ಪಟ್ಟಿಯಲ್ಲಿರುವ ಬಫೆಟ್, ಷೇರು ಹೂಡಿಕೆದಾರರ ಪಾಲಿನ ಗುರು ಇದ್ದಂತೆ. ಬಫೆಟ್ ಹೂಡಿಕೆ ಸೂತ್ರಗಳು ಎಲ್ಲ ವಯೋವರ್ಗಗಳ ಹೂಡಿಕೆದಾರರಿಗೆ ಅಚ್ಚುಮೆಚ್ಚು. ಬಫೆಟ್ ಅವರ ಷೇರು ಹೂಡಿಕೆ ತಂತ್ರಗಾರಿಕೆ ಬಗ್ಗೆ ಹೆಚ್ಚು ಕಲಿಯೋಣ ಬನ್ನಿ.

**ನೀವೇನು ಮಾಡುತ್ತಿದ್ದೀರಿ ಎಂಬುದು ನಿಮಗೆ ಗೊತ್ತಿಲ್ಲದಿದ್ದರೆ ಮಾತ್ರ ರಿಸ್ಕ್ ಎದುರಾಗುತ್ತದೆ:** 2021ರ ನಂತರದಲ್ಲಿ ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡುವವರ ಸಂಖ್ಯೆ ಗಣನೀಯವಾಗಿ ಹೆಚ್ಚಳವಾಗಿದೆ. ಆದರೆ ಬಹಳಷ್ಟು ಮಂದಿ ಷೇರು ಹೂಡಿಕೆ, ಟ್ರೇಡಿಂಗ್ ಪರಿಚಯವೇ ಇಲ್ಲದೆ ಹೂಡಿಕೆ ಮಾಡುತ್ತಿದ್ದಾರೆ. ಯಾರೋ ಹೇಳಿದ್ದು, ಅರೆಬರೆ ತಿಳಿದದ್ದು ಆಧರಿಸಿ ಹೂಡಿಕೆ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ವಾರನ್ ಬಫೆಟ್ ಬಹಳ ಹಿಂದೆಯೇ ಈ ರೀತಿಯ ಅಲ್ಪಜ್ಞಾನದ ಹೂಡಿಕೆ ನಿರ್ಧಾರಗಳ ಬಗ್ಗೆ ಎಚ್ಚರಿಸಿದ್ದಾರೆ.



ದೀರ್ಘಾವಧಿಯಲ್ಲಿ ಮಾಹಿತಿ ತಂತ್ರಜ್ಞಾನ (ಐ.ಟಿ.) ಕಂಪನಿಗಳ ಮೌಲ್ಯಮಾಪನ ಮಾಡುವುದು ಹೇಗೆ ಎನ್ನುವ ಅಂದಾಜು ಬಫೆಟ್ ಅವರಿಗೆ ಬಹಳ ಕಾಲ ತಿಳಿದಿರಲಿಲ್ಲ. ಅದನ್ನು ಅರ್ಥೈಸಿಕೊಳ್ಳುವ ತನಕ ಬಫೆಟ್ ಅವರ ಸಂಸ್ಥೆ ಐ.ಟಿ. ಕಂಪನಿಗಳಲ್ಲಿ ಹೂಡಿಕೆ ಮಾಡಿರಲಿಲ್ಲ. ಐ.ಟಿ. ಕಂಪನಿಗಳ ಬಗ್ಗೆ ಸ್ಪಷ್ಟತೆ ಸಿಕ್ಕ ಬಳಿಕವಷ್ಟೇ 2016ರಲ್ಲಿ ಬಫೆಟ್, ಆ್ಯಪಲ್ ಕಂಪನಿಯಲ್ಲಿ ಹಣ ತೊಡಗಿಸಿದರು.

**ಮಾಲೀಕನಂತೆ ನಿರ್ಧಾರ ತೆಗೆದುಕೊಳ್ಳಿ:** ಬಫೆಟ್ ಪ್ರಕಾರ ಒಂದು ಕಂಪನಿಯ ಷೇರು ಖರೀದಿಸುವಾಗ, 'ಆ ಕಂಪನಿಯನ್ನೇ ಖರೀದಿಸುವೆ' ಎನ್ನುವ ಮನಃಸ್ಥಿತಿ ಇರಬೇಕು. ಹೇಗೆ ಒಂದು ಕಂಪನಿಯನ್ನು ಖರೀದಿಸುವಾಗ ಅಳೆದು–ತೂಗಿ ನಿರ್ಧಾರ ಮಾಡುತ್ತೇವೆಯೋ ಹಾಗೆಯೇ ಒಂದು ಷೇರು ಖರೀದಿಸುವ ಮುನ್ನವೂ ಪೂರ್ವಾಪರ ಅರಿತು ಮುನ್ನಡೆಯಬೇಕು.

ಉದಾಹರಣೆಗೆ, ನನ್ನ ಬಳಿ ಒಂದು ಕಂಪನಿ ಇದ್ದು ಅದರ ಮೌಲ್ಯ ₹ 100 ಕೋಟಿ ಎಂದು ಹೇಳುತ್ತೇನೆ ಎಂದಿಟ್ಟುಕೊಳ್ಳಿ. ನೀವು ಸುಮ್ಮನೇ ನನ್ನ ಮಾತು ಒಪ್ಪುವಿರಾ? ಇಲ್ಲವಲ್ಲ? ಕಂಪನಿ ಹೇಗೆ ಪ್ರಗತಿ ಸಾಧಿಸಿದೆ, ಎಷ್ಟು ಲಾಭ ಮಾಡಿದೆ, ಎಷ್ಟು ಸಾಲ ಬಾಕಿ ಇದೆ, ಭವಿಷ್ಯದ ನೋಟ ಹೇಗಿದೆ ಎಂಬ ಅಂದಾಜು ಕೇಳುತ್ತೀರಿ ಅಲ್ಲವೇ?

**ಬೇರೆಯವರಿಗೆ ಆಸೆ ಹೆಚ್ಚಾದಾಗ ಭಯದಿಂದಿರಿ, ಬೇರೆಯವರು ಭಯಪಡುವಾಗ ಆಸೆಬುರುಕರಾಗಿರಿ:** ಷೇರು ಮಾರುಕಟ್ಟೆಯಲ್ಲಿ ಗೂಳಿ ಓಟವಿರುವಾಗ ಹೂಡಿಕೆದಾರರು ನಿರ್ದಿಷ್ಟ ಷೇರಿಗೆ ಅದರ ಮೌಲ್ಯಕ್ಕಿಂತ ಹೆಚ್ಚು ಬೆಲೆ ಕೊಟ್ಟು ಖರೀದಿಸಲು ತಯಾರಿರುತ್ತಾರೆ. ಷೇರುಪೇಟೆಯಲ್ಲಿ ಕುಸಿತ ಹೆಚ್ಚಾದಾಗ ದೊಡ್ಡ ಮೌಲ್ಯದ ಕಂಪನಿಗಳ ಷೇರುಗಳು ಕಡಿಮೆ ದರದಲ್ಲಿ ಸಿಗುತ್ತವೆ. ಆದರೆ ಹೂಡಿಕೆದಾರರು ಸೂಚ್ಯಂಕಗಳ ಕುಸಿತಕ್ಕೆ ಹೆದರಿ ಉತ್ತಮ ಕಂಪನಿಗಳ ಷೇರುಗಳು ಕಡಿಮೆ ಬೆಲೆಗೆ ಸಿಕ್ಕರೂ ಖರೀದಿಗೆ ಮುಂದಾಗುವುದಿಲ್ಲ.

ವಾರನ್ ಬಫೆಟ್ 2008ರ ಆರ್ಥಿಕ ಕುಸಿತದ ಸಂದರ್ಭದಲ್ಲಿ ಬ್ಯಾಂಕ್ ಆಫ್ ಅಮೆರಿಕ, ಗೋಲ್ಡ್‌ಮ್ಯಾನ್ ಸ್ಯಾಚ್ಸ್, ಜಿಇ, ಡೋ ಕಂಪನಿಗಳಲ್ಲಿ ಹೂಡಿಕೆ ಮಾಡಿ ನಂತರದಲ್ಲಿ ಉತ್ತಮ ಲಾಭ ಮಾಡಿಕೊಂಡರು. ಷೇರು ಮಾರುಕಟ್ಟೆಯಲ್ಲಿ ಅವಕಾಶಗಳ ಸದ್ಬಳಕೆಗೆ ನಾವು ಯಾವಾಗಲೂ ಸಿದ್ಧರಿರಬೇಕು ಎನ್ನುವುದು ಮೇಲಿನ ಮಾತಿನ ತಾತ್ಪರ್ಯ.

**ಸಾಲ ಮಾಡಿ ಷೇರು ಹೂಡಿಕೆ ಮಾಡಬೇಡಿ:** ಸಾಲ ಮಾಡಿ ಷೇರು ಹೂಡಿಕೆ ಮಾಡುವುದು ಅತ್ಯಂತ ಅಪಾಯಕಾರಿ ಎನ್ನುವುದು ಬಫೆಟ್ ನಿಲುವು. ಷೇರು ಮಾರುಕಟ್ಟೆ ಸೂಚ್ಯಂಕಗಳು ಎಷ್ಟು ವೇಗವಾಗಿ ಏರಿಳಿತ ಕಾಣುತ್ತವೆ ಎನ್ನುವುದನ್ನು ಅಂದಾಜು ಮಾಡುವುದು ಅಸಾಧ್ಯ. ಉದಾಹರಣೆಗೆ ನೀವು ₹ 50 ಸಾವಿರ ಸಾಲ ಮಾಡಿ ಪ್ರತಿ ಷೇರಿಗೆ ₹ 500 ಕೊಟ್ಟು ಕಂಪನಿಯೊಂದರ 100 ಷೇರುಗಳನ್ನು ಖರೀದಿಸಿದಿರಿ ಎಂದಿಟ್ಟುಕೊಳ್ಳಿ. ಆ ಷೇರಿನ ಬೆಲೆ ದಿಢೀರನೆ ₹ 350ಕ್ಕೆ ಕುಸಿದರೆ ನೀವು ಮಾಡಿದ್ದ ಹೂಡಿಕೆಯ ಮೌಲ್ಯ ₹ 35 ಸಾವಿರಕ್ಕೆ ಇಳಿಯುತ್ತದೆ. ಷೇರು ಮತ್ತೆ ₹ 500ರ ಗಡಿ ದಾಟಬೇಕಾದರೆ ಕೆಲ ಸಮಯ ಬೇಕಾಗಬಹುದು. ಹೀಗಿರುವಾಗ ಸಾಲ ಮಾಡಿ ಹೂಡಿಕೆ ಮಾಡಿದವನ ಸ್ಥಿತಿ ಅತ್ತ ದರಿ ಇತ್ತ ಪುಲಿ ಎನ್ನುವಂತಾಗುತ್ತದೆ.

# ಚಿನ್ನದ ದರ ₹ 222 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸೋಮವಾರ ಚಿನ್ನದ ದರ 10 ಗ್ರಾಂಗೆ ₹ 222ರಷ್ಟು ಇಳಿಕೆ ಆಗಿದ್ದು, ₹ 49,890ರಂತೆ ಮಾರಾಟವಾಗಿದೆ. ಜಾಗತಿಕ ಮಾರುಕಟ್ಟೆಗೆ ಅನುಗುಣವಾಗಿ ದೇಶಿ ಮಾರುಕಟ್ಟೆಯಲ್ಲಿಯೂ ಚಿನ್ನದ ದರ ಇಳಿಕೆ ಕಂಡಿದೆ ಎಂದು ವಿಶ್ಲೇಷಕರು ಹೇಳಿದ್ದಾರೆ.

# 'ಸುಸ್ಥಿರ ಚೇತರಿಕೆ ಸರ್ಕಾರದ ಗುರಿ'

ಮುಂಬೈ (ಪಿಟಿಐ): ಅರ್ಥ ವ್ಯವಸ್ಥೆಯ ಚೇತರಿಕೆಯು ಸುಸ್ಥಿರವಾಗಿ ಇರಬೇಕು ಎಂಬುದು ಸರ್ಕಾರದ ಬಯಕೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದರು. ಮೂಲಸೌಕರ್ಯ ನಿರ್ಮಾಣಕ್ಕೆ ಸಂಬಂಧಿಸಿದಂತೆ ಬಜೆಟ್‌ನಲ್ಲಿ ಇರುವ ಪ್ರಸ್ತಾವಗಳು ಹೂಡಿಕೆ ಹೆಚ್ಚಿಸಿ, ಆದಾಯ ಹೆಚ್ಚಿಸುವಂಥವು ಎಂದು ಅವರು ಪ್ರತಿಪಾದಿಸಿದರು.

### ಎಫ್‌ಐಎಚ್ ಹಾಕಿ ಪ್ರೊ ಲೀಗ್: ರಾಣಿ ರಾಂಪಾಲ್‌ಗೆ ವಿಶ್ರಾಂತಿ; ಸಂಗೀತ ಕುಮಾರಿ ಹೊಸಮುಖ

# ಭಾರತ ಮಹಿಳಾ ತಂಡಕ್ಕೆ ಸವಿತಾ ನಾಯಕಿ

**ನವದೆಹಲಿ (ಪಿಟಿಐ):** ಗೋಲ್‌ಕೀಪರ್ ಸವಿತಾ ಪೂನಿಯಾ ಇದೇ 26ರಂದು ಆರಂಭವಾಗಲಿರುವ ಎಫ್‌ಐಎಚ್ ಮಹಿಳೆಯರ ಹಾಕಿ ಪ್ರೊ ಲೀಗ್ ಟೂರ್ನಿಯಲ್ಲಿ ಭಾರತ ತಂಡವನ್ನು ಮುನ್ನಡೆಸುವರು.

22 ಮಂದಿಯನ್ನೊಳಗೊಂಡ ತಂಡವನ್ನು ಸೋಮವಾರ ಪ್ರಕಟಿಸಲಾಗಿದ್ದು ಗಾಯಗೊಂಡಿರುವ ರಾಣಿ ರಾಂಪಾಲ್ ಅವರಿಗೆ ವಿಶ್ರಾಂತಿ ನೀಡಲು ನಿರ್ಧರಿಸಲಾಗಿದೆ. ಸಂಗೀತ ಕುಮಾರಿ ಅವರನ್ನು ಮೊದಲ ಬಾರಿ ತಂಡಕ್ಕೆ ಕರೆಸಿಕೊಳ್ಳಲಾಗಿದೆ.

ಎಫ್‌ಐಎಚ್ ಹಾಕಿ ಪ್ರೊ ಲೀಗ್‌ನಲ್ಲಿ ಭಾರತಕ್ಕೆ ಇದು ಪದಾರ್ಪಣೆ ಆವೃತ್ತಿ. ಭುವನೇಶ್ವರದಲ್ಲಿ ನಡೆಯಲಿರುವ ಟೂರ್ನಿಯ ಎರಡು ಲೆಗ್‌ಗಳನ್ನು ಒಳಗೊಂಡ ಮೊದಲ ಹಣಾಹಣಿಯಲ್ಲಿ ಭಾರತ ತಂಡ ಸ್ಪೇನ್ ವಿರುದ್ಧ ಸೆಣಸಲಿದೆ. ಪಂದ್ಯಗಳು ಇದೇ 26 ಮತ್ತು 27ರಂದು ನಡೆಯಲಿವೆ.

ರಾಣಿ ರಾಂಪಾಲ್ ಬೆಂಗಳೂರಿನ ಭಾರತ ಕ್ರೀಡಾ ಪ್ರಾಧಿಕಾರದಲ್ಲಿದ್ದಾರೆ. ಕಳೆದ ತಿಂಗಳು ಮಸ್ಕತ್‌ನಲ್ಲಿ ನಡೆದ ಏಷ್ಯಾ ಕಪ್ ಟೂರ್ನಿಯಲ್ಲೂ ತಂಡವನ್ನು ಸವಿತಾ ಮುನ್ನಡೆಸಿದ್ದರು. ಟೂರ್ನಿಯಲ್ಲಿ ಭಾರತ ಮೂರನೇ ಸ್ಥಾನ ಗಳಿಸಿತ್ತು. ಪ್ರೊ ಲೀಗ್‌ನಲ್ಲೂ ಅವರನ್ನೇ ಮುಂದುವರಿಸಲು ನಿರ್ಧರಿಸಲಾಗಿದ್ದು ದೀಪ್ ಗ್ರೇಸ್ ಎಕ್ಕಾ ಅವರಿಗೆ ಉಪನಾಯಕಿಯ ಜವಾಬ್ದಾರಿ ನೀಡಲಾಗಿದೆ.


ತಂಡಕ್ಕೆ ಆಯ್ಕೆಯಾದ ಆಟಗಾರ್ತಿಯರು –ಹಾಕಿ ಇಂಡಿಯಾ ಚಿತ್ರ

**ಒಮನ್‌ನಿಂದ ಮರಳಿದ ನಂತರ ಉತ್ತಮ ಅಭ್ಯಾಸಕ್ಕೆ ಎರಡು ವಾರಗಳು ಲಭಿಸಿವೆ. ಹೀಗಾಗಿ ಆಟಗಾರ್ತಿಯರು ಹುರುಪಿನಲ್ಲಿದ್ದಾರೆ. ಸ್ಪೇನ್ ಎದುರಿಸಲು ಕಾತರರಾಗಿದ್ದಾರೆ.**
**ಜಮೇಕ್ ಶಾಪ್‌ಮನ್**
ಭಾರತ ತಂಡದ ಕೋಚ್

ತಂಡ: ಗೋಲ್‌ಕೀಪರ್‌ಗಳು: ಸವಿತಾ (ನಾಯಕಿ), ಬಿಚ್ಚು ದೇವಿ ಖಾರಿಬಂ, ರಜನಿ ಎತಿಮರ್ಪು; ಡಿಫೆಂಡರ್‌ಗಳು: ದೀಪ್ ಗ್ರೇಸ್ ಎಕ್ಕ (ಉಪನಾಯಕಿ), ಗುರ್‌ಜೀತ್ ಕೌರ್, ನಿಕ್ಕಿ ಪ್ರಧಾನ್, ಉದಿತಾ, ಇಶಿಕಾ ಚೌಧರಿ; ಮಿಡ್‌ಫೀಲ್ಡರ್ಸ್: ನಿಶಾ, ಸಲೀಮಾ ಟೆಟೆ, ಸುಶೀಲಾ ಚಾನು, ಜ್ಯೋತಿ, ಮೋನಿಕಾ, ನೇಹಾ, ನವಜೋತ್ ಕೌರ್, ನಮಿತಾ ಟೊಪ್ಪೊ; ಫಾರ್ವರ್ಡರ್‌ಗಳು: ವಂದನಾ ಕಟಾರಿಯ, ಶರ್ಮಿಳ ದೇವಿ, ನವನೀತ್ ಕೌರ್, ಲಾಲ್‌ರೆಮ್ಸಿಯಾಮಿ, ಸಂಗೀತ ಕುಮಾರಿ, ರಾಜ್‌ವಿಂದರ್ ಕೌರ್; ಕಾಯ್ದಿರಿಸಿದ ಆಟಗಾರ್ತಿಯರು: ರಶ್ಮಿತ ಮಿನೆಜ್, ಅಕ್ಷತಾ ಅಬಾಸೊ ಢೆಕಲೆ, ಸೋನಿಕ, ಮರಿಯಾನ ಕುಜುರ್, ಐಶ್ವರ್ಯ ರಾಜೇಶ್ ಚವಾಣ್.

ಸವಿತಾ ಅವರೊಂದಿಗೆ ರಜನಿ ಎತಿಮರ್ಪು ಮತ್ತು ಬಿಚ್ಚುದೇವಿ ಖಾರಿಬಂ ಅವರೂ ಗೋಲ್‌ಕೀಪರ್‌ಗಳ ಕಾರ್ಯನಿರ್ವಹಿಸಲು ಸಜ್ಜಾಗಿದ್ದಾರೆ. ಜಾರ್ಖಂಡ್‌ನ ಯುವ ಆಟಗಾರ್ತಿ, ಸ್ಟ್ರೈಕರ್ ಸಂಗೀತ ಹೊಸಮುಖ. ಏಷ್ಯಾಕಪ್ ಟೂರ್ನಿಗೆ ಆಯ್ಕೆ ಮಾಡಿದ ತಂಡದಲ್ಲಿದ್ದ ನಾಲ್ವರು ಹೊಸಬರನ್ನೂ ಉಳಿಸಿಕೊಳ್ಳಲಾಗಿದೆ. ಬಿಚ್ಚುದೇವಿ, ಡಿಫೆಂಡರ್ ಇಶಿಕಾ ಚೌಧರಿ, ಮಿಡ್‌ಫೀಲ್ಡರ್ ನಮಿತಾ ಟೊಪ್ಪೊ ಮತ್ತು ಸ್ಟ್ರೈಕರ್ ರಾಜ್‌ವಿಂದರ್ ಕೌರ್ ಅವರನ್ನು ಹೆಚ್ಚುವರಿಯಾಗಿ ಸೇರಿಸಿಕೊಳ್ಳಲಾಗಿದೆ. ಕಾಯ್ದಿರಿಸಿದ ಆಟಗಾರ್ತಿಯರಾಗಿ ಐವರನ್ನು ಆಯ್ಕೆ ಮಾಡಲಾಗಿದೆ.

# ಸ್ಪಷ್ಟತೆಗೆ ವೃದ್ಧಿಮಾನ್ ಅರ್ಹರು

### ವಿಕೆಟ್ ಕೀಪರ್ ಹೇಳಿಕೆಯಿಂದ ನೋವಾಗಿಲ್ಲ: ದ್ರಾವಿಡ್


ವೃದ್ಧಿಮಾನ್ ಸಹಾ –ಪಿಟಿಐ ಚಿತ್ರ


ರಾಹುಲ್ ದ್ರಾವಿಡ್

**ಕೋಲ್ಕತ್ತ (ಪಿಟಿಐ):** ವಿಕೆಟ್ ಕೀಪರ್ ಬ್ಯಾಟರ್ ವೃದ್ಧಿಮಾನ್ ಸಹಾ ಭಾರತ ಕ್ರಿಕೆಟ್‌ಗೆ ನೀಡಿರುವ ಕೊಡುಗೆ ಮತ್ತು ಅವರ ಸಾಧನೆಯ ಬಗ್ಗೆ ಗೌರವವಿದೆ ಎಂದು ಹೇಳಿರುವ ಭಾರತ ತಂಡದ ಕೋಚ್ ರಾಹುಲ್ ದ್ರಾವಿಡ್ ಅವರು ವೃದ್ಧಿಮಾನ್ ಸಹಾ ಸ್ಪಷ್ಟತೆಗೆ ಅರ್ಹರಿದ್ದಾರೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಕಳೆದ ತಿಂಗಳು ದಕ್ಷಿಣ ಆಫ್ರಿಕಾ ಪ್ರವಾಸದ ನಂತರ ನಡೆದ ಮಾತುಕತೆಯ ನಡುವೆ ಕ್ರಿಕೆಟ್‌ನಿಂದ ನಿವೃತ್ತಿ ಪಡೆಯುವಂತೆ ದ್ರಾವಿಡ್ ತಮಗೆ ಸೂಚಿಸಿದ್ದರು ಎಂದು ಹೇಳಿ ಸಹಾ ಭಾನುವಾರ ವಿವಾದ ಸೃಷ್ಟಿಸಿದ್ದರು. ವೆಸ್ಟ್ ಇಂಡೀಸ್ ಎದುರಿನ ಟ್ವೆಂಟಿ20 ಸರಣಿಯ ಕೊನೆಯ ಪಂದ್ಯದ ನಂತರ ಈ ಕುರಿತ ಪ್ರಶ್ನೆಗೆ ದ್ರಾವಿಡ್ ಉತ್ತರಿಸಿದರು.

‘ಸಹಾ ಹೇಳಿಕೆಯಿಂದ ನನಗೆ ಬೇಸರವಾಗಲಿಲ್ಲ. ತಂಡದಿಂದ ಸ್ಥಾನ ಕಳೆದುಕೊಂಡಾಗ ಬೇಸರವಾಗುವುದು ಸಹಜ. ವೃದ್ಧಿಮಾನ್ ಸಹಾ ಕೂಡ ಅದೇ ಭಾವನೆಯಲ್ಲಿ ಮಾತನಾಡಿದ್ದಾರೆ. ಬೇಸರ ತೋಡಿಕೊಳ್ಳಲು ಅವರಿಗೆ ಅವಕಾಶವಿದೆ’ ಎಂದು ದ್ರಾವಿಡ್ ಹೇಳಿದರು.

ಸತತ ಫಾರ್ಮ್ ಕಳೆದುಕೊಂಡಿರುವ ವೃದ್ಧಿಮಾನ್ ಅವರ ಅಂತರರಾಷ್ಟ್ರೀಯ ಕ್ರಿಕೆಟ್ ಜೀವನಕ್ಕೆ ಈಚೆಗೆ ತೆರೆ ಬಿದ್ದಂತಾಗಿದೆ. ಈ ಹಿನ್ನೆಲೆಯಲ್ಲಿ ಅವರು ದ್ರಾವಿಡ್ ಜೊತೆಗಿನ ಸಂಭಾಷಣೆಯ ವಿಷಯವನ್ನು ಬಹಿರಂಗ ಮಾಡಿದ್ದರು. ಆದರೆ ಈ ಕುರಿತು ಸ್ಪಷ್ಟನೆ ನೀಡಿರುವ ದ್ರಾವಿಡ್ ‘ಸಹಾ ಸದ್ಯ ಯಾವ ಪರಿಸ್ಥಿತಿಯಲ್ಲಿದ್ದಾರೆ ಎಂಬುದನ್ನು ನೆನಪಿಸುವುದಷ್ಟೇ ನನ್ನ ಮಾತಿನ ಉದ್ದೇಶವಾಗಿತ್ತು. ಅದಕ್ಕೆ ಸಂಬಂಧಿಸಿ ಹೇಳಿಕೆ ನೀಡಲು ಅವರು ಅರ್ಹರು. ಆಟಗಾರರಿಗೆ ಇಷ್ಟವಿರಲಿ, ಇಲ್ಲದಿರಲಿ ಇಂಥ ಸಂಭಾಷಣೆಗಳನ್ನು ನಿರಂತರವಾಗಿ ನಡೆಸಲು ಇಚ್ಛಿಸುತ್ತೇನೆ’ ಎಂದಿದ್ದಾರೆ.

### ಸಹಾ ಟ್ವೀಟ್: ಬಿಸಿಸಿಐ ವಿಚಾರಣೆ

**ಮುಂಬೈ (ಪಿಟಿಐ):** ಸಂದರ್ಶನ ನೀಡಲು ಒಪ್ಪದಿದ್ದಕ್ಕಾಗಿ ಪತ್ರಕರ್ತರೊಬ್ಬರು ಬೆದರಿಕೆ ಹಾಕಿದ್ದಾರೆ ಎಂದು ಆರೋಪಿಸಿರುವ ಕುರಿತು ವಿಕೆಟ್ ಕೀಪರ್-ಬ್ಯಾಟರ್ ವೃದ್ಧಿಮಾನ್ ಸಹಾ ಅವರನ್ನು ಬಿಸಿಸಿಐ ವಿಚಾರಣೆಗೆ ಒಳಪಡಿಸಲಿದೆ.

ತನಗೆ ಸಂದರ್ಶನ ನೀಡಲು ನಿರಾಕರಿಸಿದ ನಂತರ ‘ಗೌರವಾನ್ವಿತ’ ಪತ್ರಕರ್ತರೊಬ್ಬರು ಜೋರುಧ್ವನಿಯಲ್ಲಿ ಬೆದರಿಕೆ ಒಡ್ಡಿದ್ದರು ಎಂದು ಸಹಾ ಟ್ವಿಟರ್‌ನಲ್ಲಿ ಆರೋಪಿಸಿದ್ದಾರೆ.

ಅವರ ಟ್ವೀಟ್‌ನ ಬಳಿಕ, ಭಾರತ ತಂಡದ ಮಾಜಿ ಮುಖ್ಯ ಕೋಚ್ ರವಿಶಾಸ್ತ್ರಿ ಮತ್ತು ಮಾಜಿ ಆಟಗಾರರಾದ ವೀರೇಂದ್ರ ಸೆಹವಾಗ್ ಮತ್ತು ಹರ್ಭಜನ್ ಸಿಂಗ್ ಅವರು ಸಹಾ ಅವರಿಗೆ ಬೆಂಬಲ ವ್ಯಕ್ತಪಡಿಸಿ, ಪತ್ರಕರ್ತರ ಹೆಸರನ್ನು ಬಹಿರಂಗಪಡಿಸಲು ಹೇಳಿದ್ದರು.

‘ನಾವು ವೃದ್ಧಿಮಾನ್ ಅವರ ಟ್ವೀಟ್ ಹಿಂದಿರುವ ವಾಸ್ತವ ಏನು ಎಂದು ವಿಚಾರಿಸುತ್ತೇವೆ. ಅವರಿಗೆ ಬೆದರಿಕೆ ಇದೆಯೇ ಮತ್ತು ಅವರ ಟ್ವೀಟ್‌ನ ಹಿನ್ನೆಲೆ ಮತ್ತು ಸಂದರ್ಭವನ್ನು ನಾವು ತಿಳಿದುಕೊಳ್ಳಬೇಕು. ನಾನು ಹೆಚ್ಚೇನೂ ಹೇಳಲಾರೆ. ಕಾರ್ಯದರ್ಶಿ (ಜಯ್ ಶಾ) ಅವರು ವೃದ್ಧಿಮಾನ್ ಅವರೊಂದಿಗೆ ಮಾತನಾಡಲಿದ್ದಾರೆ’ ಎಂದು ಬಿಸಿಸಿಐ ಖಜಾಂಚಿ ಅರುಣ್ ಧುಮಾಲ್ ಸೋಮವಾರ ಹೇಳಿದ್ದಾರೆ.

37 ವರ್ಷದ ಸಹಾ ಭಾರತಕ್ಕಾಗಿ 40 ಟೆಸ್ಟ್ ಪಂದ್ಯಗಳನ್ನು ಆಡಿದ್ದು ಶ್ರೀಲಂಕಾ ಎದುರಿನ ಸರಣಿಗೆ ಪ್ರಕಟಿಸಿರುವ ತಂಡದಿಂದ ಅವರನ್ನು ಕೈಬಿಡಲಾಗಿದೆ. ರಣಜಿ ಟ್ರೋಫಿ ಟೂರ್ನಿಯಲ್ಲಿ ಆಡದೇ ಇರಲು ಅವರೇ ನಿರ್ಧರಿಸಿದ್ದಾರೆ.

‘ವಿಕೆಟ್ ಕೀಪರ್ ರಿಷಭ್ ಪಂತ್ ಈಗಾಗಲೇ ತಮ್ಮ ಸಾಮರ್ಥ್ಯ ಸಾಬೀತು ಮಾಡಿದ್ದಾರೆ. ಎಲ್ಲ ಮಾದರಿಯಲ್ಲೂ ಅತ್ಯುತ್ತಮ ವಿಕೆಟ್ ಕೀಪರ್ ಎಂದೆನಿಸಿಕೊಂಡಿದ್ದಾರೆ. ಆದ್ದರಿಂದ ವೃದ್ಧಿಮಾನ್‌ಗೆ ಅವಕಾಶಗಳು ಸಿಗುವುದು ಕಷ್ಟ ಎಂಬುದು ಸ್ಪಷ್ಟ. ಇದೇ ವೇಳೆ ಕೋನಾ ಭರತ್ ಕೂಡ ಭರವಸೆ ಮೂಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ನಾನು ಸಲಹೆ ನೀಡಿದ್ದೆ’ ಎಂದು ರಾಹುಲ್ ತಿಳಿಸಿದರು.

### ಐಸಿಸಿ ಟ್ವೆಂಟಿ20 ರ‍್ಯಾಂಕಿಂಗ್: ರಾಹುಲ್‌ಗೆ 4ನೇ ಸ್ಥಾನ

# ಅಗ್ರಸ್ಥಾನಕ್ಕೇರಿದ ಭಾರತ

**ದುಬೈ (ಪಿಟಿಐ):** ಭಾರತ ತಂಡ ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ (ಐಸಿಸಿ) ಸೋಮವಾರ ಬಿಡುಗಡೆ ಮಾಡಿರುವ ಟ್ವೆಂಟಿ20 ರ‍್ಯಾಂಕಿಂಗ್‌ನಲ್ಲಿ ಅಗ್ರ ಸ್ಥಾನ ಗಳಿಸಿದೆ.

ರ‍್ಯಾಂಕಿಂಗ್‌ಗೆ ಪರಿಗಣಿಸಿರುವ ಅವಧಿಯಲ್ಲಿ ಭಾರತ ಮತ್ತು ಇಂಗ್ಲೆಂಡ್ 269 ರೇಟಿಂಗ್ ಹೊಂದಿವೆ. ಆದರೆ ಭಾರತ (10,484) ಇಂಗ್ಲೆಂಡ್‌ಗಿಂತ 10 ಪಾಯಿಂಟ್‌ಗಳನ್ನು ಹೆಚ್ಚು ಗಳಿಸಿದೆ. ಹೀಗಾಗಿ ಅಗ್ರಸ್ಥಾನ ತನ್ನದಾಗಿಸಿಕೊಂಡಿದೆ. ಭಾರತ ಕೊನೆಯದಾಗಿ 2016ರಲ್ಲಿ ಅಗ್ರ ಸ್ಥಾನ ಗಳಿಸಿತ್ತು. ಅದನ್ನು ಕೇವಲ ಎರಡು ತಿಂಗಳಲ್ಲಿ ಕಳೆದುಕೊಂಡಿತ್ತು.

ವೆಸ್ಟ್ ಇಂಡೀಸ್ ಎದುರು ಕೋಲ್ಕತ್ತದಲ್ಲಿ ನಡೆದ ಮೂರು ಪಂದ್ಯಗಳ ಸರಣಿಯನ್ನು ರೋಹಿತ್ ಶರ್ಮಾ ಬಳಗ ಕ್ಲೀನ್ ಸ್ವೀಪ್ ಮಾಡಿಕೊಂಡಿತ್ತು. ಭಾನುವಾರ ರಾತ್ರಿ ನಡೆದ ಕೊನೆಯ ಪಂದ್ಯದಲ್ಲಿ 17 ರನ್‌ಗಳಿಂದ ತಂಡ ಜಯ ಗಳಿಸಿತ್ತು.

ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ ನೀಡಿರುವ ಪ್ರಕಟಣೆ ಪ್ರಕಾರ ಪಾಕಿಸ್ತಾನ, ನ್ಯೂಜಿಲೆಂಡ್ ಮತ್ತು ದಕ್ಷಿಣ ಆಫ್ರಿಕಾ ಅಗ್ರ ಐದರಲ್ಲಿ ಸ್ಥಾನ ಗಳಿಸಿವೆ. ಈ ತಂಡಗಳು ಕ್ರಮವಾಗಿ 266, 255 ಮತ್ತು 253 ರೇಟಿಂಗ್ ಪಾಯಿಂಟ್ ಹೊಂದಿವೆ.


ವೆಸ್ಟ್ ಇಂಡೀಸ್ ಎದುರಿನ ಟ್ವೆಂಟಿ20 ಸರಣಿಯಲ್ಲಿ ಜಯ ಗಳಿಸಿದ ಭಾರತ ತಂಡದ ಸಂಭ್ರಮ –ಎಎಫ್‌ಪಿ ಚಿತ್ರ

ಹಾಲಿ ವಿಶ್ವ ಚಾಂಪಿಯನ್ ಆಸ್ಟ್ರೇಲಿಯಾ 249 ಪಾಯಿಂಟ್‌ಗಳೊಂದಿಗೆ ಆರನೇ ಸ್ಥಾನದಲ್ಲಿದೆ. ಶ್ರೀಲಂಕಾ ಎದುರು ಭಾನುವಾರ ಮುಕ್ತಾಯಗೊಂಡ ಸರಣಿಯಲ್ಲಿ ಆಸ್ಟ್ರೇಲಿಯಾ 4–1ರಲ್ಲಿ ಜಯ ಗಳಿಸಿತ್ತು.

ವೆಸ್ಟ್ ಇಂಡೀಸ್ ಏಳನೇ ಸ್ಥಾನದಲ್ಲಿದ್ದು ಅಫ್ಗಾನಿಸ್ತಾನ, ಶ್ರೀಲಂಕಾ ಮತ್ತು ಬಾಂಗ್ಲಾದೇಶ ಕ್ರಮವಾಗಿ ಎಂಟು, ಒಂಬತ್ತು ಮತ್ತು 10ರಲ್ಲಿವೆ.

ಬ್ಯಾಟರ್‌ಗಳ ಪೈಕಿ ಭಾರತದ ಕೆ.ಎಲ್.ರಾಹುಲ್ ನಾಲ್ಕನೇ ಸ್ಥಾನದಲ್ಲೂ ವಿರಾಟ್ ಕೊಹ್ಲಿ 10ನೇ ಸ್ಥಾನದಲ್ಲೂ ಇದ್ದಾರೆ. ಉಳಿದ ಯಾರಿಗೂ ಅಗ್ರ ಹತ್ತರಲ್ಲಿ ಸ್ಥಾನ ಪಡೆದುಕೊಳ್ಳಲು ಆಗಲಿಲ್ಲ.

## ಸಿ.ಕೆ.ನಾಯ್ಡು ಟ್ರೋಫಿ ಟೂರ್ನಿ: ಬಿಸಿಸಿಐ ಸಭೆಯಲ್ಲಿ ಚರ್ಚೆ

**ನವದೆಹಲಿ (ಪಿಟಿಐ):** ಸಿ.ಕೆ.ನಾಯ್ಡು ಟ್ರೋಫಿ ಮತ್ತು ಸೀನಿಯರ್ ಮಹಿಳೆಯರ ಟ್ವೆಂಟಿ20 ಕ್ರಿಕೆಟ್ ಟೂರ್ನಿಯನ್ನು ಪುನರಾರಂಭಿಸುವ ಕುರಿತು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಸದ್ಯದಲ್ಲೇ ಅಂತಿಮ ತೀರ್ಮಾನ ಕೈಗೊಳ್ಳಲಿದೆ.

ಮಾರ್ಚ್ ಎರಡರಂದು ಬಿಸಿಸಿಐ ಅಪೆಕ್ಸ್ ಸಮಿತಿ ಸಮಿತಿ ಸಭೆ ನಡೆಯಲಿದ್ದು ಅದರಲ್ಲಿ ಈ ಕುರಿತು ತರ್ಮಾನ ಕೈಗೊಳ್ಳುವ ಸಾಧ್ಯತೆ ಇದೆ. ಈ ಟೂರ್ನಿಗಳನ್ನು ಕೊವಿಡ್ –19ರ ಕಾರಣದಿಂದ ಕಳೆದ ತಿಂಗಳಲ್ಲಿ ಮುಂದೂಡಲಾಗಿತ್ತು. 2023ರ ಏಕದಿನ ವಿಶ್ವಕಪ್ ಟೂರ್ನಿ ಆಯೋಜನಗೆ ಸಂಬಂಧಿಸಿ ಸ್ಥಳೀಯ ಆಯೋಜನಾ ಸಮಿತಿ ರಚನೆಯೂ ಅಪೆಕ್ಸ್ ಸಮಿತಿ ಸಭೆಯಲ್ಲಿ ನಡೆಯುವ ಸಾಧ್ಯತೆ ಇದೆ.

ಸಭೆಯಲ್ಲಿ 14 ವಿಷಯಗಳು ಚರ್ಚೆಗೆ ಬರಲಿದ್ದು ಗೇಮ್ ಡೆವಲಪ್‌ಮೆಂಟ್‌ಗೆ ಸಂಬಂಧಿಸಿದ ಪ್ರಧಾನ ವ್ಯವಸ್ಥಾಪಕರ ನೇಮಕಾತಿಯೂ ಇದೇ ಸಂದರ್ಭದಲ್ಲಿ ನಡೆಯಲಿದೆ. ಈ ಹುದ್ದೆಯಲ್ಲಿದ್ದ ಧೀರಜ್ ಮಲ್ಹೋತ್ರಾ ಕಳೆದ ತಿಂಗಳಲ್ಲಿ ಸ್ಥಾನ ತೊರೆದಿದ್ದರು. ಭಾರತ ತಂಡದ ಪ್ರಾಯೋಜಕತ್ವ ವಹಿಸುತ್ತಿರುವ ಶೈಕ್ಷಣಿಕ ಆ್ಯಪ್ ಬೈಜೂಸ್ ಜೊತೆಗಿನ ಒಪ್ಪಂದ ಮಾರ್ಚ್ 31ಕ್ಕೆ ಮುಗಿಯಲಿದೆ. ಈ ಕುರಿತ ಚರ್ಚೆಯೂ ನಡೆಯಲಿದೆ.

ಜೂನ್‌ನಲ್ಲಿ ದಕ್ಷಿಣ ಆಫ್ರಿಕಾ ತಂಡ ಭಾರತ ಪ್ರವಾಸ ಕೈಗೊಳ್ಳಲಿದ್ದು ಟ್ವೆಂಟಿ20 ಸರಣಿಯ ಐದು ಪಂದ್ಯಗಳನ್ನು ಎಲ್ಲೆಲ್ಲಿ ನಡೆಸಬೇಕು ಎಂಬ ಕುರಿತ ಚರ್ಚೆಯೂ ಸಭೆಯಲ್ಲಿ ನಡೆಯಲಿದೆ.

### ಐಎಸ್‌ಎಲ್: ಮಿಂಚಿದ ಕ್ಲೀಟನ್, ಡ್ಯಾನಿಷ್ ಫಾರೂಕ್

# ಬಿಎಫ್‌ಸಿಗೆ ಭರ್ಜರಿ ಗೆಲುವು

**ಬ್ಯಾಂಬೊಲಿಮ್:** ಡ್ಯಾನಿಷ್ ಫಾರೂಕ್ ಮತ್ತು ಕ್ಲೀಟನ್ ಸಿಲ್ವಾ ಇಲ್ಲಿನ ಅಥ್ಲೆಟಿಕ್ ಕ್ರೀಡಾಂಗಣದಲ್ಲಿ ಸೋಮವಾರ ರಾತ್ರಿ ಮಿಂಚಿನ ಆಟವಾಡಿದರು. ಅವರು ತಂದುಕೊಟ್ಟ ಎರಡು ಗೋಲುಗಳ ನೆರವಿನಿಂದ ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ಅಮೋಘ ಜಯ ಸಾಧಿಸಿತು.

ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಬೆಂಗಳೂರು ಎಫ್‌ಸಿ ಒಡಿಶಾ ಎಫ್‌ಸಿಯನ್ನು 2–1ರಿಂದ ಮಣಿಸಿತು. ಈ ಜಯದೊಂದಿಗೆ ತಂಡದ ಸೆಮಿಫೈನಲ್ ಆಸೆ ಜೀವಂತವಾಗಿ ಉಳಿದಿದೆ. ತಂಡಕ್ಕೆ ಇನ್ನು ಎರಡು ಪಂದ್ಯಗಳು ಉಳಿದಿದ್ದು ಅವೆರಡೂ ಪಂದ್ಯಗಳನ್ನು ಗೆದ್ದು, ಅಗ್ರ ನಾಲ್ಕರಲ್ಲಿರುವ ತಂಡಗಳು ಸೋತರೆ ಬಿಎಫ್‌ಸಿ ಕನಸು ನನಸಾಗಲಿದೆ.

ಸೋಮವಾರದ ಪಂದ್ಯದ ಎಂಟನೇ ನಿಮಿಷದಲ್ಲೇ ಒಡಿಶಾ ಗೋಲು ಗಳಿಸಿ ಮುನ್ನುಗ್ಗಿತು. ನಂದಾ ತಂದುಕೊಟ್ಟ ಗೋಲು ತಂಡದಲ್ಲಿ ಸಂಭ್ರಮ ಮೂಡಿಸಿತು. ಆದರೆ 31ನೇ ನಿಮಿಷದಲ್ಲಿ ಡ್ಯಾನಿಷ್ ಗಳಿಸಿದ ಗೋಲಿನ ಮೂಲಕ ಬಿಎಫ್‌ಸಿ ಸಮಬಲ ಸಾಧಿಸಿತು.

ದ್ವಿತೀಯಾರ್ಧದಲ್ಲಿ ಎದುರಾಳಿ ತಂಡದ ಮೇಲೆ ಸತತವಾಗಿ ಒತ್ತಡ ಹೇರುವಲ್ಲಿ ಬಿಎಫ್‌ಸಿ ಯಶಸ್ವಿಯಾಯಿತು. ಇದರ ಪರಿಣಾಮವಾಗಿ 49ನೇ ನಿಮಿಷದಲ್ಲಿ ತಂಡಕ್ಕೆ ಪೆನಾಲ್ಟಿ ಅವಕಾಶ ಲಭಿಸಿತು. ಉದಾಂತ ಸಿಂಗ್ ಅವರನ್ನು ಕೆಳಗೆ ಬೀಳಿಸಿ ಲಾಲ್‌ರುವತ್ತಾರ ಪ್ರಮಾದ ಎಸಗಿದರು. ಕ್ಲೀಟನ್ ಸಿಲ್ವಾ ಚೆಂಡನ್ನು ಗುರಿ ಸೇರಿಸಿದರು.


ಗೋಲು ಗಳಿಸಿದ ಡ್ಯಾನಿಷ್ ಅವರನ್ನು ಸಹ ಆಟಗಾರರು ಅಭಿನಂದಿಸಿದರು

**ಮುಂಬೈಗೆ ಈಸ್ಟ್ ಬೆಂಗಾಲ್ ಸವಾಲು:** ಫತೋರ್ಡದಲ್ಲಿ ಮಂಗಳವಾರ ನಡೆಯಲಿರುವ ಪಂದ್ಯದಲ್ಲಿ ಮುಂಬೈ ಸಿಟಿ ಎಫ್‌ಸಿ ತಂಡ ಎಸ್‌ಸಿ ಈಸ್ಟ್ ಬೆಂಗಾಲ್ ವಿರುದ್ಧ ಸೆಣಸಲಿದೆ. ಸೆಮಿಫೈನಲ್ ಮೇಲೆ ಕಣ್ಣಿಟ್ಟಿರುವ ಮುಂಬೈ ಸಿಟಿ ಆ ಕನಸು ನನಸಾಗಬೇಕಾದರೆ ಈ ಪಂದ್ಯದಲ್ಲಿ ಜಯ ಗಳಿಸಬೇಕು.

ಪಾಯಿಂಟ್ ಪಟ್ಟಿಯ ಕೊನೆಯಲ್ಲಿರುವ ಈಸ್ಟ್ ಬೆಂಗಾಲ್ ಮೇಲೆ ಪಂದ್ಯದ ಫಲಿತಾಂಶ ಪರಿಣಾಮ ಬೀರುವುದಿಲ್ಲ. ಆದರೂ ಗೌರವ ಉಳಿಸಿಕೊಳ್ಳುವುದಕ್ಕಾಗಿ ಆ ತಂಡ ಕೂಡ ಜಯದ ನಿರೀಕ್ಷೆಯೊಂದಿಗೆ ಕಣಕ್ಕೆ ಇಳಿಯಲಿದೆ.

**ಇಂದಿನ ಪಂದ್ಯ:** ಮುಂಬೈ ಸಿಟಿ ಎಫ್‌ಸಿ–ಎಸ್‌ಸಿ ಈಸ್ಟ್ ಬೆಂಗಾಲ್
**ಆರಂಭ:** ರಾತ್ರಿ 7.30
**ನೇರ ಪ್ರಸಾರ:** ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

### ಭಾರತ ತಂಡದ ವಿರುದ್ಧ ಟಿ20 ಸರಣಿ

## ಶ್ರೀಲಂಕಾಕ್ಕೆ ದಸುನ್ ನಾಯಕ

**ಕೊಲಂಬೊ (ಪಿಟಿಐ):** ಭಾರತದ ಎದುರಿನ ಮೂರು ಪಂದ್ಯಗಳ ಟಿ20 ಸರಣಿಗೆ ಶ್ರೀಲಂಕಾ ತಂಡವನ್ನು ಸೋಮವಾರ ಪ್ರಕಟಿಸಲಾಗಿದ್ದು, ಆಫ್‌ಸ್ಪಿನ್ನರ್ ಆಶಿಯನ್ ಡೇನಿಯಲ್ ಮೊದಲ ಬಾರಿಗೆ ಸ್ಥಾನ ಗಳಿಸಿದ್ದಾರೆ.

ಆಲ್‌ರೌಂಡರ್ ದಸುನ್ ಶನಕ ಅವರು ನಾಯಕರಾಗಿದ್ದಾರೆ.

ಭಾರತದ ಎದುರಿನ ಟಿ20 ಸರಣಿಯ ಮೊದಲ ಪಂದ್ಯವು ಫೆಬ್ರುವರಿ 24ರಂದು ಲಖನೌನಲ್ಲಿ ನಡೆಯಲಿದೆ. ಉಳಿದ ಎರಡು ಪಂದ್ಯಗಳು 26 ಮತ್ತು 27ರಂದು ಧರ್ಮಶಾಲಾದಲ್ಲಿ ನಿಗದಿಯಾಗಿವೆ.

ಶ್ರೀಲಂಕಾ ತಂಡ: ದಸುನ್ ಶನಕ (ನಾಯಕ), ಪಥುಮ್ ನಿಸ್ಸಾಂಕ, ಕುಶಾಲ್ ಮೆಂಡಿಸ್, ಚರಿತ್ ಅಸಲಂಕ (ಉಪ ನಾಯಕ), ದಿನೇಶ್ ಚಾಂಡಿಮಲ್, ಧನುಷ್ಕ ಗುಣತಿಲಕ, ಕಮಿಲ್ ಮಿಶಾರ, ಜನಿತ್ ಲಿಯಾನಗೆ, ವನಿಂದು ಹಸರಂಗ, ಚಾಮಿಕ ಕರುಣಾರತ್ನೆ, ದುಷ್ಮಂತ ಚಮೀರ, ಲಹಿರು ಕುಮಾರ, ಬಿನುರಾ ಫರ್ನಾಂಡೊ, ಶಿರನ್ ಫರ್ನಾಂಡೊ, ಮಹೇಶ್ ತೀಕ್ಷಣ, ಜೆಫರಿ ವಂಡರ್ಸೆ, ಪ್ರವೀಣ್ ಜಯ ವಿಕ್ರಮ, ಆಶಿಯನ್ ಡೇನಿಯಲ್.


ದಸುನ್ ಶನಕ

## ಪಿವಿಎಲ್: ಸೆಮಿಗೆ ಕ್ಯಾಲಿಕಟ್ ಹೀರೋಸ್

**ಹೈದರಾಬಾದ್:** ಕ್ಯಾಲಿಕಟ್ ಹೀರೋಸ್ ತಂಡವು ಹೈದರಾಬಾದ್ ಬ್ಲ್ಯಾಕ್ ಹಾಕ್ಸ್ ಎದುರು ಭರ್ಜರಿ ಜಯ ಗಳಿಸಿ ಪ್ರೈಮ್ ವಾಲಿಬಾಲ್ ಲೀಗ್ (ಪಿವಿಎಲ್) ಟೂರ್ನಿಯ ಸೆಮಿಫೈನಲ್‌ಗೆ ಲಗ್ಗೆಯಿಟ್ಟಿತು.

ಗಚ್ಚಿಬೌಳಿ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಹಣಾಹಣಿಯಲ್ಲಿ ಕ್ಯಾಲಿಕಟ್ 15-14, 15-10, 15-14, 15-14, 15-9ರಿಂದ ಹೈದರಾಬಾದ್ ಸವಾಲು ಮೀರಿತು. ವಿಜೇತ ತಂಡದ ಡೇವಿಡ್ ಲೀ ಪಂದ್ಯಶ್ರೇಷ್ಠ ಆಟಗಾರ ಗೌರವ ಗಳಿಸಿದರು.

ಈ ಜಯದೊಂದಿಗೆ ಕ್ಯಾಲಿಕಟ್ ತಂಡವು ಲೀಗ್ ಹಂತದಲ್ಲಿ ಒಟ್ಟು ಏಳು ಪಾಯಿಂಟ್ಸ್ ಗಳಿಸಿತು. ಆಡಿದ ಆರು ಪಂದ್ಯಗಳ ಪೈಕಿ ಮೂರರಲ್ಲಿ ತಂಡವು ಗೆಲುವು ಸಾಧಿಸಿತು. ಮಂಗಳವಾರದ ಪಂದ್ಯದಲ್ಲಿ ಅಹಮದಾಬಾದ್ ಡಿಫೆಂಡರ್ಸ್ ತಂಡವು ಕೊಚ್ಚಿ ಬ್ಲ್ಯೂ ಸ್ಪೈಕರ್ಸ್ ಎದುರು ಆಡಲಿದೆ.

# ಹಾಂಗ್‌ಕಾಂಗ್‌ನಲ್ಲಿ ಕೋವಿಡ್ ನಿಯಂತ್ರಣಕ್ಕೆ ಕಠಿಣ ನಿರ್ಬಂಧ

**ಹಾಂಗ್‌ಕಾಂಗ್ (ರಾಯಿಟರ್ಸ್):** ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಇದೇ 24ರಿಂದ ಸೂಪರ್ ಮಾರ್ಕೆಟ್, ಕ್ಲಬ್‌ಹೌಸ್ ಸೇರಿದಂತೆ ನಗರದ ವಿವಿಧ ಸ್ಥಳಗಳಿಗೆ ಲಸಿಕೆ ಪಡೆದವರಿಗೆ ಮಾತ್ರ ಪ್ರವೇಶ ಕಲ್ಪಿಸುವ ’ವ್ಯಾಕ್ಸಿನ್ ಪಾಸ್‌ಪೋರ್ಟ್‘ ಅನ್ನು ಸರ್ಕಾರ ಜಾರಿಗೊಳಿಸಿದೆ.

ನಿಗದಿತ ಸ್ಥಳಗಳಿಗೆ 12 ವರ್ಷ ಮೇಲ್ಪಟ್ಟವರು ಪ್ರವೇಶ ಪಡೆಯಬೇಕಾದರೆ ಕನಿಷ್ಠ ಒಂದು ಡೋಸ್ ಲಸಿಕೆ ಪಡೆದಿರಬೇಕು. ಲಸಿಕೆ ಪಾಸ್‌ಪೋರ್ಟ್ ಅಥವಾ ಪ್ರಮಾಣ ಪತ್ರವನ್ನು ತಗೆದುಕೊಂಡು ಹೋಗಬೇಕು ಎಂದು ಆಹಾರ ಮತ್ತು ಆರೋಗ್ಯ ಇಲಾಖೆಯ ಉಪ ಕಾರ್ಯದರ್ಶಿ ಕೆವಿನ್ ಚೋಯ್ ತಿಳಿಸಿದ್ದಾರೆ.

ಹೆಚ್ಚುತ್ತಿರುವ ಕೋವಿಡ್ ಪ್ರಕರಣಗಳನ್ನು ನಿಯಂತ್ರಿಸುವ ಭಾಗವಾಗಿ ಸರ್ಕಾರ ಶಾಪಿಂಗ್ ಮಾಲ್, ಸೂಪರ್ ಮಾರ್ಕೆಟ್ ಸೇರಿದಂತೆ ವಿವಿಧ ಸ್ಥಳಗಳಲ್ಲಿ ಲಸಿಕೆ ಹಾಕುವುದನ್ನು ವಿಸ್ತರಿಸಿದೆ.

ಹಾಂಗ್‌ಕಾಂಗ್‌ನಲ್ಲಿ ಹೊಸದಾಗಿ 7,533 ಮಂದಿಗೆ ಸೋಂಕು ದೃಢಪಟ್ಟಿದ್ದು, 13 ಮಂದಿ ಸಾವಿಗೀಡಾಗಿದ್ದಾರೆ.

**ಅಮೆರಿಕದಲ್ಲಿ ದುರ್ಬಲಗೊಳ್ಳುತ್ತಿರುವ ಓಮೈಕ್ರಾನ್:** (ವಾಷಿಂಗ್ಟನ್ ವರದಿ) ಅಮೆರಿಕದಲ್ಲಿ ದಿನನಿತ್ಯ ಕೋವಿಡ್ ಚಿಕಿತ್ಸೆಗೆ ಆಸ್ಪತ್ರೆಗೆ ದಾಖಲಾಗುವವರ ಸಂಖ್ಯೆ ಇಳಿಮುಖವಾಗಿದ್ದು, ಇದು ದೇಶದಲ್ಲಿ ಓಮೈಕ್ರಾನ್ ವೈರಾಣು ದುರ್ಬಲಗೊಳ್ಳುತ್ತಿರುವುದರ ಸೂಚಕ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಕಳೆದ ಜನವರಿಯಲ್ಲಿ ದೇಶದಾದ್ಯಂತ ಒಂದು ವಾರದಲ್ಲಿ ಸರಾಸರಿ 1.46 ಲಕ್ಷ ಮಂದಿ ಕೋವಿಡ್ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾಗುತ್ತಿದ್ದರು. ಇದು ಈ ವಾರಾಂತ್ಯದಲ್ಲಿ 20–80 ಸಾವಿರಕ್ಕೆ ಇಳಿಕೆಯಾಗಿದೆ.

### ದಕ್ಷಿಣ ಆಫ್ರಿಕಾ: ಲಸಿಕೆ ನಿಯಮ ಬದಲಾವಣೆ

**ಜೋಹಾನ್ಸ್‌ಬರ್ಗ್ (ರಾಯಿಟರ್ಸ್):** ದೇಶದಲ್ಲಿ ಲಸಿಕಾ ಅಭಿಯಾನಯನ್ನು ಚುರುಕುಗೊಳಿಸುವ ಉದ್ದೇಶದಿಂದ ಕೋವಿಡ್ ನಿಯಮಾವಳಿಗಳಲ್ಲಿ ಬದಲಾವಣೆಗಳನ್ನು ಮಾಡಲು ಆರೋಗ್ಯ ಇಲಾಖೆ ನಿರ್ಧರಿಸಿದೆ.

ಫೈಜರ್ ಲಸಿಕೆಯ ಮೊದಲ ಡೋಸ್ ಮತ್ತು ಎರಡನೇ ಡೋಸ್ ನಡುವೆ ಇರುವ 42 ದಿನಗಳ ಅಂತರವನ್ನು ಸರ್ಕಾರ 21 ದಿನಗಳಿಗೆ ಇಳಿಸಲಿದೆ. ಫೈಜರ್ ಲಸಿಕೆಯ ಎರಡು ಡೋಸ್‌ಗಳನ್ನು ಪಡೆದವರಿಗೆ ಮೂರು ತಿಂಗಳ ನಂತರ ಬೂಸ್ಟರ್ ಡೋಸ್ ಪಡೆಯಲು ಅವಕಾಶ ಕಲ್ಪಿಸಿದೆ. ಈ ಅವಧಿಯನ್ನು ಮೊದಲಿಗೆ 6 ತಿಂಗಳಿಗೆ ನಿಗದಿಗೊಳಿಸಲಾಗಿತ್ತು.

ಈ ಬಾರಿ ಸರ್ಕಾರ ಬೇರೆ ಬೇರೆ ಲಸಿಕೆಗಳನ್ನು ಪಡೆಯಲು ಅವಕಾಶ ನೀಡಿದೆ. ಜಾನ್ಸನ್ ಅಂಡ್ ಜಾನ್ಸನ್ ಲಸಿಕೆಯ ಮೊದಲ ಡೋಸ್ ಪಡೆದ ವಯಸ್ಕರು ಎರಡನೇ ಡೋಸ್ ಆಗಿ ಎರಡು ತಿಂಗಳ ನಂತರ ಫೈಜರ್ ಲಸಿಕೆ ಪಡೆಯಬಹುದು. ಫೈಜರ್‌ನ ಎರಡು ಡೋಸ್ ಪಡೆದವರು ಮೂರನೇ ಡೋಸ್ ಆಗಿ ಜಾನ್ಸನ್ ಅಂಡ್ ಜಾನ್ಸನ್ ಲಸಿಕೆ ಅಥವಾ ಫೈಜರ್ ಅನ್ನು ಪಡೆಯಬಹುದು.

# ಉಕ್ರೇನ್ ಬಿಕ್ಕಟ್ಟು: ಮಾತುಕತೆಗೆ ಬೈಡನ್ ಷರತ್ತು

**ಪ್ಯಾರಿಸ್/ವಾಷಿಂಗ್ಟನ್ ಡಿಸಿ, ಮಾಸ್ಕೊ (ಎಪಿ/ಎಎಫ್‌ಪಿ, ರಾಯಿಟರ್ಸ್):** ಉಕ್ರೇನ್ ಮೇಲೆ ಆಕ್ರಮಣ ನಡೆಸದಿರುವ ಷರತ್ತಿನ ಮೇಲೆ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಜೊತೆ ಮಾತುಕತೆಗೆ ಅಮೆರಿಕ ಅಧ್ಯಕ್ಷ ಜೋ ಬೈಡನ್ ಒಪ್ಪಿದ್ದಾರೆ ಎಂದು ಫ್ರಾನ್ಸ್ ಹೇಳಿದೆ.

ಪ್ಯಾರಿಸ್ ಶೃಂಗಸಭೆಯ ಪ್ರಸ್ತಾಪವನ್ನು ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್ ಮುಂದಿಟ್ಟಿದ್ದು, ಯೂರೋಪ್‌ನ ಭದ್ರತೆ ಮತ್ತು ಕಾರ್ಯತಂತ್ರದ ಸ್ಥಿರತೆ ದೃಷ್ಟಿಯಿಂದ, ಸಂಬಂಧಿಸಿದ ಎಲ್ಲ ದೇಶಗಳನ್ನು ಸಮಾವೇಶಕ್ಕೆ ಸೇರಿಸಿಕೊಳ್ಳಲು ನಿರ್ಧರಿಸಲಾಗಿದೆ. ಗುರುವಾರದಿಂದ ರಷ್ಯಾ ಮತ್ತು ಅಮೆರಿಕ ಅಧ್ಯಕ್ಷರ ಮಾತುಕತೆಗೆ ತಯಾರಿ ನಡೆಯಲಿದೆ. ಬೈಡನ್ ಜತೆಗೆ ಮಾತುಕತೆ ನಡೆಸಲು ಪುಟಿನ್ ಅಗತ್ಯವಾಗಿ ನಿರ್ಧಾರ ಕೈಗೊಳ್ಳಬೇಕು ಎಂದು ಫ್ರಾನ್ಸ್ ಒತ್ತಾಯಿಸಿದೆ.

ಶಾಂತಿ ಶೃಂಗಸಭೆ ಅಗತ್ಯವನ್ನು ಉಕ್ರೇನ್ ಕೂಡ ಎಚ್ಚರಿಕೆ ನಡೆಯಿಂದಲೇ ಸ್ವಾಗತಿಸಿದೆ.

‘ಮಾತುಕತೆ ಬದಲಿಗೆ ಯುದ್ಧ ಆಯ್ದುಕೊಂಡರೆ ರಷ್ಯಾ ವಿರುದ್ಧ ತ್ವರಿತದಲ್ಲಿ ತೀವ್ರ ಮತ್ತು ಕಠಿಣ ಕ್ರಮಗಳನ್ನು ಕೈಗೊಳ್ಳಲು ನಾವು ಸಿದ್ಧ. ರಷ್ಯಾವು ಶೀಘ್ರದಲ್ಲೇ ಉಕ್ರೇನ್ ಮೇಲೆ ಪೂರ್ಣ ಪ್ರಮಾಣದ ಆಕ್ರಮಣಕ್ಕೆ ಸಿದ್ಧತೆಗಳನ್ನು ಮುಂದುವರೆಸುತ್ತಿದೆ’ ಎಂದು ಶ್ವೇತಭವನದ ಪತ್ರಿಕಾ ಕಾರ್ಯದರ್ಶಿ ಜೆನ್ ಸಾಕಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.

**ಸೇನೆ ಹಿಂತೆಗೆತ ನ್ಯಾಟೊ ನಿರ್ಧಾರ ಅವಲಂಬಿಸಿದೆ:** ತನ್ನ ಪ್ರದೇಶದಿಂದ ರಷ್ಯಾದ ಸೈನ್ಯವನ್ನು ಹಿಂತೆಗೆದುಕೊಳ್ಳುವುದು ನ್ಯಾಟೊ ತನ್ನ ಪಡೆಗಳನ್ನು ಬೆಲಾರಸ್ ಮತ್ತು ರಷ್ಯಾದ ಗಡಿ ಬಳಿಯಿಂದ ದೂರ ಸರಿಸುವುದರ ಮೇಲೆ ಅವಲಂಬಿತವಾಗಿದೆ ಎಂದು ಸೋಮವಾರ ಬೆಲಾರಸ್ ಹೇಳಿದೆ.

ಭಾನುವಾರ ಕೊನೆಗೊಳ್ಳಬೇಕಿದ್ದ ಜಂಟಿ ಸಮರಭ್ಯಾಸವನ್ನು ರಷ್ಯಾ ಮತ್ತು ಬೆಲಾರಸ್ ಮತ್ತೆ ವಿಸ್ತರಿಸಿವೆ.

**ಉಕ್ರೇನ್‌ನಿಂದ ಶೆಲ್ ದಾಳಿ:** ಉಕ್ರೇನ್ ಕಡೆಯಿಂದ ಸೋಮವಾರ ಶೆಲ್ ದಾಳಿ ನಡೆದಿದ್ದು, ರಷ್ಯಾದ ರೋಸ್ಟೋವ್ ಪ್ರದೇಶದಲ್ಲಿ ಫೆಡರಲ್ ಸೆಕ್ಯುರಿಟಿ ಸರ್ವಿಸ್ (ಎಫ್‌ಎಸ್‌ಬಿ) ಬಳಸುವ ಗಡಿ ಕಾವಲು ಠಾಣೆ ಸಂಪೂರ್ಣ ನಾಶವಾಗಿದೆ. ಆದರೆ, ಯಾವುದೇ ಸಾವು ನೋವು ಸಂಭವಿಸಿಲ್ಲ ಎಂದು ರಷ್ಯಾ ತಿಳಿಸಿದೆ.

‘ಸೋಮವಾರ ಬೆಳಿಗ್ಗೆ 9.50ಕ್ಕೆ ಉಕ್ರೇನ್ ಕಡೆಯಿಂದ ಬಂದ ಶೆಲ್ ರಷ್ಯಾ ಮತ್ತು ಉಕ್ರೇನ್ ನಡುವಿನ ಗಡಿಯಿಂದ 150 ಮೀಟರ್ ದೂರದಲ್ಲಿ ಗಡಿ ಕಾವಲು ಠಾಣೆಯನ್ನು ನಾಶಪಡಿಸಿತು’ ಎಂದು ಎಫ್‌ಎಸ್‌ಬಿ ನೀಡಿರುವ ಹೇಳಿಕೆ ಉಲ್ಲೇಖಿಸಿ ಇಂಟರ್‌ಫ್ಯಾಕ್ಸ್ ಸುದ್ದಿ ಸಂಸ್ಥೆ ವರದಿ ಮಾಡಿದೆ.

**ಕೆಟ್ಟ ಸನ್ನಿವೇಶ ಎದುರಿಸಲು ಸಿದ್ಧತೆ:** ಉಕ್ರೇನ್ ಮೇಲೆ ರಷ್ಯಾದ ಆಕ್ರಮಣದ ಸಾಧ್ಯತೆ ಹೆಚ್ಚುತ್ತಿರುವುದರಿಂದ ಯುರೋಪಿನಲ್ಲಿ ಅತ್ಯಂತ ಕೆಟ್ಟ ಸನ್ನಿವೇಶ ಎದುರಿಸಲು ಮಿತ್ರ ರಾಷ್ಟ್ರಗಳೊಂದಿಗೆ ಸಿದ್ಧತೆಗಳನ್ನು ನಡೆಸುತ್ತಿರುವುದಾಗಿ ಬ್ರಿಟನ್ ವಿದೇಶಾಂಗ ಸಚಿವರಾದ ಲಿಜ್ ಟ್ರಸ್ ಸೋಮವಾರ ಹೇಳಿದ್ದಾರೆ.

**ಒಪ್ಪಂದ:** ಉಕ್ರೇನ್‌ನಲ್ಲಿ ಮಿಲಿಟರಿ ಸಲಹಾ ತರಬೇತಿ ಕಾರ್ಯಾಚರಣೆ ಕೈಗೊಳ್ಳಲು ಉಕ್ರೇನ್ ಮತ್ತು ಯುರೋಪ್ ಒಕ್ಕೂಟ ತಾತ್ವಿಕ ಒಪ್ಪಂದಕ್ಕೆ ಬಂದಿವೆ ಎಂದು ಉಕ್ರೇನ್ ವಿದೇಶಾಂಗ ಸಚಿವ ಡಿಮಿಟ್ರೋ ಕುಲೆಬಾ ಸೋಮವಾರ ತಿಳಿಸಿದರು.

ಉದ್ವಿಗ್ನ ಪರಿಸ್ಥಿತಿಯ ನಡುವೆಯೂ 10 ವಿಮಾನಯಾನ ಸಂಸ್ಥೆಗಳು ಉಕ್ರೇನ್‌ಗೆ ನಿಗದಿತ ವೇಳಾಪಟ್ಟಿಯ ಪ್ರಕಾರ ವಿಮಾನಗಳ ಸಂಚಾರ ಮುಂದುವರಿಸಿದ್ದು, ವಾಯು ಪ್ರದೇಶ ಮುಕ್ತವಾಗಿರಿಸಲಾಗಿದೆ ಎಂದು ಉಕ್ರೇನ್ ಮೂಲಸೌಕರ್ಯ ಸಚಿವರು ಸೋಮವಾರ ತಿಳಿಸಿದ್ದಾರೆ.


ಪೂರ್ವ ಉಕ್ರೇನ್‌ನ ಡೊನೆಟ್ಸ್ಕ್ ಪ್ರದೇಶದ ಅವ್ದಿವ್ಕಾದ ಪಟ್ಟಣದಲ್ಲಿ ಉಕ್ರೇನ್ ಸೈನಿಕರು ಮಿಲಿಟರಿ ಟ್ರಕ್‌ನಲ್ಲಿ ಸಜ್ಜಾಗಿ ಕುಳಿತಿರುವುದು – ಎಎಫ್‌ಪಿ ಚಿತ್ರ

### ರಷ್ಯಾದಿಂದ ಸೈಬರ್ ದಾಳಿ: ಉಕ್ರೇನ್

ಕೀವ್: ಸರ್ಕಾರಿ ಸಂಸ್ಥೆಗಳು, ಬ್ಯಾಂಕ್‌ಗಳು ಮತ್ತು ರಕ್ಷಣಾ ವಲಯದ ಮೇಲೆ ರಷ್ಯಾ ಹ್ಯಾಕರ್‌ಗಳು ಮಂಗಳವಾರ ದೊಡ್ಡ ದಾಳಿ ನಡೆಸಲು ತಯಾರಿ ನಡೆಸುತ್ತಿದ್ದಾರೆ ಎನ್ನುವ ಎಚ್ಚರಿಕೆ ಸಂದೇಶಗಳು ಆನ್‌ಲೈನ್‌ನಲ್ಲಿ ಗೋಚರಿಸುತ್ತಿವೆ ಎಂದು ಉಕ್ರೇನ್ ಅಧಿಕಾರಿಗಳು ಎಚ್ಚರಿಸಿದ್ದಾರೆ. ಹ್ಯಾಕಿಂಗ್ ಫೋರಂನಲ್ಲಿ ಇಂತಹ ಎಚ್ಚರಿಕೆ ಸಂದೇಶಗಳು ಪತ್ತೆಯಾಗಿವೆ ಎಂದು ಉಕ್ರೇನ್ ಸರ್ಕಾರದ ಸೈಬರ್ ಸೆಕ್ಯುರಿಟಿ ಏಜೆನ್ಸಿ ಸಿಇಆರ್‌ಟಿ-ಯುಎ ಸೋಮವಾರ ಹೇಳಿದೆ.

### ತ್ವರಿತ ನಿರ್ಧಾರ: ಪುಟಿನ್

ಮಾಸ್ಕೊ (ರಾಯಿಟರ್ಸ್): ಪೂರ್ವ ಉಕ್ರೇನ್‌ನ ಬಂಡಾಯ ರಾಷ್ಟ್ರಗಳ ಸ್ವಾತಂತ್ರ್ಯ ಕೋರಿಕೆ ಬಗ್ಗೆ ತ್ವರಿತವಾಗಿ ನಿರ್ಧಾರ ತೆಗೆದುಕೊಳ್ಳುವುದಾಗಿ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಸೋಮವಾರ ಹೇಳಿದ್ದಾರೆ.

ರಷ್ಯಾದ ಉನ್ನತ ಅಧಿಕಾರಿಗಳೊಂದಿಗೆ ಭದ್ರತಾ ಮಂಡಳಿಯ ಸುದೀರ್ಘ ಸಭೆ ನಡೆಸಿದ ನಂತರ ಮಾತನಾಡಿರುವ ಅವರು, ಸ್ವಯಂ ಘೋಷಿತ ಡೊನೆಟ್ಸ್ಕ್ ಪೀಪಲ್ಸ್ ರಿಪಬ್ಲಿಕ್ ಮತ್ತು ಲುಗಾನ್ಸ್ಕ್ ಪೀಪಲ್ಸ್ ರಿಪಬ್ಲಿಕ್‌ನ ಸ್ವಾತಂತ್ರ್ಯ ಬೆಂಬಲಿಸಲಾಗುವುದು. ಆದರೆ, ಬೇರ್ಪಟ್ಟ ಉಕ್ರೇನ್‌ನ ಎರಡು ಪ್ರದೇಶಗಳನ್ನು ಸ್ವಾಧೀನಪಡಿಸಿಕೊಳ್ಳುವುದಿಲ್ಲ ಎಂದು ಅವರು ಹೇಳಿದ್ದಾರೆ.

# ಇಂಧನ ಖರೀದಿಸಲಾಗದ ಸ್ಥಿತಿಯಲ್ಲಿ ಶ್ರೀಲಂಕಾ

**ಕೊಲೊಂಬೊ (ಪಿಟಿಐ):** ಆರ್ಥಿಕತೆ ದುರ್ಬಲಗೊಳಿಸುವ ವಿದೇಶಿ ವಿನಿಮಯದ ಕೊರತೆಯಿಂದಾಗಿ ಇಂಧನ ಖರೀದಿಸಲು ದ್ವೀಪ ರಾಷ್ಟ್ರ ಶ್ರೀಲಂಕಾ ಪರದಾಡುತ್ತಿದೆ.

ದೇಶದಾದ್ಯಂತ ಇಂಧನ ಭರ್ತಿ ಮಾಡುವ ಹೆಚ್ಚಿನ ಸ್ಟೇಷನ್‌ಗಳಲ್ಲಿ ಪಂಪ್‌ಗಳು ಬರಿದಾಗಿವೆ. ಇಂಧನ ಖರೀದಿಸಲು ಹಣದ ಕೊರತೆಯಿದೆ ಎಂದು ಶ್ರೀಲಂಕಾ ಸರ್ಕಾರ ಸೋಮವಾರ ಒಪ್ಪಿಕೊಂಡಿದೆ.

ಶ್ರೀಲಂಕಾದ ಸದ್ಯದ ಆರ್ಥಿಕ ಪರಿಸ್ಥಿತಿ ಎಷ್ಟು ಭೀಕರವಾಗಿದೆ ಎಂದರೆ ಎರಡು ಹಡಗುಗಳ ಇಂಧನಕ್ಕೆ ಪಾವತಿಸಲು ಸಾಕಾಗುವಷ್ಟು ಹಣ ಸಹ ಇಲ್ಲದಂತಾಗಿದೆ.

‘ಇಂಧನ ತುಂಬಿರುವ ಎರಡು ಹಡಗುಗಳು ಇಂದು ಬಂದಿವೆ. ಆದರೆ, ಇಂಧನಕ್ಕೆ ಪಾವತಿಸಲು ನಮಗೆ ಸಾಧ್ಯವಾಗುತ್ತಿಲ್ಲ’ ಎಂದು ಶ್ರೀಲಂಕಾದ ಇಂಧನ ಸಚಿವ ಉದಯ ಗಮ್ಮನ್‌ಪಿಲಾ ಸೋಮವಾರ ಹೇಳಿದ್ದಾರೆ.

ಕಳೆದ ವಾರ ಸರ್ಕಾರಿ ಸ್ವಾಮ್ಯದ ರಿಫೈನರಿ ಸಿಲೋನ್ ಪೆಟ್ರೋಲಿಯಂ ಕಾರ್ಪೊರೇಷನ್ (ಸಿಪಿಸಿ) ವಿದೇಶದಿಂದ ಆಮದಾಗಿರುವ ಇಂಧನವನ್ನು ಇಳಿಸಿಕೊಳ್ಳಲು ಹಣವಿಲ್ಲ ಎಂದು ಹೇಳಿತ್ತು. 2021ರಲ್ಲಿ ಸರ್ಕಾರವು ನಿಗದಿಪಡಿಸಿದ ಬೆಲೆಯಲ್ಲಿ ಡೀಸೆಲ್ ಮಾರಾಟದಿಂದಾಗಿ ಸುಮಾರು ಮೂರು ಸಾವಿರ ಕೋಟಿ ರೂಪಾಯಿ ನಷ್ಟ ಅನುಭವಿಸಿದೆ.

ಇಂಧನ ಚಿಲ್ಲರೆ ಮಾರಾಟ ಬೆಲೆ ಹೆಚ್ಚಿಸುವುದು ಈ ಅವ್ಯವಸ್ಥೆಯಿಂದ ಹೊರಬರುವ ಏಕೈಕ ಮಾರ್ಗವಾಗಿದೆ. ಸಾರ್ವಜನಿಕರಿಗೆ ಅನುಕೂಲವಾಗುವಂತೆ ಇಂಧನ ಆಮದು ಮೇಲಿನ ಅಬಕಾರಿ ಸುಂಕ ಕಡಿಮೆ ಮಾಡಬೇಕೆಂದು ಸಚಿವರು ಸರ್ಕಾರವನ್ನು ಒತ್ತಾಯಿಸಿದರು.

ಶ್ರೀಲಂಕಾದ ಆರ್ಥಿಕ ಪರಿಸ್ಥಿತಿ ಹದಗೆಡುಸುತ್ತಿರುವ ವಿದೇಶಿ-ವಿನಿಮಯ ಕೊರತೆಯು ಇಂಧನ ಕ್ಷೇತ್ರದ ಮೇಲೆ ಗಂಭೀರ ಪರಿಣಾಮ ಬೀರಿದೆ. ಇಂಧನ ಕೊರತೆಯಿಂದಾಗಿ ದೇಶದಾದ್ಯಂತ ಪೆಟ್ರೋಲ್ ಬಂಕ್‌ಗಳ ಮುಂದೆ ಜನರು ದೀರ್ಘ ಸರತಿ ಸಾಲಿನಲ್ಲಿ ನಿಂತಿರುವ ದೃಶ್ಯಗಳು ಸಾಮಾನ್ಯವಾಗಿವೆ.

ಬರಿದಾದ ವಿದೇಶಿ ವಿನಿಮಯದಿಂದ ಹದಗೆಟ್ಟ ಆರ್ಥಿಕ ಬಿಕ್ಕಟ್ಟಿನಲ್ಲಿ ತುರ್ತು ಇಂಧನ ಅವಶ್ಯಕತೆಗಳನ್ನು ಪೂರೈಸಲು ಶ್ರೀಲಂಕಾವು ಕಳೆದ ತಿಂಗಳು ಭಾರತದ ಪ್ರಮುಖ ತೈಲ ಕಂಪನಿ ಇಂಡಿಯನ್ ಆಯಿಲ್ ಕಾರ್ಪೊರೇಶನ್‌ನಿಂದ 40,000 ಮೆಟ್ರಿಕ್ ಟನ್ ಡೀಸೆಲ್ ಮತ್ತು ಪೆಟ್ರೋಲ್ ಖರೀದಿಸಿತ್ತು.

## ಬ್ರೆಜಿಲ್: ಸಾವಿನ ಸಂಖ್ಯೆ 165ಕ್ಕೆ ಏರಿಕೆ

**ರಿಯೊ ಡಿ ಜನೈರೊ (ಎಎಫ್‌ಪಿ):** ಬ್ರೆಜಿಲ್‌ನ ಪೆಟ್ರೊಪೊಲಿಸ್ ನಗರದಲ್ಲಿ ಸುರಿದ ಭಾರಿ ಮಳೆಯಿಂದ ಉಂಟಾದ ಪ್ರವಾಹ, ಭೂಕುಸಿತದಲ್ಲಿ ಮೃತಪಟ್ಟವರ ಸಂಖ್ಯೆ 165ಕ್ಕೆ ಏರಿಕೆಯಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಪೆಟ್ರೊಪೊಲಿಸ್‌ನಲ್ಲಿ ಉಂಟಾದ ಪ್ರವಾಹದಲ್ಲಿ ಸಿಲುಕಿರುವ ತಮ್ಮ ಸಂಬಂಧಿಕರಿಗಾಗಿ ಸ್ಥಳೀಯರು ಹುಡುಕಾಟ ನಡೆಸಿದ್ದಾರೆ. ಅಲ್ಲದೆ ರಕ್ಷಣಾ ಸಿಬ್ಬಂದಿಯೂ ಶೋಧ ಕಾರ್ಯಾಚರಣೆ ಮುಂದುವರಿಸಿದ್ದಾರೆ. ಭೂಕುಸಿತ, ಪ್ರವಾಹದಿಂದ ಉಂಟಾದ ಸಾವು–ನೋವುಗಳನ್ನು ನೋಡಿ ಇದೊಂದು ಯುದ್ಧದ ರೀತಿಯಲ್ಲಿತ್ತು ಎಂದು ಅಧ್ಯಕ್ಷ ಜೈರ್ ಬೋಲ್ಸನಾರೊ ಹೇಳಿದರು.

### ಪ್ರೊ ಕಬಡ್ಡಿ: ಪ್ರದೀಪ್ ಮ್ಯಾಜಿಕ್; ಪುಣೇರಿಗೆ ಸೋಲು– ಬೆಂಗಳೂರು ಬುಲ್ಸ್, ಯೋಧಾ ಸೆಮಿಗೆ

# ‘ಪವನಶಕ್ತಿ’ಗೆ ನಲುಗಿದ ಜೈಂಟ್ಸ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪವನಕುಮಾರ್ ಶೆರಾವತ್ ರೇಡಿಂಗ್‌ನಲ್ಲಿ ಮತ್ತೆ ಮಿಂಚಿದರು. ಈ ಮೂಲಕ ಬೆಂಗಳೂರು ಬುಲ್ಸ್ ತಂಡ ಪ್ರೊ ಕಬಡ್ಡಿ ಟೂರ್ನಿಯಲ್ಲಿ ಸೆಮಿಫೈನಲ್ ಪ್ರವೇಶಿಸಲು ಕಾರಣರಾದರು.

ವೈಟ್‌ಫೀಲ್ಡ್‌ನಲ್ಲಿರುವ ಶೆರಟನ್ ಗ್ರ್ಯಾಂಡ್ ಹೋಟೆಲ್‌ನಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಸೋಮವಾರ ನಡೆದ ಎಲಿಮಿನೇಟರ್ ಪಂದ್ಯದಲ್ಲಿ ಬುಲ್ಸ್ 49-29ರಿಂದ ಗುಜರಾತ್ ಜೈಂಟ್ಸ್ ವಿರುದ್ಧ ಜಯಿಸಿತು. ಇದರೊಂದಿಗೆ ಐದನೇ ಸಲ ಸೆಮಿಫೈನಲ್ ಹಂತ ಪ್ರವೇಶಿಸಿತು.

ಇಡೀ ಟೂರ್ನಿಯಲ್ಲಿ ಅಂಕಗಳ ರಾಶಿ ಪೇರಿಸಿರುವ ಪವನ್ ಈ ಪಂದ್ಯದಲ್ಲಿ 13 ಅಂಕ ಗಳಿಸಿದರು. ಅವರು ಮತ್ತು ಚಂದ್ರನ್ ರಂಜಿತ್ 14ನೇ ನಿಮಿಷದಷ್ಟೊತ್ತಿಗೆ ಗುಜರಾತ್ ಅಂಕಣ ಖಾಲಿ ಮಾಡಿಸುವಲ್ಲಿ ಸಫಲರಾದರು. ಇದರಿಂದಾಗಿ ಬುಲ್ಸ್‌ಗೆ 20-10ರ ಮುನ್ನಡೆ ಲಭಿಸಿತು. ಬುಲ್ಸ್ ಮೊದಲಾರ್ಧದಲ್ಲಿ 24-17 ರಿಂದ ಮುನ್ನಡೆಯಿತು. ಪವನ್ ಎಂಟು ರೇಡ್‌ಗಳಲ್ಲಿ ಒಂಬತ್ತು ಅಂಕ ಗಳಿಸಿದರು. ಟ್ಯಾಕ್ಲಿಂಗ್ ಮಾಡುವ ಪ್ರಯತ್ನಗಳಲ್ಲಿ ಮೂರು ಸಲ ಔಟಾದರು.

ವಿರಾಮದ ನಂತರ ಎಲ್ಲ ಲೋಪಗಳನ್ನು ತಿದ್ದಿಕೊಂಡ ಪವನ್ ಬಳಗ ಗುಜರಾತ್ ತಂಡವನ್ನು ಚಿತ್ ಮಾಡಿತು. 20 ಅಂಕಗಳ ಅಂತರದಿಂದ ಬುಲ್ಸ್ ಜಯಿಸಿತು. ನಾಲ್ಕರ ಘಟ್ಟದಲ್ಲಿ ದಬಂಗ್ ಡೆಲ್ಲಿ ತಂಡವನ್ನು ಎದುರಿಸಲಿದೆ.

**ಪ್ರದೀಪ್ ಮ್ಯಾಜಿಕ್: ನಾಲ್ಕರಘಟ್ಟಕ್ಕೆ ಯೋಧಾ:** ಅನುಭವಿ ಪ್ರದೀಪ್ ನರ್ವಾಲ್ ಸೂಪರ್ ರೇಡ್‌ಗಳ ಮ್ಯಾಜಿಕ್ ಮುಂದೆ ಪುಣೇರಿ ಪಲ್ಟನ್ ದೂಳೀಪಟವಾಯಿತು. ಯುಪಿ ಯೋಧಾ ಸೆಮಿಫೈನಲ್‌ಗೆ ಲಗ್ಗೆ ಇಟ್ಟಿತು. ಮೊದಲ ಎಲಿಮಿನೇಟರ್ ಪಂದ್ಯದಲ್ಲಿ ಪ್ರದೀಪ್ ಗಳಿಸಿದ 18 ಅಂಕಗಳ ಬಲದಿಂದ ಯೋಧಾ ತಂಡವು 42-31ರಿಂದ ಜಯಭೇರಿ ಬಾರಿಸಿತು.

ಪುಣೇರಿ ತಂಡವು ಉತ್ತಮ ಆರಂಭವನ್ನೇನೋ ಮಾಡಿತು. ಆದರೆ ಪ್ರದೀಪ್ ಬಿರುಗಾಳಿ ವೇಗದ ರೇಡಿಂಗ್ ಮುಂದೆ ಮಂಕಾಯಿತು. ಮೊದಲ ಐದು ನಿಮಿಷಗಳಲ್ಲೇ ಯೋಧಾ ಅಂಕಣವನ್ನು ಖಾಲಿ ಮಾಡುವಲ್ಲಿ ಪುಣೇರಿಯ ಅಸ್ಲಂ ಮತ್ತು ಮೋಹಿತ್ ಯಶಸ್ವಿ ಯಾದರು. ಇದರ ನಂತರ ಯೋಧಾ ಭರ್ಜರಿ ತಿರುಗೇಟು ನೀಡಿತು. ಪುಣೇರಿಯ ಅಂಕಣ ಖಾಲಿ ಮಾಡಿಸಿ 10-10ರ ಸಮಬಲ ಸಾಧಿಸಿತು.

ಈ ಸಂದರ್ಭದಲ್ಲಿ ನರ್ವಾಲ್ ಗಳಿಸಿದ ‘ಸೂಪರ್ ಟೆನ್’ ಅಂಕಗಳ ಬಲದಿಂದ ಯೋಧಾ 25-17 ಮುನ್ನಡೆ ಸಾಧಿಸಿತು. ವಿರಾಮದ ನಂತರವೂ ಪುಣೇರಿಯ ರಕ್ಷಣಾ ಗೋಡೆಯನ್ನು ಪುಡಿಗಟ್ಟುವಲ್ಲಿ ಪ್ರದೀಪ್ ಯಶಸ್ವಿ ಆದರು.

ಅಡ್ವಾನ್ಸ್ ಟ್ಯಾಕಲ್ ಮಾಡುವ ಪುಣೇರಿ ಆಟಗಾರರ ಪ್ರಯತ್ನಗಳು ವಿಫಲವಾದವು. ಪುಣೇರಿಯ ಅಸ್ಲಾಂ ಹತ್ತು ಅಂಕ ಗಳಿಸಿದರು.


ಗುಜರಾತ್ ಜೈಂಟ್ಸ್ ಆವರಣದಲ್ಲಿ ಪಾಯಿಂಟ್ ಗಳಿಸಲು ಪ್ರಯತ್ನಿಸಿದ ಬೆಂಗಳೂರು ಬುಲ್ಸ್ ತಂಡದ ಪವನ್ ಶೆರಾವತ್

**ಬುಧವಾರ ಸೆಮಿಫೈನಲ್ ಪಂದ್ಯಗಳು (ರಾತ್ರಿ)**

| | |
|---|---|
| ಪಟ್ನಾ ಪೈರೇಟ್ಸ್ – ಯು.ಪಿ.ಯೋಧಾ | 7.30 |
| ಬೆಂಗಳೂರು ಬುಲ್ಸ್– ದಬಂಗ್ ಡೆಲ್ಲಿ | 8.30 |

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

# ಸುಮಿತ್ ಕುಂದು ಶುಭಾರಂಭ

### ಸೋಫಿಯಾದಲ್ಲಿ ಸ್ಟ್ರಾಂಡ್‌ಜಾ ಸ್ಮಾರಕ ಬಾಕ್ಸಿಂಗ್ ಟೂರ್ನಿ

**ನವದೆಹಲಿ (ಪಿಟಿಐ):** ಭಾರತದ ಸುಮಿತ್ ಕುಂದು ಅವರು ವಿಶ್ವ ಚಾಂಪಿಯನ್‌ಷಿಪ್ ಬೆಳ್ಳಿ ಪದಕ ವಿಜೇತ, ರಷ್ಯಾದ ದಂಬುಲಾಟ್ ಬಿಜಮೊವ್ ಅವರಿಗೆ ಆಘಾತ ನೀಡಿ ಸ್ಟ್ರಾಂಡ್‌ಜಾ ಸ್ಮಾರಕ ಬಾಕ್ಸಿಂಗ್ ಟೂರ್ನಿಯ ಎರಡನೇ ಸುತ್ತು ಪ್ರವೇಶಿಸಿದರು. ಆದರೆ ದೇಶದ ಮೂವರು ಬಾಕ್ಸರ್‌ಗಳು ಮೊದಲ ಸುತ್ತಿನಲ್ಲಿ ನಿರಾಸೆ ಅನುಭವಿಸಿದರು.

ಬಲ್ಗೇರಿಯಾದ ಸೋಫಿಯಾದಲ್ಲಿ ನಡೆಯುತ್ತಿರುವ ಟೂರ್ನಿಯ ನಡೆಯುತ್ತಿದೆ. ಸೀನಿಯರ್ ವಿಭಾಗದಲ್ಲಿ ಕೇವಲ ಎರಡನೇ ಅಂತರರಾಷ್ಟ್ರೀಯ ಟೂರ್ನಿಯಲ್ಲಿ ಸ್ಪರ್ಧಿಸುತ್ತಿರುವ ಹಾಲಿ ರಾಷ್ಟ್ರೀಯ ಚಾಂಪಿಯನ್ ಸುಮಿತ್ 75 ಕೆಜಿ ವಿಭಾಗದಲ್ಲಿ 5–0ಯಿಂದ ಎದುರಾಳಿಯನ್ನು ಚಿತ್ ಮಾಡಿದರು. ಎರಡನೇ ಸುತ್ತಿನಲ್ಲಿ ಭಾರತದ ಬಾಕ್ಸರ್‌ಗೆ ಉಕ್ರೇನ್‌ನ ಅಲೆಕ್ಸಾಂಡರ್ ಕಿಜನಿಯಾಕ್ ಸವಾಲು ಎದುರಾಗಿದೆ.

ಭಾರತದ ಇನ್ನುಳಿದ ಬಾಕ್ಸರ್‌ಗಳಾದ ನರೇಂದರ್ ಬೇರ್ವಾಲ್ (+92 ಕೆಜಿ), ವರಿಂದರ್ ಸಿಂಗ್ (60 ಕೆಜಿ) ಮತ್ತು ಲಕ್ಷ್ಯ ಚಾಹರ್ (86 ಕೆಜಿ) ಮೊದಲ ಬೌಟ್‌ನಲ್ಲಿ ಸೋಲನುಭವಿಸಿದರು.

ನರೇಂದ ೯2-3ರಿಂದ ಸ್ಪೇನ್‌ನ ಅಯೂಬಾ ಘಡಪಾ ಡ್ರಿಸ್ಸಿ ಎದುರು, ವರಿಂದರ್ ಮತ್ತು ಚಾಹರ್ ಕ್ರಮವಾಗಿ 0–5 ಮತ್ತು 1–4ರಿಂದ ರಷ್ಯಾದ ಅರ್ಥರ್ ಶುಭಂಕುಲೊವ್ ಮತ್ತು ಶರಬುತ್ತಿನ್ ಆಟೆವ್ ಎದುರು ಮಣಿದರು.

36 ದೇಶಗಳ 450ಕ್ಕೂ ಹೆಚ್ಚು ಬಾಕ್ಸರ್‌ಗಳು ಟೂರ್ನಿಯಲ್ಲಿ ಪಾಲ್ಗೊಂಡಿದ್ದು, ಭಾರತದ 17 ಮಂದಿಯ ತಂಡ ಅದೃಷ್ಟ ಪರೀಕ್ಷೆಗೆ ತೆರಳಿದೆ. ಅದರಲ್ಲಿ ಏಳು ಮಂದಿ ಪುರುಷ ಮತ್ತು 10 ಮಹಿಳಾ ಬಾಕ್ಸರ್‌ಗಳು ಇದ್ದಾರೆ.


ಸುಮಿತ್ ಕುಂದು– ಟ್ವಿಟರ್ ಚಿತ್ರ

### ಏರ್‌ಥಿಂಗ್ಸ್ ಮಾಸ್ಟರ್ಸ್ ಆನ್‌ಲೈನ್ ರ್‍ಯಾಪಿಡ್ ಚೆಸ್ ಟೂರ್ನಿ

# ಪ್ರಜ್ಞಾನಂದಗೆ ಮಣಿದ ವಿಶ್ವ ಚಾಂಪಿಯನ್ ಕಾರ್ಲ್‌ಸನ್

**ಚೆನ್ನೈ (ಪಿಟಿಐ):** ಭಾರತದ ಯುವ ಗ್ರ್ಯಾಂಡ್‌ಮಾಸ್ಟರ್ ಆರ್. ಪ್ರಜ್ಞಾನಂದ ಅವರು ಏರ್‌ಥಿಂಗ್ಸ್ ಮಾಸ್ಟರ್ಸ್ ಆನ್‌ಲೈನ್ ರ್‍ಯಾಪಿಡ್ ಚೆಸ್ ಟೂರ್ನಿಯಲ್ಲಿ ಸೋಮವಾರ ವಿಶ್ವಚಾಂಪಿಯನ್ ಮ್ಯಾಗ್ನಸ್ ಕಾರ್ಲ್‌ಸನ್ ಅವರಿಗೆ ಆಘಾತ ನೀಡಿದರು.

ಟೂರ್ನಿಯ ಎಂಟನೇ ಸುತ್ತಿನ ಈ ಹಣಾಹಣಿಯಲ್ಲಿ ಕಪ್ಪುಕಾಯಿಗಳೊಂದಿಗೆ ಆಡಿದ 16 ವರ್ಷದ ಪ್ರಜ್ಞಾನಂದ 39 ನಡೆಗಳಲ್ಲಿ ನಾರ್ವೆ ಆಟಗಾರನಿಗೆ ಸೋಲುಣಿಸಿದರು. ಇದರೊಂದಿಗೆ ಸತತ ಮೂರು ಗೇಮ್ ಗೆದ್ದು ಮುನ್ನಡೆದಿದ್ದ ಕಾರ್ಲ್‌ಸನ್ ಓಟಕ್ಕೆ ತಡೆಯೊಡ್ಡಿದರು.

ಎಂಟು ಸುತ್ತುಗಳ ಬಳಿಕ ಎಂಟು ಪಾಯಿಂಟ್ಸ್ ಗಳಿಸಿರುವ ಪ್ರಜ್ಞಾನಂದ, ಸದ್ಯ ಜಂಟಿ 12ನೇ ಸ್ಥಾನದಲ್ಲಿದ್ದಾರೆ. ಕಾರ್ಲಸನ್ ಎದುರಿನ ಗೇಮ್‌ಗೂ ಮೊದಲು ಅವರು ಆರ್ಮೇನಿಯಾದ ಲೆವ್ ಅರೋನಿಯನ್ ಅವರನ್ನು ಮಣಿಸಿದ್ದರು. ಎರಡು ಡ್ರಾ ಮತ್ತು ನಾಲ್ಕು ಪಂದ್ಯಗಳಲ್ಲಿ ಸೋಲನುಭವಿಸಿದ್ದರು.

ಪ್ರಜ್ಞಾನಂದ ಅವರು ನೆದರ್ಲೆಂಡ್ಸ್‌ನ ಅನೀಶ್ ಗಿರಿ ಮತ್ತು ವಿಯೆಟ್ನಾಂನ ಕ್ವಾಂಗ್ ಲಿಯಮ್ ಲೆ ಅವರೊಂದಿಗೆ ಡ್ರಾ ಸಾಧಿಸಿದ್ದರೆ, ಎರಿಕ್ ಹ್ಯಾನ್ಸೆನ್, ಡಿಂಗ್ ಲಿರೆನ್, ಜಾನ್ ಕ್ರಿಸ್ಟಾಫ್ ದುಡಾ ಮತ್ತು ಶಕರಿಯಾರ್ ಮಮೆದ್ಯರೊವ್ ಎದುರು ನಿರಾಸೆ ಕಂಡಿದ್ದರು.

ಕೆಲವು ದಿನಗಳ ಹಿಂದೆ ವಿಶ್ವ-ಚಾಂಪಿಯನ್‌ಷಿಪ್ ಪಂದ್ಯದಲ್ಲಿ ಕಾರ್ಲ್‌ಸನ್‌ಗೆ ಸೋತಿದ್ದ ರಷ್ಯಾದ ಇಯಾನ್ ನೆಪೊಮ್ನಿಯಾಚಿ (19 ಪಾಯಿಂಟ್ಸ್) ಪಟ್ಟಿಯಲ್ಲಿ ಸದ್ಯ ಮೊದಲ ಸ್ಥಾನದಲ್ಲಿದ್ದರೆ, ದಿಂಗ್ ಲಿರೆನ್ ಮತ್ತು ಹ್ಯಾನ್ಸೆನ್ (ತಲಾ 15 ಪಾಯಿಂಟ್ಸ್) ಎರಡನೇ ಸ್ಥಾನದಲ್ಲಿದ್ದಾರೆ.


ಆರ್. ಪ್ರಜ್ಞಾನಂದ– ಎಎಫ್‌ಪಿ ಚಿತ್ರ


ಮ್ಯಾಗ್ನಸ್ ಕಾರ್ಲ್‌ಸನ್– ಪಿಟಿಐ ಚಿತ್ರ

# ಅಂಧರ ಕ್ರಿಕೆಟ್: ಭಾರತ ತಂಡದಲ್ಲಿ ಪ್ರಕಾಶ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ (ಯುಎಇ) ಮಾರ್ಚ್ 13ರಿಂದ ನಡೆಯಲಿರುವ ತ್ರಿಕೋನ ಟಿ20 ಸರಣಿಗೆ ಭಾರತ ಅಂಧರ ಕ್ರಿಕೆಟ್ ತಂಡವನ್ನು ಸೋಮವಾರ ಪ್ರಕಟಿಸಲಾಯಿತು.

ಈ ಕುರಿತು ಚಿನ್ನಸ್ವಾಮಿ ಕ್ರೀಡಾಂಗಣದ ಡೈಮಂಡ್ ಹಾಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾರತ ಅಂಧರ ಕ್ರಿಕೆಟ್ ಸಂಸ್ಥೆ (ಸಿಎಬಿಐ) ಅಧ್ಯಕ್ಷ ಮಹಾಂತೇಶ್ ಜಿ. ಕಿವಡಸಣ್ಣವರ್ ಅವರು ತಂಡವನ್ನು ಪ್ರಕಟಿಸಿದರು.

ಯುಎಇಯ ಶಾರ್ಜಾದಲ್ಲಿ ಮಾರ್ಚ್ 19ರವರೆಗೆ ಭಾರತ, ಪಾಕಿಸ್ತಾನ ಮತ್ತು ಬಾಂಗ್ಲಾದೇಶ ತಂಡಗಳ ನಡುವೆ ತ್ರಿಕೋನ ಸರಣಿ ನಡೆಯಲಿದೆ. ಶಾರ್ಜಾದ ಸ್ಕೈಲೈನ್ ವಿಶ್ವವಿದ್ಯಾಲಯ ಕಾಲೇಜು ಆವರಣದಲ್ಲಿ ಪಂದ್ಯಗಳು ನಡೆಯಲಿವೆ. ಟೂರ್ನಿಗೂ ಮೊದಲು ಮಾರ್ಚ್ 1ರಿಂದ 11ರವರೆಗೆ ಬೆಂಗಳೂರಿನಲ್ಲಿ ಭಾರತ ತಂಡದ ಶಿಬಿರ ನಡೆಯಲಿದೆ ಎಂದು ಮಹಾಂತೇಶ್ ಮಾಹಿತಿ ನೀಡಿದರು.

ಭಾರತ ತಂಡದಲ್ಲಿ ಕರ್ನಾಟಕದ ಪ್ರಕಾಶ್ ಜಯರಾಮಯ್ಯ, ಸುನಿಲ್ ರಮೇಶ್, ಬಸಪ್ಪ ವಡ್ಡಗೋಳ ಮತ್ತು ಲೋಕೇಶ್ ಸ್ಥಾನ ಗಳಿಸಿದ್ದಾರೆ.

**ತಂಡ ಇಂತಿದೆ:** ಕಲ್ಪೇಶ್ ನಿಂಬಾಡ್ಕರ್, ವೆಂಕಟೇಶ್ವರ ರಾವ್, ಸುಜಿತ್ ಮುಂಡಾ, ಬಸಪ್ಪ ವಡ್ಡಗೋಳ, ಪ್ರೇಮ್ ಕುಮಾರ್, ಪ್ರವೀಣ್ ಕುಮಾರ್ ಶರ್ಮಾ, ಡಿ.ವೆಂಕಟೇಶ್ವರ ರಾವ್, ಎ.ಮನೀಷ್, ಇರ್ಫಾನ್ ದೀವಾನ್, ನಕುಲ್ ಬದಾನಾಯಕ, ಲೋಕೇಶ್, ದೀಪಕ್ ಮಲಿಕ್, ಪ್ರಕಾಶ್ ಜಯರಾಮಯ್ಯ, ಸುನಿಲ್ ರಮೇಶ್, ದುರ್ಗಾ ರಾವ್, ಚಂದನ್ ಮತ್ತು ರಣಬೀರ್.


ಪ್ರಕಾಶ್ ಜಯರಾಮಯ್ಯ

# ಅಲ್ಕರಾಜ್ ಕಿರಿಯ ಎಟಿಪಿ 500 ವಿಜೇತ

**ರಿಯೊ ಡಿ ಜನೈರೊ:** ಸ್ಪೇನ್‌ನ 18 ವರ್ಷದ ಕಾರ್ಲೋಸ್ ಅಲ್ಕರಾಜ್ ಅವರು ಎಟಿಪಿ 500 ಟೆನಿಸ್ ಟೂರ್ನಿಯ ಪ್ರಶಸ್ತಿ ಗೆದ್ದ ಅತಿ ಕಿರಿಯ ಆಟಗಾರ ಎನಿಸಿಕೊಂಡರು. ಎರಡು ವರ್ಷಗಳ ಹಿಂದೆ ಟೂರ್ ಮಟ್ಟದ ಮೊದಲ ಪ್ರಶಸ್ತಿ ಗೆದ್ದು ಸಂಭ್ರಮಿಸಿದ್ದ ಅವರು ಭಾನುವಾರ ರಾತ್ರಿ ನಡೆದ ರಿಯೊ ಓಪನ್ ಟೂರ್ನಿಯ ಫೈನಲ್‌ನಲ್ಲಿ ಅರ್ಜೆಂಟೀನಾದ ಡೀಗೊ ಸ್ವಾರ್ಟ್ಸ್‌ಮನ್ ಎದುರು 6-4, 6-2ರಲ್ಲಿ ಜಯ ಗಳಿಸಿದರು.

ವೇಳಾಪಟ್ಟಿಯಲ್ಲಿ ಆದ ಬದಲಾವಣೆಯಿಂದಾಗಿ ಕ್ವಾರ್ಟರ್ ಫೈನಲ್ ಮತ್ತು ಸೆಮಿಫೈನಲ್ ಪಂದ್ಯಗಳೆರಡನ್ನೂ ಅಲ್ಕರಾಜ್ ಶನಿವಾರ ಒಂದೇ ದಿನ ಆಡಬೇಕಾಗಿತ್ತು. ವಿಶ್ವ ಕ್ರಮಾಂಕದಲ್ಲಿ ಆರನೇ ಸ್ಥಾನದಲ್ಲಿರುವ ಮಟಿಯೊ ಬೆರೆಟಿನಿ ಮತ್ತು ಮತ್ತೊಬ್ಬ ಪ್ರಮುಖ ಆಟಗಾರ ಫ್ಯಾಬಿಯೊ ಫಾಗ್ನಿನಿ ಅವರನ್ನು ಅಲ್ಕರಾಜ್ ಸೋಲಿಸಿದ್ದರು.


ಕಾರ್ಲೋಸ್ ಅಲ್ಕರಾಜ್ –ಪಿಟಿಐ ಚಿತ್ರ

# ಕ್ರಿಕೆಟ್: ವನಿತಾ ವಿದಾಯ

**ನವದೆಹಲಿ (ಪಿಟಿಐ):** ಭಾರತ ಮಹಿಳಾ ತಂಡದ ಬ್ಯಾಟರ್ ವಿ.ಆರ್. ವನಿತಾ ಅವರು ಸೋಮವಾರ ಎಲ್ಲ ಮಾದರಿಯ ಕ್ರಿಕೆಟ್‌ಗೆ ವಿದಾಯ ಘೋಷಿಸಿದ್ದಾರೆ.

31 ವರ್ಷದ ವನಿತಾ ಅವರು 2014–2016ರ ಅವಧಿಯಲ್ಲಿ ಆರು ಏಕದಿನ ಮತ್ತು 16 ಟಿ20 ಪಂದ್ಯಗಳಲ್ಲಿ ಭಾರತ ತಂಡವನ್ನು ಪ್ರತಿನಿಧಿಸಿದ್ದರು. ದೇಶಿ ಟೂರ್ನಿಗಳಲ್ಲಿ ಕರ್ನಾಟಕ ಮತ್ತು ಬಂಗಾಳ ರಾಜ್ಯ ತಂಡಗಳ ಪರವೂ ಅವರು ಆಡಿದ್ದರು.

ಟ್ವಿಟರ್ ಮೂಲಕ ಅವರು ನಿವೃತ್ತಿ ಪ್ರಕಟಿಸಿದ್ದು, ತಂಡದ ಸಹ ಆಟಗಾರ್ತಿಯರಾದ ಜೂಲನ್ ಗೋಸ್ವಾಮಿ ಮತ್ತು ಮಿಥಾಲಿ ರಾಜ್ ಅವರಿಗೆ ಕೃತಜ್ಞತೆ ಸಲ್ಲಿಸಿದ್ದಾರೆ. 2014ರ ಜನವರಿಯಲ್ಲಿ ಶ್ರೀಲಂಕಾ ಎದುರಿನ ಏಕದಿನ ಪಂದ್ಯದ ಮೂಲಕ ಅವರು ಏಕದಿನ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದರು. ಏಕದಿನ ಪಂದ್ಯಗಳಲ್ಲಿ 85 ಮತ್ತು ಟಿ20ಯಲ್ಲಿ 216 ರನ್‌ಗಳನ್ನು ಕಲೆಹಾಕಿದ್ದರು.


ವಿ.ಆರ್.ವನಿತಾ